ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಪ್ರೊ. ಎಸ್.ಎನ್. ರಾಮಸ್ವಾಮಿಯವರ ಪೌರಪ್ರಜ್ಞಾಯನ ಕೃತಿ - ಒಂದು ಅಧ್ಯಯನ

ನಿಬಂಧಕಾರರು

ಗಣೇಶ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ.ಸುಮಂಗಳ.
ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಪ್ರೊ. ಎಸ್.ಎನ್. ರಾಮಸ್ವಾಮಿಯವರ ಪೌರಪ್ರಜ್ಞಾಯನ ಕೃತಿ - ಒಂದು ಅಧ್ಯಯನ

ನಿಬಂಧಕಾರರು

ಗಣೇಶ

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ. ಸುಮಂಗಳ

ಕನ್ನಡ ಸಹ ಪ್ರಾಧ್ಯಾಪಕರು

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು

ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS/00479**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ಗಣೇಶ** ಅವರು ನನ್ನ ಮಾರ್ಗದರ್ಶನದಲ್ಲಿ **"ಡಾ. ಎಸ್.ಎನ್. ರಾಮಸ್ವಾಮಿಯವರ ಪೌರಪ್ರಜ್ಞಾಯನ ಕೃತಿ – ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೩೦-೦೫-೨೦೧೧

(ಡಾ. ಡಿ. ಸುಮಂಗಳ)
ಮಾರ್ಗದರ್ಶಕರು
ಕನ್ನಡ ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು

ಡಾ॥ ಡಿ. ಸುಮಂಗಳ
ಎಂ.ಎ., ಪಿಎಚ್.ಡಿ.
ಕನ್ನಡ ಸಹಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
ಮೈಸೂರು - 570 005

ಅಭ್ಯರ್ಥಿಯ ಘೋಷಣಾ ಪತ್ರ

ಪ್ರೊ. ಎಸ್.ಎನ್. ರಾಮಸ್ವಾಮಿಯವರ ಪೌರಪ್ರಜ್ಞಾಯನ ಕೃತಿ – ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS/00479**ರ ವಿದ್ಯಾರ್ಥಿಯಾದ ನಾನು ೨೦೧೦-೧೧ನೇ ಸಾಲಿನ ಪರೀಕ್ಷೆಗಾಗಿ **ಡಾ. ಡಿ. ಸುಮಂಗಳ,** ಸಹ ಕನ್ನಡ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೩೧-೦೫-೨೦೧೧

(ಗಣೇಶ)
೨೦೧೦-೧೧ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪ್ರೊ. ಎಸ್.ಎನ್. ರಾಮಸ್ವಾಮಿಯವರ ಪೌರಪ್ರಜ್ಞಾಯನ ಕೃತಿ – ಒಂದು ಅಧ್ಯಯನ

ಪರಿವಿಡಿ

*****

ಪೀಠಿಕೆ

ಮಾನವ ಸಂಘಜೀವಿ. ಬುದ್ಧಿ ವಿವೇಚನೆಯುಳ್ಳ ಪ್ರಾಣಿ. ಆದಿಮಾನವ ವಿಕಾಸಹೊಂದುತ್ತಾ ಹೋದಂತೆ ಧ್ವನಿ, ಉಚ್ಚಾರಗಳನ್ನು ಕೇಕೆ, ಉದ್ಗಾರಗಳನ್ನು ಹೊರಡಿಸಿ ಮಾತು, ವಾಕ್ಯಗಳನ್ನು ಕಂಡುಹಿಡಿದ. ಮಾತುಗಾರಿಕೆ ಮನುಷ್ಯನ ಅತ್ಯುತ್ಕೃಷ್ಟ ಆವಿಷ್ಕಾರ. ನಾಗರಿಕನಾಗುವುದಕ್ಕೆ ಮುಂಚೆ ಗೆಡ್ಡೆಗೆಣಸು ತಿಂದುಕೊಂಡು ಗುಹೆಗಳಲ್ಲಿ ವಾಸಿಸುತ್ತಾ ಜೀವಿಸುತ್ತಿದ್ದನು. ನಂತರ ಜೈವಿಕವಿಕಾಸವಾಗುತ್ತಲೇ ಬೇಟೆ–ಯಾಡುವುದನ್ನು ಕಲಿತ, ಕಲ್ಲಿನಿಂದ ಆಯುಧಗಳನ್ನು ಮಾಡುವುದನ್ನು ಕಲಿತು ಒಂದೆಡೆ ಗುಂಪಾಗಿ ನೆಲೆಸುವುದನ್ನು ಕಲಿತನು. ವ್ಯವಸಾಯವನ್ನು ರೂಢಿಸಿಕೊಂಡ ಮೇಲೆ ಅವನ ಆಸಕ್ತಿ ಅಭಿರುಚಿಗಳೂ ವಿಸ್ತಾರವಾಗುತ್ತಾ ಹೋಗಿ ಕಲಾವಿದ, ಹಾಡುಗಾರ, ನೃತ್ಯಗಾರ, ವಾದ್ಯಪ್ರವೀಣ, ವೈದ್ಯ, ವಿಜ್ಞಾನಿ, ತಂತ್ರಜ್ಞಾನಿ ಹಾಗೂ ಇನ್ನಿತರ ಮಹತ್ವದ ಕ್ಷೇತ್ರಗಳಲ್ಲಿ ಪರಿಪಕ್ವತೆಯನ್ನು ಸಾಧಿಸತೊಡಗಿದ.

ಮಾನವ ನಾಗರಿಕತೆ ಬೆಳೆಸಿಕೊಂಡಂತೆ ಹಳ್ಳಿ, ಪಟ್ಟಣ, ನಗರಗಳು ರೂಪಿತ–ವಾಗಿ, ತಮ್ಮನ್ನು ಆಳಲು ನಿಯಂತ್ರಿಸುವ ವ್ಯವಸ್ಥೆಯ ಅರಿವಾಗಿ 'ಸರ್ಕಾರ' ರೂಪುಗೊಂಡಿತು. ಸಮಾಜದಲ್ಲಿ ವಾಸಿಸಬೇಕಾದರೆ ಎಲ್ಲರೂ ಒಪ್ಪುವಂಥ ನಡೆನುಡಿಗಳನ್ನು ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಒದಗಿತು. ವ್ಯಕ್ತಿಗಳ ನಡುವಿನ ವ್ಯವಹಾರಗಳು, ಶಾಂತಿಯುತವಾಗಿ ನಡೆದುಕೊಂಡು ಹೋಗಬೇಕಾದಲ್ಲಿ ಅವರು ಕೆಲವು ಸಾಮಾನ್ಯ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಹಾಗಿಲ್ಲವಾದಲ್ಲಿ ಜನರ ನಡುವೆ ಘರ್ಷಣೆಗಳಿಗೆ ಕಾರಣವಾಗಿ ಸರ್ವರ ಶಾಂತಿಗೆ ಧಕ್ಕೆಬರುತ್ತದೆ. ಅಂದರೆ ಸಮಾಜದಲ್ಲಿನ ವ್ಯಕ್ತಿಗಳ ತುಂಬು ಜೀವನಕ್ಕೆ ಶಾಂತಿಯುತ ಬಾಳ್ವೆ ಅವಶ್ಯಕ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಇತರ ಸಹಜೀವಿಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟು, ತನ್ನ ಹಿತಾಸಕ್ತಿಗಳನ್ನು ಕೈಗೂಡಿಸಿಕೊಳ್ಳಬೇಕು. ವ್ಯವಸ್ಥಿತ ಸಮಾಜದಲ್ಲಿ ಮಾತ್ರ ವ್ಯಕ್ತಿಗಳು ತಮ್ಮ ವ್ಯಕ್ತಿತ್ವವನ್ನು ಅರಿತು ಬೆಳೆಸಿಕೊಳ್ಳಲು ಸಾಧ್ಯ. ಅಂತಹ ವ್ಯವಸ್ಥಿತ ಜೀವನಕ್ಕಾಗಿ ಸಮಾಜದಲ್ಲಿನ ಜನರು ಕೆಲವು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಸಮಾಜದ ಎಲ್ಲಾ ಜನರ ನಡತೆಯೂ, ಅಂತಹ ನಿಯಮಗಳಿಗೆ ಬದ್ಧವಾಗಿದ್ದು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಶೋತ್ತರಗಳನ್ನು ಈಡೇರಿಸಿಕೊಳ್ಳ–ಬೇಕಾಗುತ್ತದೆ. ವ್ಯವಸ್ಥಿತ ಸಾಮಾಜಿಕ ಜೀವನಕ್ಕೆ 'ಪೌರಪ್ರಜ್ಞೆ' ಪ್ರತಿಯೊಬ್ಬರಿಗೂ ಬೇಕು. ಮಾನವ ಸಂವಿಧಾನದ, ನೀತಿನಿಯಮಗಳ ರೂಪುರೇಷೆಯನ್ನು ಸಿದ್ಧಪಡಿಸಿದ ನಂತರ ಅವನಿಗೆ ಲಿಖಿತ ಸಂವಿಧಾನ ಮೂಲಕ ಅನೇಕ ಹಕ್ಕುಬಾಧ್ಯತೆಗಳು ಲಭಿಸಿದವು. ಅಂತೆಯೇ ಅಲಿಖಿತ ಕರ್ತವ್ಯಗಳು, ರೂಢಿಗಳು ಪರಂಪರಾನುಗತವಾಗಿ ರೂಢಿಗೆ ಬಂದವು. ಹಿರಿಯರಿಗೆ, ಗುರುಗಳಿಗೆ ಗೌರವ, ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ,

ಸಾರ್ವಜನಿಕ ಸ್ಥಳಗಳಲ್ಲಿ ಅನ್ಯರಿಗೆ ತೊಂದರೆಯಾಗದಂತೆ ಅನೇಕ ಶಿಷ್ಟಾಚಾರಗಳನ್ನು ಪಾಲಿಸುವುದು ಈ ವ್ಯಾಪ್ತಿಗೆ ಬರುತ್ತದೆ. ಹಾಗಾಗಿ ಮನುಷ್ಯ ವಿವೇಚನಾಯುಕ್ತ ನಡೆಗಳನ್ನು ಅಳವಡಿಸಿಕೊಳ್ಳುವ ಮೂಲಕ ತಾನೊಬ್ಬ ಪ್ರಜ್ಞಾವಂತ ಪೌರನಾಗಿ ಕಾಣಿಸಬೇಕೆಂಬುದು ಹಿರಿಯರ ಆಶಯ.

ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ತಾನೇ ನಿರ್ಮಿಸಿಕೊಂಡ ಕಟ್ಟುಪಾಡುಗಳನ್ನು, ನೈತಿಕ, ಸಾಮಾಜಿಕ ಆಚರಣೆಗಳನ್ನು ತಾನೇ ಉಲ್ಲಂಘಿಸಿ ಸಾಮಾಜಿಕ ಪಿಡುಗಿಗೆ ಕಾರಣನಾಗಿದ್ದಾನೆ. ಒಂದು ರಾಷ್ಟ್ರದ ಆಂತರಿಕ ಸ್ವಚ್ಛತೆಗೆ, ಸಾಮಾಜಿಕ ಮಾನ್ಯತೆಗೆ ತಿಲಾಂಜಲಿಯನ್ನು ನೀಡಿ, ಸ್ವೇಚ್ಛಾಚಾರದಿಂದ ವರ್ತಿಸುತ್ತಾ, ಖಾಸಗಿ, ಸಾರ್ವಜನಿಕ, ಸರ್ಕಾರಿ ವಲಯ, ದೇಶದ ಸುವ್ಯವಸ್ಥಿತ ವ್ಯವಸ್ಥೆಗೆ ಅಡ್ಡಿ–ಆತಂಕಗಳು ಎದುರಾಗುತ್ತಿವೆ. ಆ ನಿಟ್ಟಿನಲ್ಲಿ ಜನಜಾಗೃತಿ ಉಂಟುಮಾಡುವ ಗುರಿ ಇಟ್ಟುಕೊಂಡು ರಚಿತವಾಗಿರುವ ಡಾ.ಎಸ್.ಎನ್.ರಾಮಸ್ವಾಮಿಯವರ 'ಪೌರ ಪ್ರಜ್ಞಾಯನ' ಜನಪಯೋಗಿ ಕೃತಿಯಾಗಿ, ಅತೀವ ಕಾಳಜಿಯಿಂದ ಮೂಡಿಬಂದಿದೆ.

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ಪೌರಪ್ರಜ್ಞೆ' ವಿಷಯ ಹಿಂದೆಂದಿಗಿಂತಲೂ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ತ್ರಿಕೋನದ ನಡುವೆ 'ಪೌರಪ್ರಜ್ಞೆ'ಗೆ ಬೆಲೆ ಇಲ್ಲದಂತಾಗಿದೆ. ಹಣ ಅಧಿಕಾರ ಲಾಲಸೆಯ ಬೆನ್ನತ್ತಿದ ಮಾನವರು 'ಮನುಷ್ಯತ್ವ' ಮತ್ತು 'ಪೌರಪ್ರಜ್ಞೆ'ಯನ್ನು ಮರೆಯುತ್ತಿದ್ದಾರೆ. ದಿನನಿತ್ಯ ವೃತ್ತಪತ್ರಿಕೆ ಮತ್ತು ದೃಶ್ಯ ಮಾಧ್ಯಮದಲ್ಲಿ 'ಪೌರಪ್ರಜ್ಞೆ' ಇಲ್ಲದೆ ಮನುಷ್ಯರು ಮಾಡುವ ಕುಕೃತ್ಯಗಳು ಹೆಚ್ಚಾಗಿ ವರದಿಯಾಗತೊಡಗಿದ್ದು ಇಡೀ ಸಮಾಜ ತಲೆತಗ್ಗಿಸುವಂತೆ ಮಾಡುತ್ತಿದೆ. ಈ ಕುರಿತು ಲೇಖಕರಿಗೆ ಅಸಮಧಾನವಿದ್ದು 'ಪೌರಪ್ರಜ್ಞೆ' ಕುರಿತು ಚಿಂತನೆಗೆ ಹಚ್ಚಿದೆ. ಇದರ ಫಲವೇ ಈ ಕೃತಿ.

ಈ ನಿಮಿತ್ತ ಲೇಖಕರು ಪ್ರಾಚೀನ ವೇದಗಳ ಕಾಲದಿಂದ ಹಿಡಿದು ಇಂದಿನ ಪ್ರಚಲಿತದವರೆಗೂ ತಮ್ಮ ವಿಚಾರ ಲಹರಿಯನ್ನು ಹರಿಯಬಿಟ್ಟಿದ್ದಾರೆ. ಇದಕ್ಕಾಗಿ ಹಲವಾರು ಪ್ರಾಚೀನ ಗ್ರಂಥಗಳು, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಕಾವ್ಯಗಳು, ಸಂಸ್ಕೃತದ ಉದ್ಗ್ರಂಥಗಳು, ವೇದಶಾಸ್ತ್ರ, ಪುರಾಣ, ನಂಬಿಕೆ, ವಿಚಾರಗಳ ಕುರಿತು ಈಗಾಗಲೇ ಬಂದಿರುವ ಕೃತಿಗಳನ್ನು ಅಧ್ಯಯನ ಮಾಡಿ ತಮ್ಮ ಕೃತಿಯಲ್ಲಿ ಸಾಕ್ಷ್ಯವನ್ನು ಸಂದರ್ಭಾನುಸಾರ ಉದಾಹರಣೆಯಾಗಿ ನೀಡಿ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ.

ನಮ್ಮ ಸನಾತನ ಸಂಸ್ಕೃತಿಯ ಧನಾತ್ಮಕ ಚಿಂತನೆಯನ್ನು ಅರ್ಥಮಾಡಿ ಕೊಳ್ಳದೆ ಸನಾತನ ನಂಬಿಕೆ – ಆಚರಣೆಗಳೆಲ್ಲವೂ ಮೌಢ್ಯತನದಿಂದ ಕೂಡಿವೆ ಎಂಬ ಪೂರ್ವಾಗ್ರಹ ಪೀಡನೆಗೆ ಇಂದಿನ ವಿ(ಪ್ರ)ಚಾರವಾದಿಗಳು ಮತ್ತು ಬು(ಸು)ದ್ಧಿ ಜೀವಿಗಳು ಒಳಗಾಗಿ, 'ಪೌರಪ್ರಜ್ಞೆ'ಯುಳ್ಳ ಪ್ರಾಚೀನ ವೇದ ಶಾಸ್ತ್ರ ಪುರಾಣಗಳನ್ನು ಸಾರಾಸಗಟಾಗಿ ತಿರಸ್ಕರಿಸಿರುವುದರ ಕುರಿತು ಲೇಖಕರಿಗೆ ಬೇಸರವಿದೆ.

ಲೇಖಕರ ಅಭಿಪ್ರಾಯದಲ್ಲಿ ಸನಾತನ ಸಂಸ್ಕೃತಿಯಲ್ಲಿ ಎಲ್ಲಾ ಕಾಲಕ್ಕೂ ನಿಲ್ಲುವ ಮತ್ತು ಸಲ್ಲುವ ನಿತ್ಯಸತ್ಯಗಳು ಇವೆ. ಅದನ್ನು ಮುಕ್ತ ಮನಸ್ಸಿನಿಂದ ನೋಡುವ ಸಹೃದಯತೆ ಇಂದಿನ ಯುವ ಪೀಳಿಗೆಗೆ ಬೇಕು ಎಂಬುದು 'ಪೌರಪ್ರಜ್ಞಾಯನ' ಕೃತಿಯ ಆಶಯ.

ಪೌರಪ್ರಜ್ಞೆಯನ ಕೃತಿಯ ವ್ಯಾಪ್ತಿ ಅತಿ ವಿಶಾಲವಾಗಿದ್ದು, ಇಲ್ಲಿ ಮನುಷ್ಯನ ಎಲ್ಲಾ ಕ್ಷೇತ್ರದ ಎಲ್ಲಾ ಚಟುವಟಿಕೆಗಳೂ ಇಲ್ಲಿ ಚರ್ಚೆಗೆ ಒಳಗಾಗಿದೆ. ಒಟ್ಟಾರೆ ಮನುಷ್ಯ 'ಪೌರಪ್ರಜ್ಞೆ'ಯನ್ನು ರೂಢಿಸಿಕೊಂಡರೆ ಇಡೀ ವಿಶ್ವಕ್ಕೆ ಶಾಂತಿ ಅನ್ನುವ ನಿಲುವು

ಲೇಖಕರದಾಗಿದ್ದೂ, ರಾಷ್ಟ್ರಕವಿ ಕುವೆಂಪು ಅವರ ಆಶಯದಂತೆ ಪ್ರತಿಯೊಬ್ಬರೂ ವಿಶ್ವಪ್ರಜ್ಞೆ ಬೆಳೆಸಿಕೊಂಡು 'ವಿಶ್ವಮಾನವ'ನಾಗಬೇಕೆಂಬ ಕನಸು ಮತ್ತು ಆಶಯ ಕೃತಿಯಲ್ಲಿ ಅಡಕವಾಗಿದೆ. ಶೀರ್ಷಿಕೆಯೇ ಸೂಚಿಸಿರುವಂತೆ ಈ ಕೃತಿಯ ಅಂತರಾತ್ಮ 'ಪೌರಪ್ರಜ್ಞೆ'. 'ಪೌರಪ್ರಜ್ಞಾಯನ' ಎಂಬುದು ಪೌರಪ್ರಜ್ಞೆ ಅಂದಿನಿಂದ ನಡೆದುಬಂದ ಹಾದಿಯನ್ನು ಸೂಚಿಸುತ್ತದೆ.

ಈ ಕೃತಿಯಲ್ಲಿ ಒಟ್ಟು ೨೮ ಅಧ್ಯಾಯಗಳಿವೆ. ಅಧ್ಯಯನ ಉದ್ದೇಶಕ್ಕಾಗಿ ಅವುಗಳನ್ನು ಮುಖ್ಯವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದೇನೆ.

"ಪೌರಪ್ರಜ್ಞಾಯನ" ವಿಭಾಗದ ಉಪ ಅಧ್ಯಾಯಗಳಲ್ಲಿ ವೇದಗಳಲ್ಲಿ ಬರುವ ಪೌರಪ್ರಜ್ಞೆ, ಧರ್ಮಗಳಲ್ಲಿ ಉಲ್ಲೇಖವಾಗಿರುವ ಪೌರಪ್ರಜ್ಞೆ, ಸಂಸ್ಕೃತಿಯಲ್ಲಿ ಕಂಡುಬರುವ ಪೌರಪ್ರಜ್ಞೆ, ನೈತಿಕ ಮೌಲ್ಯಗಳಲ್ಲಿ ಪೌರಪ್ರಜ್ಞೆ, ರಾಷ್ಟ್ರಪ್ರೇಮದ ಸಂದರ್ಭದಲ್ಲಿ ಮೂಡುವ ಪೌರಪ್ರಜ್ಞೆ ಹಾಗೂ ಕೊನೆಯದಾಗಿ ಕನ್ನಡ ಭಾಷೆಯಲ್ಲಿ ಪಡಿಮೂಡಿರುವ ಪೌರಪ್ರಜ್ಞೆಯನ್ನು ಇಲ್ಲಿ ಗುರುತಿಸಿದ್ದೇನೆ.

ಹಾಗೆಯೇ ೨ನೇ ಉಪ ಅಧ್ಯಾಯದಲ್ಲಿ "ಪರಿಸರದ ವಿಷಯದಲ್ಲಿ ಪೌರಪ್ರಜ್ಞೆ"ಯನ್ನು ಹೇಗೆ ಬೆಳೆಸಿಕೊಳ್ಳಬೇಕು ಎಂಬುದನ್ನು ಚರ್ಚಿಸಲಾಗಿದೆ. ಭೂಮಿ, ಜಲ ಮತ್ತು ವಾಯು ಮಾಲಿನ್ಯದಿಂದ ಇಡೀ ಮನುಕುಲವೇ ಆಪತ್ತಿನ ಅಂಚಿಗೆ ಬಂದು ನಿಂತಿರುವ ನಗ್ನ ಸತ್ಯವನ್ನು ಇಲ್ಲಿ ಚರ್ಚಿಸಲಾಗಿದೆ. ಇದರೊಂದಿಗೆ ಜೈವಿಕ ವೈವಿಧ್ಯತೆ, ಪ್ಲಾಸ್ಟಿಕ್ ಮತ್ತು ಇ-ತ್ಯಾಜ್ಯಗಳಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮವನ್ನು ಗಂಭೀರವಾಗಿ ಚರ್ಚಿಸಿರುವುದನ್ನು ಗುರುತಿಸಿರುತ್ತೇನೆ.

ಹಾಗೆಯೇ ಇಂದು ಯಾವುದೇ ದೃಶ್ಯ-ಶ್ರವ್ಯ, ಮುದ್ರಣ ಮಾಧ್ಯಮ, ವಿಚಾರ ಸಂಕಿರಣ ಮುಂತಾದ ಕಡೆ ಬಹು ಚರ್ಚೆಗೆ ಒಳಗಾಗುತ್ತಿರುವ ವಿಷಯ "ಜಾಗತಿಕ ತಾಪಮಾನ" ಆ ಕುರಿತು ವ್ಯಕ್ತವಾಗಿರುವ ಮಾಹಿತಿಯನ್ನು ಮತ್ತು ಪರಿಹಾರವನ್ನು ಗ್ರಹಿಸಿ ಉಲ್ಲೇಖಿಸಿದ್ದೇನೆ.

ಇತ್ತೀಚೆಗೆ ಜಪಾನ್‌ನಲ್ಲಿ ಸಂಭವಿಸಿದ 'ಸುನಾಮಿ' ಪ್ರಕ್ರಿಯೆಯ ಪರಿಣಾಮ-ದಿಂದ ಅಣುಸ್ಥಾವರಗಳು ಕುಸಿತಗೊಂಡು ಆಗುತ್ತಿರುವ ಭೀಕರ ಪರಿಣಾಮಗಳ ಹಿನ್ನೆಲೆ-ಯಲ್ಲಿ ಈಗಾಗಲೇ ಆದ ದುರಂತ ಕುರಿತು ಬೆಳಕು ಚೆಲ್ಲುವ ಪರಮಾಣು ಸ್ಥಾವರ ಕುರಿತ ಚರ್ಚೆ ನಡೆಸಲಾಗಿದೆ.

ಹಾಗೆಯೇ ಇತ್ತೀಚೆಗೆ ಮೊಬೈಲ್‌ಗಳ ಹಾವಳಿ ಎಲ್ಲೆ ಮೀರಿದೆ. ಒಬ್ಬರ ಹತ್ತಿರ ಒಂದಕ್ಕಿಂತ ಹೆಚ್ಚು ಮೊಬೈಲ್‌ಗಳನ್ನು ಇಟ್ಟುಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಅತಿಯಾದ

ಮೊಬೈಲ್ ಬಳಕೆಯಿಂದ ಪರಿಸರ ಮತ್ತು ಮಾನವನ ಮೇಲೆ ಆಗುವ ದುಷ್ಪರಿಣಾಮ ಕುರಿತು ಚರ್ಚಿಸಲಾಗಿದೆ.

೩ನೇ ಉಪ ಅಧ್ಯಾಯದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ 'ಪೌರಪ್ರಜ್ಞೆ' ಹೇಗೆ ಮರೆಯಾಗುತ್ತಿದೆ ಎನ್ನುವ ಲೇಖಕರ ಅಭಿಪ್ರಾಯಗಳನ್ನು ಚರ್ಚಿಸಲಾಗಿದೆ. ಇದರ ಉಪ ಅಧ್ಯಾಯಗಳಲ್ಲಿ ಜ್ಞಾನಕೇಂದ್ರಗಳಾದ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಅನಾಚಾರ. ವೈದ್ಯಕೀಯ ಕ್ಷೇತ್ರದ ಭ್ರಷ್ಟತೆ ಹಾಗೆಯೇ ಇತ್ತೀಚೆಗೆ ಅತಿ ಹೆಚ್ಚು ಚರ್ಚೆಗೆ ಒಳಗಾಗುತ್ತಿರುವ 'ದಯಾಮರಣ' ಕುರಿತು ಚರ್ಚಿಸಲಾಗಿದೆ. ಹಾಗೆಯೇ ಸಮಾಜದಲ್ಲಿ ಮಕ್ಕಳು ಮತ್ತು ಮಹಿಳೆಯರ ಸ್ಥಿತಿ–ಗತಿಗಳ ಕುರಿತು ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

ಸಮಾಜವನ್ನು ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಕಿತ್ತು ತಿನ್ನುತ್ತಿರುವ ಮೂಢನಂಬಿಕೆಗಳ ಕುರಿತು ಲೇಖಕರ ಅಭಿಪ್ರಾಯವನ್ನು ಚರ್ಚಿಸಲಾಗಿದೆ. ಹಾಗೆಯೇ ಬಂಧಿಖಾನೆಗಳಲ್ಲಿನ ಭ್ರಷ್ಟತೆಯನ್ನು ಎಳೆಎಳೆಯಾಗಿ ಲೇಖಕರು ಬಿಡಿಸಿರುವ ಕುರಿತು ನೋಟ ಹರಿಸಲಾಗಿದೆ. ಅಪರಾಧಿಗಳ ಪರಿವರ್ತನೆಯ ತಾಣಗಳಾಗಿರಬೇಕಾದ ಬಂಧಿಖಾನೆಗಳು ರೌಡಿಗಳ ಮತ್ತು ಸಮಾಜ ಘಾತುಕರನ್ನು ಪೋಷಿಸುವ ಸರ್ಕಾರಿ ತಾಣಗಳಾಗಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಉತ್ತರ ಭಾರತದಲ್ಲಿ ಹೆಚ್ಚುತ್ತಿರುವ 'ಮರ್ಯಾದಾ ಹತ್ಯೆ' ಎಂಬ ಅಮಾನವೀಯ ಕೃತ್ಯ. ಮಹಿಳೆಯರನ್ನು 'ಮರ್ಯಾದಾ ಹತ್ಯೆ'ಯ ನೆಪವೊಡ್ಡಿ ಹತ್ಯೆ ಮಾಡುತ್ತಾ ಮನುಕುಲವೇ ತಲೆತಗ್ಗಿಸುವಂತಹ ಪೈಶಾಚಿ ಕೃತ್ಯಗಳ ಸಂಗತಿಗಳನ್ನು ಕುರಿತು ಚರ್ಚಿಸಲಾಗಿದೆ.

೪ನೇ ಉಪ ಅಧ್ಯಾಯದಲ್ಲಿ ಪ್ರಚಲಿತವಾಗಿ ನಡೆಯುತ್ತಿರುವ ವಿವಿಧ ಘಟನೆಗಳ ಮೇಲೆ ಬೆಳಕು ಚೆಲ್ಲುವಂತಹ ವಿಷಯಗಳನ್ನು ಇಲ್ಲಿ ಚರ್ಚೆ ಮಾಡಲಾಗಿದೆ. ಲೇಖಕರು ಗಮನಿಸಿರುವುದರ ಜೊತೆಗೆ 'ಭ್ರಷ್ಟಾಚಾರ' ಕುರಿತು ದಿನನಿತ್ಯ ದೃಶ್ಯ–ಮುದ್ರಣ ಮಾಧ್ಯಮದಲ್ಲಿ ಕಣ್ಣಿಗೆ ಕಟ್ಟುವಂತೆ ಲೋಕಾಯುಕ್ತರು ನಡೆಸಿದ ದಾಳಿ ಕುರಿತು ಬಂದಿರುವ ವರದಿಗಳನ್ನು ಅವಲೋಕಿಸಲಾಗಿದೆ.

ಅಲ್ಲದೇ ಎಲ್ಲೆಂದರಲ್ಲಿ, ಯಾವಾಗ ಬೇಕಾದರೂ ಆವಾಗ ಯಾವುದೇ ಎಗ್ಗಿಲ್ಲದೆ ಮೂಲಭೂತ ಹಕ್ಕುಗಳಿಗೆ ಚ್ಯುತಿ ಬರುತ್ತಿರುವ ಸಂಗತಿ ಕುರಿತು ಲೇಖಕರು ನಡೆಸಿರುವ ಜಿಜ್ಞಾಸೆಯನ್ನು ಇಲ್ಲಿ ಚರ್ಚಿಸಲಾಗಿದೆ. ಮೂಲಭೂತ ಹಕ್ಕುಗಳನ್ನು ಗೌರವಿಸಬೇಕಾದ ಕನಿಷ್ಠ ಅರಿವು/ಜ್ಞಾನ ಪೌರಪ್ರಜ್ಞೆ ಇಲ್ಲದ ಸಮಾಜದ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಹಾಗೆಯೇ ಪ್ರತಿ ವ್ಯಕ್ತಿಯ ಮತ್ತು ವಿಶ್ವಸಂಸ್ಥೆಯ ಪಾತ್ರ, ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚಾಗಿರುವ ಕುರಿತು ಲೇಖಕರ ಅಭಿಪ್ರಾಯಗಳನ್ನು ಈ ಉಪ ಅಧ್ಯಾಯದಲ್ಲಿ ಕ್ರೋಢೀಕರಿಸಲಾಗಿದೆ.

ಇತ್ತೀಚೆಗೆ ಕೇಳಿಬರುತ್ತಿರುವ ಪ್ರಬಲ ಕೂಗು ಎಂದರೆ ವಿದೇಶಿ ಬ್ಯಾಂಕುಗಳಲ್ಲಿ ಅದರಲ್ಲೂ ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಇಟ್ಟಿರುವ ಕಪ್ಪು ಹಣವನ್ನು ಭಾರತಕ್ಕೆ ವಾಪಸ್ಸು ತರುವ ಕುರಿತ ಚರ್ಚೆಗಳು ರಾಷ್ಟ್ರವ್ಯಾಪಿ ನಡೆಯುತ್ತಿದೆ. ಲೇಖಕರು ಕಪ್ಪುಹಣದ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಇಲ್ಲಿ ದಾಖಲಿಸಿರುತ್ತೇನೆ.

ಇಷ್ಟೇ ಅಲ್ಲದೇ ಪರಿಸರ ನೀತಿಶಾಸ್ತ್ರದ ಮಹತ್ವ ಮತ್ತು ಪ್ರಸ್ತುತತೆ ಕುರಿತು ಲೇಖಕರ ಅಭಿಪ್ರಾಯವನ್ನು ಕ್ರೋಢೀಕರಿಸಿ ವಿಮರ್ಶಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೇಲೆ ಹೇಳಿದ ಅಷ್ಟು ವಿಭಾಗಗಳ ಅಭಿಪ್ರಾಯ-ಗಳನ್ನು ಕ್ರೋಢೀಕರಿಸಿ ಒಟ್ಟಾರೆ 'ಪೌರಪ್ರಜ್ಞೆ' ಕುರಿತ ಲೇಖಕರ ಅಭಿಪ್ರಾಯವನ್ನು ಇಲ್ಲಿ ಚರ್ಚಿಸಲಾಗಿದೆ. ಹಾಗೆಯೇ 'ಪೌರಪ್ರಜ್ಞಾಯನ' ಕೃತಿಯ ಆಶಯವನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕೃತಿಯ ಒಟ್ಟು ವಿಶ್ಲೇಷಣೆಯ ನಂತರ ಪರಾಮರ್ಶನ ಕೃತಿಗಳ ಪಟ್ಟಿಯನ್ನು ನೀಡಿರುತ್ತೇನೆ.

ಅಧ್ಯಾಯ - ೨

ಲೇಖಕರ ಪರಿಚಯ

ಡಾ. ಎಸ್.ಎನ್.ರಾಮಸ್ವಾಮಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದಲ್ಲಿ ಸುಮಾರು ೩೫ ವರ್ಷಗಳಷ್ಟು ದೀರ್ಘಕಾಲ ಸೇವೆ ಸಲ್ಲಿಸಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ.

ವೃತ್ತಿಯಲ್ಲಿ ಸಸ್ಯ ವಿಜ್ಞಾನಿ, ಪ್ರಾಧ್ಯಾಪಕರಾದರೂ ಪ್ರವೃತ್ತಿಯಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಮತ್ತು ಒಡನಾಟ ಹೆಚ್ಚು. ಕರ್ನಾಟಕ ರತ್ನ, ನಾಡೋಜ ಡಾ. ದೇ.ಜ.ಗೌ ಅವರ ಒಡನಾಡಿಗಳಾದ ಶ್ರೀಯುತರು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚನೆ ಮಾಡಿದ್ದಾರೆ.

ಕೆನಾಡದ ರೆಜೈನ ಮತ್ತು ವಿನ್ನಿಪೆಗ್ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ, ಬೋಧನೆ ಮಾಡಿದ್ದಾರೆ. ಅಮೇರಿಕ, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳಲ್ಲಿ ವಿಶ್ವ-ವಿದ್ಯಾನಿಲಯಗಳನ್ನು ಹಾಗೂ ಸಸ್ಯಶಾಸ್ತ್ರೀಯ ಉದ್ಯಾನಗಳನ್ನು ಸಂದರ್ಶಿಸಿದ್ದಾರೆ.

ಸಸ್ಯಶಾಸ್ತ್ರ ಹಾಗೂ ಪರಿಸರ ವಿಜ್ಞಾನದ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಯಶಸ್ವೀ ಮಾರ್ಗದರ್ಶನ ನೀಡಿರುವ ಇವರು ರೆಜೈನ ವಿಶ್ವವಿದ್ಯಾನಿಲಯದ ಸಲಹಾಗಾರ ಸಂಶೋಧಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಶ್ರೀಯುತರ ಮಾರ್ಗದರ್ಶನದಲ್ಲಿ ೬೫ ಸಂಶೋಧನ ಪ್ರಬಂಧಗಳು ಹಾಗೂ ಹತ್ತು ಪುಸ್ತಕಗಳು ಪ್ರಕಟಗೊಂಡಿವೆ. ಇವರು ನಡೆಸಿದ ಸಂಶೋಧನೆಗಳಿಗೆ ಮೈಸೂರು ವಿಶ್ವವಿದ್ಯಾನಿಲಯ ವಿಜ್ಞಾನ ವಿಭಾಗದ 'ಗೋಲ್ಡನ್ ಜ್ಯೂಬಿಲಿ ರಿಸರ್ಚ್ ಅವಾರ್ಡ್' ಕೊಟ್ಟು ಗೌರವಿಸಿದೆ.

ಇವರ ಇತರೆ ಹವ್ಯಾಸಿಗಳೆಂದರೆ ಪರಿಸರ ಛಾಯಾಗ್ರಹಣ ಮತ್ತು ಸಸಿಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸುವುದು.

ನಮ್ಮ ರಾಜ್ಯದ ಔಷಧೀಯ ಸಸ್ಯಗಳು ಹಾಗೂ ಆರ್ಕಿಡ್ ಸಸ್ಯಗಳ ಬಗ್ಗೆ ಗ್ರಂಥಗಳನ್ನು ರಚಿಸಿರುವ ಇವರು 'ಪೌರಪ್ರಜ್ಞೆ', 'ವೇದ ವೃಕ್ಷಗಳು', 'ಕರ್ನಾಟಕದ ಅರಣ್ಯ ವೃಕ್ಷಗಳು', ಹಾಗೂ 'ಪರಿಸರ ಮಾನವ' ಎಂಬ ಗ್ರಂಥಗಳನ್ನೂ ರಚಿಸಿದ್ದಾರೆ.

ಪ್ರಸ್ತುತ ಅನೇಕ ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆಯಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ. 'ಪೌರಪ್ರಜ್ಞೆ' ಕುರಿತು ಆಳವಾಗಿ ಚಿಂತಿಸುವುದರ ಜೊತೆಗೆ ಪ್ರಸ್ತುತ ಸಮಾಜದ ಅಶಾಂತಿಗೆ ಕಾರಣವಾಗಿರುವ ಪೌರರ ನಡವಳಿಕೆ ತಿದ್ದುವ ಈ ಕೃತಿ ಶ್ರೀಯುತರ ಮಹತ್ವದ ಕೃತಿಯಾಗಿದೆ.

ವೇದಗಳ ಕಾಲದಿಂದ ಪ್ರಸ್ತುತ ಪ್ರಚಲಿತ ವಿದ್ಯಾಮಾನದವರೆಗೆ ತಮ್ಮ ವಿಚಾರ ಲಹರಿಯನ್ನು ಹರಿಯಬಿಟ್ಟಿರುವ ಇವರು ಸಾಹಿತ್ಯ ಕೃತಿಗಳ ಸಾಲುಗಳನ್ನು ಮತ್ತು ಸಂಸ್ಕೃತ ಶ್ಲೋಕಗಳನ್ನು ಸಂದರ್ಭನುಸಾರ ಬಳಸಿರುವುದು ಈ ಕೃತಿಯ ವಿಶೇಷ ಮತ್ತು ಕೃತಿಕಾರರ ಸಾಹಿತ್ಯದ ಸಂಸರ್ಗಕ್ಕೆ ಉತ್ತಮ ಉದಾಹರಣೆಯಾಗಿದೆ.

ಅಧ್ಯಾಯ – ೩

ಪೌರಪ್ರಜ್ಞೆ – ವಿವೇಚನೆ

"ಸಂಘಜೀವಿಯಾದ ಮಾನವ ಕೆಲವು ಸಾಮಾನ್ಯ ವಿವೇಚನೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ಉದಾಹರಣೆಗೆ ಸಾರ್ವಜನಿಕ ಪ್ರದೇಶದಲ್ಲಿ ಅಸಭ್ಯ ಪದಗಳನ್ನು ಬಳಸದಿರುವುದು, ಜೋರಾಗಿ ಮಾತನಾಡದಿರುವುದು, ಕುಚೋದ್ಯ ನಡವಳಿಕೆಗಳನ್ನು ನಡೆಸದಿರುವುದು, ಇತರರಿಗೆ ನೋವುಂಟಾಗುವಂಥ' ರೇಗಿಸುವ, ಅಣಕಿಸುವ ನಡೆಯನ್ನು ಬಿಡುವುದು ಸಾಮಾಜಿಕ ಪ್ರಜ್ಞೆಯಾಗಿದೆ.

ಒಂದು ಮಾನವ ಶಿಶುವನ್ನು ಮನುಷ್ಯನಿಂದ ದೂರವಿರಿಸಿ ಪ್ರತ್ಯೇಕವಾಗಿ ಬೆಳೆಸಿದರೆ ಅದು ಪ್ರಾಣಿಯಂತೆ ಬಾಳುವ ನಡವಳಿಕೆ ರೂಢಿಸಿಕೊಳ್ಳುತ್ತದೆ.

ಸಂಘಜೀವಿಯಾದ ಮಾನವನು ಯಾವುದಾದರೊಂದು ರಾಜ್ಯದ ಸದಸ್ಯ–ನಾಗಿಯೇ ಇದ್ದು ತನ್ನ ವ್ಯಕ್ತಿತ್ವವನ್ನು ಅರಿತು ಬೆಳೆಸಿಕೊಳ್ಳಬೇಕಾಗಿದೆ. ರಾಜ್ಯದ ಸದಸ್ಯನಾಗಿರುವ ಇಂತಹ ವ್ಯಕ್ತಿಯನ್ನು 'ಪೌರ'ನೆಂದು ಕರೆಯಲಾಗಿದೆ. ಇಂತಹ ಪೌರನು ಪ್ರಜ್ಞೆಯಿಂದ ಸಮಾಜದಲ್ಲಿ ತಾನು ಬದುಕಿ ಇತರರನ್ನು ಬದುಕಲು ಬಿಡುವುದೇ ಆಗಿದೆ".[೧]

" 'ಪೌರ' ಎಂಬ ಪದವನ್ನು ಪ್ರಥಮ ಬಾರಿಗೆ ಬಳಸಿದವರು ಗ್ರೀಕ್ ತತ್ತ್ವಜ್ಞಾನಿಗಳು. ಈ ಪದದ ಅರ್ಥ ವಿವರಣೆಯನ್ನು ನೀಡಿದ ತತ್ತ್ವಜ್ಞಾನಿ ರಾಜ್ಯಶಾಸ್ತ್ರ ಪಿತಾಮಹನೆನಿಸಿರುವ ಅರಿಸ್ಟಾಟಲ್."[೨]

ರಾಜ್ಯದ ಪೌರತ್ವವನ್ನು ಹೊಂದಿರುವ ವ್ಯಕ್ತಿ ತನಗೆ ರಾಜ್ಯದಿಂದ ದೊರೆತಿರುವ ಅನುಕೂಲಗಳನ್ನು ಅನುಭವಿಸುತ್ತಿದ್ದು ರಾಜ್ಯಕ್ಕೆ ತಾನು ಸಲ್ಲಿಸಬೇಕಾದ ಕರ್ತವ್ಯಗಳನ್ನು ಹೊಂದಿರುತ್ತಾನೆ.

ನಗರದಲ್ಲಿ ವಾಸಿಸುವ ಸೌಲಭ್ಯಗಳನ್ನು ಹೊಂದಿರುವ ವ್ಯಕ್ತಿಗೆ 'ಪೌರ' ಎನ್ನಲಾಗಿದೆ. ಆದರೆ ವಿಶಾಲ ಅರ್ಥದಲ್ಲಿ 'ಪೌರ' ಎಂಬುದು ಒಂದು ರಾಜ್ಯದ ಎಲ್ಲೆಯೊಳಗೆ ವಾಸಿಸುತ್ತಿರುವ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.

ಹಿಂದೆ ಪೌರತ್ವವು ಕೇವಲ ಕೆಲವರಿಗೆ ಮಾತ್ರ ಸೀಮಿತವಾಗಿದ್ದಿತು. ಹೆಂಗಸರು, ಗುಲಾಮರು ಮತ್ತು ಪಟ್ಟಣದ ಹೊರಗೆ ವಾಸಿಸುತ್ತಿದ್ದ ಜನರಿಗೆ ಪೌರತ್ವ ನೀಡಿರಲಿಲ್ಲ.

---

೧. ರಾಜ್ಯಶಾಸ್ತ್ರ ಪರಿಚಯ, ಎನ್. ಈಶ್ವರಾಚಾರ್, ಪ್ರಸಾರಂಗ, ೧೯೭೨, ಪು. ೫೭

೨. ಅದೇ

ಆದ್ದರಿಂದ ಪ್ರಾಚೀನ ಗ್ರೀಕ್ ತತ್ವಜ್ಞಾನಿಗಳ ಅಭಿಪ್ರಾಯದಂತೆ ಯಾರು ಪುರ ಅಥವಾ ನಗರದಲ್ಲಿ ವಾಸಿಸುತ್ತಾ ಅಲ್ಲಿನ ರಾಜಕೀಯದಲ್ಲಿ ಪಾಲುಗೊಳ್ಳುವ ಅವಕಾಶವನ್ನು ಪಡೆದರೊ ಅವರು ಮಾತ್ರ ಪೌರರಾಗಿದ್ದರು ಎನ್ನುತ್ತದೆ.

ಆಧುನಿಕ ಪ್ರಜಾಪ್ರಭುತ್ವಗಳಲ್ಲಿ ಪೌರತ್ವ ಹೆಚ್ಚು ಪ್ರಾಮುಖ್ಯವನ್ನು ಪಡೆದಿದೆ. ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ರಾಜ್ಯದ ಸದಸ್ಯನಾಗಿದ್ದು; ಆ ರಾಜ್ಯದ ಪೌರತ್ವದಿಂದ ದೊರಕುವ ಲಾಭವನ್ನು ಪಡೆಯಬೇಕಾಗಿದೆ.

ರಾಜ್ಯದ ಪೌರತ್ವ ಜನರಲ್ಲಿ ದೇಶಾಭಿಮಾನವನ್ನು ಬೆಳೆಸಲು ಮತ್ತು ತಮ್ಮ ದೇಶಕ್ಕಾಗಿ ಸರ್ವತ್ಯಾಗ ಮಾಡುವ ಮನೋಭಾವವನ್ನು ಬಲಗೊಳಿಸಲು ಸಹಕಾರಿ-ಯಾಗಿದೆ.

ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳಿಗೂ ಮತ್ತು ಅವು-ಗಳನ್ನು ಪ್ರಜೆಗಳು ವಾಸ್ತವವಾಗಿ ಅನುಭವಿಸುತ್ತಿರುವುದಕ್ಕೂ ಬಹಳಷ್ಟು ಅಂತರವಿದೆ" ಎಂದು ನಾರ್‌ಮನ್ ಡಿ.ಪಾಮರ್ ಮಾತು ಅರ್ಥಪೂರ್ಣವಾಗಿದೆ.

"ಮೂಲಭೂತ ಹಕ್ಕು ಎಂದರೇನು? ಈ ಪ್ರಶ್ನೆಗೆ ಕೆಲವರು ತಮ್ಮದೇ ಆದ ಉತ್ತರಗಳನ್ನು ನೀಡಿದ್ದಾರೆ. ಮೂಲಭೂತ ಹಕ್ಕು ಸ್ವಾಭಾವಿಕ ಕಾನೂನಿನಿಂದ (Natural Law) ಉಂಟಾಗಿದೆಯೆಂದು ಕೆ.ಸುಬ್ಬರಾವ್ ವಾದಿಸಿದರೆ ಸ್ವಾಭಾವಿಕ ಹಕ್ಕುಗಳು (Natural Law) ಕ್ರಮೇಣ ಪ್ರಜೆಗಳ ಹಕ್ಕುಗಳಾಗಿ ಪರಿವರ್ತನೆಯಾದವು ಎಂದು ಜಾನ್‌ಲಾಕ್ ಮುಂತಾದವರು ಅಭಿಪ್ರಾಯಪಟ್ಟಿದ್ದಾರೆ"[೩]

ಸ್ವಾತಂತ್ರ್ಯವು ಮೂಲಭೂತ ಹಕ್ಕಾಗಿದ್ದರೂ, ಪ್ರಜೆಗಳು ಮನಸ್ಸಿಗೆ ಬಂದಂತೆ ಅದನ್ನು ಅನುಭವಿಸಲು ಸಾಧ್ಯವಿಲ್ಲ. ಅಸ್ತಿತ್ವದಲ್ಲಿರುವ ಕಾನೂನು, ರಾಷ್ಟ್ರದ ಪರಮಾಧಿಕಾರ, ಸಮಗ್ರತೆ, ಭದ್ರತೆ, ವಿದೇಶಗಳೊಡನೆ ಸ್ನೇಹ-ಸಂಬಂಧಗಳು, ಸಾರ್ವಜನಿಕ ಶಿಸ್ತು, ನೀತಿ ಮುಂತಾದುವುಗಳನ್ನು ಶಿಕ್ಷಿಸಲು ಹಾಗೂ ನ್ಯಾಯಾಲಯ ನಿಂದನೆ, ಮಾನನಷ್ಟ ಅಥವಾ ಪ್ರಚೋದನೆಗಳನ್ನು ತಡೆಯಲು ರಾಜ್ಯವು ವ್ಯಕ್ತಿಗಳ ಸ್ವಾತಂತ್ರ್ಯಗಳ ಮೇಲೆ ಕೆಲವು ಮಿತಿಯನ್ನು ಹೇರಿರುತ್ತದೆ.

ಪೌರಪ್ರಜ್ಞೆಯಿಂದ ಪ್ರಜೆಗಳು ಹಕ್ಕುಗಳನ್ನು ಅನುಭವಿಸುವುದು ಮಾತ್ರವಲ್ಲ ತನ್ನ ಕರ್ತವ್ಯಗಳನ್ನು ಮರೆಯದೆ ನಿರ್ವಹಿಸುವುದು ಮುಖ್ಯ. ಇದೇ ಆಶಯವನ್ನು "ಪೌರಪ್ರಜ್ಞಾಯನ" ಕೃತಿ ಹೊಂದಿದೆ. ಹಕ್ಕು ಮತ್ತು ಕರ್ತವ್ಯಗಳು ಪೌರನಿಗೆ ಅತ್ಯಗತ್ಯ.

---

೩. ಭಾರತ ಸರ್ಕಾರ ಮತ್ತು ರಾಜಕೀಯ : ಡಾ. ಎಚ್.ಎಂ. ರಾಜಶೇಖರ್, ಕಿರಣ್ ಪ್ರಕಾಶನ, ಮೈಸೂರು, ಪು. ೬೩

ವ್ಯಕ್ತಿಯು ಸಹ್ಯವಾಗಿ ನಡೆದುಕೊಂಡು ಜೀವ ಹಾಗೂ ಜಗತ್ತಿಗೆ, ಸಮಾಜಕ್ಕೆ, ಮುಂದಿನ ಪೀಳಿಗೆ ಧಕ್ಕೆಯಾಗದಂತೆ ನಡೆದುಕೊಳ್ಳುವುದೇ ಸಾಮಾಜಿಕ ಪ್ರಜ್ಞೆಯಾಗಿದೆ. ಆ ನಿಟ್ಟಿನ ಕರ್ತವ್ಯಗಳು ಮಾನವೀಯ ಮೌಲ್ಯವುಳ್ಳದ್ದಾಗಿ, ಸೀಮಿತ ಪರಿಧಿ ಮೀರಿ ವಿಶಾಲವಾಗಿ ಹಬ್ಬಿಕೊಂಡಿವೆ. ಸಮಯ ಪರಿವೆಯಿಂದ ಕರ್ತವ್ಯವನ್ನು ನಿರ್ವಹಿಸಿದರೆ ವಿಶ್ವಕುಟುಂಬ ಸ್ವಾಸ್ಥ ಕುಟುಂಬವಾಗಿ ಹರಡುತ್ತದೆ.

ಅಧ್ಯಾಯ – ೪

'ಪೌರಪ್ರಜ್ಞಾಯನ' ಕೃತಿಯ ಅಧ್ಯಯನದ ವಿಭಾಗ ಕ್ರಮಗಳು

ಡಾ. ಎಸ್.ಎನ್.ರಾಮಸ್ವಾಮಿಯವರು ರಚಿಸಿರುವ 'ಪೌರಪ್ರಜ್ಞಾಯನ'ದಲ್ಲಿ ೨೮ ವಿವಿಧ ವಿಷಯಗಳ ಅಧ್ಯಾಯಗಳಿವೆ. ನಾನು ಅಧ್ಯಯನದ ಅನುಕೂಲಕ್ಕೋಸ್ಕರ ೨೮ ಅಧ್ಯಾಯಗಳನ್ನು ೪ ಅಧ್ಯಾಯಕ್ಕೆ ಒಳಪಡಿಸಿಕೊಂಡು ವಿವರಿಸಿರುತ್ತೇನೆ. ವೇದಗಳ ಕಾಲದಿಂದ ಪ್ರಸ್ತುತ ಸಂದರ್ಭದವರೆಗಿನ ಅಂಶಗಳನ್ನು ಉಪಅಧ್ಯಾಯಗಳಾಗಿ ವಿಭಾಗಿಸಿ ವಿವರಿಸಿರುತ್ತೇನೆ.

೧) ಪೌರಪ್ರಜ್ಞೆ

(ಅ) ವೇದಗಳು (ಆ) ಧರ್ಮಗಳು (ಇ) ಸಂಸ್ಕೃತಿ (ಈ) ನೈತಿಕ ಮೌಲ್ಯ
(ಉ) ರಾಷ್ಟ್ರಪ್ರೇಮ (ಊ) ಕನ್ನಡಪ್ರೇಮ

೨) ಪರಿಸರ ಪೌರಪ್ರಜ್ಞೆ

(ಅ) ಪರಿಸರ ಚಳವಳಿಗಳು (ಆ) ಜೈವಿಕ ವೈವಿಧ್ಯ (ಇ) ಪ್ಲಾಸ್ಟಿಕ್
(ಈ) ಇ–ತ್ಯಾಜ್ಯ (ಉ) ಜಾಗತಿಕ ತಾಪಮಾನ (ಊ) ಪರಮಾಣು ಸ್ಥಾವರ
(ಋ) ಮೊಬೈಲ್ ಬಳಕೆ

೩) ಸಾಮಾಜಿಕ ಪೌರಪ್ರಜ್ಞೆ

(ಅ) ವಿಶ್ವವಿದ್ಯಾನಿಲಯಗಳು (ಆ) ವೈದ್ಯಕೀಯ ಕ್ಷೇತ್ರ (ಇ) ದಯಾಮರಣ
(ಈ) ಮಕ್ಕಳ ಹಕ್ಕುಗಳು (ಉ) ಭಾರತೀಯ ಮಹಿಳೆ
(ಊ) ಪರಮತ ಸಹಿಷ್ಣುತೆ (ಋ) ಮೂಢ ನಂಬಿಕೆ

೪) ಪ್ರಚಲಿತ ಪೌರಪ್ರಜ್ಞೆ

(ಅ) ಕಾರಾಗೃಹಗಳು (ಆ) ಮರ್ಯಾದಾ ಹತ್ಯೆ (ಇ) ಭ್ರಷ್ಟಾಚಾರ – ಕಪ್ಪುಹಣ
(ಈ) ಮೂಲಭೂತ ಹಕ್ಕು (ಉ) ವಿಶ್ವಸಂಸ್ಥೆ (ಊ) ಪರಿಸರ ನೀತಿಶಾಸ್ತ್ರ

೧) ಪೌರಪ್ರಜ್ಞೆ

ಪೌರಪ್ರಜ್ಞೆ ಭಾರತೀಯ ಸನಾತನ ಪರಂಪರೆಯಲ್ಲಿ ಬರುವ ಪ್ರಮುಖ ಅಂಶ. ಇಡೀ ವಿಶ್ವವೇ ಬೆರಗಾಗಿ ನೋಡುವಂತೆ 'ಪೌರಪ್ರಜ್ಞೆ' ಕುರಿತ ವಿಚಾರಗಳು ನಮ್ಮಲ್ಲಿ ಅನಾದಿ ಕಾಲದಿಂದಲೂ ಬೆಳೆದು ಬಂದಿದೆ.

'ಪೌರಪ್ರಜ್ಞೆ' ಎನ್ನುವುದು ಒಂದು ಸಾಂಸ್ಕೃತಿಕ ತಳಪಾಯವಿದ್ದಂತೆ. ಇದರ ಮೇಲೆ ಸಂಸ್ಕೃತಿಯ ಸೌಧ ಕಟ್ಟಲ್ಪಟ್ಟಿರುತ್ತದೆ. ಮನುಷ್ಯ ಸಂಘಜೀವಿ. ಆದಕಾರಣ ಸಮಾಜದಲ್ಲಿ ಸಾಮರಸ್ಯದಿಂದ ಬದುಕಬೇಕಾದರೆ ಆತ/ಆಕೆಯಲ್ಲಿ 'ಪೌರಪ್ರಜ್ಞೆ' ಎಂಬುದು ಅಡಕವಾಗಿರಬೇಕು. ಪೌರಪ್ರಜ್ಞೆ ಇಲ್ಲದ ಸಮಾಜ ಅನಾಗರೀಕತೆಯ ಮತ್ತು ಅರಾಜಕತೆಯ ತಾಣವಾಗುತ್ತದೆ.

ಕೃತಿಯ ಕರ್ತೃ ತಮ್ಮ ಕೃತಿಯ 'ಲೇಖಕನ ಮಾತು' ವಿಭಾಗದಲ್ಲಿ 'ಭಾರತ, ವಿಶ್ವದ ಆಧ್ಯಾತ್ಮದ ಹೃದಯ. ಬೌದ್ಧ ಮತ ಮತ್ತು ಅದಕ್ಕೂ ಹಿಂದಿನಿಂದಲೂ ಭಾರತದಿಂದ ಜ್ಞಾನ ವಿಜ್ಞಾನಗಳು ಆಧ್ಯಾತ್ಮ ದರ್ಶನಗಳು ಇತರ ದೇಶಗಳಿಗೆ ಹರಡಿವೆ. ಎಂದು ಹೇಳುತ್ತಾ ವೇದಗಳ ಕಾಲದಲ್ಲೇ ಶಿಸ್ತು, ಸಂಯಮ, ಸಮನ್ವಯ, ಸಾಮರಸ್ಯ, ಸೌಜನ್ಯ, ಸಭ್ಯತೆ, ಶಿಷ್ಟಾಚಾರ, ಕರ್ತವ್ಯಪ್ರಜ್ಞೆ, ಪರಿಸರ ಪ್ರಜ್ಞೆ, ವಿಶ್ವಪ್ರಜ್ಞೆ ಮತ್ತು ಪೌರಪ್ರಜ್ಞೆಗಳು ಇತರ ದೇಶಗಳ ಮೇಲೆ ಪ್ರಭಾರ ಬೀರಿದ್ದವು."[೪] ಎನ್ನುತ್ತಾರೆ.

ಡಾ. ಎಸ್.ಎನ್. ರಾಮಸ್ವಾಮಿ ಅವರ 'ಪೌರಪ್ರಜ್ಞಾಯನ' ಕೃತಿಯ ಮುನ್ನುಡಿ–ಯಲ್ಲಿ ಮಲ್ಲೇಪುರಂ ಜಿ.ವೆಂಕಟೇಶ್ ಅವರು "ಪೌರಪ್ರಜ್ಞಾಯನ'ವು ಬಹುಶಾಸ್ತ್ರೀಯ ಬಹುಶಾಸ್ತ್ರಗಳ ಸಂಕುಲಿತ ಮಹಾ ಸಂಪುಟವಾಗಿದೆ. ಭಾರತೀಯ ಸಮಾಜವು ಪೌರಪ್ರಜ್ಞೆಯನ್ನು ಹೊಂದಿತ್ತು. ಆದರೆ, ಬ್ರಿಟಿಷರ ಕಾಲಕ್ಕೆ ಅದಕ್ಕೂ ಮೊದಲು ತುಸುತುಸುವೇ ಹ್ರಾಸಗೊಂಡು ಇಂದು ಪೌರಪ್ರಜ್ಞೆಯಿಲ್ಲದೆ ನಾವು ನರಳುತ್ತಿದ್ದೇವೆ. ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶ ಎಂಬ ಕಲ್ಪನೆಯಲ್ಲಿ 'ಪೌರಪ್ರಜ್ಞೆಯೇ' ಮುಖ್ಯವಾದ ನೆಲೆಯನ್ನು ಪಡೆದಿತ್ತು."[೫] ಎಂದು ಹೇಳುತ್ತಾರೆ.

ಲೇಖಕರು ಪೌರಪ್ರಜ್ಞೆ ಕುರಿತು ವೇದವಾಙ್ಮಯ ಸಂಹಿತೆಗಳು, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತುಗಳ ಕಾಲದಲ್ಲಿಯೇ ಚರ್ಚೆಯಾಗಿವೆ. ಪ್ರಾಚೀನ ಕೃತಿಗಳಲ್ಲಿ 'ಪೌರಪ್ರಜ್ಞೆ' ಕುರಿತ ವಿಚಾರಗಳು ಜಗತ್ತಿನ ಬೇರಾವ ದೇಶಗಳಲ್ಲೂ ಚರ್ಚೆಯಾಗಿಲ್ಲ ಎಂದಿದ್ದಾರೆ. ವೇದಗಳ ಕಾಲದಲ್ಲಿದ್ದ ಶಿಸ್ತು, ಸಂಯಮ, ಸಮನ್ವಯ, ಸಾಮರಸ್ಯ, ಸೌಜನ್ಯ, ಇನ್ನಿತರ 'ಪೌರಪ್ರಜ್ಞೆ'ಯ ಗುಣ ಇಂದು ಭಾರತೀಯರಲ್ಲಿ ಗಣನೀಯವಾಗಿ ಕಡಿಮೆಯಾಗುತ್ತಿದೆ ಎನ್ನುವ ವಿಷಾದ ಲೇಖಕರದ್ದು.

ಒಂದು ಕಾಲದಲ್ಲಿ ಈ ನೆಲದ ಆಧ್ಯಾತ್ಮ ಜ್ಞಾನ–ವಿಜ್ಞಾನಗಳು ಇದರ ದೇಶಗಳಿಗೆ ಪ್ರಸಾರವಾಗುತ್ತಿದ್ದು; ಪೌರಪ್ರಜ್ಞೆಗೆ ತವರು ಮನೆ ಭಾರತವಾಗಿತ್ತು. ಇದಕ್ಕೆ ಪೂರಕವಾಗಿ ಲೇಖಕರು ಋಷ್ಯಾಶ್ರಮ, ನಳಂದ, ತಕ್ಷಶಿಲೆಯಂತಹ ಪ್ರಾಚೀನ ವಿಶ್ವವಿದ್ಯಾನಿಲಯ–

---

೪. ಲೇಖಕರ ಮಾತು

೫. ಕೃತಿಯ ಮುನ್ನುಡಿಯಲ್ಲಿ ಮಲ್ಲೇಪುರಂ ಜಿ. ವೆಂಕಟೇಶ್

ಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಈ ವಿಶ್ವವಿದ್ಯಾನಿಲಯಗಳು ಜಗತ್ತಿಗೆ ಜ್ಞಾನ-ವಿಜ್ಞಾನ ದರ್ಶನ ಪ್ರಚಾರ ಕೇಂದ್ರವಾಗಿತ್ತು ಎಂದು ಉಲ್ಲೇಖಿಸುತ್ತಾರೆ.

ಇಷ್ಟೊಂದು ಭವ್ಯ ಪರಂಪರೆ ಮತ್ತು ಉಜ್ವಲ ಇತಿಹಾಸ ಹೊಂದಿದ್ದ ಭಾರತೀಯ ಸನಾತನ ಪರಂಪರೆಯು ಮಧ್ಯದಲ್ಲಿ ತಪ್ಪು ಕಲ್ಪನೆಗೆ ಒಳಗಾಯಿತು ಎಂದು ಲೇಖಕರು ಹೇಳುತ್ತಾರೆ.

"ಕಾಲ ಬದಲಾದಂತೆ, ಧರ್ಮಶಾಸ್ತ್ರಗಳ ಕರ್ತರು ಮತ್ತು ಪುರೋಹಿತಶಾಹಿಯ ತಪ್ಪು ಕಲ್ಪನೆಗಳಿಂದ ಜಾತಿ ರಾಕ್ಷಸನ ಉದ್ಭವವಾಯಿತು."[೬] ಸಮಾಜದಲ್ಲಿ ಕೆಳಸ್ತರಗಳು ಹಾಗೂ ಸ್ತ್ರೀಯರನ್ನು ಸಮಾನತೆಯ ಪೌರಪ್ರಜ್ಞೆಯಿಂದ ನೋಡುತ್ತಿರಲಿಲ್ಲ. ಮತಾಚಾರ್ಯರುಗಳು ಭಾರತೀಯ ಸಮಾಜದಲ್ಲಿ ಏಕತೆ, ಸಮಾನತೆಯನ್ನು ಸಾಧಿಸಲಾಗಲಿಲ್ಲ. ವೈಜ್ಞಾನಿಕ ಅಭಿಪ್ರಾಯಗಳಿಗೆ ಬದಲಾಗಿ ಮೂಢ ನಂಬಿಕೆಗಳು ಮೂಡಿದವು ಎಂದು ಹೇಳುತ್ತಾರೆ.

ಆದರೆ ವೇದಭ್ಯಾಸಗಳು ಮತ್ತು ಉಪನಯನಗಳು ಸ್ತ್ರೀಯರ ಹಕ್ಕುಗಳಾಗಿದ್ದವು. ಹಾಗೆಯೇ ಎಲ್ಲಾ ಜೀವಿಗಳಲ್ಲಿಯೂ ಪರಮಾತ್ಮನ ಅಂಶವನ್ನು ಕಾಣುವ ಉದಾತ್ತ ಮನೋಭಾವ ಇತ್ತು. ನಮ್ಮ ಶಾಂತಿಮಂತ್ರಗಳಲ್ಲಿರುವ ಪೌರಪ್ರಜ್ಞೆ ಜಗತ್ತಿನ ಇನ್ಯಾವ ದೇಶಗಳ ಧಾರ್ಮಿಕ ಗ್ರಂಥಗಳಲ್ಲಿ ಇಲ್ಲ ಎನ್ನುತ್ತಾರೆ ಲೇಖಕರು.[೭]

ಇಂತಹ ಉನ್ನತ ಜ್ಞಾನ ಆದರ್ಶ ಪರಂಪರೆ ಹೊಂದಿದ್ದ ಭಾರತವು ನಾಗರೀಕನ ಕರ್ತವ್ಯಗಳ ಬಗ್ಗೆ ಅಲಿಖಿತ ಆದರ್ಶ ನಡವಳಿಕೆಯನ್ನು ಇಡೀ ಜಗತ್ತಿಗೆ ಹೇಳಿಕೊಟ್ಟಿತ್ತು. ಆದರೆ ದುರಾದೃಷ್ಟವಶಾತ್ ಇಂದು ನಾವು ಮುಂದುವರಿದ ದೇಶಗಳಿಂದ 'ಪೌರಪ್ರಜ್ಞೆ'ಯ ಪಾಠಗಳನ್ನು ಕಲಿಯುವ ದುಃಸ್ಥಿತಿಗೆ ಬಂದು ತಲುಪಿದ್ದೇವೆ ಎನ್ನುವ ವಿಷಾದ ಲೇಖಕರದ್ದು.

"ನನ್ನ ದೇಶದಲ್ಲಿ ಪ್ರವಾಸ ಪ್ರಾರಂಭಿಸಿದರೆ, ಇಲ್ಲಿನ ಗಿಜಿಗಿಜಿ ಜನಸಂದಣಿ, ಅನೇಕ ಪ್ರದೇಶಗಳಲ್ಲಿರುವ ಅನಾರೋಗ್ಯಕರ ಪರಿಸರ ಮತ್ತು ಹೆಚ್ಚಿನ ಪ್ರಮಾಣದ ಸಾಂಕ್ರಾಮಿಕ ಖಾಯಿಲೆಗಳು (ವಿಶ್ವದ ಪ್ರತಿ ೫ ಕ್ಷಯ ರೋಗಿಗಳಲ್ಲಿ ಒಬ್ಬ ಭಾರತೀಯನಿರುತ್ತಾನೆ.) ಬಯಲು ಶೌಚಾಲಯಗಳು ಜನರನ್ನು ದಿಗ್ಭ್ರಮೆಗೊಳಿಸುತ್ತವೆ" ಎಂದು ದಾಖಲಿಸುತ್ತಾರೆ.

"ಡಾ. ಎನ್.ಎನ್.ರಾಮಸ್ವಾಮಿ ಅವರ ಈ ಮಹಾ ಸಂಪುಟವು ಸಕಾಲಿಕ-ವಾಗಿದೆ, ಸಾಂದರ್ಭಿಕ ಕೃತಿಯಾಗಿದೆ. ನಾವು ಸಾವಿನ ಅಂಚಿಗೆ ತಲುಪುವ ಮೊದಲು

---

೬. ಲೇಖಕರ ಮಾತು
೭. ಅದೇ

'ಪೌರಪ್ರಜ್ಞೆಯ' ಮಹತ್ವವನ್ನು ನಮ್ಮ ಸಮಾಜವು ತಿಳಿಯಬೇಕಾಗಿದೆ. ಅದರ ಅಗತ್ಯತೆ ಹಿಂದೆಂದಿಗಿಂತಲೂ ಇಂದು ತುಂಬಾ ಅವಶ್ಯಕವಾಗಿದೆ."[೮] ಎಂದು ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದ್ದಾರೆ.

"ಪ್ರಕೃತಿಯ ಆರಾಧಕರಾಗಿದ್ದು, ವನದೇವತೆಗಳನ್ನು ಪೂಜಿಸುತ್ತಿದ್ದ ನಾವು ಕಾಡುಗಳನ್ನು ನಾಶಮಾಡಿರುವ ರೀತಿ, ಸೌಜನ್ಯ ರಹಿತವಾಗಿ ಕಂಡಕಂಡಲ್ಲಿ ಉಗಿಯುವುದು, ಬಯಲುಗಳನ್ನು ಶೌಚಾಲಯಗಳಾಗಿ ಉಪಯೋಗಿಸುವುದು, ನಗರ-ಗಳಲ್ಲಿ ಕೊಳಕು ಪ್ರದೇಶಗಳು, ಬಡತನ, ಅನಕ್ಷರತೆ, ಭಿಕ್ಷುಕರ ಸಮಸ್ಯೆ, ವರದಕ್ಷಿಣೆ ಪಿಡುಗು, ಮರ್ಯಾದಾ ಹತ್ಯೆಗಳು, ನಗರಗಳಲ್ಲಿ ಸಿವೇಜ್‌ನ ತೆರೆದ ನಾಲೆಗಳು, ದುರ್ನಾತ, ತ್ಯಾಜ್ಯ ವಸ್ತುಗಳನ್ನು ಹಡಗುಗಳಲ್ಲಿ ಬೇರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವುದು, ಭ್ರಷ್ಟಾಚಾರ, ಕಪ್ಪುಹಣ ಸಂಗ್ರಹ, ಆಸ್ಪತ್ರೆಗಳಲ್ಲಿ ಸೂಕ್ತ ಸೌಲಭ್ಯಗಳಲ್ಲದಿರುವುದು ಇವುಗಳಲ್ಲಿ ಕೆಲವಾದರೂ ಗಮನಕ್ಕೆ ಬರುತ್ತವೆ. ನಮಗೆ ನಮ್ಮ ಮನೆಗಳನ್ನು ಶುಚಿಯಾಗಿಟ್ಟುಕೊಳ್ಳುವುದು ಗೊತ್ತು, ಆದರೆ ಆಚೆಯ ಪರಿಸರದ ಬಗ್ಗೆ ನಾವು ಅಷ್ಟು ಗಮನಕೊಡುವುದಿಲ್ಲ."[೯] ಎಂದು ಲೇಖಕರು ಅಭಿಪ್ರಾಯಪಡುತ್ತಾರೆ.

(ಅ) ವೇದಗಳು

'ವಿದ್' ಎಂಬ ಧಾತುವಿನಿಂದ 'ವೇದ' ಎನ್ನುವ ಪದ ನಿಷ್ಪನ್ನವಾಗಿದೆ. ಇದರ ಅರ್ಥ 'ತಿಳಿದುಕೋ' ಎಂದು, ಅಂದರೆ ಸರ್ವಕಾಲಿಕ ಸತ್ಯಗಳನ್ನೇ ಅರಿಯುವುದು. ವೇದಗಳು ಧಾರ್ಮಿಕ ಮತ್ತು ಜ್ಞಾನದ ಬಹುದೊಡ್ಡ ಆಗರವಾಗಿವೆ. ಈ ವೇದಗಳು ಕೇವಲ ಧಾರ್ಮಿಕ ವಿಷಯಗಳಿಗೆ ಸೀಮಿತವಾಗಿರದೆ ನೀತಿಮಾರ್ಗ, ಪೌರಪ್ರಜ್ಞೆ ಪರಿಸರಪ್ರಜ್ಞೆ ಮತ್ತು ವಿಶ್ವಪ್ರಜ್ಞೆಗಳನ್ನು ತಿಳಿಸುವ ಕೃತಿ ವೇದ ಎಂಬುದು ಲೇಖಕರ ಅಭಿಪ್ರಾಯ.

ಭಾರತೀಯ ವೇದಗಳಲ್ಲಿ ನಾಲ್ಕು ಭಾಗ. ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ. ಕೊನೆಯ ಅಥರ್ವಣ ವೇದವು ಮೇಲಿನ ಮೂರು ವೇದಗಳಿಗೆ ಹೋಲಿಸಿದರೆ ಇತ್ತೀಚಿನದು ಅಥರ್ವಣ ವೇದದಲ್ಲಿ ಬಹುಮುಖ್ಯವಾಗಿ ಗಮನ ಸೆಳೆಯುವುದು 'ಪೌರಪ್ರಜ್ಞೆ'ಯನ್ನು ಉದ್ದೀಪಿಸುವ ಅನೇಕ ಮಂತ್ರಗಳೂ ಇದರಲ್ಲಿವೆ.

---

೮. ಮುನ್ನುಡಿಯಲ್ಲಿ ಮಲ್ಲೇಪುರಂ ಜಿ.ವೆಂಕಟೇಶ್
೯. ಲೇಖಕನ ಮಾತುವಿನಲ್ಲಿ ರಾಮಸ್ವಾಮಿ

"ವೇದಗಳಲ್ಲಿ ಪ್ರಕೃತಿ ಹಾಗೂ ಪರಿಸರ ಪ್ರಾಮುಖ್ಯವಾದದ್ದು. ಉಷಸ್ಸು, ಪೃಥಿವಿ, ಪೌಕ್ಯಿ, ಇಂದ್ರ, ವಾಯು, ಪರ್ಜನ್ಯ, ರಾತ್ರಿ, ಅಗ್ನಿ, ಆದಿತ್ಯ ಮೊದಲಾದ ದೇವತೆಗಳು ಪ್ರಕೃತಿಗೆ ಸಂಬಂಧಿಸಿದಂತೇ ಇದ್ದಾರೆ"[೧೦] ದೇವರೊಬ್ಬನೇ ಎಂಬುದನ್ನು ಋಗ್ವೇದ ಹೇಳುತ್ತದೆ. ಭಾರತೀಯರನ್ನು ಒಂದೇ ಸಂಸ್ಕೃತಿಯಲ್ಲಿ ಅಡಗಿಸಿರುವುದು ವೇದಗಳು. ವೇದಗಳ ಸಂಸ್ಕೃತಿ ಇಂದಿಗೂ ಭಾರತೀಯರ ನಿತ್ಯ ಜೀವನದ ಕ್ರಮವಾಗಿದೆ. ಇಲ್ಲಿ ಅನುದಿನ ಜೀವನಕ್ಕೆ ಬೇಕಾದ ನೀತಿ-ನಿಯಮ, ಆಚಾರ-ವಿಚಾರ, ಪೌರಪ್ರಜ್ಞೆ ಮತ್ತು ಪೌರರ ಕರ್ತವ್ಯ ಹಾಗೂ ಧರ್ಮಪ್ರಜ್ಞೆಗಳು ಇದರಲ್ಲಿದೆ.

ಲೇಖಕರ ಅಭಿಪ್ರಾಯದಂತೆ ಭಾರತೀಯ ಆಧ್ಯಾತ್ಮಿಕ ದೃಷ್ಟಿಗೆ ವೇದಗಳೇ ಮೂಲವಂತೆ. ಪ್ರಸ್ತುತ ಸಾಮಾಜಿಕ, ನೈತಿಕ ಮತ್ತು ರಾಜಕೀಯ ಕ್ಷೇತ್ರಗಳಿಗೆ ವೇದಕಾಲದ ಆಧ್ಯಾತ್ಮಿಕ ದೃಷ್ಟಿಕೋನದ ಅವಶ್ಯಕತೆ, ಅಗತ್ಯತೆ, ಅನಿವಾರ್ಯತೆ ಇಂದು ಹೆಚ್ಚಾಗಿದೆ.

"ನಮ್ಮ ಪರಂಪರೆಯಲ್ಲಿ ಸೇರಿಕೊಂಡಿರುವ ಮೂಢನಂಬಿಕೆಗಳು, ಸಂಕುಚಿತ ಮನೋಭಾವನೆ, ಭ್ರಷ್ಟಾಚಾರ, ದುರಾಸೆ, ದುರ್ನಡತೆ, ಅರಿಷಡ್ವರ್ಗಗಳಿಗೆ ದಾಸ್ಯ ಇದೆಲ್ಲಾ ನಾಶವಾಗಬೇಕಾದರೆ ವೈಚಾರಿಕ ದೃಷ್ಟಿಯಿಂದ ಆಧ್ಯಾತ್ಮಿಕ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ನಾವು ವೇದಗಳನ್ನು ನೋಡಬೇಕಾಗುತ್ತದೆ. ಪ್ರಪಂಚದಾದ್ಯಂತ ವೇದಗಳ ಬಗ್ಗೆ ವಿದ್ವಾಂಸರಿಗೆ ಗೌರವವಿದೆ. ಅವುಗಳ ಬಗ್ಗೆ ಸಂಶೋಧನೆಗಳಾಗುತ್ತಿವೆ."[೧೧] ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಪ್ರಾಚೀನ ಭಾರತೀಯ ಸಂಸ್ಕೃತಿಯ ನಡೆ-ನುಡಿ, ಆಚಾರ-ವಿಚಾರ, ಧಾರ್ಮಿಕ ನಂಬಿಕೆ, ಪ್ರಕೃತಿಯ ಪ್ರೇಮ, ಪೌರಪ್ರಜ್ಞೆಯಿಂದ ಹಿಡಿದು ವಿಶ್ವಪ್ರಜ್ಞೆಗಳನ್ನು ಓದುಗರಿಗೆ ಕೆಲವು ಸೂಕ್ತ ಮಂತ್ರಗಳಿಂದ ಆಯ್ದ ಪದ್ಯಭಾಗವನ್ನು ಇಲ್ಲಿ ಲೇಖಕರು ಈ ರೀತಿ ಉಲ್ಲೇಖಿಸಿದ್ದಾರೆ. ಇದು ಕೃತಿಯ ವಿಶ್ವಾಸಾರ್ಹತೆ ಮತ್ತು ಮೌಲ್ಯವನ್ನು ಹೆಚ್ಚಿಸುತ್ತದೆ.

ವೇದಕಾಲದ ಋಷಿ ಮುನಿಗಳು ನದಿಗಳನ್ನು ಮುಕ್ತ ಭಾವನೆಯಿಂದ ಸ್ತುತಿಸಿದ್ದಾರೆ. ಗಂಗಾ ನದಿಯನ್ನು 'ಸುರನದಿ'ಯೆಂದು ಕರೆದಿದ್ದಾರೆ. ಆದರೆ ವಾಸ್ತವವಾಗಿ ಗಂಗಾನದಿ ಇಂದು ಅತ್ಯಂತ ಹೆಚ್ಚು ಕಲುಷಿತಗೊಂಡಿದ್ದು, ಇದರಲ್ಲಿ ಸ್ನಾನ ಮಾಡಿದರೆ ಪಾಪಗಳು ಹೋಗಿ ಪುಣ್ಯ ಬರುತ್ತದೆ ಎಂಬ ಆಶಯಕ್ಕೆ ವಿರುದ್ಧವಾಗಿ ಚರ್ಮ ರೋಗದಂತಹ ಇತರೆ ಖಾಯಿಲೆಗಳು ಬರುತ್ತವೆ ಎಂದು ಭಕ್ತರು ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ ವಿವೇಚನೆ ಇಲ್ಲದೆ

೧೦. ವೇದಗಳಲ್ಲಿ ಪೌರಪ್ರಜ್ಞೆ, ಪು. ೧
೧೧. ಅದೇ, ಪು. ೩

ಗಂಗಾನದಿಯನ್ನು ಮಲೀನಗೊಳಿಸಿರುವುದೇ ಆಗಿದೆ. ದೇವಲೋಕದ ನದಿಯ ಕಥೆಯೇ ಈ ರೀತಿಯಾದರೆ ಇನ್ನು ಉಳಿದ ನದಿಗಳ ಪಾಡೇನು ಎನ್ನುವುದು ಲೇಖಕರ ಬಹುದೊಡ್ಡ ಪ್ರಶ್ನೆಯಾಗಿದೆ.

"ಇವಂ ಮೇ ಗಂಗೇ ಯಮುನೇ ಸರಸ್ವತಿ
ಶತುದ್ರಿ ಸ್ತೋಮಂ ಸಚತಾಪರಷ್ಣ್ಯಾ।
ಅಸಿಕ್ನ್ಯಾ ಮರುದ್ವೃಧೇವಿತಸ್ತಯಾ
ಅರ್ಜೀಕಾಯೇಶೃಣುಹ್ಯಾ ನುಷೋಮಯಾ॥[೧೨]

ಬೀಸುವ ಶುದ್ಧಗಾಳಿಯಲ್ಲಿ ರೋಗನಿವಾರಕನಾದ ಅಂಶಗಳಿದ್ದವು "ವಾತಾ-ಆವಾತಭೇಷಜಂ". ಇಂದೂ ಕೂಡ ಪ್ರಕೃತಿ ಚಿಕಿತ್ಸೆಯಲ್ಲಿ ಜಲ, ವಾಯುಗಳ ಈ ಗುಣವನ್ನು ಬಳಸುತ್ತಾರೆ ಎಂದು ಲೇಖಕರು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಇಂದು ಆಧುನಿಕತೆಯಲ್ಲಿರುವ ನಾವು ಕೈಗಾರಿಕೆಗಳಿಂದ, ಯಂತ್ರೋಪಕರಣ ಮತ್ತು ವಾಹನ-ಗಳಿಂದ ವಾಯುಮಾಲಿನ್ಯ ಮಾಡುತ್ತಿದ್ದೇವೆ. ಇದರಿಂದ 'ಜಾಗತಿಕ ತಾಪಮಾನ'ಕ್ಕೆ ವಿಷಕಾರಿ ಅನಿಲಗಳನ್ನೇ ತುಂಬುತ್ತಿದ್ದೇವೆ ಎಂಬ ಆತಂಕ ಲೇಖಕರದ್ದು. ಅಷ್ಟೇ ಅಲ್ಲ ಮಾನವ ನಿರ್ಮಿತ ಯಂತ್ರೋಪಕರಣಗಳು ಮತ್ತು ರಸಾಯನಿಕ ಬಳಕೆಯಿಂದ ಇಡೀ ಸಮಾಜದ ಹವಾಮಾನವನ್ನೇ ಬದಲಿಸುವಷ್ಟು ಶಕ್ತಿಯುತವಾಗಿದೆ ಎನ್ನುತ್ತಾರೆ.

ವೇದಗಳ ಕಾಲದಲ್ಲಿ ಜನರು ಪಾಪಕೃತ್ಯಗಳನ್ನು ಮಾಡಲು ಹೆದರುತ್ತಿದ್ದರು. ಕಾರಣ ಅವರಲ್ಲಿ ಪೌರಪ್ರಜ್ಞೆ ಸದಾ ಜಾಗೃತವಾಗಿರುತ್ತಿತ್ತು.

"ಕಿತವಾಸೋ ಯದ್ರಿರಿಪುರ್ನ ದೀವಿ
ಯದ್ವಾ ಘಾ ಸಕ್ಯಮುತ ಯನ್ನ ವಿದ್ಮ
ನರ್ವಾ ತಾ ವಿಷ್ಯ ಶಿಥಿರೇವ ದೇವಾ
ಧಾ ತೇ ಸ್ಯಾಮ ವರುಣ ಪ್ರಯಾಸಃ"[೧೩]

"ಪೌರಪ್ರಜ್ಞೆ ಇಲ್ಲದೆ, ಸುರೆ, ಕ್ರೋಧ, ಅಕ್ಷಗಳು, ಅಜ್ಞಾನ, ಜೂಜು ಇವೆಲ್ಲವನ್ನು ಪ್ರಾಮಾಣಿಕ ಹಾಗೂ ಸ್ಥಿರ ಪ್ರಯತ್ನಗಳಿಂದ ಮಾನವ ಗೆಲ್ಲಬಲ್ಲ ಎಂಬ ಭರವಸೆಯನ್ನು ಈ ಸೂಕ್ತಿ ಕೊಡುತ್ತದೆ."[೧೪]

---

೧೨. ವೇದಗಳಲ್ಲಿ ಪೌರಪ್ರಜ್ಞೆ, ಪು. ೩
೧೩. ಋಗ್ವೇದ ೫.೮೫-೮
೧೪. ವೇದಗಳಲ್ಲಿ ಪೌರಪ್ರಜ್ಞೆ, ಪು. ೪

ವೇದ ಕಾಲದಲ್ಲಿ 'ಮಾಂಗಲ್ಯ' ವಿಷಯದ ಪ್ರಸ್ತಾಪವೇ ಇಲ್ಲ ಎನ್ನುತ್ತಾರೆ ಲೇಖಕರು. ಬಹುಶಃ ಮಂಗಳ ಸೂತ್ರ ಎನ್ನುವುದು ಇತ್ತೀಚಿನ ಪ್ರಯೋಗಗಳಲ್ಲಿ ಇಂತಹ ಸಂಪ್ರದಾಯ ಸೇರಿಕೊಂಡಿರಬಹುದು ಎಂಬುದು ಲೇಖಕರ ಅಭಿಪ್ರಾಯ.

ವಿವಾಹದ ಅಶೀರ್ವಾದ ಮಂತ್ರಗಳಲ್ಲಿ ಪೌರಪ್ರಜ್ಞೆಯ ಮೌಲ್ಯ ಸಾರುವ ಅನೇಕ ಮಂತ್ರಗಳಿವೆ.

"ಅಘೋರಚಕ್ಷುರ ಪತಿಘ್ನ್ಯೇಧಿ
ಶಿವಾ ಪಶುಭ್ಯಃ ಸುಮನಾಃ ಸುವರ್ಚಾಃ।
ವೀರಸೂರ್ದೇವಕಾಮಾ ಸ್ಯೋನಾ
ಶಂ ನೋ ಭವ ದ್ವಪದೇ ಶಂ ಚತುಷ್ಪದೇ।[೧೫]

ಹೆಂಡತಿಯು ಗಂಡನ ಜೊತೆ ಹೇಗೆ ಸಾಂಸಾರಿಕ ಜೀವನವನ್ನು ಅನ್ಯೋನ್ಯವಾಗಿ ಸಾಗಿಸಿಕೊಂಡು ಹೋಗಲು ಇರುವ ನಿರೀಕ್ಷೆಗಳನ್ನು ಮೇಲಿನ ಮಂತ್ರ ಸಾರುತ್ತದೆ.

"ಐಹಿಕ ಜೀವನದ ಮಹತ್ವವನ್ನು ಅಥರ್ವಣವೇದ ತಿಳಿಸಿದೆ. ಪುಣ್ಯದ ಫಲವಾದ ಈ ಜೀವನವನ್ನು ಚೆನ್ನಾಗಿ ಬಾಳಬೇಕಾದುದೇ ಎಲ್ಲರ ಆದರ್ಶವಾಗಬೇಕು. ಇಲ್ಲಿ ಸರ್ವವೂ ದುಃಖಕರ ಎಂಬ ಭಾವವಿಲ್ಲ. ಮಾನವನು ತನ್ನನ್ನು ಸುಮ್ಮನೇ ನಿಂದಿಸಿಕೊಳ್ಳಬೇಕಾದುದಿಲ್ಲ. ಕೇವಲ ಪಾಪಿಯೇ ಆಗಿ ಉದ್ಧಾರದ ಆಸೆಯೇ ಇಲ್ಲವೆಂದು ಯಾರೂ ಎದೆಗೆಡಬೇಕಾಗಿಲ್ಲ. ಮಾನವ ದೈವತ್ವಕ್ಕೆ ಏರಬಲ್ಲ. ಆತನಲ್ಲಿ ದೇವರು ಮನೆ ಮಾಡಿರುವನೆಂದ ಮೇಲೆ ಭಗವಂತನು ವಾಸಿಸುವ ಪುಣ್ಯಕ್ಷೇತ್ರವೇ ಅವನು. ಮಾನವನು ತನ್ನ ಧರ್ಮವನ್ನನುಸರಿಸಿ ಬಾಳಿದರೆ, ದೇವನೇ ಆಗುವುದರಲ್ಲಿ ಸಂಶಯವಿಲ್ಲ"[೧೬] ಎನ್ನುತ್ತಾರೆ ಡಾ.ಎನ್.ಎನ್.ಅನಂತರಂಗಾಚಾರ್ ಅವರು.

ವೇದಗಳ ಕಾಲದಲ್ಲಿ ರೋಗಿಗಳನ್ನು ಪೌರಪ್ರಜ್ಞೆಯಿಂದ ನೋಡಿಕೊಳ್ಳುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಋಗ್ವೇದ ಈ ಸಂಹಿತೆಯ ಶ್ಲೋಕವನ್ನು ನೋಡಬಹುದು.

"ಘೋಷಾ ನಾಮ ಬ್ರಹ್ಮವಾದಿನೀ ಕಕ್ಷೀವತೋ ದುಹಿತಾ।
ಸಾ ಕುಷ್ಠಿನೀ ಸತೀ ಕಸ್ಮೈ ಚಿದ್ವರಾಯ ದತ್ತಾ ಪಿತೃಗೃಹೇ
ನಿಷಣ್ಣಾ ಜೀರ್ಣಾಸೀತ್।
ಸಾಶ್ವಿನೋರುನುಗ್ರಹಾನ್ನಷ್ಟಕುಷ್ಠಾ ಸತೀ ಪತಿಂ ಲೇಭೇ॥[೧೭]

---

೧೫. ಋಗ್ವೇದ ೧೦.೮೫-೪೪
೧೬. ಅಥರ್ವ. ೧೧-೮, ೧೩ ಡಾ. ಎನ್.ಎನ್.ಅನಂತರಂಗಾಚಾರ್ ೭-೯೬೮
೧೭. ಸಾಯಣಾ ಭಾಷ್ಯದ ಋಗ್ವೇದ, ೧-೧೧೭.೭

ವೇದದ ಈ ಆದರ್ಶವನ್ನು ಮದರ್ ಥೆರೇಸ ಆಧುನಿಕ ಕಾಲದಲ್ಲಿ ಮಾಡಿದ್ದಾರೆ. ಕುಷ್ಠರೋಗಿಗಳನ್ನು ಅತ್ಯಂತ ಮಾನವೀಯ ನೆಲೆಯಲ್ಲಿ ನೋಡಿಕೊಂಡು 'ಪೌರಪ್ರಜ್ಞೆ' ಮೆರೆದಿದ್ದಾರೆ ಎನ್ನುವ ಅಂಶವನ್ನು ಲೇಖಕರು ದಾಖಲಿಸುತ್ತಾರೆ. ಶ್ಲೋಕದಲ್ಲಿ ಅಶ್ವಿನಿ ದೇವತೆಗಳು ಅನ್ನವಿಲ್ಲದವರಿಗೂ, ಕುರುಡರಿಗೂ, ದುರ್ಬಲರಿಗೂ ಉಚಿತ ಚಿಕಿತ್ಸೆ ನೀಡಿದ್ದಾರೆ. ಆದರೆ ಇಂದಿನ ವೈದ್ಯರು ರೋಗಿಗಳನ್ನು ಕಿತ್ತು ತಿನ್ನುತ್ತಿದ್ದಾರೆ. ಇಂದಿನ ವೈದ್ಯರು ವೇದಕಾಲದ ಪೌರಪ್ರಜ್ಞೆಯನ್ನು ಬೆಳಸಿಕೊಳ್ಳಬೇಕಾದ ಅಗತ್ಯವನ್ನು ಲೇಖಕರು ಒತ್ತಿ ಹೇಳಿದ್ದಾರೆ. ಇಂದಿನ ವೈದ್ಯರ ಅಮಾನವೀಯ ವರ್ತನೆ ಮತ್ತು ಹಣದ ದಾಹವನ್ನು ಕಂಡು ಒಂದು ಹಾಸ್ಯ ಸೃಷ್ಟಿಯಾಗಿದೆ.

ಹೊಸದಾಗಿ ಕಟ್ಟಿಸಿದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಂದು ಒಳ್ಳೆಯ ಪಂಚಿಂಗ್ ಲೈನ್‌ಗಾಗಿ ಸ್ಪರ್ಧೆ ಏರ್ಪಡಿಸಿದಾಗ ಬಂದ ಒಂದು ಸಲಹೆ ಎಂದರೆ "ಕರ್‍ಕೊಂಡು ಬನ್ನಿ' 'ಎತ್ಕೊಂಡು ಹೋಗಿ', ಹಣ ನಮ್ಗೆ; ಹೆಣ ನಿಮ್ಗೆ"

ವೈದ್ಯಕೀಯ ಕ್ಷೇತ್ರ ಪೌರಪ್ರಜ್ಞೆಯಿಲ್ಲದೆ ಅಮಾನವೀಯವಾಗಿ ನಡೆಯುತ್ತಿದೆ ಎನ್ನುವುದಕ್ಕೆ ಈ ಹಾಸ್ಯ ಗಂಭೀರತೆಯನ್ನು ಪಡೆದರೆ ಆಶ್ಚರ್ಯವಿಲ್ಲ.

ವೇದಗಳ ಕಾಲದಲ್ಲಿ ಸುಖೀ ದಾಂಪತ್ಯ ಮತ್ತು ಲೈಂಗಿಕ ಆರೋಗ್ಯ ಚೆನ್ನಾಗಿತ್ತು.

"ಇತ್ಯನೇನಾಪ್ಯೇಕಸ್ಯಾಃ ಸ್ತ್ರೀಯಾ ಏಕ ಏವ
ಪತರ್ಭವತ್ವೇಕಸ್ಯ ಪುರುಷಸ್ಯೈ ಕೈವ ಸ್ತ್ರೀ ಚೇತಿ"

ಅಂದರೆ ಒಬ್ಬ ಸ್ತ್ರೀಯೊಡನೆ ಒಬ್ಬನೇ ಪತಿ ಇರಬೇಕು ಮತ್ತು ಒಬ್ಬ ಪುರುಷನಿಗೆ ಒಬ್ಬಳೇ ಸ್ತ್ರೀ ಇರಬೇಕು ಎಂಬುದರ ಮೂಲಕ ದಾಂಪತ್ಯ ಶುಚಿತ್ವಕ್ಕೆ ಮಹತ್ವ ನೀಡಿರುವುದನ್ನು ಇಲ್ಲಿ ಗಮನಿಸಬಹುದು.

ಕನ್ಯೆ ವಯಸ್ಸಿಗೆ ಬಂದ ಮೇಲೆ ಕಡ್ಡಾಯವಾಗಿ ಮದುವೆಯಾಗಬೇಕೆಂಬ ನಿಯಮ ಇರದೆ, ಆಕೆ ತಂದೆಯ ಮನೆಯಲ್ಲೇ ಸ್ವತಂತ್ರವಾಗಿ ಉಳಿದುಕೊಳ್ಳಬಹುದಿತ್ತು ಎಂದು ಋಗ್ವೇದದಲ್ಲಿ ಹೇಳುತ್ತದೆ.

"ಬ್ರಹ್ಮಚರ್ಯೇಂ ತಪನಾ ದೇವಾ
ಮೃತ್ಯುಮಪಾಘ್ನತ"[೧೮]

ಅಂದರೆ ಕನ್ಯೆಯು ಬ್ರಹ್ಮಚಾರಿಣಿಯಾಗಿದ್ದುಕೊಂಡೇ ಯುವಕನಾದ ಪತಿಯನ್ನು ಪಡೆಯಬಹುದು.

---

೧೮. ಅಥರ್ವಣ ವೇದ: ೧೧೫.೧೯

ವೇದಗಳ ಕಾಲದಲ್ಲಿ ಹೆಣ್ಣು, ಗಂಡು ಮಕ್ಕಳಿಬ್ಬರಿಗೂ ಉಪನಯನ ಮಾಡುತ್ತಿದ್ದರು. ಬ್ರಹ್ಮಚರ್ಯ ಆಚರಿಸುವುದು ವೇದ ಮಂತ್ರಗಳನ್ನು ಪಠಿಸುವ ಸಮಾನ ಅಧಿಕಾರವಿತ್ತು. ವೇದ ಕಾಲದಲ್ಲಿ ಗಾರ್ಗಿ, ವಾಚಕ್ನುವಿ, ಯಾಜ್ಞವಲ್ಕ್ಯ ಎಂಬ ಸ್ತ್ರೀಯರು ಋಷಿಗಳೊಡನೆ ಚರ್ಚೆಯಲ್ಲಿ ಭಾಗವಹಿಸಿದ್ದರು. ಇವರಿಗೂ ಉಪನಯನ ಆಗಿತ್ತು ಎಂಬ ವಾದವನ್ನು ನಾವು ಮರೆಯುವಂತಿಲ್ಲ.

"ಪ್ರಗತಿಪರ ಬ್ರಾಹ್ಮಣ ಕುಟುಂಬದ ವಿನೋದ್ ಹೆಗಡೆ ಮತ್ತು ಅನ್ನಪೂರ್ಣ ಹೆಗಡೆ ದಂಪತಿಗಳು ಮೂಢ ನಂಬಿಕೆಯನ್ನು ಧಿಕ್ಕರಿಸಿ ತಮ್ಮ ಇಬ್ಬರು ಹೆಣ್ಣುಮಕ್ಕಳಾದ ಪೃಥ್ವಿ (೧೧ವರ್ಷ) ಮತ್ತು ಪ್ರೇರಣಾ (೮ ವರ್ಷ)ಳಿಗೆ ಮೈಸೂರಿನಲ್ಲಿ ಉಪನಯನ ಮಾಡಿಸಿ ಕ್ರಾಂತಿಕಾರಿ ಹೆಜ್ಜೆ ಇಟ್ಟಿದ್ದಾರೆ. ಉಪನಯನ ಮಾಡಿಸಿದವರು ಮಹೇಶ್ವರಿ ಎಂಬ ಮಹಿಳೆ"[೧೯] ಈ ವಿಷಯವನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು. ಈ ಪ್ರಗತಿಪರ ಮನೋಭಾವದ ದಂಪತಿಗಳು ಹೆಣ್ಣು ಮಕ್ಕಳಿಗೆ ಉಪನಯನ ಮಾಡುವ ಮುಖಾಂತರ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ ಎನ್ನಬಹುದು.

ವೇದಗಳ ಕಾಲದಲ್ಲಿ ವಿಧವೆಯು ಎರಡನೇ ಪುರುಷನೊಡನೆ ನಿಯೋಗ ಮಾಡಿಕೊಳ್ಳಬಹುದಿತ್ತು. ಆದರೆ ಮುಂದೆ ಆಧುನಿಕತೆ ಹೆಚ್ಚಾದಂತೆ ವಿಧವಾ ವಿವಾಹ ಮಾನ್ಯವಾಗಬೇಕಾದುದು, ಸಮಾಜ ಬಾಹಿರವೆಂದೇ ಪರಿಗಣಿಸಿದ್ದು ವಿಪರ್ಯಾಸ ಸಂಗತಿ. ವಿಧವಾ ವಿವಾಹ ಸರ್ವಮಾನ್ಯವಾಗಬೇಕೆಂಬುದು ಲೇಖಕರ ಆಶಯ.

ಹಾಗೆಯೇ ಸಂತಾನರಹಿತ ದಂಪತಿಗಳು ನಿಯೋಗದಿಂದ ಮಕ್ಕಳು ಪಡೆಯುತ್ತಿದ್ದ ಉದಾರ ಕಾಲ ಅಂದು ಇದ್ದದ್ದು ನಂತರದಲ್ಲಿ ಇದು ನಿಷೇಧವಾಯಿತು.

"ಇಂದು ನಿಯೋಗದ ಉದಾಹರಣೆಗಳು ಇಲ್ಲವೆಂದೇ ಹೇಳಬೇಕು. ಕೃತಕ ಗರ್ಭಧಾರಣೆ (ಸ್ಪರ್ಮ್ ಬ್ಯಾಂಕ್‌ನಿಂದ ವೀರ್ಯಾಣುಗಳನ್ನು ಪಡೆದು ಗರ್ಭಾಂಕುರಣ ಮಾಡಿಸುವುದು) ಈ ದೃಷ್ಟಿಯಲ್ಲಿ ಒಂದು ದಿಟ್ಟ ಹೆಜ್ಜೆಯೆಂದೇ ಹೇಳಬಹುದು. ಅಂದು ನಿಯೋಗಗಳಿಗಿದ್ದ ಸಾಮಾಜಿಕ ಪೌರಪ್ರಜ್ಞೆ ಮುಂದೆ ಬೇರೂರಬೇಕಾದರೆ, ಅದು ನಮ್ಮ ಸಾಮಾಜಿಕ ವಿಕಾಸದ ರೀತಿನೀತಿ ಹಾಗೂ ಗತಿಗಳನ್ನು ಅವಲಂಬಿಸಿರುತ್ತದೆ."[೨೦]

ವೇದಗಳ ಕಾಲದಲ್ಲಿ ಗುರುಕುಲದಿಂದ ವಿದ್ಯಾಭ್ಯಾಸ ಮುಗಿಸಿ ಹೊರಬರುವಾಗ ಅವರಿಗೆ ಪೌರಪ್ರಜ್ಞೆಯ ಮೂಲ ಪಾಠಗಳನ್ನು ಹೇಳಿ ನಾಗರೀಕ ಸಮಾಜಕ್ಕೆ ಕಳುಹಿಸಿಕೊಡುತ್ತಿದ್ದರು. ತೈತ್ತಿರೀಯ ಅರಣ್ಯಕ, ೭ರಲ್ಲಿ ಈ ರೀತಿ ಹೇಳಿದ್ದಾರೆ.

---

೧೯. Star of Mysore, Date 17-05-2011, Pg. 6
೨೦. ವೇದಗಳಲ್ಲಿ ಪೌರಪ್ರಜ್ಞೆ, ಪುಟ. ೧೧

ಸತ್ಯಂ ವದ।

ಧರ್ಮ ಚರ।

ಸತ್ಯಾನ್ನ ಪ್ರಮದಿತವ್ಯಮ್

ಧರ್ಮಾನ್ನ ಪ್ರಮದಿತವ್ಯಮ್।

ಕುಶಲಾನ್ನ ಪ್ರಮದಿತವ್ಯಮ್।

ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್।

ಮಾತೃದೇವೋ ಭವ; ಪಿತೃದೇವೋ ಭವಃ। ಆಚಾರ್ಯ ದೇವೋ ಭವಃ। ಅತಿಥಿ ದೇವೋ ಭವ।

"ಸಮಾನೀ ಏ ಆಕೂತಿಃ ಸಮಾನಾ ಹೃದಯಾನಿ ವಃ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ॥

ಪೌರಪ್ರಜ್ಞೆಗೆ ವಿರೋಧಿ ಗುಣಲಕ್ಷಣಗಳ ಬಗ್ಗೆ ಅಥರ್ವಣವೇದದಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ.

"ನಿಃಸಾಲಾಂ ಧೃಷ್ಣುಂ ಧಿಷಣ ಮೇಕವಾಧ್ಯಾಂ ಜಿಘತ್ಸ್ವಮ್।
ಸರ್ವಾಶ್ಚಂಡಸ್ಯ ನಪ್ತ್ಯೋ ನಾಶಯಾಮಃ ಸದಾನ್ವಾಃ॥[೨೧]

ಅಂದರೆ ನಿಂತಲ್ಲಿ ನಿಲ್ಲದೆ ಅಲೆದಾಡುವುದು, ಬೇರೆಯವರನ್ನು ಹೆದರಿಸುವ ಪುಂಡತನ, ಹಠಮಾರಿತನ, ಅವನ್ನೇ ಉಸುರುವ ವಾಚಾಳಿತನ ಹಾಗೂ ಆಸೆ ಬುರುಕುತನ ಇವೆಲ್ಲಾ ಅನಾರ್ಯರ ಸಂತಾನಗಳು. ಇಂತಹ ರಾಕ್ಷಸೀತನದ ಭಾವನೆಗಳನ್ನು ನಾಶಮಾಡಬೇಕು..

ಅಥರ್ವಣ ವೇದದ ಕಾಂಡ ೩, ಸೂಕ್ತ ೩೦, ಮಂತ್ರ । ೯ರಲ್ಲಿ
"ಸಹೃದಯಂ ಸಾಂಮನನ್ಯ ಮವಿದ್ವೇಷಂ ಕೃಣೋಮಿವಃ।
ಅನ್ಯೋ ಅನ್ಯಮಭಿ ಹರ್ಯತ ವತ್ಸಂ ಜಾತ ಮಿವಾಘ್ನ್ಯಾ।

ಅಂದರೆ ಪರಸ್ಪರರು ಸಹೃದಯತೆ, ಸಹಭಾವನೆ ಮತ್ತು ಪ್ರೀತಿಯಿಂದ ಬಾಳಬೇಕು. ಹಸುವು ಆಗತಾನೆ ಹುಟ್ಟಿದ ತನ್ನ ಕರುವನ್ನು ಪ್ರೀತಿಸುವಂತೆ ಎಲ್ಲರೂ ಒಬ್ಬರನ್ನೊಬ್ಬರು ಪ್ರೀತಿಸಿರಿ ಎಂಬ ಅರ್ಥವನ್ನು ಕೊಡುತ್ತದೆ.

ದಿನನಿತ್ಯ ದೃಶ್ಯ ಮತ್ತು ಮುದ್ರಣ ಮಾಧ್ಯಮದಲ್ಲಿ ನಾವು 'ಗಣಿ ಹಗರಣ' ಕುರಿತು ಪದೇ ಪದೇ ಕೇಳುತ್ತಿದ್ದೇವೆ. ಅಕ್ರಮ ಗಣಿಗಾರಿಕೆಯಿಂದ ಪರಿಸರದ ಮೇಲೆ

---

೨೧. ಅಥರ್ವಣ ವೇದ, ೨.೧೪.೧

ಆಗುತ್ತಿರುವ ತೊಂದರೆ ಹಾಗೂ ರಾಷ್ಟ್ರೀಯ ಸಂಪತ್ತನ್ನು ವಿದೇಶಗಳಿಗೆ ಮಾರುವುದರ ಮೂಲಕ ದೇಶ ವಿರೋಧಿ ಚಟುವಟಿಕೆ ನಡೆಯುತ್ತಿದೆ.

ಆದರೆ ವೇದಗಳ ಕಾಲದಲ್ಲಿ ಅಂದರೆ ಅಥರ್ವಣ ವೇದದಲ್ಲಿ ಈ ರೀತಿ ಶ್ಲೋಕ ಬರುತ್ತದೆ.

"ಯತ್ ತೇ ಭೂಮೇ ವಿಖನಾಮಿ ಕ್ಷಿಪ್ರಂ ತದಪಿ ರೋಹತು
ಮಾ ತೇ ಮರ್ಮ ವಿಮೃಗ್ವರಿ ಮಾ ತೇ ಹೃದಯಮ್ ಅರ್ಪಿಪಮ್"[೨೨]

ಅಂದರೆ ಹೇ ಭೂಮಿಯೇ, ನಾನು ನಿನ್ನನ್ನು ಎಷ್ಟು ಅಗೆಯುವೆನೋ, ಆ ಜಾಗ ಬಹುಬೇಕ ಬೆಳೆಯಲಿ.

ಓ ಶುದ್ಧೀಕರಣ ದೇವಿಯೇ! ನಿನ್ನ ಜೀವಶಕ್ತಿಗಳಿಗೆ

ನಮ್ಮಿಂದ ಗಾಯವಾಗದಿರಲಿ, ನಿನ್ನ ಹೃದಯವನ್ನು

ನಾವು ಘಾಸಿ ಮಾಡದಿರಲಿ ಎನ್ನುವ ಅರ್ಥ ಕೊಡುತ್ತದೆ.

ವೇದಕಾಲದಲ್ಲಿದ್ದ 'ಪೌರಪ್ರಜ್ಞೆ' ಎಷ್ಟು ಮಹತ್ವದ್ದು ಎಂದು ಈ ಶ್ಲೋಕದಿಂದ ಅರ್ಥವಾಗುತ್ತದೆ.

"ಮುಂದುವರಿದು ನೀವು ನೀರು ಕುಡಿಯುವ ಜಲಾಶಯ, ಊಟ ಮಾಡುವ ಭೋಜನ ಶಾಲೆ ಎಲ್ಲರಿಗೂ ಒಂದೇ ಆಗಿರಲಿ. ಎಲ್ಲರೂ ಕೂಡಿ ಆರಾಧಿಸಿ, ಒಂದೇ ನಾಭಿಗೆ ಬಂಧಿತವಾದ ಚಕ್ರದ ಅರೆಗಳಂತೆ ನೀವೆಲ್ಲಾ ಒಂದೇ ಭಾವದಿಂದ ಹೊಂದಿಕೊಳ್ಳಿ ಎನ್ನುವ ಅರ್ಥವನ್ನು ಶ್ಲೋಕ ಹೇಳುತ್ತದೆ.[೨೩]

ಪ್ರಾಚೀನ ಕಾಲದಲ್ಲಿ ಸಸ್ಯ ಸಂಪತ್ತು, ನದಿಗಳು, ಭೂಮಿ ಎಲ್ಲವನ್ನು ಪವಿತ್ರ ಭಾವನೆಯಲ್ಲಿ ನೋಡುತ್ತಿದ್ದರು. ಪ್ರಕೃತಿ ಸನಾಸತಿ, ಅನಾದಿ, ಒಂದು ಮಹತೀ ನಿಸರ್ಗ ಶಕ್ತಿ ಎಂದು ಗೌರವಿಸುತ್ತಿದ್ದರು ಎಂದು ಅಥರ್ವಣ ಹೇಳುತ್ತದೆ.

ಈಗ ನಾವು ಅಂತಹ ಜಲ, ವಾಯು ಮತ್ತು ಭೂಮಿಯನ್ನು ದುರುಪಯೋಗಪಡಿಸಿಕೊಂಡು ಮನುಕುಲವನ್ನು ನಾವೇ ನಾಶಮಾಡುತ್ತಿದ್ದೇವೆ. ಇವುಗಳ ಬಗ್ಗೆ ದೈವೀ ಭಾವನೆ ನಮ್ಮಲ್ಲಿ ಇಲ್ಲವಾಗಿದೆ. ಪವಿತ್ರ ನದಿಗಳಿಗೆ ಕೈಗಾರಿಕಾ ರಾಸಾಯನಿಕ ತ್ಯಾಜ್ಯವನ್ನು ಬಿಟ್ಟು ಅದರ ಪವಿತ್ರತೆಯನ್ನು ಮತ್ತು ಶುದ್ಧತೆಯನ್ನು ಹಾಳು

---

೨೨. ಅಥರ್ವಣ ವೇದ ೧೨.೧.೩೫
೨೩. ಅಥರ್ವಣ ವೇದ ೩.೩೦.೬

ಮಾಡುತ್ತಿದ್ದೇವೆ. ಪೌರಪ್ರಜ್ಞೆ ಇಲ್ಲದೆ ಗಂಗಾ, ಬ್ರಹ್ಮಪುತ್ರ ಹಾಗೂ ಯಮುನಾ ನದಿಗಳನ್ನು ಚರಂಡಿಯ ಸ್ಥಿತಿಗೆ ತಂದು ನಿಲ್ಲಿಸಿದ್ದೇವೆ.

ವೇದಕಾಲದಲ್ಲಿ ಯಾವುದೇ ಮೇಲು-ಕೀಳುಗಳಿರಲಿಲ್ಲ. ವಸಿಷ್ಠ ಊರ್ವಶಿಯ ಮಗ, ಕಣ್ವ, ಆಂಗೀರಸ ಋಷಿಗಳು ಕರಿಯರಾಗಿದ್ದರು. ಋಗ್ವೇದದಲ್ಲಿ ಮಹಾದಾನಿ ಎಂದು ಹೊಗಳಿಕೆಗೆ ಪಾತ್ರವಾಗಿರುವ ಸುದಾಸ, ದಾಸ ಮೂಲದವನು.

"ಡಾ.ಬಿ.ಆರ್.ಅಂಬೇಡ್ಕರ್ ಅವರು ನಮ್ಮ ವೇದಗಳನ್ನು ಸಂಶೋಧನಾ ದೃಷ್ಟಿಯಿಂದ ಅಧ್ಯಯನ ಮಾಡಿದವರಲ್ಲಿ ಒಬ್ಬರು. ಅವರ ಪ್ರಕಾರ ವೇದಯುಗದಲ್ಲಿ ಆರ್ಯರು, ದಾಸರು ಮತ್ತು ದಸ್ಯುಗಳ ನಡುವೆ ಜನಾಂಗಿಕ ಪ್ರತ್ಯೇಕತೆ ಇತ್ತು ಎಂಬುದಕ್ಕೆ ಯಾವ ಆಧಾರವೂ ಇಲ್ಲ. ದಾಸರು ಮತ್ತು ದಸ್ಯುಗಳಿಗಿಂತ ವರ್ಣದಲ್ಲಿ ಆರ್ಯರು ಭಿನ್ನವಾಗಿದ್ದರು ಎಂಬ ವಾದವನ್ನು ವೇದಗಳು ಬೆಂಬಲಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ."[೨೪] ಆದ್ದರಿಂದ ಸಮಾಜದಲ್ಲಿ ಸಮಾನತೆಯ ಪೌರಪ್ರಜ್ಞೆ ಇದ್ದಿತು. ಯಾವುದೇ ರೀತಿಯ ಪ್ರತ್ಯೇಕತೆಗಳಾಗಲೀ ಅಥವಾ ಅಸಮಾನತೆಗಳಾಗಲಿ ಇರಲಿಲ್ಲ.

ಅಥರ್ವಣ ವೇದದಲ್ಲಿ ಉತ್ತಮವಾದ ಗಾಳಿ, ಬೆಳಕು, ಶಾರೀರಿಕ ಆರೋಗ್ಯ ಹಾಗೂ ಮಾನಸಿಕ ಉಲ್ಲಾಸ; ಮುಖ್ಯವಾಗಿ ಮನೆಗೆ ನಾಲ್ಕು ದಿಕ್ಕುಗಳಲ್ಲೂ ದ್ವಾರಗಳಿರಬೇಕು ಎಂದು ಹೇಳಲಾಗಿದೆ. ಆದರೆ ಇಂದು ವಾಸ್ತು ಎಂದು ನಂಬಿ ಇರುವ ಮನೆ ಒಡೆದು ದಿಕ್ಕು ಬದಲಿಸುತ್ತಿದ್ದೇವೆ.

ಅಥರ್ವಣ ವೇದದಲ್ಲಿ ವಿಷದ ಪದಾರ್ಥಗಳನ್ನು ಇಚ್ಛಿಸಿದವರನ್ನು ಲೇಪಿಸಿದವರನ್ನು, ಹರಡಿದವರನ್ನು, ಸೃಷ್ಟಿಸಿದವರನ್ನು ಶಿಕ್ಷೆಗೊಳಪಡಿಸಲಾಗುತ್ತಿತ್ತು ಎಂಬ ಅಂಶ ಗಮನಾರ್ಹ.

'ಆನೋಭದ್ರಾಃ ಕ್ರತವೋ ಯಂತು ವಿಶ್ವಕಃ' ಅಂದರೆ ಎಲ್ಲಾ ದಿಕ್ಕಿನಿಂದಲೂ

ಘನವಾದ ಯೋಚನೆಗಳು ಹರಿದು ಬರಲಿ ಎಂಬಂತೆ ನಾವು ವೇದಗಳಲ್ಲಿರುವ ಪೌರಪ್ರಜ್ಞೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು ಎಂಬುದು ಈ ಉಪ ಅಧ್ಯಾಯದ ಆಶಯವಾಗಿದೆ.

ಆ) ಧರ್ಮಗಳು

"ಧರತಿ ವಿಶ್ವಮಿತಿ, ಧ್ರಿಯಂತೇ ಆನೇನ ಲೋಕಾಃ ಇತಿ ವಾ ಧರ್ಮ" ಅಂದರೆ ಯಾವುದು ವಿಶ್ವವನ್ನು ಧರಿಸುತ್ತದೆಯೋ ಅಥವಾ ಯಾವುದು ಲೋಕದ ಪ್ರಜೆಗಳನ್ನು ಧಾರಣ ಮಾಡುವುದೋ ಅದೇ ಧರ್ಮ ಎನ್ನುತ್ತದೆ ಮೇಲಿನ ಶ್ಲೋಕ. 'ಧರ್ಮ'

---

೨೪. ಡಾ. ಬಿ.ಆರ್.ಅಂಬೇಡ್ಕರ್, ಸಂಪುಟ ೭, ಪು. ೧೨೩

ಎಂಬುದರ ವಿಶಾಲಾರ್ಥವಿದು. ಇದರಲ್ಲಿ ಪೌರಪ್ರಜ್ಞೆಯಿಂದ ಆರಂಭವಾಗಿ ವಿಶ್ವಪ್ರಜ್ಞೆಯ ವರೆಗೆ ಅರ್ಥ ವ್ಯಾಪ್ತಿಯನ್ನು ಒಳಗೊಂಡಿದೆ.

ಆದರೆ ರಾಜಕೀಯ ನಾಯಕರು ಮತ್ತು ಮಠಮಾನ್ಯಗಳ ಗುರುಗಳು ಇಂತಹ ವಿಶಾಲಾರ್ಥದಲ್ಲಿ ಬಳಕೆ ಮಾಡದೆ ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮದ ಅರ್ಥವ್ಯಾಪ್ತಿಯನ್ನೇ ಸಂಕುಚಿತಗೊಳಿಸಿದ್ದಾರೆ. 'ಧರ್ಮ' ಎಂಬುದು ಮನುಷ್ಯ ಮನುಷ್ಯರನ್ನು ಬೆಸೆಯುವ ಸಾಧನವಾಗದೇ ಅವರಲ್ಲಿ ದ್ವೇಷದ ವಿಷ ಬೀಜವನ್ನೇ ಬಿತ್ತುತ್ತಾ ಇದೆ. ಇದರಿಂದ ಕೋಮುಗಲಭೆಗಳು ಸಂಭವಿಸಿ ನಾವು-ನೋವು, ಆಸ್ತಿ-ಪಾಸ್ತಿ ನಾಶವಾಗುತ್ತದೆ. ಇದರಿಂದ ನಾವು ಜಗತ್ತಿನ ಮುಂದೆ ತಲೆತಗ್ಗಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಧರ್ಮದ ಬಹುಮುಖ್ಯ ಆಶಯವೆಂದರೆ "ಸಮಸ್ತಸನ್ಮಂಗಳಾನಿ ಭವಂತು", "ಸರ್ವೇಜನಾಃ ಸುಖಿನೋಭವಂತು" ಎಂದು ಧಾರ್ಮಿಕ ಕಾರ್ಯಗಳ ಕೊನೆಗೆ ಈ ಮಂತ್ರದಿಂದ ಮುಕ್ತಾಯವಾಗುತ್ತದೆ. ಇದು 'ಪೌರಪ್ರಜ್ಞೆ'ಗೆ ಅತ್ಯಂತ ಪ್ರಮುಖ ಉದಾಹರಣೆಯಾಗಿದೆ. ವಿಶ್ವಮಾನವ ಪ್ರಜ್ಞೆ ಈ ಶ್ಲೋಕದಿಂದ ಹೊರಹೊಮ್ಮುತ್ತಿದೆ. ಇದು ಧರ್ಮದ ನಿಜವಾದ ಆಶಯ. ಆದರೆ ಧರ್ಮ ಇಂದು 'ಜಿಹಾದ್' ಮತ್ತು 'ಮರ್ಯಾದಾ ಹತ್ಯೆ'ಯಂತಹ ರೂಪ ಪಡೆಯುತ್ತಿರುವುದು ಶೋಚನೀಯ.

"ಯತಃ ಅಭ್ಯುದಯ ನಿಶ್ರೇಯಸ ಸಿದ್ಧಿಃ ನಧರ್ಮ" ಅಂದರೆ ಯಾವುದರಿಂದ ಸುಖರೂಪವಾದ ಅಭ್ಯುದಯ ಮತ್ತು ದುಃಖ ನಿವೃತ್ತಿ ರೂಪವಾದ ಮೋಕ್ಷ ಸಿದ್ಧಿಸುವುದೋ ಅದೇ ಧರ್ಮ" ಎನ್ನುತ್ತಾರೆ ಡಾ. ಅನಂತನಾಗೇಂದ್ರ ಭಟ್ಟರು.

ಮುಂದುವರಿದು

"ಧೃತಿಃ ಕ್ಷಮಾ ದಮೋಸ್ತೇಯಂ ಶೌಚಮ್ ಇಂದ್ರಿಯ ನಿಗ್ರಹಃ।
ಧೀರ್ವಿದ್ಯಾ ಸತ್ಯ ಮಕ್ರೋಧೋ ದಶಕಂ ಧರ್ಮಲಕ್ಷಣಮ್॥

ಅಂದರೆ ಧೃತಿ ಎಂದರೆ ಧೈರ್ಯ, ಉತ್ಸಾಹ, ಪ್ರೀತಿ, ಆಸ್ಥೆ, ಧಾರಣೆ ಮೊದಲಾದವುಗಳು. ಕ್ಷಮಾ ಎಂದರೆ ಸಹನೆ ಅಥವಾ ತಾಳ್ಮೆ, ದಮ ಎಂದರೆ ಬಹಿರಿಂದ್ರಿಯಗಳ ನಿಗ್ರಹ ಅಸ್ತೇಯವೆಂದರೆ, ಪರರ ಸ್ವತ್ತಿಗೆ ಆಸೆ ಪಡದಿರುವುದು, ಶೌಚವೆಂದರೆ ಹೊರಗಿನ ಮತ್ತು ಒಳಗಿನ ಶುಚಿತ್ವವನ್ನು ಕಾಪಾಡಿಕೊಳ್ಳುವುದು, ಇಂದ್ರಿಯ ನಿಗ್ರಹವೆಂದರೆ ಅಂತರಿಂದ್ರಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು, ಧೀ ಎಂದರೆ ಬುದ್ಧಿ, ಅದನ್ನೇ ಸೂಕ್ತವಾಗಿ ಬಳಸಿಕೊಳ್ಳುವುದು.

ಧರ್ಮಕ್ಕೆ ಮುಖ್ಯ ಕಾರಣಗಳು ಪುಣ್ಯ ಕರ್ಮಗಳು, ದೇಹ ಶ್ರಮದಿಂದ ತಾನು ಸಂಪಾದಿಸಿದ್ದನ್ನು ಇತರರಿಗೆ ದಾನ ಮಾಡುವುದು; ಜೀವಿಗಳ ಕಷ್ಟವನ್ನು

ಪರಿಹರಿಸುವುದು; ಯಥಾಶಕ್ತಿ ಲೋಕ ಸೇವೆಯನ್ನು ಮಾಡುವುದು; ಮಾತಿನ ಮೂಲಕವಾಗಿ ಸತ್ಯವೂ, ಹಿತವೂ ಮತ್ತು ಪ್ರಿಯವೂ ಆದ ಮಾತುಗಳನ್ನಾಡುವುದು; ಶಾಸ್ತ್ರಾಭ್ಯಾಸ ಮಾಡುವುದು.[೨೫] ಮನಸ್ಸಿನಲ್ಲಿ ದಯೆ, ವೈರಾಗ್ಯ, ಆಸ್ತಿಕ್ಯ ಮತ್ತು ಬುದ್ಧಿ ಇರುವುದು. ಈ ಹತ್ತು ಗುಣಗಳೂ ಧರ್ಮಕ್ಕೆ ಕಾರಣಗಳು.

ಎಂತಹ ಕಷ್ಟ ಪರಿಸ್ಥಿತಿ ಒದಗಿದರೂ ಧರ್ಮವನ್ನು ಬಿಡಬಾರದು. ಏಕೆಂದರೆ ಧರ್ಮವೇ ನಿತ್ಯ. ಸುಖದುಃಖಗಳು ಅನಿತ್ಯ. ಕಾಮ, ಭಯ, ಲೋಭಗಳಿಗಾಗಿ ಧರ್ಮವನ್ನು ತ್ಯಜಿಸಬಾರದು ಎಂಬುದು ಸ್ಮೃತಿಗಳ ಮುಖ್ಯ ಧ್ಯೇಯವಾಗಿದೆ.

ಕುವೆಂಪು ತಮ್ಮ ರಾಮಾಯಣ ದರ್ಶನಂನಲ್ಲಿ ಧರ್ಮ ಸಂಸ್ಥಾಪನೆಯಲ್ಲಿ ಪ್ರೀತಿಯೇ ಮುಖ್ಯ, ಹಿಂಸೆಯಲ್ಲ ಎಂಬುದು ಅವರ ನಂಬಿಕೆಯಾಗಿದೆ.

ಡಿ.ವಿ.ಜಿ.ಯವರ ಪ್ರಕಾರ "ಧರ್ಮವೆಂದರೆ ಒಳ್ಳೆಯದನ್ನೇ ಸಂಪಾದಿಸುವ ನಡತೆ ಎಂದಿದ್ದಾರೆ.

"ಒಬ್ಬನಲ್ಲದೆ ಜಗಕೆ ಇಬ್ಬರುಂಟೇ? ಮತ್ತೆ
ಒಬ್ಬ ಸರ್ವಜ್ಞ ಕರ್ತನೀ ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ??"

ಶ್ರೀ ಕುವೆಂಪು ಕೂಡ "ಜಗದೀಶ ತಾನೋರ್ವ ವರಕವಿಯು ಜಗವು ತಾನವನ ಕವಿತೆ (ನೆನಪಿ ೪೨೭) ಭಕನ ಭಾವದಂತೆ ಭಗವಂತನ ಆವಿರ್ಭಾವ (ವಿಭೂತಿ ೫೯) ಶ್ರೀ ಕುವೆಂಪು ಹೇಳಿರುವಂತೆ ವಿಶ್ವಮಾನವನ ಸ್ಥಿತಿಗೇರಬೇಕಾದರೆ, ಮನುಷ್ಯ ಮೇಲಿನ "ಧರ್ಮ'ದ ಅರ್ಥಗಳನ್ನು ತಿಳಿದುಕೊಳ್ಳುವುದು. ಅತೀ ಅವಶ್ಯಕ. ಚಿತ್ತಶುದ್ಧಿ, ಹೃದಯ ಪರಿವರ್ತನೆಗಳು ಕೆಲವು ಮತಧರ್ಮಗಳ ಗುರಿಗಳಾಗಿದ್ದರೂ ಇಂದಿನ ಸಾಮಾಜಿಕ ಮತ್ತು ರಾಜಕೀಯ ಪರಿಸರಗಳು ಶ್ರೀ ಕುವೆಂಪುರವರು ದ್ವೇಷಿಸುತ್ತಿದ್ದ ಕೋಮುಭಾವನೆ, ಜಾತಿ ದ್ವೇಷಗಳನ್ನೇ ಪ್ರಚೋದಿಸುತ್ತದೆ. ಶ್ರೀ ಕುವೆಂಪುರವರ ಈ ಕೆಳಗಿನ ಸೂಕ್ತಿಗಳನ್ನು ಪರಾಮರ್ಶಿಸಬಹುದು. ಇದು ಕೋಗಿಲೆ ಮತ್ತು ಸೋವಿಯತ್ ರಷ್ಯಾ ಕವನದಲ್ಲಿ ನೋಡಬಹುದು.

"ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ
ಓ ಬನ್ನಿ ಸೋದರರೇ ವಿಶ್ವಪಥಕೆ!

---

೨೫. ಡಾ. ಅನಂತನಾಗೇಂದ್ರ ಭಟ್ಟ, ವಿವೇಕಪ್ರಭ, ಮೇ ೨೦೧೦

ಧರ್ಮವು ಪ್ರೇಮಕ್ಕೆ ಕಿಂಕರನಾಗಿ ಕೆಲಸ ಮಾಡುತ್ತದೆ. ಆದರೆ 'ಧರ್ಮ' ಪದದ ಅನೇಕ ಹೊಸ ಸಂಕುಚಿತ ಅರ್ಥದ ರೂಪಾಂತರಗಳು ಇತ್ತೀಚೆಗೆ ಕಂಡುಬರುತ್ತವೆ. ವಚನಕಾರ ಬಸವಣ್ಣನವರು ಹೇಳಿದಂತೆ "ದಯೆಯಿಲ್ಲದ ಧರ್ಮ ಯಾವುದು"?

ರಾಜಕಾರಣ ಇಂದು ಧರ್ಮವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದೆ. ತಮ್ಮ ಓಟಿನ ರಾಜಕಾರಣಕ್ಕಾಗಿ ಧರ್ಮವನ್ನೇ ಬಳಸಿಕೊಂಡು ಕೋಮು ದ್ವೇಷ ಹರಡಿ ಅದರಿಂದ ಲಾಭ ಪಡೆಯಲು ಸದಾ ಹವಣಿಸುತ್ತಿರುತ್ತಾರೆ.

ರಾಜಕಾರಣದ ಕಾರಣದಿಂದಾಗಿ ಮತಧರ್ಮಗಳ ವಿಶ್ವರೂಪವೇ ತಾಂಡವ-ವಾಡಲು ಪ್ರಾರಂಭಿಸುತ್ತದೆ. ಮಾನವ ಧರ್ಮ, ಪೌರಪ್ರಜ್ಞೆಗಳು ಈಗ ಮಾಯ-ವಾಗುತ್ತಿದೆ. ಧರ್ಮದ ಹೆಸರಿನಲ್ಲಿ ಅನಾಚಾರಗಳು ಎದ್ದು ಕಾಣುತ್ತಿವೆ. ನಮ್ಮ ಸಂವಿಧಾನವು ಸ್ಪಷ್ಟಪಡಿಸಿರುವ ಪ್ರಕಾರ ನಮ್ಮದು ಧರ್ಮನಿರಪೇಕ್ಷ ಮತ್ತು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿದೆ.

"ಮತ ಧರ್ಮಗಳಿಗೆ ರಾಜಕೀಯ ಪ್ರವೇಶಿಸುವುದು ಪೌರಪ್ರಜ್ಞೆಯಲ್ಲ" ಎಂದಿದ್ದಾರೆ ಮಾಸ್ತಿ.

ಶಾಂತಿಯಿಂದ ಇದ್ದ ಭರತ ಖಂಡವು ಯವನ ದಾಳಿಗಳು, ಸಂಸ್ಕೃತಿಗಳನ್ನು ನಾಶಮಾಡುವ ಭೀಕರ ಪ್ರಯತ್ನಗಳು. ಬಲವಂತದ ಮತಾಂತರ ನಮ್ಮ ಸಮಾಜವನ್ನು ಹೆಚ್ಚಾಗಿ ಇಂದು ಕಾಡುತ್ತಿದೆ. ಬ್ರಾಹ್ಮಣರು ಕೂಡ ಧರ್ಮದ ಹೆಸರಿನಲ್ಲಿ ನಮ್ಮನ್ನು ಒಡೆದು ಆಳುವ ನೀತಿಯನ್ನು ಜಾರಿಗೆ ತಂದರು. ಜೊತೆಗೆ ಯಶಸ್ವಿಯೂ ಆದರು. ಆದರೆ ಸ್ವಾತಂತ್ರ್ಯ ಬಂದ ನಂತರ ಆ ಧಾರ್ಮಿಕ ದ್ವೇಷ ಈಗಲೂ ಕೆಲವೊಮ್ಮೆ ಕೋಮು ದಳ್ಳುರಿಗೆ ಕಾರಣವಾಗುತ್ತಿದೆ. [೨೬]

ಇಂದಿನ ಕೆಲವು ರಾಜಕಾರಣಿಗಳು ಹಾಗೂ ಎಲ್ಲ ಜಾತಿಗಳ ಪುರೋಹಿತಶಾಹಿ, ಇವರೆಲ್ಲಾ ಧರ್ಮದ ನಿಜವಾದ ಅರ್ಥವನ್ನು ಮರೆಸಿ, ಭಾರತದಲ್ಲಿ ಧರ್ಮಗ್ಲಾನಿಗೆ ಕಾರಣವಾಗಿ ಪೌರಪ್ರಜ್ಞೆಗೆ ಹಾನಿ ತಂದಿದೆ.

ಮಾಸ್ತಿಯವರ ಅಭಿಪ್ರಾಯದಂತೆ ನಮಗೆ ಬುದ್ಧ ಧರ್ಮ ಬೇರೆಯಲ್ಲ, ಕ್ರೈಸ್ತ ಧರ್ಮ ದೂರವಲ್ಲ, ಮಹಮ್ಮದನ ಧರ್ಮ ಹಗೆಯಲ್ಲ. ಮರಳಿ ಬುದ್ಧಿ ಬಂದಾಗ ನಾವು ಅದರ ಹಿರಿಯ ಭಾವಗಳನ್ನು ಅನುಷ್ಠಾನ ಮಾಡುವೆವು. ಆಗ ಅದರ ಆಚಾರದಲ್ಲಿ ಬುದ್ಧ ಧರ್ಮದ ಆಚಾರದಲ್ಲಿರುವ ಭಾವ ವೈಶಾಲ್ಯವನ್ನೂ ಕ್ರೈಸ್ತ ಧರ್ಮ ಆಚಾರದಲ್ಲಿರುವ ದೀನ ವಾತ್ಸಲ್ಯವನ್ನೂ, ಮಹಮ್ಮದ ಧರ್ಮದ ಆಚಾರದಲ್ಲಿರುವ

---

೨೬. ಧರ್ಮಸಂರಕ್ಷಣೆ, ಮಾಸ್ತಿ – ೧೯೮೩

ಸಮದರ್ಶಿತೆಯನ್ನು ಸೇರಿಸಿಕೊಳ್ಳುವೆವು. ಆಗ ನೂತನ ಧರ್ಮವು ಹಿಂದೆ ಉದ್ದೇಶಿಸಿದಂತೆ ವಿಶ್ವ ಧರ್ಮವಾಗುವುದು. ಆ ಧರ್ಮದಲ್ಲಿ ಆಗ ಹಿಂದೂಗಳು, ಕ್ರೈಸ್ತರು, ಮಹಮ್ಮದೀಯರು, ಬೌದ್ಧರು ಇತರ ಎಲ್ಲಾ ಮತಗಳ ಜನರೂ ತಮ್ಮ ತಮ್ಮ ಮತವನ್ನೇ ಕಾಣುವರು" ಎಂದು ಹೇಳಿದ್ದಾರೆ.

ಜಗತ್ತಿನಲ್ಲಿ ಸೇವಾಧರ್ಮ ಅತ್ಯುತ್ತಮವಾದುದು. ಮದರ್ ತೆರೇಸಾ ಮಾಡಿದ್ದು ಇದನ್ನೆ. ರೋಗಿಗಳ, ದೀನದಲಿತರ ಸೇವೆ ಅಮೂಲ್ಯವಾದದ್ದು, ವೃದ್ಧರ ತಂದೆ-ತಾಯಿಗಳ ಸೇವೆ ಪವಿತ್ರ ಕರ್ತವ್ಯ.

"ಸೇವಾ- ಧರ್ಮಃ ಪರಮ-ಗಹನೋ ಯೋಗಿನಾಮ್ ಅಪ್ಯಗಮ್ಯಃ" ಅಂದರೆ ಸೇವಾಧರ್ಮ ಬಹಳ ಗಹನವಾದುದು. ಯೋಗಿಗಳಿಗೂ ಅವೇದ್ಯವಾಗಿದೆ.

ದೇಶದ ಭ್ರಷ್ಟ ರಾಜಕಾರಣಿಗಳು ಅಧರ್ಮದ ಮಾರ್ಗವಾಗಿ ಕಪ್ಪುಹಣವನ್ನು ಸಂಪಾದಿಸಿ ಸ್ವಿಸ್ ಬ್ಯಾಂಕುಗಳಲ್ಲಿ ಅಕ್ರಮವಾಗಿ ಸಂಪತ್ತನ್ನು ಜಮೆ ಮಾಡಿದ್ದಾರೆ.

ಬಾಬಾರಾಮ್‌ದೇವರು ಹೇಳುವ ಪ್ರಕಾರ ವಿದೇಶಗಳಲ್ಲಿರುವ ಭಾರತೀಯರ ಕಪ್ಪುಹಣ ನಮ್ಮ ದೇಶಕ್ಕೆ ವಾಪಸ್ಸು ಬಂದರೆ ಅದರಲ್ಲಿ ದೇಶದ ಪ್ರತಿಹಳ್ಳಿಗೆ ತಲಾ ೧೦೦ ಕೋಟಿಗಳನ್ನು ಕೊಡಬಹುದಂತೆ, ಅಂದರೆ ರಾಜಕಾರಣಿಗಳು ಮತ್ತು ಅಧಿಕಾರಿಗಳು ಅಧರ್ಮದ ಮೂಲಕ ಹಣ ಸಂಪಾದಿಸಿ ದೇಶಕ್ಕೆ ದ್ರೋಹ ಬಗೆಯುತ್ತಿದ್ದಾರೆ.

ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವಂತೆ

"ಪರಿತ್ರಾಣಾಯ ಸಾಧೂನಾಂ
ವಿನಾಶಾಯ ಚ ದುಷ್ಕೃತಾಮ್।
ಧರ್ಮಸಂಸ್ಥಾಪನಾರ್ಥಾಯ
ಸಂಭವಾಮಿ ಯುಗೇ ಯುಗೇ॥

ಹಾಗೆಯೇ ಸರ್ವಜ್ಞನೂ ಕೂಡ ಲೋಕದ ಎಲ್ಲಾ ಜೀವಿಗಳಿಗೂ ಯಾರು ಹಿತವನ್ನು ಮಾಡುತ್ತಾರೆಯೋ ಅವನೇ ದೇವರು ಎಂದು ಬೇರೆ ರೀತಿಯಲ್ಲಿ ಹೇಳಿದ್ದಾನೆ. ಇದೇ ನಿಜವಾದ ಪೌರಪ್ರಜ್ಞೆಯಾಗಿದೆ.

"ಆ ದೇವ ಈ ದೇವ ಮಾದೇವನೆನಬೇಡ
ಆ ದೇವರ ದೇವ ಭುವನ ಪ್ರಾಣಿಗಳಿಗಾದವನೇ ದೇವ ಸರ್ವಜ್ಞ

ಭೂತ ದಯೆ ಬಹುಮುಖ್ಯವೆಂದು ಗಮನಿಸಿರುವ ಶ್ರೀ ಕುವೆಂಪು ಕರುಣೆ, ದಯೆಗಳಿಗೆ ಪ್ರಾಮುಖ್ಯ ಕೊಟ್ಟಿದ್ದಾರೆ. ಕರುಣೆಯಲ್ಲೇ ದೇವರನ್ನು ಕಾಣುವ ಹಾಗೂ

ಕಂಬನಿಯೇ ತೀರ್ಥವೆಂದು ತಿಳಿಯುವ ಅವರ ಹೃದಯಭಾವ ಮಾನವ ಧರ್ಮದಿಂದ ತುಂಬಿದೆ.

"ಕರುಣೆಯದುವೆ ದೇವರಲ್ತೆ?
ಕಣ್ ವನಿಯೆ ತೀರ್ಥಮಲ್ತೆ?

'ಮೇಲಿನ ವಿಷಯಗಳನ್ನೆಲ್ಲಾ ಅರ್ಥ ಮಾಡಿಕೊಂಡು ಜ್ಞಾನ ಸಂಪಾದನೆ ಮಾಡಿ ಪೌರಪ್ರಜ್ಞೆಯಿಂದ ಎಲ್ಲರಿಗೂ ಒಳ್ಳೆಯದನ್ನೇ ಬಯಸುವ ಜ್ಞಾನಿ ಮಾತ್ರ ಪರಮಾತ್ಮನಿಗೆ ಪ್ರಿಯವಾಗುತ್ತದೆ."[೨೭] ಧರ್ಮದಿಂದ ಅಂತಃಕರಣ ಶುದ್ಧತೆ, ದಾನ, ಸರಳತೆ, ಅಹಿಂಸೆ, ಭೂತದಯೆ, ಸತ್ಯ, ತ್ಯಾಗ, ಶಾಂತಚಿತ್ತತೆ, ಚಾಡಿ ಹೇಳದಿರುವುದು, ಮೃದು ಸ್ವಭಾವ, ಚಾಪಲ್ಯವಿಲ್ಲದಿರುವುದು, ಕ್ಷಮೆ, ಧೈರ್ಯ, ಪರೋಪಕಾರ ಬುದ್ಧಿ ಇರುವುದು, ವಿನಯ, ಇಂತವು ಬರುತ್ತದೆ ಎಂದು ಲೇಖಕರ ಅಭಿಮತ.

ಕನ್ನಡದ ಕಣ್ವ ಬಿ.ಎಂ.ಶ್ರೀ ಅವರ ಪ್ರಕಾರ "ಮತಕ್ಕಿಂತ ಧರ್ಮ ದೊಡ್ಡದು; ಮತ ಕಾದಿ ಮಡಿದರೆ, ಧರ್ಮ ಕೂಡಿಸಿ ಬದುಕಿಸುತ್ತದೆ" ಎಂದಿದ್ದಾರೆ.

ಸನಾತನ ಧರ್ಮದಲ್ಲಿ ಪುರುಷಾರ್ಥಗಳು ನಾಲ್ಕು ಇವುಗಳೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ನಮ್ಮಲ್ಲಿರುವ ಅನೇಕ ಧರ್ಮಾತ್ಮರಿಗೆ ಧರ್ಮದ ಮೂಲಕ ಮೋಕ್ಷ ಸಾಧನೆಯೇ ಗುರಿ ಎಂದು ಹಿರಿಯಣ್ಣ ಅಭಿಪ್ರಾಯಪಟ್ಟಿದ್ದಾರೆ.[೨೮]

ಮಹಾನ್ ಮಾನವತಾವಾದಿ, ಜಗಜ್ಯೋತಿ ಬಸವಣ್ಣ ಜಾತಿ ನಿರ್ಮೂಲನೆಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಕಾಯಕವೇ ಕೈಲಾಸವೆಂದು ಸಾರಿದ. ಎಲ್ಲರಿಗೂ ಶಿವಲಿಂಗದ ದೀಕ್ಷೆಯನ್ನು ಕೊಟ್ಟು ಮಹಿಳೆಯರಿಗೆ ಆ ಕಾಲದಲ್ಲಿಯೇ ಸಮಾನತೆ ಮತ್ತು ಅಕ್ಷರ ನೀಡಿದುದನ್ನು ಲೇಖಕರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

ಕನಕದಾಸರು ಕುಲಕುಲವೆಂದು ಹೊಡೆದಾಡದಿರಿ ಎಂದು ಜಾತಿಯ ಸಮಸ್ಯೆ ಬಿಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿ ಶ್ರೀಕೃಷ್ಣನನ್ನೇ ತನ್ನ ಕಡೆ ತಿರುಗುವಂತೆ ಮಾಡಿದ ಮಹಾಪುರುಷ.

"ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ ನೆರೆಮನೆಯಕ್ಕು ಸರ್ವಜ್ಞ"

---

೨೭. ಧರ್ಮ ಮತ್ತು ಪೌರಪ್ರಜ್ಞೆ, ಪು. ೩೯

೨೮. The quest-ofter perfection – ೧೯೫೨

ಹಾಗೆಯೇ "ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ" ಎಂಬಂತಹ ಮಾತುಗಳು ಧರ್ಮದ ಹಿನ್ನೆಲೆಯಲ್ಲಿ ಜನರಲ್ಲಿ ಜಿಪುಣತನ ಹೋಗಿ ಅಸಹಾಯಕರಿಗೆ ಸಹಾಯ ಮಾಡುವ ಪೌರಪ್ರಜ್ಞೆ ಬೆಳೆಸುತ್ತಿವೆ.

ಡಾ.ರಹಮತ್ ತರಿಕೇರೆ ಅವರ ಪ್ರಕಾರ 'ಧರ್ಮ' ಎಂದ ಕೂಡಲೆ ಲಿಖಿತ ಚಾರಿತ್ರಿಕ ಹಿನ್ನೆಲೆಯುಳ್ಳ ಉಚ್ಚವರ್ಗಗಳು ಅನುಸರಿಸುವ ಪ್ರತಿಷ್ಠಿತ ಜಾಗತಿಕ ಧರ್ಮಗಳು ನೆನಪಾಗಬಾರದು. ನಿಜವಾದ ವ್ಯಾಪಕ ಅರ್ಥವುಳ್ಳ 'ಧರ್ಮ'ದ ನೆನಪಾಗಬಹುದು ಎಂದಿದ್ದಾರೆ.

ಮುಂದುವರೆದು ಪ್ರತಿಷ್ಠಿತ ಧರ್ಮಗಳಿಗೆ ಕೊಟ್ಟಿರುವಷ್ಟು ಪ್ರಾಶಸ್ತ್ಯವನ್ನು ಕಾಪಾಲಿಕ, ನಾಥ, ಸೂಫಿ, ಶಾಕ್ತ, ಪಾಶುಪತ, ದತ್ತ, ಆರೂಢ, ಅಘೋರಿಗೆ ನೀಡಿಲ್ಲ ಎಂದಿದ್ದಾರೆ.

'ಧರ್ಮಕ್ಕಿಂತ ದೇಶ ಮುಖ್ಯ' ಅನ್ನುವ ಜಪಾನಿಯರ ಪೌರಪ್ರಜ್ಞೆ ಬಗ್ಗೆ ಲೇಖಕರಿಗೆ ಮೆಚ್ಚುಗೆ ಇದೆ.

ಶ್ರೀರಾಮಕೃಷ್ಣರು, ವಿವೇಕಾನಂದರು, ಕುವೆಂಪು, ಮಾಸ್ತಿ ಮುಂತಾದವರ ಉಪದೇಶಗಳು ಹಿಂದೂಗಳಿಗೆ ಮಾತ್ರ ಅನ್ವಯಿಸುವಂತದಲ್ಲ. ಒಬ್ಬ ವ್ಯಕ್ತಿಯನ್ನು ನಿಜವಾಗಿ ಮನುಷ್ಯನನ್ನಾಗಿ ಪರಿವರ್ತಿಸುವ ಅದ್ಭುತ ಪರಿವರ್ತನಾಶಕ್ತಿ ಎಂದಿದ್ದಾರೆ.

(ಇ) ಸಂಸ್ಕೃತಿ

ಸಂಸ್ಕೃತಿ ಎಂದರೇನು ಎಂಬುದನ್ನು ವಿವಿಧ ಲೇಖಕರು ಕಂಡಂತೆ ರಾಮಸ್ವಾಮಿಯವರು ಹೀಗೆ ವರ್ಣಿಸಿದ್ದಾರೆ. ಮಂಕುತಿಮ್ಮನ ಕಗ್ಗದ ಖ್ಯಾತಿಯ ಡಿ.ವಿ.ಜಿ ಅವರು ಸಂಸ್ಕೃತಿಯನ್ನು 'ಮರ್ಜಿ' ಅಥವಾ ನಡೆವಳಿಗಳ ಸೊಬಗು' ಎಂದು ಕರೆದಿದ್ದಾರೆ. ಸಂಸ್ಕೃತದ ಗುಣ ಸಂಪತ್ತು ಸಂಸ್ಕೃತಿ ಎಂದಿದ್ದಾರೆ. 'ಸಂಸ್ಕೃತಿ' ಎಂಬುದು ಬರಿಯ ವಿದ್ಯೆಯಲ್ಲ. ಅದು ವಿದ್ಯಾ ಕುಸುಮದ ಪರಾಗ, ಅದು ಸಾಹಿತ್ಯ ಪರಾಮರ್ಶೆಯ ಮತ್ತು ಲೋಕಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಸಕಲ ಸಾಮಾಧಾನಕಾರಕವಾದ ಶೀಲ ಸೌಭಾಗ್ಯ. ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ ನಾನಾ ತತ್ವಗಳ, ನಾನಾ ಧರ್ಮಗಳ-ಮೌಲ್ಯ ತಾರತಮ್ಯ ಜ್ಞಾನದಿಂದಾಗ ಸಮನ್ವಯ ಸ್ವಾರಸ್ಯ. ಅದೇ ನಯವಿನಯ ಮರ್ಯಾದೆ ಎಂದು ಕರೆದಿದ್ದಾರೆ.

ಟಿ.ಎಸ್. ಇಲಿಯಟ್‌ನ ಪ್ರಕಾರ ಧಾರ್ಮಿಕ ನಂಬಿಕೆಗಳೇ ಸಂಸ್ಕೃತಿಯ ತಳಹದಿ. ನಡೆನುಡಿಗಳು ಚೊಕ್ಕಟವಾಗಿರುವಿಕೆ. ಪರೇಂಗಿತ ಪರಿಜ್ಞಾನ, ಧರ್ಮ ಚಿಂತನೆ, ಆತ್ಮಸಂಯಮ, ಶೋಧನೆಗಳು, ಸರಸತಾಭಿರುಚಿ – ಇವು ಉತ್ತಮ ಪೌರಪ್ರಜ್ಞೆಯ

ಲಕ್ಷಣಗಳೇ. ಆದರ್ಶ ಸಮಾಜವನ್ನು ರೂಪಿಸುವಲ್ಲಿ ಇಂತಹ ಪೌರಪ್ರಜ್ಞೆ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಕರ್ನಾಟಕರತ್ನ, ನಾಡೋಜ ದೇಜಗೌ ಅವರ ಅಭಿಪ್ರಾಯದಂತೆ "ಸ್ವಧರ್ಮ ಶ್ರದ್ಧೆ, ಪರಮತ ಸಹನೆ, ವಿರೋಧಗುಣಗಳ ಹೊಂದಾಣಿಕೆ, ಸ್ವದೇಶಾಭಿಮಾನ, ಲೋಕಕಲ್ಯಾಣ, ಸಾಧನೆ, ಜ್ಞಾನಾಸಕ್ತಿ, ಕಾಯಕ ನಿಷ್ಠೆ ಮುಂತಾದವು ಸಂಸ್ಕೃತಿಯ ದ್ಯೋತಕ ಎಂದಿದ್ದಾರೆ.

ಮೇಲೆ ಹೇಳಿದ ಹೇಳಿಕೆಯನ್ನು ಗಮನಿಸಿದರೆ ಇವು ಸಾಮಾಜಿಕ ಪ್ರಜ್ಞೆ, ರಾಷ್ಟ್ರಪ್ರಜ್ಞೆ, ಐಕ್ಯತೆ ಮತ್ತು ಪೌರಪ್ರಜ್ಞೆ ಹಾಗೂ ವಿಶ್ವಪ್ರಜ್ಞೆಗಳ ದ್ಯೋತಕಗಳೂ ಹೌದು. ಶ್ರೀ ಕುವೆಂಪು ಅವರ ವಿಶ್ವಮಾನವ ಸಂದೇಶದಲ್ಲಿ ದೇಜಗೌ ಅವರು ಹೇಳಿರುವ "ಸಂಸ್ಕೃತಿಯ ಪ್ರತಿಬಿಂಬ" ಕಾಣುತ್ತದೆ.

ಪ್ರಪಂಚದ ಎಲ್ಲಾ ಪ್ರಾಚೀನ ನಾಗರೀಕತೆಗಳಿಗೆ ಅವುಗಳದ್ದೇ ಆದ ಸಂಸ್ಕೃತಿಗಳು ಮತ್ತು ಆಚರಣೆಗಳು ಇವೆ. ಕ್ರಿ.ಪೂ. ೫೦೦೦ ದಿಂದ ಕ್ರಿ.ಶ. ೨೦೦ರವರೆಗಿನ ಜಗತ್ತಿನ ವಿವಿಧ ನಾಗರೀಕತೆಗಳು ಹುಟ್ಟಿದ ಕಾಲವಿದು. ಇವುಗಳಲ್ಲಿ ಪ್ರಮುಖವಾದುವುಗಳೆಂದರೆ ಅಸ್ಸೀರಿಯನ್ ಸಂಸ್ಕೃತಿ, ಬ್ಯಾಬಿಲೋನಿಯನ್ ಸಂಸ್ಕೃತಿ, ಮೆಸಪಟೋಮಿಯನ್ ಸಂಸ್ಕೃತಿ, ಈಜಿಪ್ಟ್ ಸಂಸ್ಕೃತಿ, ಸಿಂಧೂ ಸಂಸ್ಕೃತಿ ಹಾಗೂ ರೋಮನ್ ಸಂಸ್ಕೃತಿಗಳು ಕಂಡುಬರುತ್ತವೆ.

ಒಂದೊಂದು ಭಾಷೆಗೂ, ಒಂದೊಂದು ಜನಾಂಗಕ್ಕೂ ತನ್ನದೇ ಆದ ಮತ ಧರ್ಮಗಳಿಗೂ, ಸಾಹಿತ್ಯ ಜನಪದಗಳಿಗೂ, ಕಲೆ, ಸಂಗೀತ ವಾಸ್ತು ಶಿಲ್ಪಗಳಿಗೂ ತಮ್ಮದೇ ಆದ ಸಂಸ್ಕೃತಿಗಳಿರುತ್ತವೆ.

ಡಿವಿಜಿಯವರು ಉಲ್ಲೇಖಿಸುವಂತೆ Gentleman ಸಂಬೋಧನೆಯಲ್ಲಿ Honourable (ಗೌರವಾರ್ಹ), Generous (ಉದಾರಿ), Noble (ಘನವೆತ್ತ ಉದಾತ್ತ), Courteous (ವಿನಯಶೀಲ) ಇವೆಲ್ಲಾ ಭಾವಗಲೂ ಸೇರಿಕೊಂಡಿರುತ್ತವೆ. ಇದನ್ನು ಇಡೀ ಪೌರಪ್ರಜ್ಞೆ ಎಂದು ಗುರುತಿಸಬಹುದು. ಒಟ್ಟಿನಲ್ಲಿ ನಾವು ಇಂಥವರನ್ನು 'ಸುಸಂಸ್ಕೃತ, ಸಭ್ಯ, ಸುಶಿಕ್ಷಿತ, ಸಜ್ಜನ, ಸಹೃದಯಸ್ಥ, ಮಾನಿಷ್ಠ, ಮರ್ಯಾದಸ್ಥ, ಸಂಭಾವಿತ, ದೊಡ್ಡ ಮನುಷ್ಯ ಎಂದೆಲ್ಲಾ ಕರೆಯುತ್ತೇವೆ.

ಡಿ.ವಿ.ಜಿ.ಯವರ ಪ್ರಕಾರ ಶ್ರೀರಾಮಚಂದ್ರ ಹುಟ್ಟಿನಿಂದಲೇ ಇಂತಹ ಒಂದು ದೊಡ್ಡ ಆದರ್ಶ ಮನುಷ್ಯ. ಆದ್ದರಿಂದಲೇ ಆತನನ್ನು ಮರ್ಯಾದಾ ಪುರುಷೋತ್ತಮ ಎನ್ನುತ್ತಾರೆ. ಪಿತೃವಾಕ್ಯ ಪರಿಪಾಲನೆಗಾಗಿ ಆತ ವನವಾಸ ಅನುಭವಿಸುತ್ತಾನೆ. ಏಕಪತ್ನಿ

ವ್ರತಸ್ಥ, ದುಷ್ಟ ನಿಗ್ರಹ, ಶಿಷ್ಟ ಪರಿಪಾಲನಾ ಪ್ರವೀಣ, ಕೈಕೆ, ಮಂಥರೆಯಲ್ಲೂ ತಪ್ಪು ಕಾಣದವನು. ಇಂಥ ವಿಶೇಷತೆಗಳನ್ನು ಹಚ್ಚುತ್ತೇವೆ.

"ಇಂದಿನ ಶಿಕ್ಷಣವಾಗಲಿ ಅಥವಾ ರಾಜಕೀಯವಾಗಲಿ ಮೌಲ್ಯಾಧಾರಿತ–ವಾಗಿರುವುದಿಲ್ಲ. ಆದ್ದರಿಂದ ಜನರಲ್ಲಿ ಪೌರಪ್ರಜ್ಞೆ ಹಾಗೂ ವಿಶ್ವ ಕಲ್ಯಾಣ ಪ್ರಜ್ಞೆ ಕಡಿಮೆಯಾಗುತ್ತವೆ"[೨೯] ಎಂದು ಕೃತಿಕಾರರು ವಿಷಾದಿಸುತ್ತಾರೆ.

ಇಂದು ಜಾತ್ಯಾತೀತತೆ ಬಾಯಿಯಲ್ಲಿ ಹೇಳುವ ಮಂತ್ರವಾಗಿ ಮಾತ್ರ ಉಳಿದುಕೊಳ್ಳುತ್ತದೆ. ಹಿಂಸೆ, ಕಳ್ಳತನ, ಆಷಾಢಭೂತಿತನ, ಅಸಭ್ಯ ವರ್ತನೆ, ಅತಿಯಾದ ಆಸೆ ಹಾಗೂ ಕೆಟ್ಟ ರೀತಿಯಲ್ಲಿ ಧನ ಸಂಪಾದನೆಗಳಿಗೆ ದಾಸನಾಗುವುದು. ದಯೆ ಇಲ್ಲದಿರುವುದು ಇಂದು ಹೆಚ್ಚಾಗುತ್ತಿದೆ. ಇದರಿಂದ ಪೌರಪ್ರಜ್ಞೆ ಅಧೋಗತಿಗಿಳಿಯುತ್ತಿದೆ.

"ಸಂಸ್ಕೃತಿಯೆಂದರೆ ಆತ್ಮಶಿಕ್ಷಣ–ವಿಶ್ವಪ್ರಯುಕ್ತವಾದ ಆತ್ಮ ಶಿಕ್ಷಣ, ಸಂಸ್ಕೃತಿಯು ಸಂಪೂರ್ಣ ದೆಶೆಗೆ ಬಂದಾಗ ಮನುಷ್ಯನು ವಿಶ್ವವಿಶಾಲ ಜೀವಿಯಾಗುತ್ತಾನೆ. ಆಗ ಕಾಲ, ದೇಶ ಪರಿಮಿತಿಗಳು ಅವನನ್ನು ಹಿಡಿಯುವುವು"[೩೦] ಎಂದಿದ್ದಾರೆ ಡಿ.ವಿ.ಜಿ.ಯವರು.

ಕನ್ನಡ ಸಾಹಿತ್ಯದಲ್ಲಿ 'ಸಂಸ್ಕೃತಿ' ಕುರಿತ ಜಿಜ್ಞಾಸೆಯನ್ನು ಬರಗೂರು ರಾಮಚಂದ್ರಪ್ಪ, ಡಾ. ಸಿದ್ದಲಿಂಗಯ್ಯ, ಡಾ. ಅರವಿಂದ ಮಾಲಗತ್ತಿ, ದೇವನೂರು, ತೇಜಸ್ವಿ, ವೈದೇಹಿ ಮುಂತಾದವರು ಮಾಡಿದ್ದಾರೆ.

ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ ಎಂದು ಈ ಶ್ಲೋಕ ಹೇಳುತ್ತದೆ.

"ಏತೇ ಸಂಭ್ರಾತರೋ ವಾವೃಧುಃ ಸಾಭಗಾಯ,
ಯುವಾಪಿತಾ ಸ್ವಪಾರುದ್ರ ಏಷಾಂ ಸುದುಘಾಪೃಶ್ನಿಃ
ಸುದಿನಾವರುಧ್ಯ"[೩೧]

ರಾಷ್ಟ್ರದ ಸಂಸ್ಕೃತಿಯ ನೆಲೆಯನ್ನು ಪೌರಪ್ರಜ್ಞೆಯಿಂದ ಕಂಡುಕೊಳ್ಳುವುದು. ಎಲ್ಲ ಸಂಸ್ಕೃತಿಯ ಸೇರ್ಪಡೆ ಗಂಗಾಯಮುನಗಳ ಸಂಗಮದಂತಿರಬೇಕು ಎನ್ನುವುದು ಲೇಖಕರ ಆಶಯವಾಗಿದೆ.

ಸಂಸ್ಕೃತಿಯನ್ನು ರಾಜಕಾರಣಿಗಳು ಓಟ್ ಬ್ಯಾಂಕ್‌ಗಳಾಗಿ ಪರಿವರ್ತಿಸಿ–ಕೊಂಡು ಸಂಸ್ಕೃತಿಗಳ ನಡುವಿನ ಸಾಮರಸ್ಯವನ್ನು ಹಾಳುಮಾಡುತ್ತಿದ್ದಾರೆ.

---

೨೯. ಪೌರಪ್ರಜ್ಞಾಯನ – ಸಂಸ್ಕೃತಿ ಮತ್ತು ಪೌರಪ್ರಜ್ಞೆ, ಪು. ೬೭

೩೦. ಸಂಸ್ಕೃತಿ, ಡಿ.ವಿ. ಗುಂಡಪ್ಪ, ೧೯೬೯, ಕಾವ್ಯಾಲಯ ಪ್ರಕಾಶನ

೩೧. ಋಗ್ವೇದ, ೫.೬೦.೫

ಮುಖ್ಯ ಸಂಸ್ಕೃತಿಯೊಂದಿಗೆ ಉಪಸಂಸ್ಕೃತಿಯ ವಿಚಾರದ ಕುರಿತು ಬರಗೂರು ರಾಮಚಂದ್ರಪ್ಪ ಅವರು ಹೀಗೆ ಹೇಳಿದ್ದಾರೆ.

"ಇಸ್ಲಾಂ ಈಗ ಅನ್ಯವಲ್ಲ. 'ಭಾರತೀಕರಣ'ಗೊಂಡು ಒಳಗಿನದಾಗಿದೆ. ಇಲ್ಲಿ ಹಿಂದೂ ಎಂಬ ಕಕ್ಷೆಯೊಳಗಿನ ಅನೇಕ ಸಂಸ್ಕೃತಿಗಳೊಡನೆ ಕೂಡುಬಾಳುವೆ ಮಾಡಿ ಉರ್ದುಭಾಷೆ, ಸೂಫಿಸಂ, ಹಿಂದೂಸ್ಥಾನಿ ಸಂಗೀತ, ಕಥಕ್ ನೃತ್ಯ, ಕಮಾನುಗೋಳಗಳ ವಾಸ್ತುಶಿಲ್ಪ, ಇಂಥ ಸಾಮರಸ್ಯಗಳ ಕೂಸುಗಳನ್ನು ಈ ನೆಲದ ಜಗುಲಿಯ ಮೇಲೆ ಆಡಬಿಟ್ಟಿದೆ. ಹಿಂದೂಗಳ ತಾಳಿ, ಬಳೆ, ಸೀರೆಗಳನ್ನು ಮುಸ್ಲಿಮರು ಸ್ವೀಕರಿಸಿದ್ದಾರೆ. ಸೂಫಿ ಸಂತರಂತೂ ಹಿಂದೂ ಭಕ್ತಿಪಂಥದ ಹುಟ್ಟಿಗೆ ಕಾರಣರಾಗಿ ಸಹಬಾಳುವೆಯ ಅನನ್ಯ ಸಂಕೇತವಾಗಿದ್ದಾರೆ. ಈಗಲೂ ಹಿಂದೂ ಕೆಳವರ್ಗಗಳು ವಿಶೇಷವಾಗಿ ಈ ಸಹಬಾಳುವೆಯನ್ನು ಮುಂದುವರೆಸುತ್ತಿವೆ. ಆದರೆ ಎರಡೂ ಕಡೆ ಇರುವ ಮೂಲಭೂತವಾದಿಗಳು ಈ ಸಹಬಾಳುವೆಯನ್ನು ತಿರಸ್ಕರಿಸುತ್ತಿವೆ. ಸಂಸ್ಕೃತಿಗೆ ನಿಜವಾದ ವೈರಿಯೆಂದರೆ ಈ ಧಾರ್ಮಿಕ ಮೂಲಭೂತವಾದಿಗಳೇ"[೨]

(ಈ) ನೈತಿಕ ಮೌಲ್ಯಗಳು

ನೈತಿಕ ಮೌಲ್ಯವೆಂದರೇನು? ಎಂಬ ವ್ಯಾಖ್ಯಾನ ನೀಡಿ ನಂತರ ಪೌರಪ್ರಜ್ಞೆಯನ್ನು ಬೆಳೆಸುವಲ್ಲಿ ನೈತಿಕ ಮೌಲ್ಯಗಳ ಪಾತ್ರ ಹಿರಿದಾಗಿದೆ. ಗುಂಪಿಗಾಗಿ ಆತ್ಮತ್ಯಾಗ, ಕನಿಕರ ತೋರಿಸುವ ವರ್ತನೆಗಳು, ಸಹಕಾರ, ಸಹಬಾಳ್ವೆ, ಕೋತಿಗಳು, ಚಿಂಪಾಂಜಿಗಳು, ಪಾರಿವಾಳಗಳು, ಸಿಂಹಗಳು, ಕಾಡುನಾಯಿಗಳು ಇವುಗಳ ಗುಂಪು ಜೀವನ, ಪರಸ್ಪರ ಸಹಾಯ ಮಾಡುವಿಕೆ ಅನೇಕ ಪ್ರಾಣಿಗಳು ತಮ್ಮ ಸಂತತಿಗಾಗಿ ತಾವು ಆತ್ಮಾರ್ಪಣೆ ಮಾಡಿಕೊಳ್ಳುವಿಕೆ, ಒಮ್ಮೊಮ್ಮೆ ಅಲ್ಲಲ್ಲೇ ಕೆಲವು ಪ್ರಾಣಿಗಳಲ್ಲಿ ಕಂಡುಬರುವ ತಮ್ಮ ಸಂಗಾತಿಗೆ ತೋರಿಸುವ ನಿಷ್ಠಾ ಜೀವನ ಇವೆಲ್ಲಾ ಬಹುಶಃ ಮಾನವನಲ್ಲಿ ಪೌರಪ್ರಜ್ಞೆ ಮತ್ತು ನೈತಿಕ ಮೌಲ್ಯಗಳ ವಿಕಸನಕ್ಕೆ ಮೂಲ ಪ್ರೇರಣೆಗಳಾಗಿರಬಹುದು ಎಂದು ಲೇಖಕರು ಅಭಿಪ್ರಾಯಪಡುತ್ತಾರೆ.

ಮಕ್ಕಳಲ್ಲಿ ನೈತಿಕ ಪ್ರಜ್ಞೆ ಮೂಡಿಸುವಲ್ಲಿ, ಬೆಳೆಸುವಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಮಹತ್ವವಾದುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳು ಅಧಃಪತನವಾಗುತ್ತದೆ. ಚುನಾವಣೆಯ ಕಾಲದಲ್ಲಿ ಜಾತಿವಾದ ಮತ್ತು ರಾಜಕಾರಣಿಗಳು ನೈತಿಕ ಮೌಲ್ಯವನ್ನು ಅಲ್ಲಗಳೆದು ಮತಗಳನ್ನು ಹೆಂಡ, ಹಣ ಇತ್ಯಾದಿ ಪೂರೈಕೆ ಮಾಡಿ ವಾಮಮಾರ್ಗದಲ್ಲಿ ಗೆಲ್ಲುತ್ತಿದ್ದಾರೆ. ರಾಷ್ಟ್ರದ ರಕ್ಷಣೆಗೆ ತೀರಾ ಅಗತ್ಯವಾದ ಶಸ್ತ್ರಾಸ್ತ್ರ-ಗಳನ್ನು ಕೊಳ್ಳುವಿಕೆಯಲ್ಲೂ ಹಗರಣಗಳು ನೈತಿಕ ಮೌಲ್ಯವನ್ನೇ ಪ್ರಶ್ನೆಮಾಡುವಂತಿದೆ.

---

೩೨. ಪ್ರತಿ ಸಂಸ್ಕೃತಿ – ರಹಮತ್ ತರೀಕೆರೆ – ೧೯೯೩

ಸತ್ತ ಸೈನಿಕರನ್ನು ಹಾಕುವ ಶವಪೆಟ್ಟಿಗೆ ಖರೀದಿಯಲ್ಲೂ ಹಗರಣವಾಗಿರುವುದು ಭಾರತೀಯರು ಜಾಗತಿಕವಾಗಿ ತಲೆತಗ್ಗಿಸುವಂತೆ ಮಾಡಿದೆ.

ರಾಷ್ಟ್ರದ ಎಲ್ಲಾ ಪ್ರಜೆಗಳಿಗೂ ರಾಷ್ಟ್ರ ಮೊದಲು ಮತ್ತು ನಂತರದಲ್ಲಿ ಮತ ಧರ್ಮ ಎನ್ನುವ ನೈತಿಕ ಮೌಲ್ಯ ಬರಬೇಕು. ಜಾತಿಪದ್ಧತಿ, ಅಸ್ಪೃಶ್ಯತೆ, ವರದಕ್ಷಿಣೆ, ಬಾಲಕಾರ್ಮಿಕ ಪದ್ಧತಿ, ವೇಶ್ಯಾವಾಟಿಕೆ ಮುಂತಾದ ಅನಾಚಾರಗಳು ತೊಲಗಿ ಪ್ರಜೆಗಳಲ್ಲಿ ನೈತಿಕ ಪ್ರಜ್ಞೆ ಮೂಡಬೇಕಾಗಿದೆ.

ನೈತಿಕತೆಯ ಕೊರತೆಯಿಂದಾಗಿ ಪಾಕಿಸ್ತಾನ ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆ. ಉಗ್ರವಾದವನ್ನು ಹಿಂಬಾಗಿಲಿನಿಂದ ಪೋಷಿಸುತ್ತಿದೆ. ಅದಕ್ಕೆ ಉದಾಹರಣೆ ಇತ್ತೀಚೆಗೆ ಕುಖ್ಯಾತ ಜಾಗತಿಕ ಉಗ್ರ ಒಸಾಮಬಿನ್ ಲಾಡೆನ್ ಪಾಕಿಸ್ತಾನದಲ್ಲಿ ಆಶ್ರಯ ಪಡೆದು ನಂತರ ಅಮೇರಿಕಾ ಪಡೆಗಳಿಂದ ಹತನಾದ.[೩೩]

ಬಾಯಿಯಲ್ಲಿ ಮಾತ್ರ ಶಾಂತಿ ಮಂತ್ರ ಹೇಳುವ ಪಾಕಿಸ್ತಾನ ನೈತಿಕಪ್ರಜ್ಞೆ ಇಲ್ಲದೆ ಇಂತಹ ಕುಕೃತ್ಯಗಳನ್ನು ಎಸಗಿ ವಿಶ್ವದ ದೃಷ್ಟಿಯಲ್ಲಿ ಕನಿಷ್ಠ ಸ್ಥಾನ ಪಡೆದಿದೆ.

"ಸ್ವಾತಂತ್ರ್ಯೋತ್ತರ ಕಾಲದ ನಮ್ಮ ಅನೇಕ ರಾಜಕೀಯ ಮುಖಂಡರು ಪ್ರಾಮಾಣಿಕರಾಗಿದ್ದರೂ ಅವರುಗಳ ಕಾಲದಲ್ಲಿ ಭ್ರಷ್ಟಾಚಾರ ಅಷ್ಟಾಗಿ ಕೇಳಿಬರುತ್ತಿರಲಿಲ್ಲ. ಪಂಡಿತ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್, ಲಾಲ್ ಬಹುದೂರ್ ಶಾಸ್ತ್ರಿ, ಮೊರಾರ್ಜಿ ದೇಸಾಯಿ, ಕೇರಳದ ಮುಖ್ಯಮಂತ್ರಿ ಅಚ್ಯುತ ಮೆನನ್, ಶ್ರೀ ವಾಸುದೇವ ನಾಯರ್, ಸ್ಪೀಕರ್ ಅಲೆಕ್ಸ್ಯಾಂಡರ್ ಪರಂಬಿತ್ತರ, ರಾಜ್ಯದಲ್ಲಿ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ನಿಜಲಿಂಗಪ್ಪ, ಶ್ರೀ ವಿಶ್ವೇಶ್ವರಯ್ಯ ಇವರ ಹೆಸರು ಪ್ರಾಮಾಣಿಕತೆಗೆ ಮತ್ತು ನೈತಿಕತೆಗೆ ಪ್ರಸಿದ್ಧವಾಗಿದೆ."[೩೪] ಎಂದು ಲೇಖಕರು ಉಲ್ಲೇಖಿಸಿದ್ದಾರೆ.

ವಿಜ್ಞಾನ ಕ್ಷೇತ್ರದಲ್ಲೂ ಪ್ರಾಮಾಣಿಕತೆ ಮತ್ತು ಪೌರಪ್ರಜ್ಞೆ ಇರಬೇಕು. ತಮ್ಮ ಸಂಶೋಧನೆಗಳ ಫಲಿತಾಂಶಗಳೇನೇ ಇರಲಿ, ಅವುಗಳನ್ನು ಪ್ರಾಮಾಣಿಕವಾಗಿ ವರದಿ ಮಾಡುವುದು ಪೌರಪ್ರಜ್ಞೆ. ಅವನ್ನೇ ಉತ್ಪ್ರೇಕ್ಷೆ ಮಾಡುವುದಾಗಲಿ, ತಿರುಚಿ ಮಹತ್ಸಾಧನೆ ಮಾಡಿರುವಂತೆ ಸುಳ್ಳು ವರದಿಗಳನ್ನು ಪ್ರಕಟಿಸುವುದಾಗಲಿ ಪ್ರಾಮಾಣಿಕತೆಯಲ್ಲ. ಇತ್ತೀಚೆಗೆ ವಿಶ್ವವಿದ್ಯಾನಿಲಯಗಳಾಗಲಿ ಅಥವಾ ರಾಷ್ಟ್ರೀಯ ಮಟ್ಟದ ಸಂಶೋಧನಾ ಸಂಸ್ಥೆಗಳನ್ನು ಸಂಶಯದ ದೃಷ್ಟಿಯಿಂದ ನೋಡುವಂತಾಗಿದೆ. "ಮಠ-ಪೀಠಗಳನ್ನು

೩೩. ಪ್ರಜಾವಾಣಿ ದಿನಪತ್ರಿಕೆ, ೦೯-೦೫-೨೦೧೦

೩೪. ಪೌರಪ್ರಜ್ಞೆಯನ- ನೈತಿಕ ಮೌಲ್ಯಗಳು, ಪು. ೮೫

ಗೃಹಸ್ಥರಿಗೆ ಕೊಡಿ"[೩೫] ಎಂದು ವಿಚಾರವಾದಿ ಚಿಂತಕ ಶ್ರೀ ವೀರಭದ್ರ ಚನ್ನಮಲ್ಲ ಶ್ರೀಗಳು ಮಠಗಳ ಲೈಂಗಿಕ ಹಗರಣಗಳನ್ನು ನೋಡಿ ಬೇಸತ್ತು ಕರೆಕೊಟ್ಟಿದ್ದರು.

ಜೀವನಕ್ಕೆ ಅತೀ ಮುಖ್ಯವಾದದ್ದನ್ನು ಕೊಂಡು ಉಡುಗೆ ತೊಡುಗೆಗಳಲ್ಲಿ ಸರಳತೆ ಪರಿಸರ ಸ್ನೇಹಿ ಉಡುಪುಗಳನ್ನು ಅಗತ್ಯವಾದಷ್ಟು ಮಾತ್ರ ಇಟ್ಟುಕೊಳ್ಳುವುದು ಪೌರಪ್ರಜ್ಞೆಯ ಲಕ್ಷಣವಾಗಿದೆ.

ಮಹಾತ್ಮಾಗಾಂಧಿ ಅವರು ಸರಳ ಜೀವನದ ಮೇಲೆ ಅಚಲ ನಂಬಿಕೆ ಇರಿಸಿದ್ದರು. ಹಾಗಾಗಿ ಸರಳ ಜೀವಿಗಳು ಅಧಿಕಾರದಲ್ಲಿದ್ದರೆ ಅಧಿಕಾರವನ್ನು ತಮ್ಮ ಕರ್ತವ್ಯ ಎಂದು ಭಾವಿಸುತ್ತಾರೆ. ಭ್ರಷ್ಟಾಚಾರ, ಲಂಚಗುಳಿತನ, ಕಪ್ಪು ಹಣಕ್ಕೆ ಜಾಗವಿರುವುದಿಲ್ಲ. ಇಂಥವರಿಗೆ ಜೀವನ ಮೌಲ್ಯಗಳ ಕಾಪಾಡುವಿಕೆ ಸುಲಭ, ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುವ ಈ ಜೀವಿಗಳು ದಯೆ, ಕರುಣೆ, ಅನುಕಂಪ, ಸೌಜನ್ಯ ಮತ್ತು ಪೌರಪ್ರಜ್ಞೆಗಳ ಆಗರವಾಗಿರುತ್ತಾರೆ.

ಬಸವಣ್ಣ ಕಾಯಕದ ಮಹತ್ವ ಸಾರಿದ ಜೊತೆಗೆ ಅಗತ್ಯಕ್ಕಿಂತ ಹೆಚ್ಚು ಪಡೆಯುವುದು ಅಪರಾಧ ಎಂದು ಭಾವನೆ ಮೂಡಿಸಿದರು. ಸತ್ತಾಗ ಆನೆ–ಕುದುರೆಯ ಮೇಲೆ ಹೇರಿಕೊಂಡು ಹೋಗುವುದಿಲ್ಲ ಎನ್ನುವ ಕಹಿಸತ್ಯವನ್ನು ಅರುಹಿದ.

ಸರಳ ಜೀವನ, ಉದಾತ್ತ ಚಿಂತನೆಯಂತಹ ನೈತಿಕ ಮೌಲ್ಯಗಳು ಪ್ರಜೆಗಳಲ್ಲಿ ಪೌರಪ್ರಜ್ಞೆಯನ್ನು ಬೆಳೆಸುತ್ತವೆ. ಸಂಚಾರಿ ನಿಯಮಗಳನ್ನು ತಪ್ಪದೆ ಪಾಲಿಸಬೇಕು. ನಕಲಿ ಔಷಧಗಳು ಜನರ ಜೀವವನ್ನು ತೆಗೆಯುತ್ತವೆ. ಹಣ್ಣುಗಳನ್ನು ಕೃತಕವಾಗಿ ಮಾಗಿಸಲು ರಸಾಯನಿಕ ಪದಾರ್ಥ ಉಪಯೋಗಿಸಿ ವಿಷವನ್ನಾಗಿ ಮಾಡಲಾಗುತ್ತಿದೆ.

ಧೂಮಪಾನ, ಮಧ್ಯಪಾನ, ತಂಬಾಕು ಸೇವನೆ ಇನ್ನಿತರ ಕೆಟ್ಟ ಚಟಗಳಿಂದ ಪ್ರಜೆಗಳಲ್ಲಿ ನೈತಿಕ ಮೌಲ್ಯ ಕಡಿಮೆಯಾಗುತ್ತಿದೆ. ಬಾಡಿಗೆ ತಾಯಿತನ ನೈತಿಕವಾಗಿ ಕೆಟ್ಟದ್ದು.

ಸಾರ್ವಜನಿಕ ಹಣ ಎಷ್ಟು ಖರ್ಚಾಗುತ್ತದೆ ಎಂಬುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದದ್ದು ಹೇಗೆ ಖರ್ಚಾಗುತ್ತದೆ ಎನ್ನುವುದು" ಎಂದು ಗಾಂಧೀಜಿಯವರು ಅಭಿಪ್ರಾಯಪಟ್ಟಿದ್ದಾರೆ.

ಉ) ರಾಷ್ಟ್ರಪ್ರೇಮ

"ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಭಾರತೀಯರ ಮಹಾ ಕಾವ್ಯವಾದ ರಾಮಾಯಣದ ಈ ಮಾತು ಅನನ್ಯವಾಗಿದೆ.

೩೫. ಪ್ರಜಾವಾಣಿ ದಿನಪತ್ರಿಕೆ–೨೬.೦೮.೨೦೧೦

ಸೇನೆಯ ರಾಷ್ಟ್ರಭಕ್ತಿಯ ಬಗ್ಗೆ ಎರಡನೇ ಮಾತಿಲ್ಲ. ಆದರೆ ಒಮ್ಮೆ ಕೂಡ ನಮ್ಮ ಸೇನೆ ತನ್ನ ಸಾಮಾಜಿಕ ಮತ್ತು ನೈತಿಕ ಜವಾಬ್ದಾರಿಗಳನ್ನು ಮರೆಯಬಾರದು ಎಂಬುದು ಲೇಖಕರ ಪ್ರಾಮಾಣಿಕ ಕಳಕಳಿಯಾಗಿದೆ.

(ಊ) ಕನ್ನಡ ಪ್ರೇಮ

ಕ್ರಿ.ಶ. ೧೫೦ರಲ್ಲಿದ್ದ ಹಾಲರಾಜನ 'ಗಥಾಸಪ್ತಸತಿ' ಎಂಬ ಪ್ರಾಕೃತ ಗ್ರಂಥದಲ್ಲಿ ಕನ್ನಡ ಪದಗಳಿವೆ. ಆದ್ದರಿಂದ ಕನ್ನಡ ಸಾಹಿತ್ಯ ಈ ಗ್ರಂಥದ ಕಾಲಕ್ಕಿಂತಲೂ ಪ್ರಾಚೀನವಾಗಿದ್ದಿರಬಹುದು. ಆದರೆ ಬರಹ ರೂಪದಲ್ಲಿ ನಮಗೆ ಮೊಟ್ಟಮೊದಲು ಸಿಕ್ಕುವುದು ಹಲ್ಮಿಡಿಯ ಶಾಸನ. ಇದರ ಕಾಲ ಕ್ರಿ.ಶ. ೪೫೦.

ಕವಿರಾಜಮಾರ್ಗ ಕ್ರಿ.ಶ. ೯ನೇ ಶತಮಾನದಲ್ಲಿ ರಚಿತವಾದರೂ ಅದರ ಹೇಳಿಕೆಯ ಪ್ರಕಾರ ನಮ್ಮ ಸಾಹಿತ್ಯಕ್ಕೆ ೧೧೦೦ ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ. ಬೇರೆ ದೇಶಗಳಲ್ಲಿ ಸಿಗುವ ಪ್ರಾಚೀನ ಅವಶೇಷಗಳು, ಪ್ರಾಚೀನ ಶಾಸನಗಳು, ಕವಿರಾಜಮಾರ್ಗ ಮತ್ತಿತರ ಗ್ರಂಥಗಳಲ್ಲಿ ದೊರಕುವ ಆಧಾರಗಳು ಇವನ್ನು ಪರೀಕ್ಷಿಸಿದರೆ ಕನ್ನಡ ಭಾಷೆ ಹೆಚ್ಚು ಕಡಿಮೆ ತಮಿಳಿನಷ್ಟೇ ಹಳೆಯದಿರಬಹುದೆಂಬ ಭಾವನೆ ಬರುತ್ತದೆ. ಆದರೆ ತಮಿಳಿಗೇ ಮೊದಲು 'ಶಾಸ್ತ್ರೀಯ ಭಾಷೆ" ಸ್ಥಾನಮಾನ ಕೊಟ್ಟು ಕನ್ನಡವನ್ನು ನಂತರ ಪರಿಗಣಿಸಿರುವುದು ಕೇಂದ್ರ ಸರ್ಕಾರ ಪೌರಪ್ರಜ್ಞೆಯಿಂದ ನಡೆದುಕೊಂಡಿಲ್ಲವೆಂಬುದನ್ನು ತೋರಿಸುತ್ತದೆ.

ಕನ್ನಡಿಗರಿಗೆ ಹೋರಾಟ ಹಾಗೂ ಸ್ಪರ್ಧಾತ್ಮಕ ಮನೋಭಾವವಿಲ್ಲದಿರುವುದು ಕಾರಣ ಎನ್ನುವುದು ಲೇಖಕರ ಅಭಿಮತ. ಅಲ್ಲದೆ ನಮ್ಮನ್ನು ಆಳುವ ನಾಯಕರಿಗೆ ಆತ್ಮಾಭಿಮಾನ, ಭಾಷಾಭಿಮಾನಗಳಿಲ್ಲದೆ ನಿಷ್ಕ್ರೀಯರಾಗಿದ್ದದ್ದು, ತಮಿಳರನ್ನು ನೋಡಿ ನಾವು ಕಲಿಯಬೇಕಾದ ಕೆಲವು ವಿಷಯಗಳಿವೆ.

ಕನ್ನಡ ಮತ್ತು ತೆಲಗು ಸಾಹಿತ್ಯಗಳ ಉದಯ ಕಾಲವೇ ತಮಿಳಿಗೂ ಆಗಿದೆ ಎಂಬುದು ಬಿ.ಜಿ.ಎಲ್. ಸ್ವಾಮಿ ಅವರ ಅಭಿಪ್ರಾಯ.

ವಿದೇಶಗಳಲ್ಲಿರುವ ಕನ್ನಡಿಗರು ಸಂಘಸಂಸ್ಥೆಗಳನ್ನು ಸ್ಥಾಪಿಸಿಕೊಂಡು ತಮ್ಮ ಭಾಷಾ ಪ್ರೇಮವನ್ನು ಮೆರೆಯುಸುತ್ತಿರುವ ಬಗ್ಗೆ ಲೇಖಕರಿಗೆ ಅಭಿಮಾನವಿದೆ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಲು ಕನ್ನಡದ ಕಟ್ಟಾಳು ದೇಜಗೌ ಅವರು ಎರಡು ಬಾರಿ ಉಪವಾಸ ಸತ್ಯಾಗ್ರಹ ಮಾಡಿದ್ದನ್ನು ತಮ್ಮ ಕೃತಿಯಲ್ಲಿ ಸ್ಮರಿಸಿಕೊಂಡಿದ್ದಾರೆ.

ಮಾತೆ ಮತ್ತು ಮಾತೃಭೂಮಿ ಸ್ವರ್ಗಕ್ಕಿಂತ ಹೆಚ್ಚು ಎನ್ನುವ ಈ ಮಾತು ರಾಷ್ಟ್ರಪ್ರೇಮಕ್ಕೆ ಉಜ್ವಲ ಉದಾಹರಣೆ ಎನ್ನಬಹುದು.

ನಮ್ಮ ರಾಷ್ಟ್ರಪ್ರೇಮ ಬಹು ಪ್ರಾಚೀನವಾದುದು ಎಂಬುದರ ಬಗ್ಗೆ ಅನೇಕರಿಗೆ ಕಲ್ಪನೆ ಇಲ್ಲ. ಆದರೆ ಭಾರತದ ಭವ್ಯ ಇತಿಹಾಸವನ್ನು ಅವಲೋಕಿಸಿದರೆ ಅಖಂಡ ಭಾರತದ ಬಗೆಗಿನ ಭವ್ಯಕಲ್ಪನೆ ಯಾರಿಗಾದರೂ ಬರುತ್ತದೆ ರಾಷ್ಟ್ರಗೀತೆ ಹಾಡುವಾಗ ಎದ್ದು ನಿಂತು ಗೌರವ ಸೂಚಿಸುವುದು ಪೌರಪ್ರಜ್ಞೆ.

ಮಕ್ಕಳಲ್ಲಿ, ಪ್ರತಿ ಪ್ರಜೆಯಲ್ಲೂ 'ದೇಶಪ್ರೇಮ' ಎನ್ನುವ ಪೌರಪ್ರಜ್ಞೆಯ ರಾಷ್ಟ್ರೀಯ ಭಾವನೆಯನ್ನು ಮೊದಲು ನಾವು ಉದ್ದೀಪನಗೊಳಿಸಬೇಕು.

ಕೈಗಾರಿಕೆಗಳ ಕಾರ್ಮಿಕರು, ಎಲ್ಲಾ ವರ್ಗದ ಅಧ್ಯಾಪಕರುಗಳು, ಸರ್ಕಾರಿ ನೌಕರರುಗಳು, ಕೂಲಿಕಾರ್ಮಿಕರು, ಕೆಲಸ ಸಿಕ್ಕದಿರುವ ವಿದ್ಯಾವಂತರು, ಅವಿದ್ಯಾವಂತ ಯುವಕರು, ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರು, ವ್ಯಾಪಾರಿಗಳು ಇವೆಲ್ಲ ವರ್ಗಗಳಿಗಾಗಿ ದೇಶಾಭಿಮಾನ ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯಾ ನಗರ ಕಾರ್ಪೋರೇಷನ್ ಅಥವಾ ನಗರಸಭೆಗಳು ಏರ್ಪಡಿಸಬೇಕು.

ಶ್ರೀಮಂತ ರಾಜಕೀಯ ಪಕ್ಷಗಳು, ಭ್ರಷ್ಟ ರಾಜಕಾರಣಿಗಳು, ದೇಶದ್ರೋಹಿಗಳು, ಕಪ್ಪುಹಣ ಸಂಗ್ರಹಿಸಿದ ಮಂತ್ರಿಗಳು ಹಾಗೂ ರಾಜಕಾರಣಿಗಳು ಸ್ವಿಸ್ ಬ್ಯಾಂಕ್‌ಗಳಲ್ಲಿ ಹಣವಿಡುತ್ತಾರೆ. ನಮ್ಮ ದೇಶದಲ್ಲಿ ಹಣವೇ ಶಕ್ತಿ ಎಂಬುದು ಚುನಾವಣೆಗಳ ಕಾಲದಲ್ಲಿ ಕಂಡುಬರುವಂಥದ್ದು. ಶ್ರೀಮಂತ ರಾಜಕೀಯ ಪಕ್ಷಗಳು ದುಡ್ಡು, ಸಾರಾಯಿ ಮೊದಲಾದ ಆಮಿಷಗಳನ್ನು ಒಡ್ಡಿ ಭ್ರಷ್ಟಾಚಾರಿ, ದುರಾಚಾರಿ ಗೂಂಡಾ ವ್ಯಕ್ತಿಗಳನ್ನು ಚುನಾವಣೆಗಳಲ್ಲಿ ಗೆಲ್ಲಿಸಿ ಮಂತ್ರಿ ಮಾಡಿ ಬಿಡುತ್ತವೆ ಎಂದು ಲೇಖಕರು ವಿಷಾದ ಪಡುತ್ತಾರೆ.

"ದಕ್ಷತೆ, ಪ್ರಾಮಾಣಿಕತೆಗಳು, ಕ್ಷಿಪ್ರ ಕಾರ್ಯ ನಿರ್ವಹಣೆ ಹಾಗೂ ಜನಾನು-ರಾಗಿಗಳಾಗಿದ್ದ, ನಿಜವಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಿಂದಿನ ತಲೆಮಾರಿನ ರಾಜಕೀಯ ಮುಖಂಡರೆಲ್ಲಿ? ಮತ್ತು ಇಂದಿನ ಕೆಲವು ದೇಶಾಭಿಮಾನವಿಲ್ಲದ, ಅಪ್ರಮಾಣಿಕ ಹಾಗೂ ಭ್ರಷ್ಟರೆಲ್ಲಿ? ಚಾರಿತ್ರ್ಯ ಶುದ್ಧವಿಲ್ಲ ಎಂಬ ಆರೋಪ ಇರುವವರೂ ಇಂದು ಮಂತ್ರಿಗಳಾಗುವುದು ಸುಲಭ. ಬುದ್ಧಿ ಜೀವಿಗಳು ತಮ್ಮ ವಿರೋಧವನ್ನು ಈ ಬಗ್ಗೆ ವ್ಯಕ್ತಪಡಿಸುತ್ತಾರೆ."[೩೬]

---

೩೬. ವಿಜಯ ಕರ್ನಾಟಕ, ೨೭-೧೨-೨೦೦೯

ಸಾಹಿತಿಗಳ ಹೊಟ್ಟೆಕಿಚ್ಚಿನ ಹಲವು ಪ್ರಸಂಗಗಳನ್ನು ಲೇಖಕರು ಪ್ರಸ್ತಾಪಿಸುತ್ತಾರೆ. ಇದರಿಂದ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಯಾವುದೇ ಪ್ರಯೋಜನವಿಲ್ಲ ಎಂಬ ಎಚ್ಚರಿಕೆಯ ಮಾತುಗಳನ್ನು ಆಡಿದ್ದಾರೆ.

ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಬಳಕೆ ಹೆಚ್ಚುಹೆಚ್ಚಾಗಿ ಬರಬೇಕೆಂಬ ಆಶಯ ಲೇಖಕರದ್ದು. ಡಾ. ಹಾ.ಮಾ.ನಾಯಕರ ಮಗಳು ಕನ್ನಡದಲ್ಲಿ ಎಂ.ಬಿ.ಬಿ.ಎಸ್. ಪದವಿ ಮುಗಿಸಿದ್ದನ್ನು ಈ ಸಂದರ್ಭದಲ್ಲಿ ನೆನೆಯುತ್ತಾರೆ.

ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಯಾದ ಡಾ. ಸಿ.ಎನ್.ಆರ್.ರಾವ್ ಅವರು ೧೦ನೇ ತರಗತಿಯ ತನಕ ಕನ್ನಡ ಮಾಧ್ಯಮದಲ್ಲೇ ವ್ಯಾಸಂಗ ಮಾಡಿದ್ದು ಅವರ ಭಾಷಾಭಿಮಾನದ ಸಂಕೇತ ಮತ್ತು ಕನ್ನಡ ಮಾಧ್ಯಮದಲ್ಲಿ ಓದಿದ್ದರೂ ಯಾವುದೇ ಅಡೆತಡೆ ಇಲ್ಲದೆ ಅಂತರರಾಷ್ಟ್ರೀಯ ಮಟ್ಟದವರೆಗೆ ಬೆಳೆಯಬಹುದು ಎಂಬುದನ್ನು ನಿರೂಪಿಸಿದ್ದಾರೆ ಎನ್ನುವ ಅಂಶವನ್ನು ಲೇಖಕರು ಗುರುತಿಸುತ್ತಾರೆ.

೨) ಪರಿಸರ ಪೌರಪ್ರಜ್ಞೆ

'ಪರಿಸರ' ಎಂದರೆ ನಮ್ಮ ಸುತ್ತಮುತ್ತಲಿರುವ ಭೂಪ್ರದೇಶ, ಜಲ, ವಾಯು, ಸಸ್ಯಗಳು, ಪ್ರಾಣಿಗಳು, ಸಜೀವ ಮತ್ತು ನಿರ್ಜೀವ ವಸ್ತುಗಳಿಂದ ಆವೃತ್ತವಾಗಿರುವುದನ್ನೇ ಒಟ್ಟಾರೆ 'ಪರಿಸರ' ಎಂದು ಕರೆಯುತ್ತೇವೆ.

"ಮಾನವನ ಹಕ್ಕು ಕರ್ತವ್ಯಗಳ ಸಂಹಿತೆಯನ್ನು ಪೌರನೀತಿ ಎಂದು ಕರೆದರೆ ಅವುಗಳ ಬಗೆಗಿನ ಅರಿವನ್ನು ಪೌರಪ್ರಜ್ಞೆ ಎನ್ನಬಹುದು" ಎನ್ನುತ್ತಾರೆ ಲೇಖಕರು.

ಭಾರತೀಯರ ಶಿಸ್ತು, ಸಂಯಮ, ಸಮನ್ವಯ, ಸಾಮರಸ್ಯ, ಸಭ್ಯತೆ, ಶಿಷ್ಟಾಚಾರ, ಭೂತದಯೆ, ಅಹಿಂಸೆ, ಪ್ರಕೃತಿಯ ಆರಾಧನೆ ಮತ್ತು ಅವರ ಸಮತೋಲನ ಸಂರಕ್ಷಣೆ ಇವೆಲ್ಲಾ ಪೌರಪ್ರಜ್ಞೆಯಲ್ಲಿ ಸದಾ ಇರಬೇಕಾದ ಗುಣವಿಶೇಷಗಳು.

ಪರಿಸರ ಪ್ರಜ್ಞೆಯನ್ನು ಲೇಖಕರು ವೇದಗಳ ಕಾಲದಿಂದ ಗುರುತಿಸುತ್ತಾರೆ. ವೇದಗಳ ಕಾಲದ ಜನರು ಪ್ರಕೃತಿಯನ್ನೇ ದೇವರೆಂದು ಭಾವಿಸಿ ಪೂಜಿಸುತ್ತಿದ್ದರು. ಹಾಗೆಯೇ ತಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು. ಈಗಲೂ ಕೂಡ ಎಲ್ಲಾ ಮನೆಗಳಲ್ಲೂ ನಾವು ಈ ರೀತಿಯ ಚಟುವಟಿಕೆಗಳನ್ನು ನೋಡಬಹುದು.

ಮನೆಗಳನ್ನು ಗುಡಿಸಿ, ಸಾರಿಸಿ ರಂಗೋಲೆ ಇಟ್ಟು ಮನೆಯ ಮುಂದೆ ತುಳಸಿ ಮುಂತಾದ ಪೂಜನೀಯ ಗಿಡಗಳು ಮತ್ತು ದೇವರ ಆರಾಧನೆಗೆ ಬೇಕಾದ ಹಣ್ಣು-ಹೂವುಗಳನ್ನು ಕೊಡುವ ಅನೇಕ ಗಿಡ-ಮರಗಳನ್ನು ನೆಟ್ಟು ನೀರೆರೆಯುತ್ತಾರೆ. ಆದರೆ ಸಮಸ್ಯೆ ಬರುವುದು ಇಲ್ಲಿಂದ. ನಮ್ಮ ಮನೆಯ ಕಸವನ್ನೇ ಅನಾಮತ್ತಾಗಿ ಎತ್ತಿ ಬೀದಿಗೆ

ಎಸೆಯುವುದರ ಮೂಲಕ ಹೊರಗಿನ ಪರಿಸರವನ್ನು ಹಾಳುಮಾಡುತ್ತಿರುತ್ತಾರೆ. ಸಾರ್ವಜನಿಕ ಪ್ರದೇಶಗಳಲ್ಲಿ ಕಸ ಸುರಿಯುವುದರಿಂದ ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದು ಒಬ್ಬ ಉತ್ತಮ ಸಭ್ಯ ನಾಗರಿಕನ ಕೆಲಸವಲ್ಲ.

ಪ್ರತಿ ನಗರದ ಪುರಸಭೆ/ನಗರಸಭೆ/ಮಹಾನಗರಪಾಲಿಕೆಯವರು ನಿಗದಿ-ಪಡಿಸಿರುವ ಸ್ಥಳಗಳಲ್ಲಿ ಕಸದ ಚೀಲವನ್ನು ಹಾಕಬೇಕೇ ಹೊರತು ತನಗೆ ಇಷ್ಟ ಬಂದ ಕಡೆ ಹಾಕಲು ಮುಂದಾಗಬಾರದು. ಇಷ್ಟೇ ಅಲ್ಲ, ಅನೇಕ ಪ್ರಾಥಮಿಕ ಪೌರ ಕರ್ತವ್ಯಗಳು ಇರುತ್ತವೆ. ಸಿಕ್ಕ ಸಿಕ್ಕ ಕಡೆ ಕಾಗದ ಎಸೆಯುವುದು, ಉಗುಳುವುದು, ಸಿಂಬಳ ತೆಗೆಯುವುದು ಮುಂತಾದ ಅನಾಗರಿಕ ಕೆಲಸಗಳನ್ನು ವಿದ್ಯಾವಂತರೇ ಮಾಡುತ್ತಿರುವುದನ್ನು ಲೇಖಕರು ಗುರುತಿಸಿದ್ದಾರೆ.

ವಾಹನಗಳಲ್ಲಿ ಚಲಿಸುತ್ತಿರುವಾಗ ಶಿಷ್ಟಾಚಾರವನ್ನು ಮರೆತು ಕಸವನ್ನು ಎಸೆಯುವುದು ಇಂದು ಸರ್ವೇಸಾಮಾನ್ಯವಾಗಿದೆ. ಹಾಗೆಯೇ ದ್ವಿಚಕ್ರ ವಾಹನ, ಕಾರು ಮತ್ತು ಬಸ್ಸುಗಳಲ್ಲಿ ಹೋಗುತ್ತಿರುವವರು ತಕ್ಷಣವೇ ಪಕ್ಕಕ್ಕೆ ತಿರುಗಿ ಕೆಮ್ಮಿ ಕ್ಯಾಕರಿಸಿ ಉಗಿಯುತ್ತಾರೆ. ಇದರಿಂದ ಅದೇ ಹಾದಿಯಲ್ಲಿ ನಡೆಯುತ್ತಿರುವ ಶ್ರೀಸಾಮಾನ್ಯನ ಮೇಲೆ ಬಿದ್ದು ಮುಜುಗರಪಡುವ ಪ್ರಸಂಗ ಎದುರಾಗುತ್ತದೆ.

ಉಗುಳುವುದು ಎಲೆ-ಅಡಿಕೆ ಜರದಾ ಹಾಕಿದರೆ ಮುಗಿಯಿತು. ಉಗಿಸಿಕೊಂಡವನ ಬಟ್ಟೆ ಎಲ್ಲಾ ಹೊಲಸಾಗುತ್ತದೆ ಮತ್ತು ಆತನ ಕೆಲಸ ಕಾರ್ಯಗಳಿಗೆ ನಾವು ಅಡ್ಡಿಪಡಿಸಿದಂತೆ ಆಗುತ್ತದೆ. ಇಂಥವುಗಳು ನಿಜವಾಗಿಯೂ ಪ್ರಜ್ಞಾವಂತ ನಾಗರಿಕ ಮಾಡುವ ಕೆಲಸವಲ್ಲ ಎಂದು ಲೇಖಕರು ತಿಳಿಸುತ್ತಾರೆ.

ಇಂದು ನಾವು ಯಾವುದೇ ಸರ್ಕಾರಿ ಕಚೇರಿ, ಖಾಸಗಿ ಕಚೇರಿಗಳ ಮೆಟ್ಟಿಲುಗಳು, ಗೋಡೆಗಳ ಮೂಲೆಗಳನ್ನು ಗಮನಿಸಿದರೆ ಅಲ್ಲಿ ಕೆಂಪಗೆ ಉಗಿದಿರುವ ಕಾರಣದಿಂದ ಗೋಡೆ, ನೆಲ, ಎಲ್ಲಾ ಅಸಹ್ಯಕರವಾಗಿರುವ ದೃಶ್ಯ ಕಣ್ಣಿಗೆ ರಾಚುತ್ತದೆ. ಇದಕ್ಕೆ ಉಪಾಯವೆಂಬಂತೆ ಉಗಿಯುವ ಜಾಗ ಮತ್ತು ಮಲ-ಮೂತ್ರ ಮಾಡುವ ಜಾಗಗಳಲ್ಲಿ ದೇವರ ಭಾವಚಿತ್ರವನ್ನು ಹಾಕುವುದರ ಮೂಲಕ ಧಾರ್ಮಿಕ ಪಾಪಪ್ರಜ್ಞೆಯ ಭಯದಿಂದಾದರೂ ಸ್ವಚ್ಛ ಪರಿಸರಪ್ರಜ್ಞೆ ಬೆಳೆಸಿಕೊಳ್ಳಲಿ ಎನ್ನುವ ಸಲಹೆ ಕೆಲವರದು.

ಬಸ್ ನಿಲ್ದಾಣಗಳಲ್ಲಿ ಪೌರಪ್ರಜ್ಞೆ ಇಲ್ಲದೆ ಇಡೀ ಪರಿಸರವನ್ನು ಕಲುಷಿತ-ಗೊಳಿಸಿರುವುದನ್ನು ಸಾಮಾನ್ಯವಾಗಿ ಎಲ್ಲರೂ ಗಮನಿಸಿರಬಹುದು. ಲೇಖಕರು ಗುರುತಿಸಿರುವಂತೆ ಕೆಲವರು ಉದ್ದೇಶಪೂರ್ವಕವಾಗಿಯೇ ರೈಲ್ವೆ ನಿಲ್ದಾಣದಲ್ಲಿ ನಿಂತಾಗ ಮಲಮೂತ್ರ ವಿಸರ್ಜನೆ ಮಾಡುತ್ತಾರೆ. ಇದರಿಂದ ಇಡೀ ಪರಿಸರ ಮಲೀನಗೊಂಡು

ನೊಣದ ತಾಣವಾಗಿ ದುರ್ಗಂಧ ಬೀರುತ್ತದೆ. ಇಡೀ ನಿಲ್ದಾಣವೇ ವಾಯುಮಾಲಿನ್ಯ-ದಿಂದ ಕೂಡಿರುತ್ತದೆ.

ಜನರು ಶುಚಿತ್ವದ ಪ್ರಜ್ಞೆ ಬೆಳೆಸಿಕೊಳ್ಳುವುದು ಒಂದು ಕಡೆಯಾದರೆ ಮತ್ತೊಂದು ಬದಿಯಲ್ಲಿ ರೈಲ್ವೆ ಅಧಿಕಾರಿಗಳು ರೈಲ್ವೆ ನಿಲ್ದಾಣದಲ್ಲಿ ಮಲ-ಮೂತ್ರಗಳು ಎಲ್ಲೆಂದರಲ್ಲಿ ಬೀಳದಂತೆ ಸೂಕ್ತ ಡಬ್ಬಗಳಲ್ಲಿ ಬೀಳುವಂತೆ ವಿನ್ಯಾಸಮಾಡುವುದರ ಮೂಲಕ ಕಿಡಿಗೇಡಿಗಳ ಪ್ರಯತ್ನಕ್ಕೆ ತಡೆಹಾಕಬೇಕು ಎನ್ನುತ್ತಾರೆ ಲೇಖಕರು. ಈ ವ್ಯವಸ್ಥೆ ವಿದೇಶಗಳಲ್ಲಿ ಇದೆ ಎಂದು ಲೇಖಕರು ಉಲ್ಲೇಖಿಸುತ್ತಾರೆ. ಇಡೀ ನಿಸರ್ಗವೇ ತೆರೆದ ಶೌಚಾಲಯ ಎಂದು ಭಾವಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಡುತ್ತಾರೆ. ಬಸ್ಸು, ರೈಲ್ವೆ ನಿಲ್ದಾಣಗಳಲ್ಲಿ ಈ ಕತೆಯಾದರೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಸಹಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದು ಹಾಗೂ ಸಭ್ಯ ನಡವಳಿಕೆಯಿಂದ ಸಹಪ್ರಯಾಣಿಕರ ಜೊತೆ ವ್ಯವಹರಿಸಬೇಕೆಂದು ಲೇಖಕರು ಹೇಳುತ್ತಾರೆ. ವಾಂತಿ ಮಾಡುವ ಸಂದರ್ಭದಲ್ಲಿ ಎಚ್ಚರಿಕೆಯ ಜಾಗ್ರತೆ ಅಗತ್ಯ. ಇನ್ನೂ ನಗರಗಳಲ್ಲಿ ಜನಸಂಚಾರ ಸ್ವಲ್ಪ ವಿರಳವಾಗುವ ರಾತ್ರಿಗಳಲ್ಲಿ ಕಂಡಕಂಡಲ್ಲಿ ಮಲಮೂತ್ರ ವಿಸರ್ಜನೆ ಮಾಡುತ್ತಾರೆ. ಇದು ಸುಂದರ ನಗರವನ್ನು ಹಾಳುಮಾಡುವುದಿಲ್ಲವೆ ಎಂದು ಪರಿಸರ ಸ್ನೇಹಿಗಳಿಗೆಲ್ಲಾ ಕಾಡುವ ಪ್ರಶ್ನೆ. ದೇವಾಲಯದ ಬದಿಗಳಲ್ಲಿಯೇ ಶೌಚಮಾಡುವುದು ಎಷ್ಟು ಸರಿ? ಎಂದು ಉದಾಹರಣೆಯನ್ನು ಚಿತ್ರದೊಂದಿಗೆ ಉಲ್ಲೇಖಿಸುತ್ತಾರೆ.

"ಒಂದು ಅಂದಾಜಿನ ಪ್ರಕಾರ ಕರ್ನಾಟಕ ರಾಜ್ಯದ ಹಳ್ಳಿಗಳ ಶೇ. ೭೨ ಭಾಗದ ಜನಸಂಖ್ಯೆಗೆ ಶೌಚಾಲಯಗಳಿಲ್ಲ ಎಂದು ಪತ್ರಿಕೆಯ ವರದಿಯನ್ನು ಉಲ್ಲೇಖ ಮಾಡುತ್ತಾ ಇವರುಗಳಿಗೆ ಬಯಲುಗಳೇ ಶೌಚಾಲಯವಾಗಿ ಪರಿವರ್ತಿತವಾಗುತ್ತಿರುವುದು ನಾಗರಿಕರು ಮಾಡುವ ಕೆಲಸವಲ್ಲ ಎನ್ನುತ್ತಾರೆ ಲೇಖಕರು."

ಸರ್ಕಾರ ಮತ್ತು ಗ್ರಾಮಪಂಚಾಯಿತಿಗಳ ಪೌರಪ್ರಜ್ಞೆಯಿಂದ ತಕ್ಷಣವೇ ಕಾರ್ಯಪ್ರವೃತ್ತರಾಗುವುದು ಎಲ್ಲರ ಆರೋಗ್ಯಕ್ಕೂ ಒಳ್ಳೆಯದು ಎಂಬುದು ಲೇಖಕರ ಚಿಂತನೆ.

ಲೇಖಕರ ಪ್ರಕಾರ ಮಾನವ ತನ್ನ ಅಗತ್ಯಕ್ಕಿಂತ ಹೆಚ್ಚು ವಸ್ತುಗಳನ್ನು ಇಟ್ಟು-ಕೊಳ್ಳುವುದು ಸರಿಯಿಲ್ಲ. ಒಬ್ಬರು ನಾಲ್ಕೈದು ಕಂಪ್ಯೂಟರ್‌ಗಳು, ಕಾಲ್ಕ್ಯುಲೇಟರ್‌ಗಳು, ಮೂರ್‍ನಾಲ್ಕು ಟಿ.ವಿ.ಗಳು, ಸೆಲ್‌ಫೋನ್‌ಗಳು, ಪ್ರಿಂಟರ್‌ಗಳು ಇತ್ಯಾದಿ ವಸ್ತುಗಳನ್ನು ಬಳಸುವುದು ಎಷ್ಟು ಸರಿ! ಎನ್ನುವ ಪ್ರಶ್ನೆಯನ್ನು ಓದುಗರ ಮುಂದಿಡುತ್ತಾರೆ. ಅರ್ಥಂಬರ್ಥ ಉಪಯೋಗಿಸಲಾದ E – ಕ್ಷೇಪ್ಯಗಳು ಪರಿಸರವನ್ನು ಹಾಳುಮಾಡುತ್ತವೆ ಎನ್ನುವ ಆತಂಕ ಇಲ್ಲಿ ವ್ಯಕ್ತವಾಗಿದೆ. ಇವುಗಳಿಂದ ವಿಷಾನಿಲಗಳು, ಭಾರಲೋಹಗಳು

ಮತ್ತು ಮಾನವನಿಗೆ ನಾನಾ ಕಾಯಿಲೆ ತರಿಸುವ ರಸಾಯನಿಕಗಳು ಇರುತ್ತವೆ. ಆದ್ದರಿಂದ ಇವುಗಳ ಮಿತೋಪಯೋಗವೇ ಲೇಖಕರ ಪ್ರಕಾರ 'ಪೌರಪ್ರಜ್ಞೆ'.

ಇಂದಿನ ಬಹುಪಾಲು ವಾಚ್‌ಗಳಲ್ಲಿ ಲಿಥಿಯಂ, ಕ್ಯಾಡ್ಮಿಯಂ, ಬ್ಯಾಟರಿ–ಗಳಿರುತ್ತವೆ. ಇದನ್ನು ಹೊರ ಎಸೆದಾಗ, ಆ ಭಾರಲೋಹಗಳು ಆಹಾರ ಸರಪಣಿ ಮೂಲಕ ಮನುಷ್ಯನಿಗೆ ಹಿಂದಿರುಗಿ ಆತನ ಆರೋಗ್ಯವನ್ನೇ ಹಾಳು ಮಾಡುವ ಖಾಯಿಲೆಯ ಭೀಕರ ಸ್ವರೂಪವನ್ನು ಇಲ್ಲಿ ವಿವರಿಸಿದ್ದಾರೆ. ಮುಂದಿನ ಬಾರಿ ಕೈಗಡಿಯಾರ ಕೊಳ್ಳುವಾಗ ಕೀಕೊಟ್ಟು ಚಲಿಸುವುದನ್ನು ಪಡೆಯುವುದರ ಮೂಲಕ ಪರಿಸರ ಉಳಿಸಿ ಎನ್ನುವ ಸಂದೇಶವನ್ನಿಲ್ಲಿ ಕಾಣಬಹುದು.

ಇತ್ತೀಚಿನ ದಿನಗಳಲ್ಲಿ ನಮ್ಮ ಪರಿಸರವನ್ನು ಕಾಡುತ್ತಿರುವುದರಲ್ಲಿ 'ಪ್ಲಾಸ್ಟಿಕ್' ಭೂತವೂ ಒಂದು. ವಿದೇಶಗಳಲ್ಲಿ ಸಿಗುವಂತಹ, ಅಂದರೆ ಕೊಳೆತು ಕರಗಿ ಹೋಗಬಲ್ಲ ಪ್ಲಾಸ್ಟಿಕ್‌ಗಳು ನಮ್ಮಲ್ಲಿ ಇನ್ನೂ ಬಂದಿಲ್ಲವೆನ್ನುವ ಆತಂಕ ಲೇಖಕರದ್ದು. ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ಕೊಳೆಯುವುದಿಲ್ಲ. ಸುಟ್ಟರೆ ಅದರಿಂದ ವಿಷಾನಿಲ ಸೂಸಿ ಇಡೀ ಪರಿಸರ–ವನ್ನು ಸೇರಿಸಿ ಅನೇಕ ಬಗೆಯ ಮಾರಕ ಕಾಯಿಲೆಗೆ ಕಾರಣವಾಗುತ್ತದೆ. ಹಿಂದಿನಂತೆ ಬಟ್ಟೆಯ ಕೈಚೀಲ ಬಳಸುವುದು ಕ್ಷೇಮ. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ಪ್ಲಾಸ್ಟಿಕ್ ಬೇಡ ಎಂದು ಹೇಳುವುದು ಪೌರಪ್ರಜ್ಞೆ ಎನ್ನುತ್ತಾರೆ ಲೇಖಕರು.

ಹಾಗೆಯೇ ಪರಿಸರದಲ್ಲಿ ಮಾನಕವನಿಗಳಂತೆ ನಿಂತು ನಮಗೆ ಶುದ್ಧಗಾಳಿ, ನೆರಳು ಕೊಡುವ ಮರಗಳನ್ನು ಕಡಿಯಬಾರದು. ಪವಿತ್ರ ವೃಕ್ಷಗಳೆಂದು ಭಾವಿಸಬೇಕು. ಕಡಿಯಬೇಕಾದ ಅನಿವಾರ್ಯತೆ ಎದುರಾದರೆ ಮಾತ್ರ ಒಂದಕ್ಕೆ ಹತ್ತು ಗಿಡಗಳನ್ನು ನೆಟ್ಟು ಪರಿಸರ ಸಮತೋಲವನ್ನು ಕಾಪಾಡಬೇಕು ಎಂಬುದು ಇವರ ಸಲಹೆ ಮೌಲ್ಯ–ಯುತವಾದದ್ದು.

ನಮ್ಮ ಪೂರ್ವಿಕ ಋಷಿಮುನಿಗಳು ಬರೆದಿರುವ ಈ ಕೆಳಗಿನ ಶ್ಲೋಕಗಳು ಪರಿಸರಪ್ರಜ್ಞೆ ಮೂಡಿಸುತ್ತವೆ.

"ಉಪ್ತೋಯೇನ ವಟೋ ಭೂವತಾ ಪುತ್ರಪಾತ್ರ ಪ್ರಪಾತ್ರಕೈಃ।
ಸಂತಾನ್ಪೈಃ ನಂದಯತ್ಯೇನಂ ವಪ್ತಾರಂ ಚನ ಸಂಶಯಃ॥

ಅಂದರೆ ಯಾವ ವ್ಯಕ್ತಿ ಆಲದ ಮರ ಬೆಳೆಸುವನೋ ಆ ವ್ಯಕ್ತಿ ಭೂಮಿಯಲ್ಲಿ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳುಗಳ ಸಂತಾನದಿಂದ ಆನಂದದಿಂದಿರುವುದರಲ್ಲಿ ಸಂದೇಹವಿಲ್ಲ ಎಂದರ್ಥ. ನಮ್ಮ ಋಷಿಮುನಿಗಳಲ್ಲಿದ್ದಂತಹ ಪರಿಸರ ಕಾಳಜಿಯನ್ನು ಮತ್ತು ಪೌರಪ್ರಜ್ಞೆಯನ್ನು ನಾವಿಲ್ಲಿ ಗಮನಿಸಬಹುದು. ಹಾಗೇ ಇನ್ನೂ ಅನೇಕ ಶ್ಲೋಕಗಳನ್ನು ಲೇಖಕರು ಉಲ್ಲೇಖಿಸಿದ್ದಾರೆ.

"ಇದರಿಂದ ಜಾಗತಿಕ ಉಷ್ಣೀಕರಣ ಮತ್ತು ಹವಾಮಾನ ಬದಲಾವಣೆಯ ಈ ಕಾಲದಲ್ಲೂ ಮೇಲಿನ ಶ್ಲೋಕದಷ್ಟೇ ಮರಗಳನ್ನು ರಕ್ಷಿಸಿದರೆ ಅವು ನಮ್ಮನ್ನು ರಕ್ಷಿಸುತ್ತವೆ "ವೃಕ್ಷೋರಕ್ಷತಿ ರಕ್ಷಿತಃ" ಹೆಚ್ಚು ಮರಗಳನ್ನು ನೆಡುತ್ತಾ ಹೋಗುವುದು ಮತ್ತು ಕಾಡುಗಳ ಸಂರಕ್ಷಣೆ ಮಾಡುವುದೇ ಪೌರಪ್ರಜ್ಞೆ ಹಾಗೂ ಪರಿಸರಪ್ರಜ್ಞೆ"[೩೭] ಎಂದು ಲೇಖಕರು ಉಲ್ಲೇಖಿಸುತ್ತಾರೆ.

ಭಾರತದಲ್ಲಿ ಇಂದು ಕಾಂಕ್ರೀಟ್, ಟಾರ್ ಹಾಗೂ ಸ್ವಯಂಚಾಲಕ ವಾಹನಗಳ ಕಾಡು ಹೆಚ್ಚಾಗುತ್ತಿದೆ ಎನ್ನುವ ಆತಂಕ ಲೇಖಕರದ್ದು. ಇಂಧನ ಸುಡುವುದರ ಮೂಲಕ ವಾತಾವರಣ ಕಲುಷಿತಗೊಳ್ಳುತ್ತಿರುವುದನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಇದಕ್ಕೆ ಪರಿಹಾರವೆಂದರೆ ವೈಯಕ್ತಿಕ ಸಾರಿಗೆಗೆ ಬದಲಾಗಿ ಸಾರ್ವಜನಿಕ ಸಾರಿಗೆ ಬಳಸಬೇಕೆಂಬ ಸಲಹೆಯನ್ನು ನೀಡುತ್ತಾರೆ. ಇದಲ್ಲದೇ ಪ್ರಾಣಿಗಳ ಬಗೆಗಿನ ಕಾಳಜಿಯನ್ನು ಲೇಖಕರು ಇಲ್ಲಿ ತಿಳಿಸಿದ್ದಾರೆ.

"ಯಸ್ಮಿನ್ ಸರ್ವಾಣಿ ಭೂತಾನಿ ಹ್ಯಾತ್ಮತ್ವೇವಿಜಾನತಃ"[೩೮]

ಅಂದರೆ ಎಲ್ಲಾ ಪ್ರಾಣಿಗಳನ್ನು ಆತ್ಮನೆಂದೇ ತಿಳಿದುಕೊಳ್ಳಬೇಕು ಎಂದು ಹೇಳುವುದರ ಮೂಲಕ ಸಕಲ ಪ್ರಾಣಿಗಳಿಗೆ ಲೇಸನ್ನೇ ಬಯಸುವುದು ಬಸವಣ್ಣನ ವಚನಗಳಲ್ಲಿದೆ. ಈ ಸಂದರ್ಭದಲ್ಲಿ ಇದನ್ನು ಬಳಸಿಕೊಂಡಿರುವುದು ಸಮಯೋಚಿತ.

ಪ್ರಾಣಿಗಳ ಶರೀರಗಳೂ ನಮ್ಮಂತೆಯೇ ಪಂಚಭೂತಗಳಿಂದಾಗಿವೆ. ಅದಕ್ಕೂ ನಮ್ಮಂತೆಯೇ ಜ್ಞಾನೇಂದ್ರಿಯಗಳಿವೆ. ಆದ್ದರಿಂದ ಭೂಕಂದಾಯ ಬಹುಮುಖ್ಯ. ಇದಕ್ಕಾಗಿ "ಪೀಟ ಪ್ರಾಣಿ ದಯಾ ಸಂಸ್ಥೆ" **PETA** (People for Etnical Treatment of Animals) ಇದೆ. ಇದು ಪ್ರಾಣಿ ವ್ಯಕ್ತಿತ್ವ, ಪ್ರಾಣಿ ವಿಮೋಚನೆ ಹಾಗೂ ಪ್ರಾಣಿಹಕ್ಕುಗಳು ಇವುಗಳ ಬಗ್ಗೆ ಆಂದೋಲನ ನಡೆಸುತ್ತಿದೆ.

ಕರ್ನಾಟಕ ಸರ್ಕಾರ ಗೋಹತ್ಯೆ ನಿಷೇಧ ಕಾನೂನು ಜಾರಿಗೆ ತಂದರೆ ರೈತಸಂಘದವರು ವಿರೋಧಿಸುತ್ತಿರುವ ಕುರಿತು ಲೇಖಕರಿಗೆ ಅಸಮಾಧಾನವಿದೆ. ಬಾಬರ್, ಹುಮಾಯೂನ್, ಅಕ್ಬರ್, ಜಹಾಂಗೀರ್, ಹೈದರ್ ಆಲಿ ಮುಂತಾದವರು ಗೋಹತ್ಯೆ ಮಾಡುವವರಿಗೆ ಶಿಕ್ಷೆ ವಿಧಿಸುತ್ತಿದ್ದರು ಎನ್ನುವ ಮಾಹಿತಿಯನ್ನು ಲೇಖಕರು ಈ ಸಂದರ್ಭದಲ್ಲಿ ನೀಡಿದ್ದಾರೆ.

---

೩೭. ಪೌರಪ್ರಜ್ಞಾಯನ, ಪರಿಸರ ಪೌರಪ್ರಜ್ಞೆ, ಪು. ೨೦೮

೩೮. ಅಪರೋಕ್ಷಾನುಭೂತಿ – ಶ್ರೀ ಶಂಕರಾಚಾರ್ಯರು

"ಆಸ್ಟ್ರೇಲಿಯಾದಲ್ಲಿ ಕುರಿಗಳೊಡನೆ ಮೇವಿಗೆ ಸ್ಪರ್ಧಿಸುತ್ತವೆ ಎನ್ನುವ ಕಾರಣಕ್ಕಾಗಿ ೬,೫೦,೦೦೦ ಒಂಟೆಗಳನ್ನು ಸಾಯಿಸುವುದು ಅಮಾನವೀಯ"[೩೯] ಲೇಖಕರು ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ಅಮಾನವೀಯವಾದ, ಪ್ರಾಣಿಹಿಂಸೆ ಕುರಿತಾದ ವರದಿಯನ್ನು ಉಲ್ಲೇಖಿಸಿ ಓದುಗರ ಗಮನಸೆಳೆಯುತ್ತಾರೆ.

"ವೈಲ್ಡ್ ಲೈಫ್ ಪ್ರೊಟೆಕ್ಷನ್ ಸೊಸೈಟಿ ಆಫ್ ಇಂಡಿಯಾ" ಕಳೆದ ೧೦ ವರ್ಷಗಳಲ್ಲಿ ದೇಶದ ಕಾಡುಗಳಲ್ಲಿ ಹತ್ಯೆಯಾದ ಹುಲಿಗಳ ಪಟ್ಟಿಯನ್ನು ಲೇಖಕರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿ ಓದುಗರಲ್ಲಿ ಜಾಗೃತಿ ಮೂಡಿಸಿದ್ದಾರೆ.

ಬೆಳೆಗಳನ್ನು ರಕ್ಷಿಸಲು ರೈತರು ತಮ್ಮ ಭೂಮಿಗೆ ಹಾಕಿದ ವಿದ್ಯುತ್ ಬೇಲಿಗಳಿಂದ ಹಾಗೂ ಆನೆದಂತಕ್ಕಾಗಿ ಕಳ್ಳರು ಮಾಡಿದ ಹತ್ಯೆಯಿಂದ ಆನೆಗಳ ಸಂಖ್ಯೆ ಕ್ಷೀಣಿಸುತ್ತಿವೆ.

"ಇಂದು ನಮ್ಮ ಕರ್ನಾಟಕ ಅರಣ್ಯಗಳಲ್ಲಿರುವ ಆನೆಗಳ ಸಂಖ್ಯೆ ಅಂದಾಜು ೪,೫೦೦"[೪೦] ಎಂದು ಪತ್ರಿಕೆ ಉಲ್ಲೇಖಿಸಿದೆ.

ಸರ್ಕಸ್‌ಗಳಲ್ಲಿ ಆನೆ, ಹುಲಿ, ಸಿಂಹ, ಚಿರತೆ, ಕೋತಿ ಇನ್ನಿತರ ಪ್ರಾಣಿಗಳನ್ನು ಹಿಂಸೆಮಾಡಿ ಜನರಿಗೆ ಮನರಂಜನೆ ನೀಡುತ್ತಿರುವುದನ್ನು ಲೇಖಕರು ಉಲ್ಲೇಖಿಸುತ್ತಾರೆ.

ಕಾಲೇಜುಗಳ ಪ್ರಯೋಗಾಲಯದಲ್ಲಿ ಕತ್ತರಿಸಲಾಗುವ ಲಕ್ಷಾಂತರ ಕಪ್ಪೆ, ಮೀನು, ಇಲಿಗಳು, ಕೀಟಗಳ ಕುರಿತು ಲೇಖಕರಿಗೆ ಅಸಮಾಧಾನವಿದೆ. ಹಾಗೆ ಇವುಗಳ ಬಳಕೆ ನಿಲ್ಲಿಸಬೇಕು ಎಂಬುದು ಇವರ ಆಗ್ರಹ. ಇದಕ್ಕೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (UGC) ಕೈಜೋಡಿಸಬೇಕೆಂದು ಮತ್ತು ಕಾಲೇಜುಗಳು ತಾವೇ ಮುಂದಾಗಿ ಇವುಗಳನ್ನು ನಿಷೇಧಿಸಬೇಕು ಎಂಬ ಕರೆ ಇವರದು.

ಅರಣ್ಯದಲ್ಲಿ ನಡೆಯುವ ಅನೀತಿಯನ್ನು ಸ್ಪಷ್ಟಪಡಿಸುತ್ತಾ, 'ರಕ್ಷಕರೇ ಭಕ್ಷಕ'ರಾದ ಪ್ರಸಂಗವನ್ನು ತಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಅಂದರೆ ಅರಣ್ಯ ಕಾಯುವ ಅಧಿಕಾರಿ, ಸಿಬ್ಬಂದಿಗಳೇ ಪ್ರಾಣಿಹತ್ಯೆ ಮಾಡುವುದು ಎಷ್ಟು ಸರಿ? ಎಂದು ಮಾಧ್ಯಮಗಳಲ್ಲಿ ವರದಿಯಾಗಿದ್ದನ್ನು ಲೇಖಕರು ಉಲ್ಲೇಖಿಸುತ್ತಾರೆ. ಕರ್ನಾಟಕದ ಲೋಕಾಯುಕ್ತರು ಏಳು ಐ.ಎಫ್.ಎಸ್. ಅಧಿಕಾರಿಗಳ ಮೇಲೆ ಹಾಗೂ ೮೯ ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ದೋಷಪಟ್ಟಿ ತಯಾರಿಸಿದ್ದನ್ನು ಉಲ್ಲೇಖಿಸುತ್ತಾರೆ.

ಅಂಕಿಅಂಶಗಳ ಪ್ರಕಾರ, ಭಾರತದ ಭೂಭಾಗದಲ್ಲಿರುವ ಶೇ. ೨೧ರಷ್ಟು ಕಾಡುಗಳಲ್ಲಿ ಸುಮಾರು ಶೇ. ೪೦ರಷ್ಟು ಅರಣ್ಯ ಪ್ರದೇಶ ಅವನತಿ ಹೊಂದಿದೆ. ೯೩೬

---

೩೯. ಡೆಕನ್ ಕ್ರಾನಿಕಲ್ ಆಂಗ್ಲದೈನಿಕ ದಿನಾಂಕ ೧೦-೦೮-೨೦೦೯

೪೦. ವಿಜಯಕರ್ನಾಟಕ ದಿನಪತ್ರಿಕೆ, ದಿನಾಂಕ ೨-೨-೨೦೧೦

ಚ.ಕಿ.ಮೀ.ಗಳಷ್ಟು ಅರಣ್ಯ ಪ್ರದೇಶ ಕಡಿಮೆಯಾಗಿದೆ"[೪೧] ಎಂದು ಮಾಧ್ಯಮ ವರದಿ ಮಾಡಿದೆ. ರಾಷ್ಟ್ರೀಯ ಹಸಿರು ನಿಯೋಜನೆ ಮುಂದಿನ ೧೦ ವರ್ಷಗಳಲ್ಲಿ ಕಾಡುಗಳ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶಹೊಂದಿದೆ.

ಪತ್ರಿಕೆಗಳಲ್ಲಿ ವರದಿಯಾದ ಪ್ರಾಣಿಹತ್ಯೆ, ಮರಗಳ ನಾಶ, ಪರಿಸರಕ್ಕೆ ಹಾನಿತಂದಂತಹ ಅನೇಕ ಪ್ರಸಂಗಗಳನ್ನು ಲೇಖಕರು ಉಲ್ಲೇಖಿಸುತ್ತಾ ಓದುಗರಲ್ಲಿ ಪರಿಸರದ ಬಗ್ಗೆ ಆಸಕ್ತಿ ಮತ್ತು ಕರ್ತವ್ಯ ಪ್ರಜ್ಞೆ ಜಾಗೃತಗೊಳಿಸುವಲ್ಲಿ ಪ್ರಾಮಾಣಿಕ ಯತ್ನ ಮಾಡಿದ್ದಾರೆ.

ಮಹಾಭಾರತದ ಕಾಲದಿಂದಲೂ ನಮ್ಮಲ್ಲಿ ಕಾಳ್ಗಿಚ್ಚುಗಳು ಹೆಚ್ಚಾಗಿವೆ. ಬಹುಪಾಲು ಕಾಳ್ಗಿಚ್ಚುಗಳು ಕಿಡಿಗೇಡಿಗಳಿಂದ ಆಗಿವೆ. ಪ್ರತಿವರ್ಷವೂ ಇಂತಹ ಅನೇಕ ಆಕಸ್ಮಿಕಗಳು ಆಗುತ್ತಿದ್ದರೂ, ಸರ್ಕಾರ ಸೂಕ್ತ ಪರಿಹಾರೋಪಾಯಗಳನ್ನು ರೂಪಿಸುವುದು ಸಾಧ್ಯವಾಗಿಲ್ಲ. ಬೆಂಕಿ ಅಗುಳುಗಳು (Trencnes) ಹಾಗೂ ಅಗ್ನಿಶಾಮಕ ಪಡೆ, ಹೆಲಿಕಾಪ್ಟರುಗಳ ಅವಶ್ಯಕತೆ ಬಹುಮುಖ್ಯವಾಗಿ ಲಭ್ಯವಾಗಬೇಕಿದೆ.

ಕೆಲವರು ಮೂಢನಂಬಿಕೆಯಿಂದ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಅದೃಷ್ಟ ಬರುತ್ತದೆ, ಶ್ರೀಮಂತಿಕೆ ಕಾರಣಕ್ಕಾಗಿ, ಕಾಮೋದ್ದೀಪಕ, ಔಷಧಗುಣ ಇನ್ನೂ ಅನೇಕ ಮೂಢನಂಬಿಕೆಗಳಿಂದ ಪ್ರಾಣಿಗಳನ್ನು ಕೊಂದು ಅಕ್ರಮವಾಗಿ ಮಾರಾಟ ಮಾಡುವುದನ್ನು ಪಟ್ಟಿ ಸಮೇತ ಲೇಖಕರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕೃತಿಯಲ್ಲಿರುವ ಸಮತೋಲನವನ್ನು ಮಾನವ ಪೌರಪ್ರಜ್ಞೆ ಮತ್ತು ಪರಿಸರ ಪ್ರಜ್ಞೆಗಳ ಮೂಲಕ ಅರಿತುಕೊಳ್ಳಬೇಕು. ಗೂಬೆ ಮತ್ತು ನರಿಗಳನ್ನು ಬೇಟೆಯಾಡಿ ಅವುಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದರಿಂದ ಕೊಡಗಿನಲ್ಲಿ ಹೋದ ವರ್ಷ ಇಲಿ, ಹೆಗ್ಗಣಗಳ ಸಂಖ್ಯೆ ಹೆಚ್ಚಿ ಅವು ಸುಮಾರು ಶೇಕಡ ೪೦ರಷ್ಟು ಆಹಾರಧಾನ್ಯಗಳ ಸಂಗ್ರಹವನ್ನು ಹಾಳುಗೆಡವಿದೆ ಎಂದು ೨೦೦೯ರಲ್ಲಿ ಡೇನಿಯಲ್ ಗುರುತಿಸುತ್ತಾರೆ.

ಇಷ್ಟರ ನಡುವೆಯೂ ಮೈಸೂರಿನ ಕಾಳಯ್ಯ ಮತ್ತು ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ಅಮೇರಿಕನ್ನರಾದ ಲೆಸ್ಲೀರಾಬಿನ್ಸ್ ಅವರು ಬೀದಿಬದಿಯ ಪ್ರಾಣಿಗಳ ಸೇವೆ ಮಾಡುತ್ತಿರುವುದನ್ನು ಲೇಖಕರು ಉಲ್ಲೇಖಿಸುತ್ತಾರೆ. ಪ್ರಾಣಿಗಳನ್ನು ಪ್ರೀತಿಯಿಂದ ಹಾಗೂ ಗೌರವದಿಂದ ನೋಡಿಕೊಳ್ಳಬೇಕೆಂದು ಭಾಗವತದಲ್ಲಿನ ಈ ಕೆಳಗಿನ ಶ್ಲೋಕ ಹೇಳುತ್ತದೆ.

---

೪೧. ಡೆಕನ್ ಕ್ರಾನಿಕಲ್ ಆಂಗ್ಲದೈನಿಕ ದಿನಾಂಕ ೦೧-೧೨-೨೦೦೯

"ಅಥಮಾಂ ಸರ್ವಭೂತೇಷು ಭೂತಾತ್ಮಾನಂ ಕೃಪಾಲಯಮ್
ಅರ್ಹಯೇದ್ದಾನಮಾನಾಭ್ಯಾಂ ಮೈತ್ರ್ಯಾಭಿನ್ನೇನ ಚಕ್ಷುಷಾ॥"[೪೨]

ಅಂದರೆ ಎಲ್ಲಾ ಜೀವಿಗಳನ್ನು ನನ್ನ ಆಲಯವನ್ನಾಗಿ ಮಾಡಿಕೊಂಡು ಅವುಗಳ ಆತ್ಮಗಳಾಗಿ ನಾನು ನೆಲೆಸಿರುವೆನು. ಆದ್ದರಿಂದ ಅವುಗಳನ್ನು ತನ್ನಂತೆಯೇ ಎಂದು ಭಾವಿಸುತ್ತಾ, ಅತ್ಯಂತ ಪ್ರೀತಿಯಿಂದಲೂ ಗೌರವದಿಂದಲೂ ದಾನದ ಮೂಲಕವೂ ಪೂಜಿಸಬೇಕು ಎಂದರ್ಥ. ಮನುಷ್ಯನಷ್ಟೇ ಜೀವಿಸುವ ಹಕ್ಕು ಪ್ರಾಣಿಗಳಿಗೂ ಇವೆ ಎಂಬುದನ್ನಿಲ್ಲಿ ಗುರುತಿಸಬಹುದು.

ಮೃಗಾಲಯದ ಪ್ರಾಣಿಗಳನ್ನು ದತ್ತು ತೆಗೆದುಕೊಳ್ಳುವುದು ಪೌರಪ್ರಜ್ಞೆ, ಶ್ರೀರಂಗಪಟ್ಟಣದ ಮಹದೇವಪುರದ ಬಂಜರಿನಲ್ಲಿ ಇಸ್ಕಾನ್‌ನ ಜಯಚೈತನ್ಯ ಪ್ರಭು ಮತ್ತು ಗುಜರಾತಿನ ಕಚ್‌ಭಾಗದ ರಣ್ ಒಂದು ಉಪ್ಪು ಮಿಶ್ರಿತ ಬಂಜರು ಭೂಮಿಯು ನಂದನವಾದ ಉದಾಹರಣೆಯನ್ನು ಲೇಖಕರು ಈ ಸಂದರ್ಭದಲ್ಲಿ ಉಲ್ಲೇಖಿಸುತ್ತಾರೆ.

"ಭಾರತವನ್ನು ಹಸಿರುಗೊಳಿಸುವ ಮಿಷನ್ ೪೪ ಸಾವಿರ ಕೋಟಿ ರೂ. ಖರ್ಚುಮಾಡುವ ಯೋಜನೆ ಇದೆ"[೪೩] ಮುಂದಿನ ಹತ್ತು ವರ್ಷಗಳಲ್ಲಿ ೧೦ ಮಿಲಿಯನ್ ಹೆಕ್ಟೇರ್‌ನಷ್ಟು ಪ್ರದೇಶವನ್ನು ಹೆಚ್ಚುವರಿ ಅರಣ್ಯೀಕರಣ ಮಾಡುವುದರಿಂದ ಈಗಿರುವ ಅರಣ್ಯವನ್ನು ದುಪ್ಪಟ್ಟುಗೊಳಿಸಲಾಗುವುದು ಎಂದು ಕೇಂದ್ರ ಪರಿಸರ ಹಾಗೂ ಅರಣ್ಯ ಖಾತೆ ಸಚಿವ ಶ್ರೀಜೈರಾಂ ರಮೇಶ್ ಹೇಳಿದ್ದಾರೆ".

ಈ ನಡುವೆ ಅನೇಕ ಸಂಘಸಂಸ್ಥೆಗಳು ಸಾಮೂಹಿಕ ಗಿಡನೆಡುವ ಕಾರ್ಯಕ್ರಮದ ಬಗ್ಗೆ ಲೇಖಕರು ಮಾಹಿತಿ ಸಂಗ್ರಹಿಸಿದ್ದಾರೆ.

"ವೃಕ್ಷೋರಕ್ಷತಿ ರಕ್ಷಿತಃ" ಹೆಚ್ಚು ಮರಗಳನ್ನು ನೆಡುತ್ತಾ ಹೋಗುವುದು ಮತ್ತು ಕಾಡುಗಳ ಸಂರಕ್ಷಣೆ ಮಾಡುವುದೇ ಪೌರಪ್ರಜ್ಞೆ ಹಾಗೂ ಪರಿಸರಪ್ರಜ್ಞೆ ಹಾಗೂ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸುವ ಔಚಿತ್ಯ ಕುರಿತು ಪ್ರಜ್ಞೆ ಮೂಡಿಸುತ್ತಾರೆ.

ಒಂದು ಅಂದಾಜಿನ ಪ್ರಕಾರ ದೇಶದಲ್ಲಿ ೮೭೦೦ ಪರವಾನಗಿ ಪಡೆದ ಗಣಿಗಳಿವೆ. ಆದರೆ ೧೫,೦೦೦ ಅಕ್ರಮ ಗಣಿಗಳಿವೆ. ಇವುಗಳಿಂದ ದೇಶದ ಸಂಪತ್ತು ಲೂಟಿಯಾಗುತ್ತದೆ. ರಸ್ತೆ ಅಗಲೀಕರಣಕ್ಕಾಗಿ ಸಾಲುಮರಗಳನ್ನು ಕಡಿಯುವುದರಿಂದ ವೃಕ್ಷಗಳ ಸಂತತಿ ನಾಶವಾಗುತ್ತದೆ. ಹುಬ್ಬಳ್ಳಿ, ಅಂಕೋಲ, ರೈಲುಮಾರ್ಗ ಉತ್ತರ

೪೨. ಭಾಗವತ ೨,೨೯,೨೭

೪೩. ವಿಜಯಕರ್ನಾಟಕ ದೈನಿಕ, ದಿನಾಂಕ ೧೩-೭-೨೦೧೦

ಕನ್ನಡದ ಪಶ್ಚಿಮಘಟ್ಟಗಳ ೭೨೦ ಹೆಕ್ಟೇರ್‌ಗಳಷ್ಟು ಅರಣ್ಯಪ್ರದೇಶದ ೪ ಲಕ್ಷ ಮರಗಳು ನಾಶವಾಗುತ್ತದೆ ಎಂಬ ಅಂದಾಜಿದೆ.

ಹೀನ ಸ್ಥಿತಿಯಲ್ಲಿರುವ ಅರಣ್ಯಗಳ ಸುಧಾರಣೆಗೆ ರಾಜ್ಯಗಳಿಗೆ ೧೦೦೦ ಕೋಟಿ ರೂ.ಗಳನ್ನು ಕೊಟ್ಟು ಕಾಡು ಬೆಳೆಸುವ ಯೋಜನೆ (CAMPA) ಜಾರಿಗೆ ಬರಬೇಕು. ಕೈಗಾರಿಕಾ ಸಂಸ್ಥೆಗಳು ಮರಗಳನ್ನು ಬೆಳಸಿ, ಜೈವಿಕ ವೈವಿಧ್ಯ ಉಳಿಸುವುದರಲ್ಲಿ ಸಹಕರಿಸಬೇಕು.

ಭಾರತದಲ್ಲಿ ಶೇ. ೯೯ರಷ್ಟು ಕಾಡ್ಗಿಚ್ಚು ಸಂಭವಿಸುವುದು ಕಿಡಿಗೇಡಿಗಳಿಂದ. ಪೌರಪ್ರಜ್ಞೆಯಿಂದ ಈ ಕೆಲಸ ನಿಲ್ಲಬೇಕು. ಹಾಗೆಯೇ ಪೋಪರು ನೀಲಗಿರಿ ಬೆಟ್ಟಗಳ ಶೋಲ ಅರಣ್ಯಗಳ ಸುತ್ತ ಹುಲ್ಲುಗಾವಲಿನ ಅಭಿವೃದ್ಧಿಗೋಸ್ಕರ ವಾರ್ಷಿಕವಾಗಿ ಬೆಂಕಿ ಇಡುತ್ತಿದ್ದರು.

ಲೇಖಕರು ಕಾಡು ಹಾಳಾಗದಂತೆ ಎಚ್ಚರಿಕೆ ವಹಿಸಲು ಅರಣ್ಯ ಇಲಾಖೆಗೆ ೬ ಅಮೂಲ್ಯ ಸಲಹೆಗಳನ್ನು ಕೃತಿಯಲ್ಲಿ ನೀಡಿದ್ದಾರೆ.

ಮೈಸೂರಿನಲ್ಲಿ ಕರ್ನಾಟಕ ರತ್ನ, ನಾಡೋಜ ದೇ.ಜ.ಗೌ ಮತ್ತು ಕೃತಿಯ ಲೇಖಕ ಡಾ. ಎಸ್.ಎನ್.ರಾಮಸ್ವಾಮಿ ಒಂದು ಲಕ್ಷ ಮರಗಿಡಗಳನ್ನು ನೆಡೆಸಿದ್ದನ್ನು ಕೃತಿಯಲ್ಲಿ ಉಲ್ಲೇಖಿಸಿ ಓದುಗರಲ್ಲಿ ಸಸ್ಯಗಳ ಬಗ್ಗೆ ಪ್ರೀತಿ ಬರುವಂತೆ ಮಾಡಿದ್ದಾರೆ.

ಎಂಡೋಸಲ್ಫಾನ್ ಕಥೆ

ಕರ್ನಾಟಕದ ಗೇರು ಅಭಿವೃದ್ಧಿ ನಿಗಮಕ್ಕೆ ೮೦೦ ಹೆಕ್ಟೇರ್ ಗೇರು ತೋಟವಿದೆ. ೧೯೮೩ರಿಂದ ೨೦೦೦ದವರೆಗೆ ತೋಟದಲ್ಲಿ ಪೌರಪ್ರಜ್ಞೆ ಮತ್ತು ಪೂರ್ವಪರ ಜ್ಞಾನವಿಲ್ಲದೆ ಹೆಲಿಕಾಪ್ಟರನ್ನು ಉಪಯೋಗಿಸಿ ಕೀಟನಾಶಕವನ್ನು ಸಿಂಪಡಿಸಿತು. ಇದರಿಂದಾಗಿ ಹುಳುಗಳು ಮಾತ್ರವಲ್ಲ, ಸನಿಹದಲ್ಲಿದ್ದ ಕಪ್ಪೆಗಳೂ ಸತ್ತವು. ಹಳ್ಳಿಯವರು ಮೀನು ಹಿಡಿಯಲು ಇದನ್ನೇ ಉಪಯೋಗಿಸಿದರು. ಈ ನೀರನ್ನು ಕುಡಿದ ಸಾಂಬಾರ್ ಮತ್ತು ಮಚ್ಚೆ ಜಿಂಕೆಗಳೂ ಸತ್ತವು. ಕೇರಳ, ಕಾಸರುಗೋಡಿನಲ್ಲೆಲ್ಲಾ ಜನರಿಗೆ ತೊಂದರೆಯಾಗಿರುವುದು ಕಂಡುಬಂತು. ಹೀಗಾಗಿ ೨೦೦೦ರಲ್ಲಿ ಕೀಟನಾಶಕ ಸಿಂಪಡಿಸುವುದನ್ನು ನಿಲ್ಲಿಸಲಾಯಿತು.

ಎಂಡೋಸಲ್ಫಾನ್ ಉಪಯೋಗದಿಂದ ಅನೇಕ ಜನ ಶಾಶ್ವತವಾಗಿ ಅಂಗವಿಕಲರಾದರು. ಸರ್ಕಾರ ಇವರಿಗೆ ಪರಿಹಾರ ನೀಡಿ ಕೈತೊಳೆದುಕೊಂಡಿತ್ತು. ಕೇರಳದಲ್ಲಿ ನಡೆಯುತ್ತಿರುವ ಈ ಬೆಳವಣಿಗೆ ಇಡೀ ದೇಶದ ಗಮನಸೆಳೆಯುತ್ತದೆ.

"ಕರ್ನಾಟಕದಲ್ಲಿ ಎಂಡೋಸಲ್ಫಾನ್ ವಿರುದ್ಧ ಚಳವಳಿ ತೀವ್ರಗೊಳ್ಳುತ್ತಿದೆ. ಕರ್ನಾಟಕ ಸರಕಾರದ ಸಚಿವೆ ಮಾನ್ಯ ಶೋಭಾ ಕರಂದ್ಲಾಜೆಯವರು ವಿಶೇಷ ಆಸಕ್ತಿ ತೆಗೆದುಕೊಂಡು ರಾಷ್ಟ್ರಾದ್ಯಂತ ಎಂಡೋಸಲ್ಫಾನ್ ನಿಷೇಧಿಸಬೇಕೆಂದು ಕರೆಕೊಟ್ಟಿದ್ದಾರೆ. ಈ ಕುರಿತು ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳ ಗಮನ ಸೆಳೆಯುವಲ್ಲಿ ಸಫಲರಾಗಿದ್ದಾರೆ. ಹಾಗೆಯೇ ಸುಪ್ರೀಂ ಕೋರ್ಟ್ ಸಹ ಇದರ ನಿಷೇಧವನ್ನು ಹೇರಿದೆ"[೪೪] ಒಟ್ಟಾರೆ ಭೀಕರ ಪರಿಣಾಮ ಬೀರುವ ಈ ಎಂಡೋಸಲ್ಫಾನ್ ನಿಷೇಧ ಇಂದು ಬಹುಅಗತ್ಯವಾಗಿರುವುದಂತೂ ನಿಜ. ಇನ್ನೂ ಜಲಮಾಲಿನ್ಯಕ್ಕೆ ಸಂಬಂಧಿಸಿದಂತೆ ಗಮನಿಸುವುದಾದರೆ ಗೌರಿಗಣೇಶ ಹಬ್ಬಗಳಂದು ಬಣ್ಣದ ವಿಗ್ರಹಗಳನ್ನು ನದಿಗಳಲ್ಲಿ ವಿಸರ್ಜನೆ ಮಾಡುವುದರ ಮೂಲಕ ಪರಿಸರವನ್ನು ನಾಶಮಾಡುತ್ತಿದ್ದೇವೆ. ಇದಲ್ಲದೆ ಪ್ರಪಂಚದ ಪೆಟ್ರೋಲಿಯಂ ಎಣ್ಣೆಗಳ ಒಟ್ಟು ಉತ್ಪನ್ನದ ಬಹುಪಾಲು ಎಣ್ಣೆ ಸಮುದ್ರದ ಮೂಲಕವೇ ಸಾಗಾಣೆಗೊಳ್ಳುತ್ತದೆ. ಇವುಗಳ ಮೂಲಕ ಒಮ್ಮೊಮ್ಮೆ ಹೊರಬರುವ ಎಣ್ಣೆ ಮತ್ತು ಹಡಗುಗಳ ಅಪಘಾತಗಳಿಂದ ಬೃಹತ್ಪ್ರಮಾಣದಲ್ಲಿ ಸಾಗರ ಸೇರುವ ಎಣ್ಣೆ, ಆಕಸ್ಮಿಕ ದುರಂತಗಳಿಂದ ಸಮುದ್ರ ಕಲುಷಿತಗೊಳ್ಳುತ್ತಿದೆ. ಈಗ ಮೆಕ್ಸಿಕೋ ಕೊಲ್ಲಿಯಲ್ಲಿ ದಿನಕ್ಕೆ ೫೦೦೦ ಬ್ಯಾರಲ್‌ಗಳಷ್ಟು ಪೆಟ್ರೋಲಿಯಂ ಎಣ್ಣೆ ಹೊರಬಂದು ಸಾಗರ ಜೀವಿಗಳನ್ನು, ಪರಿಸರವನ್ನು, ತೀರಗಳನ್ನು ಮಲಿನಗೊಳಿಸುತ್ತಿದೆ.

೧೯೭೪ರಲ್ಲಿ ಟೋರಿ ಕ್ಯಾನಯೂನ್ ಹಡಗು ಒಡೆದು ೧,೧೮,೦೦೦ ಟನ್‌ಗಳಷ್ಟು ಎಣ್ಣೆ ಸಾಗರವನ್ನು ಸೇರಿತ್ತು ಎಂದು ಲೇಖಕರು ಉಲ್ಲೇಖಿಸುತ್ತಾರೆ. ನಮ್ಮ ಭೂಮಿ, ನೀರು, ಗಾಳಿಯನ್ನು ಮಾಲಿನ್ಯಗೊಳಿಸುತ್ತಿರುವವರಲ್ಲಿ ನಮಗಿಂತ ದುಷ್ಟರಿಲ್ಲ. ನದಿಗಳ ಬಗ್ಗೆ ಪವಿತ್ರ ಭಾವನೆ ನಮ್ಮಲ್ಲಿದೆಯೇ ಹೊರತು ಮೌಲ್ಯಾಧಾರಿತ ಗುಣಮಟ್ಟದ ನಿಯಂತ್ರಣದ ಬಗ್ಗೆ ನಾವು ಯೋಚಿಸುವುದೇ ಇಲ್ಲ.

ಬೆಂಗಳೂರು ನಗರದಲ್ಲಿ ನಿತ್ಯ ೭೨೦ ಮಿಲಿಯನ್ ಲೀಟರ್ ಒಳಚರಂಡಿ ನೀರು ಹರಿಯುತ್ತವೆ. ಇದರಲ್ಲಿ ೫೦ ಮಿಲಿಯನ್ ಲೀಟರ್ ಮಾತ್ರ ಟ್ರೀಟ್‌ಮೆಂಟ್ ಪ್ಲಾಂಟ್‌ಗಳಿಂದ ಸಂಸ್ಕರಣಗೊಳ್ಳುತ್ತದೆ. ಉಳಿದ ೩೩೦ ಮಿಲಿಯನ್ ಲೀಟರ್ ಒಳಚರಂಡಿ ನೀರನ್ನು ಪರಿಷ್ಕರಿಸಲು ಹೊಸ ಸಂಸ್ಕರಣಾ ಘಟಕಗಳು ಬೇಕು. ಮೈಸೂರಿನಲ್ಲಿ ಶೇಕಡ ೮೫ ರಷ್ಟು ಒಳಚರಂಡಿ ನೀರು ಸಂಸ್ಕರಣಗೊಳ್ಳುತ್ತದೆ. ಹುಬ್ಬಳ್ಳಿ ಧಾರವಾಡದಲ್ಲಿ ಇದು ಶೇಕಡ ೬೦, ಗುಲ್ಬರ್ಗಾ ಶೇಕಡ ೫೫, ಮಂಗಳೂರು ಶೇಕಡ ೪೦ ಮತ್ತು ನಂಜನಗೂಡಿನಲ್ಲಿ ಎಲ್ಲಾ ಕಲ್ಮಶಭರಿತ ನೀರು ಕಪಿಲಾ ನದಿಗೆ ಸೇರುತ್ತದೆ.

---

೪೪. ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೭-೫-೨೦೧೧

"ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿ ನೀರಿನ ಗುಣಮಟ್ಟದ ಸರ್ವೇಕ್ಷಣೆಯಲ್ಲಿ ೨,೧೪೪ ನೀರಿನ ಸ್ಯಾಂಪಲ್‌ಗಳನ್ನು ಪರೀಕ್ಷಿಸಲಾಯಿತು. ಇವುಗಳ ಪೈಕಿ ಶೇಕಡ ೬೦ರಷ್ಟು ನೀರಿನ ಸ್ಯಾಂಪಲ್‌ಗಳಲ್ಲಿ ಫ್ಲೋರೈಡ್ ಮಟ್ಟ ಕುಡಿಯುವುದಕ್ಕೆ ಯೋಗ್ಯವಾಗಿಲ್ಲ"[೪೫] ಎಂದು ಪತ್ರಿಕೆಯ ವರದಿ ತಿಳಿಸುತ್ತದೆ. ಇದರಿಂದ ನಮ್ಮ ನೀರು ಎಷ್ಟು ಸುರಕ್ಷಿತ ಎನ್ನುವ ಪ್ರಶ್ನೆ? ಎದುರಾಗುತ್ತದೆ.

ಭಾರತವು ಪ್ರಪಂಚದ ಟ್ರಾಷ್‌ಕ್ಯಾನ್ (ಕಸದ ಬುಟ್ಟಿ) ಆಗಿದೆ ಎಂದು ರಾಧ ವೆಂಕಟೇಶ್ ಬರೆಯುತ್ತಾರೆ. ತಮಿಳುನಾಡಿನ ಟುಟಿಕೋರಿನ್ ಅಂತರರಾಷ್ಟ್ರೀಯ ವಿಷ ಪದಾರ್ಥಗಳನ್ನು ಪೇರಿಸಿಕೊಳ್ಳುವ ಕ್ಷೇತ್ರವಾಗಿದೆ. ಈ ವರ್ಷ ಗ್ರೀನ್ ಮತ್ತು ಫ್ರೆಂಚ್ ಕಾಲೋನಿಯೊಂದರಿಂದ ಆಮದು ಮಾಡಿಕೊಂಡಿದ್ದ ವಿಷ ಪದಾರ್ಥಗಳಿರುವ ೨೦ ಕಂಟೇನರ್‌ಗಳನ್ನು ವಾಪಸ್ಸು ಕಳುಹಿಸಲಾಯಿತು. ಹೋದ ವರ್ಷ ಮಲೇಷ್ಯಾ, ಸೌದಿ ಅರೇಬಿಯಾ ಮತ್ತು ಬಾರ್ಸಿಲೋನಿಯಗಳಿಂದ ತಮಿಳುನಾಡಿನ ವಿವಿಧ ಕಂಪನಿಗಳು ಆಮದು ಮಾಡಿಕೊಂಡಿದ್ದ ವಿಷ ಪದಾರ್ಥಗಳಿದ್ದ ೯ ಕಂಟೇನರ್‌ಗಳನ್ನು ಹಿಡಿಯಲಾಯಿತು.

೨೦೦೪ರಲ್ಲಿ ಇರಾಕ್‌ನಿಂದ ಯುದ್ಧ ಸಾಮಗ್ರಿಗಳನ್ನು ಗುಜರಿ ಸಾಮಗ್ರಿಯಾಗಿ ಆಮದು ಮಾಡಿಕೊಂಡಾಗ ಜನ ವಿಕಿರಣಕ್ಕೆ ಒಳಗಾದದು ಎಂಬ ಮಾಹಿತಿಯನ್ನಿಲ್ಲಿ ಪಡೆಯಬಹುದು.

೨೦೦೬ರಲ್ಲಿ ಬ್ಲೂ ಲೇಡಿ ಎಂಬ ಹಡಗು ಗುಜರಾತ್‌ನ ಅಲಾಂಗ್ ಬಂದರಿಗೆ ಒಡೆದು ಹಾಕಲ್ಪಡಲು ಬಂದಾಗಲೂ ಇದೇ ರೀತಿಯ ವರದಿಗಳಿದ್ದವು ಎಂಬ ಮಾತನ್ನು ಉಲ್ಲೇಖಿಸುತ್ತಾರೆ.

ಮುಂದಿನ ಹತ್ತು ವರ್ಷಗಳಲ್ಲಿ ಭಾರತದ ಹಸುರೀಕರಣ ಯೋಜನೆಗಾಗಿ (ಕಾಡುಗಳನ್ನು ಹಾಗೂ ಮರಗಳನ್ನು ಬೆಳೆಸುವುದು) ೪೪,೦೦೦ ಕೋಟಿ ರೂಗಳನ್ನು ಕಾಯ್ದಿರಿಸಲಾಗಿದೆ. ೨೦ ಮಿಲಿಯನ್ ಚದರ ಕಿಲೋಮೀಟರ್‌ಗಳಷ್ಟು ಬಂಜರು ಭೂಮಿಯನ್ನು ೨೦೨೦ರ ಹೊತ್ತಿಗೆ ಹಸುರೀಕರಣಗೊಳಿಸುವ ಯೋಜನೆ ಇದೆ.

ಸಾರ್ವಜನಿಕರು ಹಾಗೂ ಪರಿಸರವಾದಿಗಳು ಇಂದು ಆಹಾರ ಹಾಗೂ ಪಾನೀಯಗಳಿಗೆ ಹಾಕಲಾಗುತ್ತಿರುವ ಸಂಶ್ಲೇಷಿತ ಬಣ್ಣಗಳ ವಿರುದ್ಧ ಚಳವಳಿ ನಡೆಸಬೇಕು ಎಂದು ಲೇಖಕರು ತಮ್ಮ ಕೃತಿಯ ಮೂಲಕ ಕರೆಕೊಡುತ್ತಾರೆ.

---

೪೫. ಡೆಕನ್ ಹೆರಾಲ್ಡ್, ದಿನಾಂಕ ೨೧-೦೭-೨೦೦೯.

ಆಹಾರ ಪದಾರ್ಥಗಳಲ್ಲಿ ಬಳಕೆಯಾಗುವ ರಾಸಾಯನಿಕಗಳನ್ನು ಲೇಖಕರು ಹೀಗೆ ವಿವರಿಸುತ್ತಾರೆ. "ಸಿಹಿತಿಂಡಿಗಳು, ಜಾಮ್‌ಗಳು, ಸಂಗ್ರಹಿಸಿಟ್ಟಿರುವ ಮೀನು ಹಾಗೂ ಸೂಪ್‌ಗಳಿಗೆ ಹಾಕುವ ಟಿಟ್ರಾಸೀನ್ ಅಕಾ ಎಫ್‌ಡಿ ಮತ್ತು ಸಿ, ಎಲ್ಲೋ ನಂ.೫ ಕೋಲ್‌ಟಾರ್ ಡ್ರೈ, ಪಾಲಿಸ್ಟ್ರಿಕ್ ಆರೋಮ್ಯಾಟಿಕ್ ಹೈಡ್ರೋ ಕಾರ್ಬನ್. ಇವು ಆಸ್ತಮಾ ಆಕ್ರಮಣ ಪ್ರಚೋದಿಸುತ್ತದೆ. ಆರ್ಟಿಕೇರಿಯ (ಚರ್ಮದ ಗಂದೆಗಳು) ವರ್ತನೆಯಲ್ಲಿ ಬದಲಾವಣೆ ಇತ್ಯಾದಿಗಳನ್ನು ತರಸಬಲ್ಲವು"[೪೬]

ಪ್ರಾಕೃತಿಕ ಬಣ್ಣಗಳು ನಾನಾ ನೈಸರ್ಗಿಕ ಭಾಗಗಳಿಂದ ಉತ್ಪನ್ನಗಳಿಂದ ಪಡೆದು ಆಹಾರ ವಿಷಕಾರಿಯಾವುದನ್ನು ತಪ್ಪಿಸಬಹುದಾಗಿದೆ. (ಹೂ, ಹಣ್ಣು, ಬೀಜಗಳು ಇತ್ಯಾದಿಗಳಿಂದ ಪಡೆದವು) ದುರಂತವೆಂದರೆ ಮಾರ್ಕೆಟ್‌ಗಳಲ್ಲಿ ಸಿಗುವ ಅರಿಶಿನವೇ ನಿಜವಾದ ಅರಿಶಿನ ಎಂದು ಜನ ಮೋಸಹೋಗುತ್ತಾರೆ. ಅರಿಶಿನದ ಕೊನೆಗಳಿಂದ ಮನೆಯಲ್ಲೇ ಅರಿಶಿನ ತಯಾರಿಸುವುದನ್ನು ಮರೆತ್ತಿದ್ದಾರೆ. ಸ್ವಲ್ಪ ತಿಳಿದವರು 'MTR' ಅರಿಶಿನ ಉಪಯೋಗಿಸುತ್ತಾರೆ. ಜೈವಿಕ ಬಣ್ಣಗಳು ಆರೋಗ್ಯಕರವಾದವು. ಮಾರಕ, ಕೃತಕ, ಸಂಶ್ಲೇಷಿತ ಬಣ್ಣಗಳನ್ನು ಬಹಿಷ್ಕರಿಸಬೇಕು. ಇಂತಹ ಬಣ್ಣಗಳನ್ನು ಪಾಶ್ಚಾತ್ಯದೇಶಗಳು ಆಮದು ಮಾಡಿಕೊಂಡು ತಾವು ಉಪಯೋಗಿಸಿಕೊಳ್ಳುತ್ತವೆ. ಔಷಧಿಗಳ ಬಣ್ಣಗಳಿಗೂ ಪ್ರಾಕೃತಿಕ ಬಣ್ಣಗಳನ್ನು ಉಪಯೋಗಿಸುವುದು ಒಳ್ಳೆಯದು ಎಂದು ಕೃತಿಯಲ್ಲಿ ಲೇಖಕರು ಆರೋಗ್ಯಕಾರಿ ಅಂಶ ನೀಡಿದ್ದಾರೆ. ಡೈಕ್ಲೋಫೈನ್ಯಾಕ್(Dichlophenac)ಎಂಬ ನೋಟಿನ ಔಷಧಿಯನ್ನು ಸಾಕು ಪ್ರಾಣಿಗಳಿಗೆ ಹಾಗೂ ಮಾನವರಿಗೆ ಕೊಡಲಾಗುತ್ತದೆ. ಇಂತಹ ಸಾಕು ಪ್ರಾಣಿಗಳು ಸತ್ತಾಗ ಅವುಗಳ ಮೃತ ಶರೀರವನ್ನು ರಣಹದ್ದುಗಳು ತಿನ್ನುತ್ತವೆ. ಇದರಿಂದಾಗಿ ಭಾರತದ ಶೇಕಡ ೮೫ರಷ್ಟು ಭಾಗ ರಣಹದ್ದುಗಳು ನಾಶವಾಗಿವೆ ಎಂಬ ಆತಂಕವನ್ನು ಲೇಖಕರು ಕೃತಿಯಲ್ಲಿ ದಾಖಲಿಸುತ್ತಾರೆ.

ಅಮೇರಿಕಾದಲ್ಲಿ ಪ್ಯಾಸೆಂಜರ್ ಪಿಜನ್ ಎಂಬ ವಿಶಿಷ್ಟ ಪಾರಿವಾಳಗಳು ಹಿಂದಿನ ಕಾಲದಲ್ಲಿ ಶತಕೋಟಿ ಸಂಖ್ಯೆಯಲ್ಲಿದ್ದವು. ಈಗ ಅವುಗಳ ಸಂಖ್ಯೆ ತೀರ ಕಡಿಮೆಯಾಗಿದೆ. ಚಿರತೆ ಮತ್ತು ಡೋಡೋಗಳ ಹಾದಿಯನ್ನು ಇವು ಹಿಡಿಯುತ್ತಿವೆ ಎಂಬ ಗಾಬರಿಪಡಿಸುವ ಅಂಶವನ್ನು ಲೇಖಕರು ತಿಳಿಸುತ್ತಾರೆ.

ಸ್ನೇಕ್ ಶ್ಯಾಮ್, ಸ್ನೇಕ್ ಜಾಯ್ ಹಾಗೂ 'ಶ್ರೀಸೂರ್ಯನಾರಾಯಣ ಅಡೂಕ್ ಇಂಥವರ ಪ್ರಯತ್ನಗಳಿಂದಾಗಿ ಉರಗಗಳ ಸಂತತಿ ಇನ್ನೂ ಭದ್ರವಾಗಿ ಸಂರಕ್ಷಿತಗೊಂಡಿದೆ ಎಂದು ಲೇಖಕರು ನೆನಪಿಸಿಕೊಳ್ಳುತ್ತಾರೆ.

---

೪೬. ಪೌರಪ್ರಜ್ಞಾಯನ – ಪರಿಸರ ಪೌರಪ್ರಜ್ಞೆ, ಪು. ೨೪೩

ಅನೇಕರು ಇಂದು ಕಾಡು ಬೆಳೆಸುವತ್ತ ಗಮನಹರಿಸಿರುವುದು ಹಸಿರನ್ನು ಹೆಚ್ಚಿಸುತ್ತಿದೆ. ತಮ್ಮ ಹಿರಿಯರ ನೆನಪಿಗಾಗಿ ಮರನಡೆವುದು ಈಗ ಬೆಂಗಳೂರಿನ ಹೆಸರುಘಟ್ಟದಲ್ಲಿ ನಡೆದಿದೆ ಎನ್ನುವ ಸಮಾಧಾನದ ಅಂಶಗಳನ್ನು ಲೇಖಕರು ಸೇರಿಸಿದ್ದಾರೆ. ಒಟ್ಟಿನಲ್ಲಿ ಪರಿಸರ ಕಲುಷಿತಗೊಳ್ಳುವ ನಾನಾ ಸಂದರ್ಭಗಳನ್ನು ಉಲ್ಲೇಖಿಸುವ ಮುಖಾಂತರ, ಪರಿಸರಪ್ರಜ್ಞೆ ಜಾಗೃತಗೊಳಿಸುವುದರಲ್ಲಿ ಲೇಖಕರು ಸಫಲರಾಗಿದ್ದಾರೆ.

ಪರಿಸರ ಚಳವಳಿಗಳು

ಮಾನವನ ದುರಾಸೆಗೆ ಬಲಿಯಾಗುತ್ತಿರುವ ಪರಿಸರವನ್ನು ಸಂರಕ್ಷಿಸಲು ಕೆಲವು ಪ್ರಜ್ಞಾವಂತ ನಾಗರೀಕರು ಪರಿಸರ ಚಳವಳಿಗಳನ್ನು ಹುಟ್ಟಿ ಹಾಕಿ ಯಶಸ್ಸು ಕಂಡಿರುವ ಯಶೋಗಾಥೆಗಳು ಭಾರತದಲ್ಲಿ ಇವೆ.

ಭಾರತದಲ್ಲಿ ಪರಿಸರ ಚಳವಳಿಗಳನ್ನು ನಡೆಸಿದವರು ಶ್ರೀಸಾಮಾನ್ಯರು ಎಂಬ ಮಾತನ್ನು ಲೇಖಕರು ತಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಅದರಲ್ಲೂ ಮಹಿಳೆಯರು, ಗಿರಿಜನ ಬುಡಕಟ್ಟು ಜನಾಂಗಗಳು ಮತ್ತು ಹಳ್ಳಿಗಾಡಿನ ಮಂದಿ ಇದರ ನೇತೃತ್ವ ವಹಿಸಿದ್ದರು ಎಂಬುದನ್ನಿಲ್ಲಿ ಲೇಖಕರು ಗುರುತಿಸಿದ್ದಾರೆ.

ಪರಿಸರ ಚಳವಳಿಗಾರರ ಹೋರಾಟ ಪರಿಸರ ರಕ್ಷಣೆಗೋಸ್ಕರ, ಕಾಡುಗಳ ಸಂರಕ್ಷಣೆಗಿರಬಹುದು, ದೊಡ್ಡ ದೊಡ್ಡ ಅಣೆಕಟ್ಟುಗಳು ಅಥವಾ ಜಲವಿದ್ಯುತ್ ಯೋಜನೆಗಳಿಗೆ ವಿರುದ್ಧವಾಗಿರಬಹುದು. ಗಣಿಗಾರಿಕೆ ಅಥವಾ ಗ್ರಾನೈಟ್ ಸುಣ್ಣಕಲ್ಲು ಇವುಗಳನ್ನು ಕಾಡು ಕಡಿದು ಬೆಟ್ಟಗಳಿಂದ ಹೊರತೆಗೆಯುವುದರಿಂದಾಗಿರಬಹುದು.

ಈ ಚಳವಳಿಗಳಿಗೆ ಮಹಾತ್ಮ ಗಾಂಧಿಯವರ ಸತ್ಯಾಗ್ರಹಗಳು, ಸ್ಫೂರ್ತಿ, ಆಚಾರ್ಯ ವಿನೋಬಭಾವೆ ಅಂಥವರ ಪ್ರೇರಣೆ, ಸಮಾಜವಾದದ ಪ್ರೇರಣೆ ಇರಬಹುದು. ಮುಖ್ಯವಾಗಿ ಈ ಚಳುವಳಿಗಳ ಉದ್ದೇಶ ಪರಿಸರ ಪೌರಪ್ರಜ್ಞೆಯಿಂದ ಕೂಡಿರುವುದಾಗಿದೆ.

ಪರಿಸರ ಅಥವಾ ನಮ್ಮ ಕಾಡುಗಳ ರಕ್ಷಣೆಗೆ ಚಳವಳಿಗಳೇಕೆ? ಎನ್ನುವ ಪ್ರಶ್ನೆಯನ್ನು ಲೇಖಕರು ಮುಂದಿಡುತ್ತಾರೆ.

ಮೂಲತಃ ಭಾರತೀಯ ಸಂಸ್ಕೃತಿ ಹುಟ್ಟಿದ್ದು ಅರಣ್ಯಗಳಲ್ಲಿ, ದಾರ್ಶನಿಕರು, ಋಷಿಮುನಿಗಳು ಮತ್ತು ನಮ್ಮ ಗುರುಕುಲಗಳು ಇದ್ದದ್ದು ಅರಣ್ಯಗಳಲ್ಲಿನ ಆಶ್ರಮಗಳಲ್ಲಿ, ಅವರ ಧ್ಯಾನ, ಜ್ಞಾನ ಮತ್ತು ಸಂಶೋಧನೆಗಳಿಂದಲೇ ವೇದಗಳು ಮತ್ತು ಉಪನಿಷತ್ತುಗಳು ಹುಟ್ಟಿಕೊಂಡಿದ್ದು. ಭಾರತೀಯ ಸಂಸ್ಕೃತಿ ಪ್ರಕೃತಿಯಲ್ಲಿ ದೇವರನ್ನು ಕಾಣುತ್ತದೆ. ನಮ್ಮ ನದಿಗಳಲ್ಲಿ, ಪರ್ವತಗಳಲ್ಲಿ, ಕಾಡುಗಳಲ್ಲಿ ಮತ್ತು ಎಲ್ಲಾ ಜೀವಿಗಳಲ್ಲಿ

ನಾವು ದೇವರನ್ನು ಕಾಣುತ್ತೇವೆ. ಮರಗಳಲ್ಲಿ ದೇವರನ್ನು ಕಾಣುವ ಸಂಪ್ರದಾಯ ಋಗ್ವೇದದಷ್ಟು ಹಳೆಯದು. ಆ ಕಾಲದಲ್ಲಿ ಕಾಡುಗಳನ್ನು "ಅರಣ್ಯಾಣಿ", "ವನರಾಣಿ" ಎಂದು ಪೂಜ್ಯ ಭಾವನೆಯಲ್ಲಿ ನೋಡಲಾಗಿದೆ. ಅಥರ್ವಣ ವೇದದಲ್ಲಿ ಭೂಮಿ ಮನುಷ್ಯನಿಗೆ ಮಾತ್ರವಲ್ಲ ಅದು ಎಲ್ಲಾ ಜೀವಿಗಳಿಗೂ ಇರುವಂಥಾದ್ದು ಎಂಬ ವಿಷಯ ಬರುತ್ತದೆ. ಆ ಕಾಲದಲ್ಲೇ ಪರಿಸರ ಸಮತೋಲನೆಯ ದೃಷ್ಟಿಯಿಂದ ಪ್ರಕೃತಿಯನ್ನು ನೋಡುತ್ತಿದ್ದರು. ಇದು ನಮ್ಮ ಸಂಸ್ಕೃತಿಗೆ ಮಾತ್ರ ಇರುವ ಒಂದು ಹೆಚ್ಚುಗಾರಿಕೆ. ಆ ಕಾಲದ ಜನತೆಯ ಹಾಗೂ ಸಮಾಜದ ಪೌರಪ್ರಜ್ಞೆಯ ಪರಾಕಾಷ್ಟತೆಯನ್ನು ಲೇಖಕರು ಉಲ್ಲೇಖಿಸುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ದಶಕಗಳಲ್ಲಿ ಬೃಹತ್ ಕೈಗಾರಿಕೆಗಳು ಅಣೆಕಟ್ಟುಗಳು, ಜಲವಿದ್ಯುತ್ ಯೋಜನೆಗಳು ಇವುಗಳಿಂದಾಗಿ ಗಿರಿಜನರು ಬುಡಕಟ್ಟು ಜನಾಂಗಗಳು, ಗ್ರಾಮ ಹಾಗೂ ಅರಣ್ಯವಾಸಿಗಳು ಸ್ಥಾನಪಲ್ಲಟಗೊಂಡು ನಮ್ಮ ದೇಶದಲ್ಲೇ ಪರಕೀಯರಾಗಿ ಬದುಕುತ್ತಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ನಮ್ಮ ಸರ್ಕಾರ ಕೈಗಾರಿಕೋದ್ಯಮಿ ಹಾಗೂ ಪೌರಪ್ರಜ್ಞೆ ಇಲ್ಲದ ಗಣಿಗಾರಿಕೆದಾರರುಗಳಿಂದ ನಮ್ಮ ಪರಿಸರಕ್ಕೆ ಈಗಾಗಲೇ ತುಂಬಲಾರದಷ್ಟು ನಷ್ಟವಾಗಿದೆ. ಇಂತಹ ಅನಾಹುತ-ಗಳನ್ನು ತಪ್ಪಿಸಲು ಪರಿಸರ ಚಳವಳಿಗಳು ಅಗತ್ಯ ಮತ್ತು ಅನಿವಾರ್ಯವೆಂದು ಲೇಖಕರು ಹೇಳುತ್ತಾ ಕೆಲವು ಮುಖ್ಯ ಪರಿಸರ ಚಳವಳಿಗಳನ್ನು ಹೀಗೆ ವಿವರಿಸಿದ್ದಾರೆ.

೧) **ಸೈಲೆಂಟ್ ವ್ಯಾಲಿ ಚಳವಳಿ:** ಕೇರಳ ರಾಜ್ಯದ ಪಶ್ಚಿಮಘಟ್ಟಗಳ ಈ ಭಾಗದಲ್ಲಿ ಇರುವ ಜೈವಿಕ ವೈವಿಧ್ಯ ಅಪಾರವಾಗಿದೆ. ಅಪರೂಪದ ಸಸ್ಯಪ್ರಾಣಿಗಳಿಗೆ ಸೈಲೆಂಟ್ ವ್ಯಾಲಿ ಕಾಡುಗಳು ತವರಾಗಿದೆ. ಇಲ್ಲಿನ ಕುಂತಿ ಪೂಜೆ ನದಿಗೆ ೧೯೮೦ರಲ್ಲಿ ೨೦೦ ಮೆಗಾವ್ಯಾಟ್ ಜಲವಿದ್ಯುತ್ ಅಣೆಕಟ್ಟು ಯೋಜನೆಯನ್ನು ಕೇರಳ ಸರ್ಕಾರ ಪ್ರಾರಂಭಿಸಿತು. ತಕ್ಷಣವೇ ಪರಿಸರ ಪ್ರಜ್ಞೆಯುಳ್ಳ ಪರಿಸರವಾದಿಗಳು, ಪೌರಪ್ರಜ್ಞೆಯುಳ್ಳ ಸ್ಥಳೀಯ ಜನರು ಹಾಗೂ ವಿಜ್ಞಾನಿಗಳು ಚಳವಳಿ ಆರಂಭಿಸಿ ತಡೆಗಟ್ಟುವಲ್ಲಿ ಯಶಸ್ವಿಯಾದರು.

೨) **ಚಿಪ್ಕೋ ಚಳವಳಿ:** ೧೯೭೩ರಲ್ಲಿ ರಾಜಾಸ್ಥಾನದ ಜೋಧಾಪುರಕ್ಕೆ ೨೫ ಕಿ.ಮೀ. ದೂರದಲ್ಲಿರುವ ಬೇಜರಿಲಿ ಗ್ರಾಮದ ಬಿಷನೋಯ್ ಮಹಿಳೆ ಅಮೃತಾದೇವಿ ಈ ಚಳವಳಿಗೆ ಮೂಲ ವ್ಯಕ್ತಿ. ಈಕೆ ಪೌರಪ್ರಜ್ಞೆಯಿಂದ ಮರಗಳ ರಕ್ಷಣೆಗಾಗಿ ನಿಂತಳು. ಆಕೆಯ ಪತಿ ಮತ್ತು ಹೆಣ್ಣು ಮಕ್ಕಳು ಮತ್ತು ೩೬೯ ಬಿಷ್‌ನೋಯ್ ಮಹಿಳೆಯರು ತಮ್ಮ ಪ್ರೀತಿ ಪಾತ್ರ ಮರಗಳನ್ನು ಕಡಿಯುವುದನ್ನು ವಿರೋಧಿಸಿ ಮರಗಳನ್ನು ಕೈಬಳಸಿ ಅಪ್ಪಿಕೊಂಡರು.

ಚಂಡಿಪ್ರಸಾದ್ ಭಟ್‌ರವರು "ಅಂಗಲೇಮಲ್ತಾ" ಎಂದು ಕರೆಯುತ್ತಿದ್ದುದ್ದು. ಚಿಪ್ಕೋ ಚಳವಳಿಗೇ. ೧೯೭೪ರಲ್ಲಿ ಉತ್ತರಪ್ರದೇಶದ ತೇಹ್ರಿ, ಘರ್‌ವಾಲ್ ಜಿಲ್ಲೆಯ ಅದ್ವಾನಿ ಹಳ್ಳಿಯ ಸಮೀಪದ ಮರಗಳನ್ನು ಕಡಿಯುತ್ತಿದ್ದ ಸಂದರ್ಭದಲ್ಲಿ ಚಳವಳಿ ನಡೆಯಿತು.

ಸುಂದರಲಾಲ್ ಬಹುಗುಣ ಅವರು ಚಿಪ್ಕೋ ಚಳವಳಿಯನ್ನು, ಪರಕೀಯರ ದುರಾಸೆಯ ಮರದ ವ್ಯಾಪಾರಿಗಳ ವಿನಾಕಾರಣ ಕಾಡುಗಳನ್ನು ನಾಶಮಾಡುವವರ ವಿರುದ್ಧ ಚಳವಳಿ ಆರಂಭಿಸಿದರು.

೩) ನರ್ಮದಾ ಬಚಾವೋ ಚಳವಳಿ: ಭಾರತದ ಪಶ್ಚಿಮ ಭಾಗದಲ್ಲಿ ನಾಲ್ಕು ರಾಜ್ಯಗಳಿಗೆ ಸಂಬಂಧಪಟ್ಟ ಈ ಯೋಜನೆಯಿಂದಾಗಿ ೩೭,೦೦೦ ಹೆಕ್ಟೇರ್ ಭೂಮಿ ಮುಳುಗುತ್ತದೆ. (೧೧ ಸಾವಿರ ಹೆಕ್ಟೇರ್ ಕಾಡುಗಳು, ೨೪೮ ಹಳ್ಳಿಗಳು) ೧ ಲಕ್ಷ ಜನಸ್ಥಾನ ಪಲ್ಲಟ-ಗೊಳ್ಳುತ್ತಾರೆ.

ಮೇಧಾಪಾಟ್ಕರ್ ಅವರ ನೇತೃತ್ವದ "ನರ್ಮದಾ ಬಚಾವೋ" ಆಂದೋಲನ ಮುಂದೆ ವಿಶ್ವಪ್ರಸಿದ್ಧಿಯಾಗಿದ್ದು ಈಗ ಇತಿಹಾಸ.

೪. ಡೊಂಗ್ರಿಯ ಕೊಂಡರ ಹೋರಾಟ: ಒರಿಸ್ಸಾದ ೩೨ ಬುಡಕಟ್ಟು ಜನರ ಪೈಕಿ ಡೊಂಗ್ರಿಯ ಕೊಂಡರು ವಿಶಿಷ್ಟವಾದ ಜನ. ಅವರಿಗೆ ನಿಯಮಗಿರಿ(Niyamagiri) ಬೆಟ್ಟದ ಸಾಲುಗಳೇ ದೈವ. ಈ ಹಿಂದುಳಿದ ಜನಾಂಗದ ಒಟ್ಟು ಜನಸಂಖ್ಯೆ ೧೦,೦೦೦. ತಲೆತಲಾಂತರದಿಂದ ಈ ಜನ ಮೇಲಿನ ಬೆಟ್ಟಗಳ ಆರಾಧಕರು. ಈ ಬೆಟ್ಟಗಳು ಆಹಾರ, ನೀರು ಮತ್ತು ಜೀವನ ನಡೆಸಲು ಆಶ್ರಯ ಕೊಟ್ಟಿದೆ. ಇಂತಹ ಪೂಜ್ಯನೀಯ ಬೆಟ್ಟಗಳನ್ನೇ ಇಲ್ಲದಂತೆ ಮಾಡಲು ಬಹುರಾಷ್ಟ್ರೀಯ ಗಣಿಗಾರಿಕೆಯ ಕಂಪನಿಯೊಂದು ಬಾಕ್ಸೈಟ್ ರಿಫೈನರಿಗೋಸ್ಕರ ಒಕ್ಕಲೆಬ್ಬಿಸುವ ಪ್ರಯತ್ನಗಳು ನಡೆದಾಗ ಈ ಚಳವಳಿ ಆರಂಭವಾಯಿತು.

ಕರ್ನಾಟಕದಲ್ಲಿ ಪರಿಸರ ಚಳವಳಿಗಳು

ಕರ್ನಾಟಕದಲ್ಲಿ ಪರಿಸರ ಚಳವಳಿಗಳು ಮುಖ್ಯವಾಗಿ ಕಾಡುಗಳ ನಾಶವನ್ನು ತಡೆಯಲು, ಮರಗಳನ್ನು ಉಳಿಸಿಕೊಳ್ಳಲು, ಕೈಗಾರಿಕೆಗಳು ಪರಿಸರವನ್ನು ಕಲುಷಿತಗೊಳಿಸುವುದನ್ನು ತಡೆಯಲು, ಗಣಿಗಾರಿಕೆಯಿಂದ ಪರಿಸರವನ್ನು ರಕ್ಷಿಸಲು ಪೌರಪ್ರಜ್ಞೆಯಿಂದ ಮಾಡಲಾಗಿದೆ.

ಕುದುರೆಮುಖ, ತುಂಗಭದ್ರ ಉಳಿಸಿ, ಬೇಡ್ತಿ ಯೋಜನೆ, ಕಿತ್ತುಕೊ ಹಚ್ಚಿಕೋ, ಗುಂಡ್ಯ ಜಲವಿದ್ಯುತ್ ಯೋಜನೆ, ಚಾಮಲಾಪುರ ಶಾಖೋತ್ಪನ್ನ ವಿದ್ಯುತ್ ಯೋಜನೆ ಇತ್ಯಾದಿ.

ಅಪ್ಪಿಕೋ ಚಳವಳಿ: ಉತ್ತರ ಕನ್ನಡ ಜಿಲ್ಲೆ ದೇಶದಲ್ಲೇ ಅರಣ್ಯ ಸಂಪತ್ತಿಗೆ ಹೆಸರುವಾಸಿಯಾದದ್ದು. ಇಲ್ಲಿನ ಪಶ್ಚಿಮ ಘಟ್ಟಗಳ ಅರಣ್ಯಗಳು ಜೈವಿಕ ವೈವಿಧ್ಯಕ್ಕೆ ಹಾಗೂ ಅಪರೂಪದ ಸಸ್ಯ, ಪ್ರಾಣಿಗಳಿಗೆ ಹೆಸರುವಾಸಿ. ಚಿಪ್ಕೋ ಚಳವಳಿಯಿಂದ ಸ್ಫೂರ್ತಿ ಪಡೆದ ದೇಶದ ಅನೇಕ ಪರಿಸರ ಪ್ರಜ್ಞಾವಂತರ ಪೈಕಿ ಪಾಂಡುರಂಗ ಹೆಗ್ಗಡೆ ಒಬ್ಬರು. ಇವರು ಸ್ಥಳೀಯ ಜನರಿಗೆ ತಿಳುವಳಿಕೆ ಕೊಟ್ಟು ಗುಂಪುಗಳನ್ನು ಕಟ್ಟಿ 'ಅಪ್ಪಿಕೋ' ಚಳವಳಿಯ ಆಂದೋಲನಕ್ಕೆ ಹೊಸ ಅಯಾಮ ಬರೆದರು. ಕಾಡುಗಳನ್ನು ಕಡಿದು ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ಟಿಂಬರ್ ಕಂಟ್ರಾಕ್ಟರುಗಳು ಹಾಗೂ ಅವರಿಗೆ ಪರವಾನಗಿ ಕೊಡುತ್ತಿದ್ದ ಸರ್ಕಾರದ ವಿರುದ್ಧ ಚಳವಳಿ ಪ್ರಾರಂಭವಾಯ್ತು.

ಸಿರ್ಸಿ ತಾಲ್ಲೂಕಿನ ನುಲ್ಕಾನಿ ಗ್ರಾಮದ ಮಹಿಳೆಯರು ಮತ್ತು ಯುವಕರು ೧೯೮೩ರ ಸೆಪ್ಟೆಂಬರ್‌ನಲ್ಲಿ ಕಾಡಿಗೆ ಹೋಗಿ ಮರಗಳನ್ನು ಅಪ್ಪಿಕೊಂಡು ಕಡಿಯುವುದನ್ನು ತಪ್ಪಿಸಿ ಕರ್ನಾಟಕದ ಅಪ್ಪಿಕೋ ಚಳವಳಿಗೆ ನಾಂದಿ ಹಾಡಿದರು. ನೂರಾರು ಜನ ಮರಗಳಿಗೋಸ್ಕರ ಆತ್ಮಾರ್ಪಣೆ ಮಾಡಿಕೊಳ್ಳಲು ಸಿದ್ಧರಾಗಿದ್ದರು. ೩೮ ದಿನಗಳ ಕಾಲಸತ್ಯಾಗ್ರಹ ನಡೆಯಿತು. ಕೊನೆಗೆ ಸರ್ಕಾರ ತನ್ನ ಆದೇಶವನ್ನು ಹಿಂದೆ ತೆಗೆದುಕೊಳ್ಳಬೇಕಾಯಿತು.

ಮೀನುಗಾರರ ಚಳವಳಿ: ಅರಬ್ಬೀ ಸಮುದ್ರಕ್ಕೆ ಮಂಗಳೂರಿನ ಕೊಳಚೆ ನೀರಿನಿಂದ ಹಿಡಿದು ಕೈಗಾರಿಕಾ ತ್ಯಾಜ್ಯ ವಸ್ತುಗಳವರೆಗೆ ಅನೇಕ ಮಲಿನಕಾರಿ ವಸ್ತುಗಳು ಬಂದು ಸೇರುತ್ತವೆ. ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ ಕೈಗಾರಿಕೆಯಿಂದ ಹೊರಬರುವ ಕೊಳಚೆ ನೀರಿನಲ್ಲಿ ಕ್ಯಾಡ್ಮಿಯು ಮತ್ತು ಪಾದರಸಗಳು ಸೂಕ್ಷ್ಮ ಪ್ರಕ್ಷಣದಲ್ಲಿರುವುದನ್ನು ವಿಶ್ಲೇಷಣೆಗಳು ತೋರಿಸಿಕೊಟ್ಟಿವೆ. ಮೇಲಿನ ಕೈಗಾರಿಕೆಗಳಿಂದ ಮೀನುಗಳು ಸತ್ತು ತೇಲುವುದು ಹೆಚ್ಚಾಗಿ ಸುಮಾರು ೪,೦೦,೦೦೦ ಮೀನುಗಾರರ ಜೀವನೋಪಾಯಕ್ಕೆ ತೊಂದರೆಯಾಗಿತ್ತು. ೧೯೯೫ರ ಆಗಸ್ಟ್ ತಿಂಗಳಲ್ಲಿ ೧ ಲಕ್ಷ ಜನ ಮತ್ತು ಅನೇಕ ಸ್ವಯಂಸೇವಾ ಸಂಘಗಳು ಚಳವಳಿ ನಡೆಸಿ ಯಶಸ್ವಿಯಾದರು.

ಕಿತ್ತುಕೊ ಹಚ್ಚಿಕೋ ಚಳವಳಿ: ತುಂಗಭದ್ರ ನದಿ ತೀರದಲ್ಲಿ ಹರಿಹರ ಪಾಲಿಫೈಬರ್ ಕಾರ್ಖಾನೆಯನ್ನು ಕೈಗಾರಿಕೋದ್ಯಮಿ ಬಿರ್ಲಾ ಅವರು ೧೯೭೨ರಲ್ಲಿ ಪ್ರಾರಂಭಿಸಿದರು. ಕಾರ್ಖಾನೆ ತನ್ನ ಕೊಳೆ ನೀರಿನಿಂದ ನದಿಯನ್ನು ಕಲುಷಿತಗೊಳಿಸಿದ್ದರಿಂದ ಲಕ್ಷಾಂತರ ಜನ ತೊಂದರೆಗೊಳಗಾದರು. ಜನತೆ ನೇರವಾಗಿ ಚಳವಳಿಗೆ ಧುಮುಕಿತು.

ಕೊಜೆಂಟ್ರಿಕ್ಸ್ ವಿರುದ್ಧ ಚಳವಳಿ: ಕೊಜೆಂಟ್ರಿಕ್ಸ್ ೪,೨೦೦ ಕೋಟಿ ರೂ.ಗಳ ಉಷ್ಣ ವಿದ್ಯುತ್‌ಸ್ಥಾವರ, ಮಂಗಳೂರಿನ ನಂದಿಕೂರು ಬಳಿ ಸ್ಥಾಪಿಸಬೇಕೆಂದಿದ್ದ ಈ ವಿದೇಶಿ ಸಂಸ್ಥೆಯ ವಿರುದ್ಧ ಚಳವಳಿ ನಡೆದು ನಂದಿಕೂರು ಜಾಗೃತ ಸಮಿತಿ ಹಾಗೂ ಮೇನಕ

ಗಾಂಧೀಯವರು ಹೈಕೋರ್ಟಿಗೆ ಅರ್ಜಿ ಹಾಕಿದ್ದರೂ ಕೊನೆಗೆ ಪರಿಸರವಾದಿ ಎಲ್ಲಪ್ಪರೆಡ್ಡಿ ಅವರ ನೇತೃತ್ವದಲ್ಲಿ ಹೋರಾಟ ಯಶಸ್ವಿಯಾಯಿತು.

ತುಂಗಭದ್ರ ಉಳಿಸಿ ಹೋರಾಟ ಚಳವಳಿ: ಕುದುರೆಮುಖದ ಕಬ್ಬಿಣದ ಅದಿರಿನ ಕಂಪನಿಯಿಂದ (KIOCL) ಅದಿರು ತೆಗೆಯುವುದನ್ನು ನಿಲ್ಲಿಸಬೇಕೆಂದು 'ತುಂಗಭದ್ರ ಹೋರಾಟ ಒಕ್ಕೂಟ' ಚಳವಳಿ ನಡೆಸಿತು. ಅಂಟುಗೋಡು ವೆಂಕಟೇಶ್ ಮತ್ತು ಕಲ್ಕುಳಿ ವಿಟ್ಠಲ ಹೆಗ್ಡೆ ನೇತೃತ್ವದಲ್ಲಿ "ತುಂಗಭದ್ರ ನದಿ ಜನ ಜಾಥಾ" ನಡೆಸಲಾಯಿತು. ಚಳವಳಿ ದೇಶದ ಗಮನ ಸೆಳೆಯಿತು.

ಹೀಗೆ ಮೇಲಿನ ಹೋರಾಟಗಳನ್ನು ಉಲ್ಲೇಖಿಸುವ ಮಾನವ ಹೋರಾಟದ ಪ್ರಯತ್ನದಿಂದ, ಯಶಸ್ಸು ಸಾಧ್ಯ ಎಂಬ ಅಂಶವನ್ನು ಲೇಖಕರು ಇಲ್ಲಿ ಮನದಟ್ಟು ಮಾಡಿದ್ದಾರೆ.

ಆ) ಜೈವಿಕ ವೈವಿಧ್ಯ

೨.೫ ಬಿಲಿಯನ್ಸ್ ವರ್ಷಗಳ ಜೀವ ವಿಕಾಸದ ಭೂ ಇತಿಹಾಸದ ಅಂತಿಮ ಹಂತದಲ್ಲಿ ಮಾನವ ವಿಕಾಸಗೊಂಡಿದ್ದಾನೆ. ಈ ಅವಧಿಯ ದೀರ್ಘ ಜೈವಿಕ ವಿಕಾಸದ ಇತಿಹಾಸದಲ್ಲಿ ಲಕ್ಷಾಂತರ ಸೂಕ್ಷ್ಮ ಜೀವಿಗಳು, ಸಸ್ಯಗಳು, ಪ್ರಾಣಿಗಳು ವಿಕಾಸಗೊಂಡಿವೆ. ಹಾಗಾಗಿ ಇದೇ ಜೈವಿಕ ವೈವಿಧ್ಯ (Bio diversity) ಕುರಿತು ಲೇಖಕರು ಹೀಗೆ ಉಲ್ಲೇಖಿಸುತ್ತಾರೆ.

ಜೈವಿಕ ವೈವಿಧ್ಯ ಎಂದರೆ "ಇಂದು ಮಾನವನೊಂದಿಗೆ ಭೂಮಿಯಲ್ಲಿ ವಾಸಿಸುತ್ತಿರುವ ಬಗೆ ಬಗೆಯ ಸೂಕ್ಷ್ಮ ಜೀವಿಗಳು, ಸಸ್ಯಗಳು, ಪ್ರಾಣಿಗಳು ಮತ್ತು ವ್ಯವಸಾಯಕ್ಕಾಗಿ ಮಾನವ ಉಪಯೋಗಿಸುವ ಅನೇಕ ಪ್ರಕಾರಗಳಿರುವ ಬೆಳೆಗಳು ಹಾಗೂ ಜಾನುವಾರುಗಳು ಎಂದು ಡಾ.ಸ್ವಾಮಿನಾಥನ್ ಹೇಳುತ್ತಾರೆ.

ಒಂದು ಅಂದಾಜಿನ ಪ್ರಕಾರ ಭೂಗ್ರಹದಲ್ಲಿ ೧ ರಿಂದ ೩ ಮಿಲಿಯನ್ ಪ್ರಭೇದಗಳಿರಬಹುದು ಎಂದು ಹಸನ್ ಜಾವೀದ್ ಖಾನ್ ತಿಳಿಸಿದ್ದಾರೆ. ಇವುಗಳ ಪೈಕಿ ೧.೭೫ ಮಿಲಿಯನ್ ಪ್ರಭೇದಗಳನ್ನು ವೈಜ್ಞಾನಿಕವಾಗಿ ಗುರುತಿಸಲಾಗಿದೆ ಎಂದು ಗೌತಮ್ ಉಲ್ಲೇಖಿಸುತ್ತಾರೆ.

ಜೀವಸಮುದಾಯ ಎಷ್ಟು ಸಸ್ಯ, ಪ್ರಾಣಿಗಳು ಹಾಗೂ ಸೂಕ್ಷ್ಮ ಜೀವಿಗಳಿಂದ ಶ್ರೀಮಂತವಾಗಿದೆ ಎಂಬುದನ್ನು ಜೈವಿಕ ವೈವಿಧ್ಯ ತೋರಿಸುತ್ತದೆ. ಇಂತಹ ಜೈವಿಕ ಶ್ರೀಮಂತಿಕೆ ಉಷ್ಣವಲಯದ ಅರಣ್ಯಗಳು, ಜೌಗು ಪ್ರದೇಶಗಳು, ಹವಳದ ಬೆಳವಣಿಗೆಗಳು ಇವುಗಳೇ ಹೆಚ್ಚು ಎಂದು ಲೇಖಕರು ತಿಳಿಸಿದ್ದಾರೆ.

ಲೇಖಕರು ಜೈವಿಕ ವೈವಿಧ್ಯವನ್ನು ಮೂರು ವಿವಿಧ ಸ್ತರಗಳಲ್ಲಿ ಗುರುತಿಸುತ್ತಾರೆ.

ಅದರಲ್ಲಿ ಮುಖ್ಯವಾದುದು ಪ್ರಭೇದ ವೈವಿಧ್ಯ ಇದರಲ್ಲಿ ಭೂಮಿಯ ಮೇಲಿರುವ ಕೋಶರಹಿತ ವೈರಸ್‌ಗಳು ಮೈಕೋಪ್ಲಾಸ್ಮಗಳು, ಬ್ಯಾಕ್ಟೀರಿಯಗಳು ಸೇರಿ ಏಕಕೋಶ ಜೀವಿಗಳು, ಬಹುಕೋಶೀಯ ಸಸ್ಯಗಳು ಮತ್ತು ಪ್ರಾಣಿಗಳು. ಯಾವುದೇ ಜೈವಿಕ ಸಮುದಾಯ ಅಥವಾ ಪರಿಸರ ವ್ಯವಸ್ಥೆ ಸರಿಯಾಗಿ ಕ್ರಿಯಾಶೀಲವಾಗಿರ-ಬೇಕಾದರೆ ಪ್ರಬೇಧ ವೈವಿಧ್ಯ ಬಹುಮುಖ್ಯ. ಒಂದು ಜೀವಿ ಅಳಿದುಹೋದರೆ ಮತ್ತೊಂದು ಅಳಿದು ಹೋಗುತ್ತದೆ. ಲೇಖಕರು ಕೊಟ್ಟಿರುವ ಉದಾಹರಣೆಯಂತೆ ಯಕ್ಕ (Yucca) ಸಸ್ಯದ ಹೂಗಳ ಪರಾಗಸ್ಪರ್ಶವಾಗಬೇಕಾದರೆ ಪ್ರೂನ್ಯೂಬ ಎಂಬ ಕೀಟವೇ ಬೇಕು.

ಎರಡನೆಯದಾಗಿ ಅನುವಂಶೀಯ ವೈವಿಧ್ಯವನ್ನು ಗುರುತಿಸುತ್ತಾರೆ. ಇದರಲ್ಲಿ ಪ್ರತಿ ಪ್ರಭೇದದ ಜೀವಿಗಳಲ್ಲೂ ಇರುವ ವ್ಯತ್ಯಾಸ ಹಾಗೂ ವಿಶಿಷ್ಟತೆಗಳನ್ನು ಗುರುತಿಸಬಹುದು.

ಕೊನೆಯದಾಗಿ ಪರಿಸರ ವ್ಯವಸ್ಥೆಗಳ ವೈವಿಧ್ಯಗಳನ್ನು ಗುರುತಿಸುತ್ತಾರೆ. ಇದರಲ್ಲಿ ಜೈವಿಕ ಸಮುದಾಯದಲ್ಲಿ ಪರಿಸರ ವ್ಯವಸ್ಥೆಗಳಲ್ಲಿ ಜೀವಿಸುವ ಪ್ರಭೇದಗಳಲ್ಲಿನ ವಿಭಿನ್ನತೆಗಳು ಮತ್ತು ಅಂತರ ಸಂಬಂಧಗಳು, ಪರಿಸರ ವೈವಿಧ್ಯಗಳನ್ನು ನಾವು ಮರುಭೂಮಿ, ಸರೋವರಗಳು, ಹುಲ್ಲುಗಾವಲುಗಳು, ಸಾಗರಗಳು, ಉಷ್ಣವಲಯದ ಮಳೆ ಕಾಡುಗಳು, ಮತ್ತಿತರ ಪರಿಸರ ವ್ಯವಸ್ಥೆಗಳನ್ನು ಉದಾಹರಣೆಗಳನ್ನಾಗಿ ತೆಗೆದು ಲೇಖಕರು ಚರ್ಚಿಸುತ್ತಾರೆ.

ಲೇಖಕರು ಗುರುತಿಸಿರುವಂತೆ ೫೦೦ ಮಿಲಿಯನ್ ವರ್ಷಗಳ ಭೂ ಇತಿಹಾಸ ಹಾಗೂ ಜೀವವಿಕಾಸದಲ್ಲಿ ಅನೇಕ ಜೀವಿಗಳು ಕಣ್ಮರೆಯಾಗಿವೆ. ಆನೆಗಳ ಪೂರ್ವಜ ಪ್ರಾಣಿ ಮ್ಯಾಮೂತ್, ಡೈನೋಸಾರ್‌ಗಳು, ಆ ಕಾಲದ ಅನೇಕ ಅರಣ್ಯಗಳೂ ಪಳೆಯುಳಿಕೆಯ ರೂಪದಲ್ಲಿ ಉಳಿದಿವೆ. ಇಂತಹ ಅಳಿವುಗಳಿಗೆಲ್ಲ ಹವಾಮಾನ ಬದಲಾವಣೆ ಅಥವಾ ಉಲ್ಕೆ ಭೂಗ್ರಹಕ್ಕೆ ಅಪ್ಪಳಿಸಿದ್ದು ಇತ್ಯಾದಿ ಕೆಲವು ಕಾರಣಗಳನ್ನು ಊಹಿಸಲಾಗಿದೆ. ಆದರೆ ಈಗ ನಮ್ಮ ಕಣ್ಣ ಮುಂದೆ ಕಣ್ಮರೆ ಆಗುತ್ತಿರುವ ಜೀವಿಗಳ ಅಳಿವಿಗೆ ಮಾನವನೇ ಕಾರಣ. ವರ್ಷವೊಂದಕ್ಕೆ ೨೭,೦೦೦ ಪ್ರಭೇದಗಳು ಶೀಘ್ರವಾಗಿ ಕಣ್ಮರೆಯಾಗುತ್ತಿವೆ ಎಂಬ ಆತಂಕಕಾರಿ ಅಂಶವನ್ನು ಲೇಖಕರು ಕೃತಿಯಲ್ಲಿ ಹೊರಗೆಡವಿದ್ದಾರೆ.

ಅಮೇರಿಕಾದಲ್ಲಿ ಆದ ವಾಯುಮಾಲಿನ್ಯ ಕೆನಡದ ಕೋನಿಫೆರಸ್ ಅರಣ್ಯ-ಗಳನ್ನು ಆಮ್ಲೀಯ ಮಳೆಯಿಂದ (Acid rain) ಕೊಲ್ಲುತ್ತಿದೆ. ನಮ್ಮ ಉಷ್ಣವಲಯದ

ಮಳೆ ಕಾಡುಗಳಲ್ಲಿ ಪ್ರಪಂಚದ ಜೈವಿಕ ವೈವಿಧ್ಯದ ಸಂಗ್ರಹಾಲಯಗಳಾಗಿವೆ. ಅವುಗಳಲ್ಲಿ ನಮಗೆ ಪ್ರಪಂಚದಲ್ಲಿ ಈಗ ಗೊತ್ತಿರುವ ಪ್ರಭೇದಗಳ ಪೈಕಿ ಅರ್ಧದಷ್ಟು ಪ್ರಭೇದಗಳಿವೆ. ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಲ್ಲಿ ಈ ಕಾಡುಗಳು ಹೆಚ್ಚಾಗಿರುವುದರಿಂದ ಇವುಗಳ ನಾಶ ಅವ್ಯಾಹತವಾಗಿ ನಡೆಯುತ್ತಿದೆ ಎನ್ನುವ ಆತಂಕ ಲೇಖಕರದ್ದು.

ಭಾರತ ಬೃಹತ್ ಜೈವಿಕ ವೈವಿಧ್ಯದ ದೇಶ. ಇಲ್ಲಿ ಎರಡು ತೀಕ್ಷ್ಣ ಪ್ರದೇಶಗಳಿವೆ. ಪೂರ್ವ ಹಿಮಾಲಯ ಮತ್ತು ಪಶ್ಚಿಮ ಘಟ್ಟಗಳೆರಡೂ ತೀಕ್ಷ್ಣ ಪ್ರದೇಶಗಳು. ಇವುಗಳ ರಕ್ಷಣೆಯೇ ನಮ್ಮ ಪರಿಸರ ಪೌರಪ್ರಜ್ಞೆ ಎನ್ನುತ್ತಾರೆ ಲೇಖಕರು.

ಪ್ರಾಪಂಚಿಕ ಜೈವಿಕ ವೈವಿಧ್ಯ ಕಾರ್ಯತಂತ್ರದ ಪ್ರಕಾರ (WRI/IUCN/UNEP-1992) ಈ ಕೆಳಗಿನವು ಜೈವಿಕ ವೈವಿಧ್ಯ ಕಡಿಮೆಯಾಗಲು ಮುಖ್ಯ ಕಾರಣಗಳು. ಪರಿಸರ ಪೌರಪ್ರಜ್ಞೆಯಿಂದ ಮಾನವ ತಿದ್ದಿಕೊಳ್ಳಬೇಕು.

೧) ಜನಸಂಖ್ಯಾ ಸ್ಫೋಟ ಮತ್ತು ಹೆಚ್ಚು ನೈಸರ್ಗಿಕ ಸಂಪನ್ಮೂಲ ಬೇಡಿಕೆ

೨) ಪರದೇಶಿ ಪ್ರಭೇದಗಳನ್ನು ಪ್ರವೇಶಗೊಳಿಸುವುದು. ಉದಾಹರಣೆಗೆ ಯೂಕಲಿಪ್ಟಸ್- ಇತ್ಯಾದಿ

೩) ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಅರ್ಥಮಾಡಿಕೊಳ್ಳದಿರುವ ಆರ್ಥಿಕ ವ್ಯವಸ್ಥೆ.

೪) ಸರಿಯಾದ ತಿಳುವಳಿಕೆ ಇಲ್ಲದಿರುವಿಕೆ.

೫) ಕಾಯ್ದೆಗಳ ಹಾಗೂ ಸಂಸ್ಥೆಗಳ ಮೂಲಕ ನೈಸರ್ಗಿಕ ಸಂಪನ್ಮೂಲಗಳನ್ನು ಅವು ಪಡೆದುಕೊಳ್ಳಲಾಗದಷ್ಟನ್ನು ಬಳಸಿಕೊಳ್ಳುವುದು.

ಅಪಾಯದ ಅಂಚಿನಲ್ಲಿ ಅಥವಾ ಕಣ್ಮರೆಯಾಗುವ ಸ್ಥಿತಿಯಲ್ಲಿರುವ ಪ್ರಬೇಧವನ್ನು ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಸಂಗ್ರಹಿಸಿದಂತೆ ನೋಡಿಕೊಳ್ಳಬೇಕು ಎಂದು ಲೇಖಕರು ತಿಳಿಸುತ್ತಾರೆ.

ಪ್ರತ್ಯೇಕ DNA ರಕ್ಷಣೆ ಮಾಡುವುದರ ಮೂಲಕ ಅಳಿದು ಹೋದ ಜೀವಯಿಂದಲೂ ತೆಗೆದು ರಕ್ಷಿಸಿಡಲು ಸಾಧ್ಯ ಎಂದು ಲೇಖಕರು ಸಲಹೆ ನೀಡುತ್ತಾರೆ.

ಇ) ಪ್ಲಾಸ್ಟಿಕ್

ನವಯುಗದ ಬ್ರಹ್ಮರಾಕ್ಷಸ ಎಂದೇ ಕರೆಸಿಕೊಳ್ಳುವ ಪ್ಲಾಸ್ಟಿಕ್ ಇಂದು ಪರಿಸರಕ್ಕೆ ಮಾರಕವಾಗಿ ಪರಿಣಮಿಸಿದೆ.

೧೮೮೫ರಲ್ಲಿ ಅಲೆಗ್ಸಾಂಡರ್ಸ್ ಪಾರ್ಕ್ಸ್ ಎಂಬಾತ ಈ ಪ್ಲಾಸ್ಟಿಕ್ ಕಂಡುಹಿಡಿದ.

ಪ್ರಪಂಚದ ಎರಡನೇ ಮಹಾಯುದ್ಧದ ಕಾಲದಲ್ಲಿ ಪ್ಲಾಸ್ಟಿಕ್ ಬಳಕೆಗೆ ಬಂತು. ನೈಲಾನ್ ಅನ್ನು ಬಟ್ಟೆಗಳಿಗೂ, ಸಂಶ್ಲೇಷಿತ ರಬ್ಬರ್‌ಗಾಗಿ ಪಾಲಿಸ್ಟರ್‌ಗಳನ್ನು ಯುದ್ಧಕಾಲದಲ್ಲಿ ಉಪಯೋಗಿಸಲು ಪ್ರಾರಂಭಿಸಿದರು. ೧೯೩೦ರಲ್ಲಿ ವೀನೈಲ್ ಕ್ಲೋರೈಡ್, ಎಥಿಲೀನ್ ಹಾಗೂ ಸ್ಟೈರೀನ್‌ಗಳನ್ನು ಉಪಯೋಗಿಸಿ ಥರ್ಮೋ ಪ್ಲಾಸ್ಟಿಕ್‌ಗಳ ತಯಾರಿಕೆ ಪ್ರಾರಂಭವಾಯಿತು. ಆದರೆ ೧೯೬೦ ರಿಂದ ಪ್ಲಾಸ್ಟಿಕ್‌ನ ಅನೇಕ ಉಪಯೋಗಗಳಿಗಾಗಿ ಜನ ಅದನ್ನು ಹೆಚ್ಚಾಗಿ ಬಳಸಲು ಪ್ರಾರಂಭಿಸಿದರು.

೧೯೭೩ರಲ್ಲಿ ೪೦ ಮಿಲಿಯನ್ ಟನ್‌ಗಳಷ್ಟು ಪ್ಲಾಸ್ಟಿಕ್ ಉಪಯೋಗಿಸಲಾಗುತ್ತಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಪ್ರಪಂಚದಲ್ಲಿ ಅಲ್ಯೂಮಿನಿಯಂ, ಸತು, ಸೀಸ ಹಾಗೂ ತಾಮ್ರಗಳ ಒಟ್ಟು ಎಷ್ಟು ಉತ್ಪಾದನೆಯಾಗುತ್ತದೋ ಅದಕ್ಕಿಂತ ಹೆಚ್ಚಿಗೆ ಪ್ಲಾಸ್ಟಿಕ್ ಉತ್ಪತ್ತಿಯಾಗುತ್ತಿದೆ. ಆರೋಗ್ಯ, ವಿಮಾನ ಹಾಗೂ ಎಲೆಕ್ಟ್ರಾನಿಕ್ ಕೈಗಾರಿಕೆಗಳಲ್ಲೆಲ್ಲಾ ಇದಕ್ಕೆ ಆದ್ಯತೆ. ಉಕ್ಕಿಗಿಂತ ಹಗುರವಾಗಿರುವುದರಿಂದ ಇದನ್ನು ವಾಹನ ಕೈಗಾರಿಕೆಯಲ್ಲೂ ಉಪಯೋಗಿಸುತ್ತಾರೆ.

ಲೇಖಕರು ಪ್ಲಾಸ್ಟಿಕ್‌ನ ಹಲವು ವಿಧಗಳನ್ನು ಈ ಕೆಳಕಂಡಂತೆ ಗುರುತಿಸುತ್ತಾರೆ.

೧) **ಪಾಲಿ ಎಥಿಲೀನ್:** ಚೀಲಗಳು ಪೈಪುಗಳು, ಮುಚ್ಚಳಗಳು, ಆಟದ ಸಾಮಾನು ಇತ್ಯಾದಿ.

೨) **ಪಾಲಿ ಪ್ರೋಪಿಲೀನ್:** ಮನೆ ಸಾಮಾನುಗಳು, ವಾಹನಗಳ ಬಿಡಿಭಾಗಗಳು, ಬ್ಯಾಟರಿ ಭಾಗಗಳು, ಬಂಪರ್‌ಗಳು, ಸೀಸೆಗಳು, ಸಿರಿಂಜ್‌ಗಳು ಇತ್ಯಾದಿ.

೩) **ಪಾಲಿಸ್ಟೈರೀನ್:** ಅಡಿಗೆ ಸಾಮಾನು ಇಟ್ಟುಕೊಳ್ಳುವ ಪಾತ್ರೆಗಳು ಉಪಯೋಗಿಸಿ ಆಚೆಗೆಸೆಯುವ ರೇಜರ್‌ಗಳು, ಆಟದ ಸಾಮಾನುಗಳು, ಕಛೇರಿ ಸಲಕರಣೆಗಳು.

೪) **ಪಾಲಿವೀನೈಲ್ ಕ್ಲೋರೈಡ್:** ನೀರಿನ ಕೊಳವೆಗಳು, ಬ್ಯಾಗೇಜ್, ನೆಲದ ಕವರಿಂಗ್‌ಗಳು, ಮನೆಯಲ್ಲಿ ಉಪಯೋಗಿಸುವ ಸಲಕರಣೆಗಳು

೫) **ಪಾಲಿಟೆಟ್ರ ಫ್ಲೋರೋಎಥಿಲಿನ್ ಅಥವಾ ಟೆಫ್ಲಾನ್:** ವೈದ್ಯಕೀಯ ಸಲಕರಣೆಗಳಾದ ಆರ್ಥೋಪೀಡಕ್, ಕಿವಿ ಕೇಳಿಸಲು ಉಪಯೋಗಿಸುವ ಸಾಮಾನುಗಳು, ಕಾರು ಬಸ್‌ಸೀಟುಗಳ ಕವರ್‌ಗಳು, ಮನೆಯ ನಾನ್‌ಸ್ಟಿಕ್ ಕಾವಲಿಗಳು.

೬) **ಪಾಲಿಮಿಥೈಲ್ ಮೆಥಾಕ್ರೈಲೇಟ್ ಅಥವಾ ಪ್ಲೆಕ್ಸಿಗ್ಲಾಸ್:** ಗಾಜಿಗೆ ಬದಲಾಗಿ ಉಪಯೋಗಿಸುವುದು. ಆಪ್ಟಿಕಲ್ ಫೈಬರ್ಸ್, ಕಾಂಟಾಕ್ಟ್, ಲೆನ್ಸ್‌ಗಳು ಇತ್ಯಾದಿ.

೭) **ಪಾಲಿಮೈಡ್ಸ್:** ಆಹಾರ ಪ್ಯಾಕ್ ಮಾಡಲು, ವಿದ್ಯುತ್, ಗ್ಯಾಸ್, ಮತ್ತು ಇಂಧನ ಪೈಪ್‌ಗಳು, ಷೂಗಳು, ಟ್ರೆಸಿಕಲ್ ಸೀಟ್‌ಗಳು ಇತ್ಯಾದಿ.

೮) **ಸಿಲಿಕೋನ್ ಪ್ಲೋಯಿಡ್:** ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳು, ವಾರ್ನಿಷ್‌ಮೇಣ, ಸೌಂದರ್ಯ, ಶಸ್ತ್ರಕ್ರಿಯೆ.

೯) **ಯೂರಿಯ ಫಾರ್ಮಾಲ್ಡಿಹೈಡ್:** ಆರ್ಗ್ಯಾನಿಕ್ ಗ್ಲಾಸ್ ಡಿಷ್‌ಗಳು.

೧೦) **ಪಾಲಿಎಸ್ಟರ್‌ಗಳು:** ಬಟ್ಟೆ ಕೈಗಾರಿಕೆ, ಸೀಸೆಗಳು, ಸ್ವಿಚ್‌ಗಳು, ಫ್ಯೂಸ್‌ಗಳು, ಸಾಕೆಟ್‌ಗಳು ಇತ್ಯಾದಿ.

ಹೀಗೆ ಲೇಖಕರು ವಿವಿಧ ಪ್ಲಾಸ್ಟಿಕ್ ಮಾದರಿಗಳನ್ನು ಓದುಗರಿಗೆ ಪರಿಚಯಿಸಿದ್ದಾರೆ.

ಪ್ಲಾಸ್ಟಿಕ್ ಅನ್ನು ಉತ್ಪಾದಿಸುವಾಗ ಹೊರಬರುವ ಬೆನ್‌ಜೀನ್, ಕ್ಸೈಲೀನ್ ಮುಂತಾದ ರಸಾಯನಿಕಗಳು ಜನ್ಮ ವೈಕಲ್ಯಗಳಿಂದ ಹರಿದು ಕ್ಯಾನ್ಸರ್‌ವರೆಗೂ ಅನೇಕ ಖಾಯಿಲೆಗಳನ್ನು ಉಂಟು ಮಾಡುತ್ತದೆ. ಗಂಡುಮಕ್ಕಳ ಬೀಜಗಳು ಕೆಳಗಿಳಿಯದಿರುವ ತೊಂದರೆ ಇಲ್ಲವೇ ಜನನಾಂಗ ಸಣ್ಣದಿರುವುದು ಆಗುತ್ತದೆ.

ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಪ್ಲಾಸ್ಟಿಕ್ ಬಳಕೆ ಪ್ರಪಂಚವನ್ನೆಲ್ಲಾ ಆಕ್ರಮಿಸಿದೆ. ಇವು ಪರಿಸರದಲ್ಲಿ ಕೊಳೆಯುವುದಿಲ್ಲ. ಮಣ್ಣು ಮುಚ್ಚಿ ಭೂಮಿಯಲ್ಲಿ ಹುದುಗಿಸಿದರು ನೂರಾರು ವರ್ಷ ಹಾಗೇ ಇರುತ್ತದೆ.

ಪ್ಲಾಸ್ಟಿಕ್ ವಸ್ತುಗಳನ್ನು ಸಮುದ್ರದಲ್ಲೆಸೆಯುವುದರಿಂದ ಚೀಲಗಳನ್ನು ನುಂಗಿ ಸುಮಾರು ೧೦೦.೦೦೦ ತಿಮಿಂಗಲಗಳು, ಸೀಲ್‌ಗಳು, ಆಮೆಗಳು ಮತ್ತು ಹಕ್ಕಿಗಳು ಪ್ರತಿವರ್ಷ ಸಾಯುತ್ತಿರುವ ಆಘಾತಕಾರಿ ಅಂಶ ಲೇಖಕರಿಗೆ ಗಾಬರಿ ಹುಟ್ಟಿಸಿದೆ.

ಭಾರತಕ್ಕೆ ದಿನವೊಂದಕ್ಕೆ ೨೫ಲಕ್ಷ ಚೀಲಗಳು ಬೇಕು ಎಂಬ ಒಂದು ಅಂದಾಜಿದೆ. ಮನೆಯ ಬಹುತೇಕ ಅಗತ್ಯಗಳಿಗಾಗಿ ನಾವು ಇಂದು ಪ್ಲಾಸ್ಟಿಕ್ ಅನ್ನು ಬಹುವಾಗಿ ಆಶ್ರಯಿಸಿದ್ದೇವೆ. ಮನೆಯ ಮೇಲಿನ ನೀರಿನ ಟ್ಯಾಂಕ್‌ನಿಂದ ಹಿಡಿದು ಶೌಚಾಲಯದವರೆಗೂ ಪ್ಲಾಸ್ಟಿಕ್‌ಮಯವಾಗಿದೆ.

ಪ್ಲಾಸ್ಟಿಕ್ ಬಳಕೆಗೆ ಬದಲಾಗಿ ಪರ್ಯಾಯವಾದುದನ್ನು ಕಂಡುಹಿಡಿಯಬೇಕು ಎಂದು ಲೇಖಕರು ಅಭಿಪ್ರಾಯಪಡುತ್ತಾ, ಕರಗುವ ಪ್ಲಾಸ್ಟಿಕ್ ಬಗ್ಗೆಯೂ ನಮಗೆ ಮಾಹಿತಿ ನೀಡುತ್ತಾರೆ. ಪ್ಲಾಸ್ಟಿಕ್‌ನಿಂದಾಗುವ ಆಘಾತಕಾರಿ ಪರಿಣಾಮ ವಿವರಿಸುತ್ತಾ, ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣಕ್ಕೆ ಮುಂದಾಗಲು ಈ ಮೂಲಕ ಕರೆ ನೀಡಿದ್ದಾರೆ.

ಈ) E–ಕ್ಷೇಪ್ಯಗಳು

ಇಂದು ಜಾಗತಿಕವಾಗಿ ಜಗತ್ತನ್ನು ಕಾಡುತ್ತಿರುವ ಈ–ಕ್ಷೇಪ್ಯಗಳು. ಇವುಗಳ ವಿಲೇವಾರಿಯೇ ನಮಗೆ ಇಂದು ದೊಡ್ಡ ಸಮಸ್ಯೆಯಾಗಿದೆ:

"ಈ-ಕ್ಷೇಪ್ಯಗಳೆಂದರೆ ಹಳೆಯ ಹಾಗೂ ಉಪಯೋಗಕ್ಕೆ ಬಾರದ ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೊರಗೆಸೆಯುವುದರಿಂದಾಗುವ ರಾಶಿ" ಎಂದು ಲೇಖಕರು ವಿವರಣೆ ಕೊಡುತ್ತಾರೆ. ಹಳೆಯ ಕಂಪ್ಯೂಟರ್‌ಗಳು, ಸರ್ವರ್‌ಗಳು, ಮೇನ್ ಫ್ರೇಮ್‌ಗಳು, ಮಾನಿಟರ್‌ಗಳು, ಟಿವಿಗಳು, ಸೆಲ್ಯುಲಾರ್ ಫೋನ್‌ಗಳು, ಪೇಜರ್‌ಗಳು, ಕ್ಯಾಲ್ಕುಲೇಟರ್‌ಗಳು, ಆಡಿಯೋ ಮತ್ತು ವಿಡಿಯೋ ಉಪಕರಣಗಳು, ಪ್ರಿಂಟರ್‌ಗಳು, ಸ್ಕ್ಯಾನರ್‌ಗಳು, ಕಾಪಿಯರ್‌ಗಳು, ಫ್ಯಾಕ್ಸ್ ಮೆಷಿನ್‌ಗಳು, ಮೈಕ್ರೋವೇವ್, ಓವನ್‌ಗಳು, ಕೈಗಾರಿಕಾ ಇಲೆಕ್ಟ್ರಾನ್ ಉಪಕರಣಗಳು, ಸುರಕ್ಷತೆಗಾಗಿ ಬಳಸುವ ಉಪಕರಣಗಳು, ಸ್ವಯಂಚಾಲಿತ ವಾಹನಗಳ ಎಲೆಕ್ಟ್ರಾನಿಕ್ ಪರಿಕರಗಳು, ಸುಮಾರು ಸಾವಿರಕ್ಕೂ ಹೆಚ್ಚು ಪರಿಕರಗಳು ಅಪಾಯಕಾರಕ ಈ-ಕ್ಷೇಪ್ಯಗಳ ಗುಂಪಿಗೆ ಸೇರುತ್ತವೆ."[೪೭] ಎಂದು ಪತ್ರಿಕೆ ವರದಿ ಮಾಡಿದೆ.

ಇವುಗಳ ಗುಂಪನ್ನು ವೀ (WEEE-Waste electrical and electronic equipment) ಎನ್ನುತ್ತಾರೆ.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಪ್ರತಿವರ್ಷವೂ ಒಂದೂವರೆ ಲಕ್ಷ ಟನ್‌ಗಳಷ್ಟು ವೀ-ಕ್ಷೇಪ್ಯದ ಉತ್ಪಾದನೆಯಾಗುತ್ತದೆ. ಇನ್ನೂ ಮೂರೇ ವರ್ಷಗಳಲ್ಲಿ ಇದು ೮ ಲಕ್ಷ ಟನ್‌ಗಳಷ್ಟಾಗಬಹುದೆಂದು ಅಂದಾಜು ಇದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರತಿವರ್ಷ ೫೦ ದಶಲಕ್ಷಟನ್ ಈ-ತ್ಯಾಜ್ಯಗಳು ಉತ್ಪಾದನೆಯಾಗುತ್ತಿವೆ ಎಂಬ ಆತಂಕದ ಅಂಕಿ-ಅಂಶಗಳನ್ನು ಲೇಖಕರು ನೀಡುತ್ತಾರೆ.

ಡೆಲ್ಲಿ, ಬೆಂಗಳೂರು, ಮುಂಬೈ, ಚೆನ್ನೈ, ಕೊಲ್ಕತ್ತಾ, ಅಹ್ಮದಾಬಾದ್, ಹೈದರಾಬಾದ್, ಪುಣೆ, ಸೂರತ್, ನಾಗ್‌ಪುರ್ ಈ ನಗರಗಳಲ್ಲಿ ಈ ಸಮಸ್ಯೆ ಉಲ್ಬಣಗೊಂಡಿದೆ.

ಭಾರತಕ್ಕೆ ವಂತಿಗೆ ಮತ್ತು ದಾನದ ರೂಪದಲ್ಲಿ ಪ್ರತಿವರ್ಷವೂ ೫೦,೦೦೦ ಟನ್‌ಗಳಷ್ಟು ಈ-ಕ್ಷೇಪ್ಯಗಳು ಭಾರತಕ್ಕೆ ಬರುತ್ತಿವೆ ಎಂದು ಲೇಖಕರು ತಿಳಿಸಿದ್ದಾರೆ.

ಈ ಕ್ಷೇಪ್ಯಗಳಲ್ಲಿ ಪಾದರಸ, ಸೀಸ, ಕ್ಯಾಡ್ಮಿಯಂ, ಕ್ರೋಮಿಯಂ ಮುಂತಾದ ವಿಷಕಾರಿ ಭಾರಲೋಹಗಳಿವೆ. ಈ ಭಾರಲೋಹಗಳು ಮತ್ತು ವಿಷಗಳಿಂದ ಪರಿಸರ ಮಲಿನವಾಗುವುದು ಮಾತ್ರವಲ್ಲ. ಮಾನವನಿಗೆ ಬಗೆಬಗೆಯ ಕಾಯಿಲೆಗಳು ಬರುತ್ತವೆ ಎಂಬ ಆತಂಕಕಾರಿ ಅಂಶವನ್ನು ಲೇಖಕರು ಉಲ್ಲೇಖಿಸುತ್ತಾರೆ.

---

೪೭. ಇಂಡಿಯನ್ ಎಕ್ಸ್‌ಪ್ರೆಸ್, ದಿನಾಂಕ ೧೬-೦೭-೨೦೦೮

"ಒಂದು ಅಂದಾಜಿನ ಪ್ರಕಾರ ಬೆಂಗಳೂರಿನಲ್ಲಿ ೮೦೦೦-೧೦೦೦೦ ಟನ್‌ಗಳಷ್ಟು ಈ-ಕ್ಷೇಪ್ಯ ಉತ್ಪಾದನೆಯಾಗುತ್ತದೆ."[೪೮]

ಪೌರಪ್ರಜ್ಞೆಯಿಂದ ಈ-ಕ್ಷೇಪ್ಯಗಳನ್ನು ನಿಯಂತ್ರಿಸುವುದು ಸದ್ಯದ ಅಗತ್ಯ ಮತ್ತು ಅನಿವಾರ್ಯವಾಗಿದೆ.

ಉ) ಜಾಗತಿಕ ತಾಪಮಾನ

ಮಾನವನ ಐಷಾರಾಮಿ, ಸೋಮಾರಿ ವರ್ತನೆ, ಪೂರ್ವಾಲೋಚನೆ ಇಲ್ಲದ ನಡವಳಿಕೆಗಳಿಂದ ಅನೇಕ ಪ್ರಾಕೃತಿಕ ಅವಘಡಕ್ಕೆ ಇಂದು ಕಾರಣೀಭೂತನಾಗಿದ್ದಾನೆ. ಅವುಗಳಲ್ಲಿ ಪ್ರಸ್ತುತ ಜಾಗತಿಕ ಸಮಸ್ಯೆಗಳ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿರುವುದು ಜಾಗತಿಕ ತಾಪಮಾನ. ಈ ಕುರಿತು ವಿಶ್ವದೆಲ್ಲೆಡೆ ಬಹು ಚರ್ಚಿತವಾಗುತ್ತಿರುವ ಮಹತ್ವದ ವಿಷಯವಾಗಿದೆ. ಮನುಕುಲದ ಅಳಿವು ಮತ್ತು ಉಳಿವಿನ ಪ್ರಶ್ನೆಯಂತೆ ಇದು ಚರ್ಚಿತವಾಗುತ್ತಿದೆ.

ಹವಾಮಾನದ ಮುಖ್ಯ ಅಂಶಗಳೆಂದರೆ ಅವಪಾತ, ಆರ್ದ್ರತೆ, ತಾಪಮಾನ, ಬೆಳಕು, ಗಾಳಿ, ಇವುಗಳ ಪೈಕಿ ಜಾಗತಿಕ ಉಷ್ಣೀಕರಣ ಮತ್ತು ಹವಾಮಾನ ಬದಲಾವಣೆಗೆ ಮುಖ್ಯ ಕಾರಣ ಜಗತ್ತಿನ ತಾಪಮಾನ ಹೆಚ್ಚುತ್ತಿರುವುದು. ಇದಕ್ಕೆ ಪೌರಪ್ರಜ್ಞೆ, ಪರಿಸರಪ್ರಜ್ಞೆ ಇಲ್ಲದ ಮಾನವನ ಕುಕೃತ್ಯದಿಂದ ಪಳೆಯುಳಿಕೆ ಇಂಧನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉರಿಸಿರುವುದು, ಹಾಗೂ ಕೈಗಾರಿಕೀಕರಣ, ಅರಣ್ಯನಾಶ ಇತ್ಯಾದಿ ಪರಿಣಾಮಗಳಿಂದ ವಾತಾವರಣದಲ್ಲಾಗುವ ಸಸ್ಯಾಗಾರ ಪರಿಣಾಮ (Green house effect) ಆಗಿದೆ.

ಫ್ರೆಂಚ್ ವಿಜ್ಞಾನಿ ಜೆ.ಟಿ.ಫಾರಿಯರ್ ಪ್ರಪ್ರಥಮವಾಗಿ 'ವಾತಾವರಣದಲ್ಲಿ ಅನಿಲಗಳು ಭೂತಾಪಮಾನವನ್ನು ನಿಯಂತ್ರಿಸುತ್ತವೆ. ಕಾರ್ಬನ್ ಡೈ ಆಕ್ಸೈಡ್ (C2) ನಂತಹ ಅನಿಲಗಳು ವಾತಾವರಣವನ್ನು ಗಾಜಿನಂತೆ ವರ್ತಿಸುವಂತೆ ಮಾಡಿ ಉಷ್ಣತೆ ಭೂಮಿಯಿಂದ ತಪ್ಪಿಸಿಕೊಳ್ಳದಂತೆ ಮಾಡಿ ಸಸ್ಯ ತೋಟಗಳಲ್ಲಿರುವ ಗಾಜಿನ ಮನೆಯಂತೆ ಉಷ್ಣತೆ ಭೂಮಿಯಿಂದ ತಪ್ಪಿಸಿಕೊಳ್ಳದಂತೆ ಮಾಡುತ್ತದೆ. ಜಾನ್ ಟಿಂಡಾಲ್ ಇಂಗಾಲದ ಡೈ ಆಕ್ಸೈಡ್ ಮತ್ತು ನೀರಿನ ಆವಿ ಶಾಖವನ್ನು ಹೀರಿ-ಕೊಳ್ಳುವುದನ್ನು ಅಳೆದು ಹಿಂದಿನ ಹಿಮ ಯುಗಗಳ ಕಾರಣವನ್ನು ವಿವರಿಸಿದನು.

ಸ್ವೀಡನ್ನಿನ ರಸಾಯನಶಾಸ್ತ್ರಜ್ಞ ಆರ್ ಹೀನಿಯಸ್ ವಿರುದ್ಧ ಸಾಧ್ಯತೆಗಳ ಬಗ್ಗೆ ವರದಿ ಮಾಡಿದ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಸಾರತೆ ದ್ವಿಗುಣಗೊಂಡರೆ

---

೪೮. ಮಧುಮಿತ ಮತ್ತು ಸೇನ್, ಡೆಕನ್ ಕ್ರಾನಿಕಲ್, ೦೬-೦೫-೨೦೧೦

ಜಾಗತಿಕ ತಾಪಮಾನ ೫ ರಿಂದ ೬ ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚುವ ಬಗ್ಗೆ ವರದಿಯನ್ನು ಕೃತಿಕಾರರು ಉಲ್ಲೇಖಿಸುತ್ತಾರೆ.

ಜಾಗತಿಕ ತಾಪಮಾನದಿಂದ ಹಿಮಗೆಡ್ಡಗಳು ಕರಗಿ ಭೂಮಿಯ ಕೆಲಭಾಗ ಮುಳುಗುವ ಸಾಧ್ಯತೆಯಿದೆ. ಹಾಗೆಯೇ ಬಿರುಗಾಳಿ, ಭೂಕಂಪ ಇನ್ನಿತರ ಪ್ರಾಕೃತಿಕ ದುರಂತಗಳಿಗೆ ಕಾರಣವಾಗುತ್ತದೆ. ಜಾಗತಿಕ ಉಷ್ಣೀಕರಣ ಮತ್ತು ಹವಾಮಾನ ಬದಲಾವಣೆಯನ್ನು ನಿಲ್ಲಿಸಿ ಎಂದು ಪ್ರಪಂಚದ ಗಮನ ಸೆಳೆಯಲು ಮಾಲ್ಡೀವ್ಸ್ ಮಂತ್ರಿಮಂಡಲದ ಸಭೆಯನ್ನು ಸಮುದ್ರದ ಆಳದಲ್ಲಿ ನಡೆಸಲಾಯಿತು.

ಜಾಗತಿಕ ಉಷ್ಣೀಕರಣ ಹವಾಮಾನ ಬದಲಾವಣೆಗಳೊಂದಿಗೆ ಜನಸಂಖ್ಯಾ ಸ್ಫೋಟ ಮುಂದುವರೆದರೆ ಸಿಹಿನೀರಿನ ಕೊರತೆ ೨೦೨೫ನೇ ವರ್ಷದ ಹೊತ್ತಿಗೆ ಹೆಚ್ಚಾಗಬಹುದು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಅಮೇರಿಕಾದ ಪಾರ್ಲಿಮೆಂಟ್ ಕೂಡ ಹವಾಮಾನ ಬದಲಾವಣೆಯ ಮಸೂದೆಯನ್ನು ಒಪ್ಪಿಕೊಂಡಿದೆ. IPCCಯ ೫ನೇ ವರದಿ ೨೦೧೪ರಲ್ಲಿ ಹೊರಬರುವ ನಿರೀಕ್ಷೆ ಇದೆ. ಸಮಿತಿಯ ಮುಖ್ಯಸ್ಥರಾದ ರಾಜೇಂದ್ರ ಪಚೌರಿ ಅವರ ಪ್ರಕಾರ ಈ ವರದಿಯಲ್ಲಿ ಜಾಗತಿಕ ಉಷ್ಣೀಕರಣದ ಸ್ಥಳೀಯ ಹವಾಮಾನ ಪ್ರಭಾವ ಪರಿಣಾಮಗಳನ್ನು ಅಧ್ಯಯನ ಮಾಡಲಾಗುತ್ತದೆ. ಹೆಚ್ಚಿದ ಉಷ್ಣತೆಗನುಗುಣವಾಗಿ ದೇಶಗಳು ಮಾರ್ಪಾಡು ಮಾಡಿಕೊಳ್ಳುವಿಕೆಯನ್ನು ಅಧ್ಯಯನ ಮಾಡಲಾಗುತ್ತದೆ. IPCC ೨೦೦೭ರ ವರದಿಯ ಪ್ರಕಾರ ಪ್ರಾಪಂಚಿಕ ಉಷ್ಣತೆ ೨೦೦೫ರ ಹೊತ್ತಿಗೆ ೪-೫ ಡಿಗ್ರಿ ಸೆಲ್ಸಿಯಸ್‌ನಷ್ಟು ಹವಾಮಾನ ಬದಲಾವಣೆ ತರಬಹುದು ಎಂದಿತ್ತು.

ಆಗಷ್ಟು ಫ್ರಿಡ್ಜ್, ಕೂಲರ್ ಮುಂತಾದ ಯಂತ್ರನಾಗರೀಕತೆಯನ್ನು ಕಡಿಮೆಗೊಳಿಸಿ, ಹಸುರೀಕರಣದಿಂದ ತಾಪಮಾನವನ್ನು ಕಡಿಮೆ ಮಾಡಿಕೊಳ್ಳ ಬಹುದಾದ ಸಾಧ್ಯತೆಯನ್ನು ಲೇಖಕರು ವಿವರಿಸಿದ್ದಾರೆ.

ಶ್ರೀಮಂತ ರಾಷ್ಟ್ರಗಳು CO_2 ನಂತಹ ಸಸ್ಯಗಾರ ಅನಿಲಗಳ ಉತ್ಪನ್ನವನ್ನು ಕಡಿಮೆ ಮಾಡಿಕೊಳ್ಳಬೇಕು. ಸಸ್ಯಾಗಾರ ಅನಿಲಗಳನ್ನು ಹೊರಬಿಡುವುದರಲ್ಲಿ ಶೇಕಡ ೨೫ ರಿಂದ ೪೦ರವರೆಗೆ ಕಡಿಮೆ ಮಾಡಿಕೊಳ್ಳಬೇಕು ಎಂದು ಹೇಳಲಾಗಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ೪೦೦ ಬಿಲಿಯನ್ (೧ ವರ್ಷಕ್ಕೆ) ಡಾಲರ್-ಗಳಷ್ಟು ಸಹಾಯ ಧನ ನೀಡಬೇಕು. ಶುದ್ಧ ಹಸಿರು ತಂತ್ರಜ್ಞಾನವನ್ನು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಕೊಡಬೇಕು.

ಪಟ್ಟಣಗಳಲ್ಲಿ ಸಾಧ್ಯವಾದಷ್ಟು ಬಸ್ ಅಥವಾ ರೈಲುಗಳಲ್ಲೇ ಪ್ರಯಾಣ ಮಾಡುವುದು, ಬೈಸಿಕಲ್‌ಗಳನ್ನು ಜನಪ್ರಿಯಗೊಳಿಸುವುದು ಇತ್ಯಾದಿ ಕ್ರಮಗಳಿಗೆ ಮುಂದಾಗಬೇಕು.

ಪ್ರಪಂಚವನ್ನು ತಂಪು ಮಾಡಲು ಪ್ರಾಪಂಚಿಕ ಸೌರಛಾಯೆಯ ಸೃಷ್ಟಿ. ಹಡಗುಗಳಿಂದ ಸಮುದ್ರದ ಮೇಲಿನ ಮೋಡಗಳಿಗೆ ಸೂಕ್ಷ್ಮ ಉಪ್ಪು ನೀರಿನ ಸ್ಪ್ರೇ ಮಾಡುವುದು. ಇದರಿಂದಾಗಿ ಮೋಡಗಳ ಪ್ರತಿಬಿಂಬಿಸುವ ಶಕ್ತಿ ಹೆಚ್ಚಾಗುತ್ತದೆ.

ಊ) ಪರಮಾಣು ಸ್ಥಾವರ

ಯಾವುದೇ ದೇಶದ ಅಭಿವೃದ್ಧಿ ನಿಂತಿರುವುದು ಆ ದೇಶದ ಶಕ್ತಿ ಸಂಪನ್ಮೂಲಗಳ ಮೇಲೆ. ಶಕ್ತಿಯ ವಿಷಮ ಸ್ಥಿತಿ (Energy Crisis) ಉಂಟಾದರೆ ದೇಶದ ಅಭಿವೃದ್ಧಿಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಜನಸಂಖ್ಯೆ ಬೆಳೆದಂತೆಲ್ಲಾ ಶಕ್ತಿಯ ಪೂರೈಕೆಯ ಬೇಡಿಕೆ ಹೆಚ್ಚಾಗುತ್ತದೆ. ಇದಕ್ಕಾಗಿ ನಾನಾ ಮೂಲಗಳ ಮೊರೆ ಹೋಗಬೇಕಾಗುತ್ತದೆ.

ಶಕ್ತಿಯ ವಿಷಮಸ್ಥಿತಿ ೨೫೦೦ ವರ್ಷಗಳ ಹಿಂದೆ ಗ್ರೀಕರನ್ನು, ೨೦೦೦ ವರ್ಷಗಳ ಹಿಂದೆ ರೋಮನ್ನರನ್ನೂ ಬಾಧಿಸಿತ್ತು. ಚಳಿಗಾಲದಲ್ಲಿ ಅವರ ಮನೆಗಳನ್ನು ಬಿಸಿಯಾಗಿಡಲು ಇದ್ದಿಲ ಒಲೆಗಳನ್ನು ಉಪಯೋಗಿಸುತ್ತಿದ್ದರು. ರೋಮನ್ನರು ಒಂದು ಗಂಟೆಗೆ ೧೨೫ ಕೆಜಿಯಂತೆ ಮರಗಳ ಸೌದೆಗಳನ್ನು ಉರಿಸಿ ಕೇಂದ್ರ ಶಾಖೋತ್ಪನ್ನ ವ್ಯವಸ್ಥೆ ಮಾಡಿಕೊಂಡಿದ್ದರು. ಇದರಿಂದಾಗಿ ಅವರು ಸ್ಥಳೀಯ ಸೌದೆ, ಇದ್ದಿಲು ಪೂರೈಕೆ ಇಲ್ಲವಾಗಿ, ಸಾವಿರಾರು ಮೈಲಿಗಳಿಂದ ಅವನ್ನು ಪಡೆಯಬೇಕಾದ ಪರಿಸ್ಥಿತಿ ಬಂದಿತು.

ಇಂದಿನ ಆಧುನಿಕ ವಿಷಮಸ್ಥಿತಿಯಿಂದಾಗಿ ಪರ್ಯಾಯ ಶಕ್ತಿಮೂಲಗಳ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಈ ಪೈಕಿ ಈಗಾಗಲೇ ಭೂತಾಪೀಯಶಕ್ತಿ (Geothermal energy) ಸೌರಶಕ್ತಿ, ತಾಪೀಯ ಶಕ್ತಿ (Thermal power), ಜಲವಿದ್ಯುತ್, ವಾಯುವಿದ್ಯುತ್, ಅಲೆಗಳಿಂದ ವಿದ್ಯುತ್, ಬಯೋಮಾಸ್‌ನಿಂದ ಶಕ್ತಿ ಮತ್ತು ಪರಮಾಣು ಸ್ಥಾವರಗಳಿಂದ ಶಕ್ತಿ ಇವೆಲ್ಲಾ ಮೂಲಗಳು ಈಗ ಬಳಕೆಯಲ್ಲಿವೆ.

೧೯೫೩ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಐಸೆನ್ ಹೂವರ್‌ರವರು ಪರಮಾಣು ಶಕ್ತಿಯನ್ನು ಶಾಂತಿಗೆ ಬಳಸುವ ಬಗ್ಗೆ ಪ್ರಥಮ ಬಾರಿಗೆ ಮಾತಾಡಿದರು. ಇದಕ್ಕೆ ಮುಂಚೆ ಪರಿಸರ ಪ್ರಜ್ಞೆ ಇಲ್ಲದೆ ಅಮೇರಿಕಾ ಆಟಂಬಾಂಬ್‌ಗಳನ್ನು ಹಿರೋಷಿಮಾ, ನಾಗಾಸಾಕಿ ನಗರಗಳ ಮೇಲೆ ಹಾಕಿತ್ತು.

ಈ ಪಟ್ಟಣಗಳಲ್ಲಿ ಹೆಚ್ಚು ಜನ ಸತ್ತಿದ್ದು ಸ್ಫೋಟ ಮತ್ತು ಬೆಂಕಿಯಿಂದ. ಶೇಕಡ ೧೫ರಿಂದ ೨೦ರಷ್ಟು ಜನ ಗಾಮಾ ರೋಗಗಳು ಹಾಗೂ ನ್ಯೂಟ್ರಾನ್ ವಿಕಿರಣದಿಂದ ಬಾಂಬಿನ ಪರಿಣಾಮಕಾರಿ ವ್ಯಾಪ್ತಿ ೫ ಮೈಲಿಗಳಷ್ಟು ದೂರ ಪ್ರದೇಶಗಳಲ್ಲೂ ಕಾಣುತ್ತಿತ್ತು. ತತ್‌ಕ್ಷಣದಲ್ಲೇ ಅನೇಕರು ಸಾವನ್ನಪ್ಪಿದರೆ ಉಳಿದುಕೊಂಡವರು ರಕ್ತಹೀನತೆ, ಲಕ್ಯೂಮಿಯ, ಚರ್ಮಸುಟ್ಟು ಹೋಗುವುದು, ಗೊಡ್ಡುತನ, ಕ್ಯಾಟರಾಕ್ಟ್ ಮುಂತಾದ ಪರಿಣಾಮಗಳನ್ನು ಎದುರಿಸಬೇಕಾಯಿತು. ಗರ್ಭಿಣಿಯರಿಗೆ ಗರ್ಭಪಾತ ಇಲ್ಲವೇ ಸತ್ತಮಕ್ಕಳು ಹುಟ್ಟಿದವು. ಭ್ರೂಣ ಸಾಯದಿದ್ದರೆ ಅದರ ಮೆದುಳು ಬೆಳೆಯದೆ ತಲೆ ಸಣ್ಣಗಿದ್ದ ಅಸಾಮಾನ್ಯ ಮನೋವೈಕಲ್ಯವಿರುವ ಮಕ್ಕಳು ಹುಟ್ಟಿದವು.

ಇಂದು ಪ್ರಪಂಚದ ಯಾವುದೇ ದೇಶದಲ್ಲಾಗಲೀ ಜನ ಪರಮಾಣು ಶಕ್ತಿಯನ್ನು ವಿರೋಧಿಸುವುದಿಲ್ಲವಾದರೂ ಹೊಸ ಪರಮಾಣು ಸ್ಥಾವರಗಳ ಸ್ಥಾಪನೆಗಳನ್ನು ವಿರೋಧಿಸುತ್ತಾರೆ. ಪರಮಾಣು ಶಕ್ತಿಯನ್ನು ವಿರೋಧಿಸದಿರುವುದಕ್ಕೆ ಮುಖ್ಯ ಕಾರಣ ಅದರಿಂದ ಜಾಗತಿಕ ಉಷ್ಣೀಕರಣ (Global warming) ಆಗುವುದಿಲ್ಲ ಎಂಬುದು ಮತ್ತು ಪರಮಾಣು ಪಳೆಯುಳಿಕೆ ಇಂಧನಗಳ ಶಕ್ತಿಯನ್ನು ಭರ್ತಿ ಮಾಡಬಲ್ಲದೆಂಬುದು ಇನ್ನೊಂದು ಕಾರಣ.

ವಿಶ್ವದಾದ್ಯಂತ ಪರಮಾಣು ಸ್ಥಾವರಗಳ ಬಗ್ಗೆ ಜನರಿಗಿರುವ ಆತಂಕ, ಭಯಗಳು ಅವುಗಳ ಸುರಕ್ಷತೆಯ ಬಗ್ಗೆ ಮತ್ತು ಪರಮಾಣು ಸ್ಥಾವರಗಳಲ್ಲಾಗುವ ಆಕಸ್ಮಿಕಗಳ ಬಗ್ಗೆ, ಪರಿಸರಕ್ಕೆ ಪರಮಾಣು ಸ್ಥಾವರಗಳಿಂದ ಹೊರಬರುವ ವಿಕಿರಣಶೀಲ ಕ್ಷೇಪ್ಯಗಳ ಬಗ್ಗೆ ಮತ್ತು ಮಾನವನಲ್ಲಿ ಅವು ತರಿಸಬಲ್ಲ ಕಾಯಿಲೆಗಳ ಬಗ್ಗೆ. ಜಗತ್ತು ಈಗಾಗಲೇ ಅನೇಕ ಪರಮಾಣು ಸ್ಥಾವರ ದುರಂತ ಕಂಡು ಅಪಾರ ಸಾವು ನೋವುಗಳನ್ನು ಕಂಡಿದೆ. ಅಮೇರಿಕಾದ ತ್ರೀಮೈಲ್ ಐಲ್ಯಾಂಡ್ ಪರಮಾಣು ಸ್ಥಾವರದ ಆಕಸ್ಮಿಕ, ರಷ್ಯಾದ ಚರ್ನೋಬೈಲ್ ದುರಂತ ಹಾಗೂ ಇತ್ತೀಚಿನ ಜಪಾನ್ ದುರಂತ, ಕಣ್ಣ ಮುಂದೆ ಇದೆ. ಜಪಾನಿನ ಸುನಾಮಿ, ಭೂಕಂಪದ ಹೊಡತಕ್ಕೆ ಅಲ್ಲಿನ ಅಣುಸ್ಥಾವರಗಳು ನಡುಗಿ ಹೋಗಿವೆ.

ಮೊನ್ನೆ ಕೈಗಾ ಅಣುಸ್ಥಾವರದಲ್ಲಿ ನೀರಿನೊಂದಿಗೆ ವಿಕರಣದ ಬೆರತ ಉದಾಹರಣೆಯನ್ನು ಲೇಖಕರು ನೀಡಿದ್ದಾರೆ.

AERBಯ ಮಾಜಿ ಅಧ್ಯಕ್ಷರಾಗಿದ್ದ ಎ.ಗೋಪಾಲ ಕೃಷ್ಣನ್ ಅವರು ಭಾರತದ ಪರಮಾಣು ಸ್ಥಾವರಗಳ ಸುರಕ್ಷತೆ ಹಾಗೂ ಕ್ಷೇಮಪರತೆಗಳ ಬಗ್ಗೆ ತೀವ್ರ ವ್ಯಾಕುಲತೆ ವ್ಯಕ್ತಪಡಿಸಿದ್ದಾರೆ.

ಅಣುಸ್ಥಾವರಗಳು ಉಗ್ರರ ಕೈಸಿಕ್ಕರೆ ಏನು ಗತಿ? ಎಂಬ ಕಳವಳವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ಎಷ್ಟೇ ಮುಂಜಾಗ್ರತೆ ವಹಿಸಿದರೂ ಆಗುವ ಆಕಸ್ಮಿಕಗಳನ್ನು ತಡೆಯುವ ಶಕ್ತಿ ನಮಗಿದೆಯೇ? ಎನ್ನುವ ಪ್ರಶ್ನೆಯನ್ನು ಲೇಖಕರು ಎತ್ತುತ್ತಾರೆ. ಅಟಾಮಿಕ್ ಎನರ್ಜಿ ಕಮೀಷನ್‌ನ ಮಾಜಿ ಅಧ್ಯಕ್ಷ ಅನಿಲ್ ಕಾಕೋಡ್ಕರ್ ಪ್ರಕಾರ ಸದ್ಯದ ಕತ್ತಲು ಕಳೆಯಲು ಅಣುಶಕ್ತಿಯೇ ಸಾಧನ. ಸುಸ್ಥಿರವಾದ ಭದ್ರತಾ ನಿಯಂತ್ರಣ ಬಹುಮುಖ್ಯ.

ಖ) ಮೊಬೈಲ್ ಫೋನ್‌ಗಳು

ಇದು ಸೆಲ್‌ಫೋನ್‌ಗಳ ಯುಗ. ಒಬ್ಬ ವ್ಯಕ್ತಿ ಮೂರ್‍ನಾಲ್ಕು ಮೊಬೈಲ್ ಇಟ್ಟುಕೊಳ್ಳುವ ಕಾಲ. ಪೈಸೆಯ ಲೆಕ್ಕಾಚಾರದಲ್ಲಿ ಮಾತಿಗೆ ಬೆಲೆಕಟ್ಟುವ ಕಾಲವಿದು.

ದೇವನೊಬ್ಬ ನಾಮ ಹಲವು ಎಂಬಂತೆ ಸೆಲ್, ಸೆಲ್‌ಫೋನ್, ಹೆಡ್‌ಫೋನ್, ಸೆಲ್ಯುಲಾರ್ ಟೆಲಿಫೋನ್, ಮೊಬೈಲ್‌ಸೆಲ್, ಮೊಬೈಲ್ ಟೆಲಿಫೋನ್ ಇವು ಮೊಬೈಲ್ ದೂರವಾಣಿಯ ಕೆಲವು ಹೆಸರುಗಳು.

ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಕೆಂಟಕಿ ಪ್ರದೇಶದ ನಾದನ್ ಬಿ.ಸ್ಟಬಲ್ ಫೀಲ್ಡ್ ಸೆಲ್ ಟೆಲಿಫೋನಿನ ಅನ್ವೇಷಣೆ ಮತ್ತು ಅಭಿವೃದ್ಧಿಯ ಹರಿಕಾರ.

ಆದರೆ ಬ್ರಿಟಾನಿಕ ವಿಶ್ವಕೋಶದ ಪ್ರಕಾರ ಆಧುನಿಕ ಮೊಬೈಲ್ ಅನ್ವೇಷಕನೆಂದರೆ ಜಾರ್ಜ್ ಸ್ವೇಗರ್ಟ್ ಯುಎಸ್‌ಎ ಮತ್ತು ಮಾರ್ಟಿನ್ ಕೂಪರ್ ಮೋಟರೋಲದಲ್ಲಿ ಸಂಶೋಧಕನಾಗಿದ್ದ. ಅಂದಿನ ಮೊಬೈಲ್ ತೂಕ ಬರೊಬ್ಬರಿ ೧ ಕೆಜಿ ತೂಕ. ಕೈಯಲ್ಲಿ ಹಿಡಿದು ಕೊಂಡಿದ್ದಾಗ ಕ್ರಿಯಾಶೀಲವಾಗಿರುವ ಮೊಬೈಲ್ ಫೋನ್‌ಅನ್ನು ಅಭಿವೃದ್ಧಿ-ಪಡಿಸಿದವನು ಕೂಪರ್, ಆದರೆ ಮೊಬೈಲ್ ಫೋನ್‌ನ ಪೇಟೆಂಟ್ ಅನ್ನು ೧೦-೦೬-೧೯೬೯ರಲ್ಲಿ ಜಾರ್ಜ್ ಸ್ಟಬಲ್ ಫೀಲ್ಡ್ ಮಾಡಿಕೊಂಡಿದ್ದಾರೆ.

ಈಗಿನ ಅತ್ಯಂತ ನಾಜೂಕಾದ ಮೊಬೈಲ್‌ಗಳಲ್ಲಿ SMS ಸಂದೇಶಗಳಿಂದ ಹಿಡಿದು E-mail ವರೆಗೆ ಅನೇಕ ರೀತಿಯ ಸಂದೇಶಗಳನ್ನು ಕಳಿಸುವ ಅವಕಾಶವಿದೆ. ಹಾಗೆಯೇ ಅಂಗೈಯಲ್ಲಿ ಅಂತರ್ಜಾಲವನ್ನು ಇಟ್ಟುಕೊಂಡು 'ದುನಿಯಾ ಕರಲೋ ಮುಟ್ಟಿಮೆ' ಎಂದು ಬೀಗುವ ಕಾಲವಿದು.

ಈಗಿನ ಆಧುನಿಕ ಮೊಬೈಲ್‌ಗಳು ಗಾತ್ರದಲ್ಲಿ ಬಹಳ ತೆಳುವಾಗಿದ್ದು ೧೨ಕ್ಕಿಂತಲೂ ಹೆಚ್ಚು ಮೆಗಾಫಿಕ್ಸಲ್‌ಗಳನ್ನು ಒಳಗೊಂಡ ಕ್ಯಾಮೇರಾ, ವಾಯ್ಸ್ ರೆಕಾರ್ಡರ್, ಗೇಮ್, MP3 & MP4 Player , ಡೈರಿ, ದಿಕ್ಸೂಚಿ ಹೀಗೆ ಎಲ್ಲಾ ರೀತಿಯ ಸಕಲ ಸೌಕರ್ಯಗಳು ಅಂಗೈ ಮೇಲೆ ಇದೆ. ಇದೊಂದು ಕಲ್ಪವೃಕ್ಷ ಇದ್ದ ಹಾಗೆ. ಏನು

ಕೇಳಿದರೂ ಕ್ಷಣಾರ್ಧದಲ್ಲಿ ಮಾಹಿತಿ ಕೊಡುತ್ತದೆ. ಹಿಂದಿನಂತೆ ಟ್ರಂಕ್‌ಕಾಲ್ ಬುಕ್ ಮಾಡಿ ದಿನವಿಡೀ ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ ಈಗಿಲ್ಲ.

ಮೊಬೈಲ್‌ಗಳಿಂದ ಮಾಹಿತಿಗಳನ್ನು ಕ್ಷಣಾರ್ಧದಲ್ಲಿ ಪಡೆಯಲು ಸಾಧ್ಯ. ವಿಮಾನ, ರೈಲು, ಬಸ್ಸುಗಳ ವೇಳಾಪಟ್ಟಿ, ಆಸ್ಪತ್ರೆ, ಪೊಲೀಸ್ ಹಾಗೂ ಇತರ ಮುಖ್ಯ ತುರ್ತು ಫೋನ್ ನಂಬರ್‌ಗಳು, ಹೊಟೇಲ್‌ಗಳು ಮುಂತಾದವುಗಳ ಸೇವೆಯನ್ನು ಪಡೆಯಬಹುದು.

ಈಗ ಮೊಬೈಲ್ ಅನ್ನು ಕ್ರೆಡಿಟ್ ಕಾರ್ಡ್ ಆಗಿ ಬಳಸುವ ಸೌಲಭ್ಯವನ್ನು ಸಿಟಿ ಬ್ಯಾಂಕ್ ಜಾರಿಗೆ ತಂದಿದೆ. ಮುಂದುವರಿದು ಅಮೇರಿಕಾದ ಫೈರ್‌ಫ್ಲೈ ಕಂಪನಿ ೪ ವರ್ಷದ ಮಕ್ಕಳಿಗಾಗಿ ಮೊಬೈಲ್‌ಗಳನ್ನು ತಯಾರಿಸಿದೆ. ಇರುವ ಎರಡೇ ಬಟನ್‌ಗಳಿಂದ ಅಪ್ಪ, ಅಮ್ಮಂದಿರನ್ನು ಕರೆಯಲು ಸಾಧ್ಯವಿದೆ.

ಇತ್ತೀಚೆಗೆ ಸ್ವಿಸ್ ಆಲ್ಪ್ಸ್ ಪರ್ವತಗಳಲ್ಲಿ ಸ್ಕೀ ಮಾಡುತ್ತಿದ್ದ ಡೇವಿಡ್ ಫಿಟ್ಸರ್ ಬರ್ಟ್ ಆಕಸ್ಮಾತ್ ೭೦ ಅಡಿ ಪ್ರಪಾತಕ್ಕೆ ಬಿದ್ದು ಪ್ರಾಣಾಪಾಯದಲ್ಲಿದ್ದಾಗ ಅವನ ಬ್ಲಾಕ್‌ಬೆರ್ರಿ ಮೊಬೈಲ್ ಅವನನ್ನು ಉಳಿಸಿತ್ತು.

"ಯಶೋಧೆಗೆ ತನ್ನ ಮುದ್ದುಕೃಷ್ಣನ ಬಾಯಲ್ಲಿ ಬ್ರಹ್ಮಾಂಡವೇ ಕಂಡಂತೆ ಇಡೀ ಪ್ರಪಂಚವೇ ನಿಮ್ಮ ಜೇಬಿನಲ್ಲಿದೆ. ಇದು ಎಷ್ಟು ಉಪಯುಕ್ತ ಉಪಕರಣವಾಗಿದೆಯೋ ಅಷ್ಟೇ ಕಿರಿಕಿರಿಯನ್ನುಂಟು ಮಾಡುವ ಕರ್ಣ ಪಿಶಾಚಿಯೂ ಆಗಿದೆ."[೪೯] ಎನ್ನುತ್ತಾ ಶಿವಮೂರ್ತಿ ಸ್ವಾಮೀಜಿಗಳು ಮುಂದುವರಿಸಿ ಮೊಬೈಲ್ ರಿಂಗಿಣಿಸಿದ ತಕ್ಷಣ ಮೀಟಿಂಗ್‌ನಲ್ಲಿದ್ದವರು ಮಾತಾಡುತ್ತಾ ಎದ್ದು ಹೊರಹೋಗುವುದು. ಊಟ ಮಾಡುವಾಗ ಕೈತುತ್ತು ಹಾಗೇ ಇರುವಾಗ ಎದ್ದು ಹೋಗಿ ಮಾತನಾಡುವುದನ್ನು ಸ್ವಾಮೀಜಿಯವರು ಒಪ್ಪುವುದಿಲ್ಲ. ಇದು ಪೌರಪ್ರಜ್ಞೆಯಲ್ಲ. ಇಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕು ಎಂಬ ಪ್ರಜ್ಞೆ ಮುಖ್ಯ ಎಂದು ಸ್ವಾಮೀಜಿ ಹೇಳುತ್ತಾರೆ.

ಪೌರಪ್ರಜ್ಞೆ ಇಲ್ಲದ ಜನರು ವಾಹನ ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡುತ್ತಾ ಅಪಘಾತಕ್ಕೆ ಕಾರಣರಾಗಿ ಅಮಾಯಕ ಜೀವಿಗಳನ್ನು ಬಲಿ ತೆಗೆದುಕೊಂಡಿದ್ದಾರೆ. ತಲೆಕುತ್ತಿಗೆ ಮಧ್ಯೆ ಮೊಬೈಲ್ ಸಿಕ್ಕಿಸಿಕೊಂಡು ಹೋಗುವ ದೃಶ್ಯ ಇಂದು ಸರ್ವೇಸಾಮಾನ್ಯ. ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸಬಾರದೆಂದು ಪ್ರಕಟಣೆ ಇದ್ದರೂ ಅವ್ಯಾಹತವಾಗಿ ಸಾಗಿದೆ. ದಂಡ ವಿಧಿಸುವ ಮೂಲಕ ಇದನ್ನು ತಡೆಗಟ್ಟಬಹುದಾಗಿದೆ.

---

೪೯. ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ವಿಜಯಕರ್ನಾಟಕ, ೧೦-೦೬-೨೦೦೯

ದೇವಸ್ಥಾನದ ಪುರೋಹಿತರು ಆರತಿ ತಟ್ಟೆ ಕೆಳಗಿಟ್ಟು ತಮ್ಮ ಮೊಬೈಲ್ ಎತ್ತಿಕೊಂಡು ಮಾತಾಡುವುದು, ಬಸ್‌ಗಳಲ್ಲಿ, ರೈಲುಗಳಲ್ಲಿ ಮತ್ತು ಸಾರ್ವಜನಿಕ ಸ್ಥಳದಲ್ಲಿ ಎತ್ತರಿಸಿ ಮಾತನಾಡಿ ಇತರರ ಶಾಂತಿಗೆ ಭಂಗ ತರುವುದು. ಮೊಬೈಲ್ ಕ್ಯಾಮೇರಾದ ಮೂಲಕ ಅಶ್ಲೀಲ ಸಂಭಾಷಣೆ ಮತ್ತು ದೃಶ್ಯ ಪ್ರಸಾರ ಮಾಡುವುದು, ಉಗ್ರಗಾಮಿಗಳು ಇದರ ದುರುಪಯೋಗಪಡಿಸಿಕೊಳ್ಳುವುದು ಗಮನಿಸಬೇಕಾದ ಅಂಶ.

ಅತಿಯಾದ ಮೊಬೈಲ್ ಬಳಕೆಯಿಂದ ದೇಹದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವ ಅಧ್ಯಯನಗಳ ವರದಿಗಳನ್ನು ಲೇಖಕರು ಉಲ್ಲೇಖಿಸಿದ್ದಾರೆ. ಹಾಗೆಯೇ ಮೊಬೈಲ್ ಟವರ್‌ಗಳಿಂದ ಹಕ್ಕಿಪಕ್ಷಿಗಳು ನಾಶವಾಗುವುದರ ಕುರಿತು ಮತ್ತು ಜನರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ಕುರಿತು ಈವರೆಗೆ ನಡೆದ ಎಲ್ಲಾ ಅಧ್ಯಯನಗಳ ಫಲಿತಗಳನ್ನು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಒಟ್ಟಾರೆ ಪರಿಸರ ಪೌರಪ್ರಜ್ಞೆಯಲ್ಲಿ ಪರಿಸರವನ್ನು ನೈರ್ಮಲ್ಯ ಮುಕ್ತವನ್ನಾಗಿ ಮಾಡಲು, ಆಹಾರ ಪರಿಶುದ್ಧವಾಗಿ ಸೇವಿಸಲು, ವಿಷಕಾರಿ ತ್ಯಾಜ್ಯರಹಿತ ಪರಿಸರ ರೂಪಿಸಲು, ಬಳಸಲಾದ ಯಂತ್ರಗಳ ಬಿಡಿಭಾಗಗಳು ಈ–ತ್ಯಾಜ್ಯಗಳಿಂದಾಗುವ ಅನಾಹುತಗಳನ್ನು ಪರಮಾಣು ಸ್ಥಾವರಗಳು ಭವಿಷ್ಯದಲ್ಲಿ ತಂದೊಡ್ಡುವ ತೀವ್ರ ಆಘಾತಕಾರಿ, ಅಪಾಯಕಾರಿ ಪರಿಸ್ಥಿತಿಯನ್ನು ವಿವರಿಸುವುದರ ಮೊಬೈಲ್‌ಗಳ ಅತಿ, ಅನಗತ್ಯ ಬಳಕೆಯಿಂದಾಗುವ ಅನಾಹುತಗಳನ್ನು ಅರಿವು ಮೂಡಿಸುವಲ್ಲಿ ಲೇಖಕರು ಯಶಸ್ವಿಯಾಗಿರುವುದನ್ನಿಲ್ಲಿ ನಾನು ಗುರುತಿಸಿದ್ದೇನೆ.

೩. ಸಾಮಾಜಿಕ ಪೌರಪ್ರಜ್ಞೆ

ಅ) ವಿಶ್ವವಿದ್ಯಾನಿಲಯಗಳು

ಅಂದಾಜು ೨೦೦೦ ವರ್ಷಗಳ ಹಿಂದೆಯೇ ನಮ್ಮಲ್ಲಿ ಖಗೋಳಶಾಸ್ತ್ರ, ಗಣಿತ, ವೈದ್ಯ, ವಿದ್ಯಾಭ್ಯಾಸ (ಆಯುರ್ವೇದ) ಮತ್ತಿತರ ವೈಜ್ಞಾನಿಕ ಬೆಳವಣಿಗೆಗಳು ನಡೆದಿದ್ದು ಪ್ರಪಂಚವೇ ಮೆಚ್ಚುವಂತಿದ್ದವು. ನಳಂದ, ತಕ್ಷಶಿಲಾ ಮತ್ತು ವಿಕ್ರಮಶೀಲಾ ವಿಶ್ವವಿದ್ಯಾನಿಲಯಗಳಿಗೆ ವಿದೇಶಗಳಿಂದ ವಿದ್ಯಾರ್ಥಿಗಳು ಬಂದು ತಮ್ಮ ಅಧ್ಯಯನ ಮುಗಿಸಿಕೊಂಡು ಘನ ವಿದ್ವಾಂಸರಾಗಿ ಹಿಂದಿರುಗುತ್ತಿದ್ದರು.

ಇಂತಹ ಒಂದು ಆದರ್ಶ ಪರಂಪರೆ ಮತ್ತು ಭವ್ಯ ಇತಿಹಾಸದ ವಿಶ್ವವಿದ್ಯಾನಿಲಯಗಳು ಪೌರಪ್ರಜ್ಞೆಯಿಲ್ಲದ ವಿದೇಶಿಯರ ದಾಳಿಗಳಿಗೆ ತುತ್ತಾಗಿ ಹಾಳಾಗಬೇಕಾಯಿತು ಎಂದು ಲೇಖಕರು ಮರುಗುತ್ತಾರೆ.

ನಳಂದ ವಿಶ್ವವಿದ್ಯಾನಿಲಯ ೫ನೇ ಶತಮಾನದಿಂದ ೧೨ನೇ ಶತಮಾನದವರೆಗೆ ವಿದ್ಯಾರ್ಥಿಗಳ ಪಾಲಿಗೆ ಸ್ವರ್ಗವಾಗಿತ್ತು. ಆಧುನಿಕ ವಿಶ್ವವಿದ್ಯಾನಿಲಯಗಳ ಬೆಳವಣಿಗೆ

ಯಲ್ಲಿ ನ್ಯೂಮಿನ್‌ನ 'The idea of a University' ನಮಗೆ ಆದರ್ಶ ಪರಿಕಲ್ಪನೆಯನ್ನು ಕೊಡುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿ ವಿಶ್ವಪ್ರಜ್ಞೆ ಹಾಗೂ ಮುಕ್ತ ವಾತಾವರಣಗಳು ಬಹುಮುಖ್ಯ. ಮೊದಲಿಗೆ ಕೇವಲ ಬೆರಳೆಣಿಕೆಯಷ್ಟಿದ್ದ ವಿಶ್ವವಿದ್ಯಾನಿಲಯಗಳು ಇಂದಿನ ಆಧುನಿಕ ಭಾರತದಲ್ಲಿ ಸುಮರು ೪೦೦ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳಾಗಿವೆ. ಇತ್ತೀಚೆಗಂತೂ ಒಂದೊಂದು ವಿಷಯಕ್ಕೂ ತಲಾ ಒಂದೊಂದು ವಿಶ್ವವಿದ್ಯಾನಿಲಯಗಳು ರೂಪಿತಗೊಳ್ಳುತ್ತಿವೆ. ಖಾಸಗಿ ವಿಶ್ವವಿದ್ಯಾನಿಲಯಗಳು ಹೆಚ್ಚಾಗುತ್ತಿವೆ. ಇದರಿಂದ ಇಡೀ ಒಂದು ವಿಶ್ವವಿದ್ಯಾನಿಲಯದ ಪರಿಪೂರ್ಣತೆಗೆ ಧಕ್ಕೆ ಬರುವಂತೆ ಭಾಸವಾಗುತ್ತದೆ.

ಪ್ರಸ್ತುತ ಕರ್ನಾಟಕದಲ್ಲಿ ೨೭ ವಿಶ್ವವಿದ್ಯಾನಿಲಯಗಳಿವೆ. ಅದರ ಸಂಖ್ಯೆ ಪ್ರತಿವರ್ಷ ಹೆಚ್ಚಾಗುವ ನಿರೀಕ್ಷೆ ಇದೆ. ಕೆಲವೇ ವರ್ಷಗಳಲ್ಲಿ ಪ್ರತಿ ಜಿಲ್ಲೆಗೊಂದಂತೆ ವಿಶ್ವವಿದ್ಯಾನಿಲಯಗಳು ರಚನೆಯಾಗಲಿವೆ.

ಪ್ರಸ್ತುತ ಸರ್ಕಾರಿ ಮತ್ತು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಗಳು ಆರಂಭವಾಗಿವೆ. ವಿಶ್ವವಿದ್ಯಾನಿಲಯದ ವೇದದಲ್ಲಿನ ಪರಿಕಲ್ಪನೆ ಇಂದು ಬದಲಾಗುತ್ತದೆ.

ಇಂದು ವಿಶ್ವವಿದ್ಯಾನಿಲಯಗಳಿಗೆ ವೃತ್ತಿ ಮೌಲ್ಯ, ಗುಣಮಟ್ಟ ಪೌರಪ್ರಜ್ಞೆ ಹಾಗೂ ತಮ್ಮ ಸಂಶೋಧನಾ ವಿಷಯದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಇರುವಂತಹ ದಕ್ಷ ಕುಲಪತಿ ಹಾಗೂ ಪ್ರತಿಭಾವಂತ ಪ್ರಾಧ್ಯಾಪಕರುಗಳ ಅಗತ್ಯ ಮತ್ತು ಅನಿವಾರ್ಯತೆ ಇದೆ.

ಇಂದಿನ ವಿಶ್ವವಿದ್ಯಾನಿಲಯಗಳಲ್ಲಿ ರಾಜಕೀಯ ಪ್ರಭಾವ ಹೆಚ್ಚಾಗಿ, ವಿದ್ಯಾಕ್ಷೇತ್ರ ರಾಜಕೀಯ ಕ್ಷೇತ್ರದಂತೆ ಭಾಸವಾಗುತ್ತಿದೆ. ಕುಲಪತಿಗಳಿಗೆ ಸಂಪೂರ್ಣ ಅಧಿಕಾರ ಇಲ್ಲ. ಹೆಸರಿಗೆ ಮಾತ್ರ ಸ್ವಾಯತ್ತ ಸಂಸ್ಥೆ ಅಂದರೂ ಸರ್ಕಾರದ ಹಸ್ತಕ್ಷೇಪ ವಿಪರೀತವಾಗಿದೆ.

ಆದ್ದರಿಂದ ಲೇಖಕರ ಪ್ರಕಾರ ಇಂದಿನ ಕುಲಪತಿಗಳು ಸರ್ವತಂತ್ರ ಸ್ವತಂತ್ರರಲ್ಲ. ಮೆರಿಟ್ ಆಧಾರದ ಮೇಲೆ ಅಂತರರಾಷ್ಟ್ರೀಯ ಖ್ಯಾತಿ ಇರುವ ಪ್ರಾಧ್ಯಾಪಕರನ್ನು ಆಹ್ವಾನಿಸಿ ನೇಮಿಸಿಕೊಳ್ಳಲಾಗುವುದಿಲ್ಲ. ಪ್ರಚಲಿತ ಸಮಸ್ಯೆಗಳಿಗೆ ಅವರು ಸ್ಪಂದಿಸಲೇಬೇಕು. ಇಲ್ಲದಿದ್ದಲ್ಲಿ ಅವರು ಪದವಿಯಿಂದ ನಿವೃತ್ತಗಾದ ಮೇಲೆ ವಿಶ್ರಾಂತ ಜೀವನ ನಡೆಸಲು ಆಗದೆ ವಿಚಾರಣೆಗಳನ್ನು ನಿರಂತರವಾಗಿ ಎದುರಿಸಬೇಕಾಗುತ್ತದೆ. ಇದರಿಂದ ವಿಶ್ವವಿದ್ಯಾನಿಲಯದ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

೨೦೦೯ರಲ್ಲಿ ಭಾರತದ ನಾಲೆಡ್ಜ್ ಕಮೀಷನ್ (NKI) ತನ್ನ ದೇಶದಾದ್ಯಂತದ ಸರ್ವೇಕ್ಷಣೆಯನ್ನು ಮುಗಿಸಿದೆ. ಇದರ ಪ್ರಕಾರ ನಮ್ಮ ದೇಶದಲ್ಲಿರುವ ವಿಶ್ವವಿದ್ಯಾ-

ನಿಲಯಗಳಲ್ಲಿ ಸಂಶೋಧನಾ ಪ್ರಯೋಗಾಲಯಗಳಿಗೆ ಒಳ್ಳೆಯ ಶಿಕ್ಷಣವಿರುವ ಕಿರಿಯ ಸಂಶೋಧಕರ ಅಭಾವವಿದೆ. ಇಂತಹ ಒಳ್ಳೆಯ ಸಂಶೋಧನಾ ಶಿಕ್ಷಣವಿರುವ ಪಿಎಚ್.ಡಿ. ಪಟುಗಳು ಸಿಕ್ಕಬೇಕಾದರೆ ಅವರ ಮಾರ್ಗದರ್ಶಕರು ಅಥವಾ ಗೈಡ್‌ಗಳು ವಿಶ್ವವಿದ್ಯಾನಿಲಯಗಳಲ್ಲಿ ಪೌರಪ್ರಜ್ಞೆ ಇರುವ ಪ್ರತಿಭಾವಂತರಾಗಿರಬೇಕು. ತಮ್ಮ ಪಿಎಚ್.ಡಿ ಥೀಸಿಸ್ ಬಗ್ಗೆಯೋ ಅದಕ್ಕೆ ಸಂಬಂಧಪಟ್ಟಂತೆಯೇ ಅಥವಾ ಬೇರೆ ವಿಶ್ವವಿದ್ಯಾನಿಲಯವು ಮಾಡಿದ ಸಂಶೋಧನೆಯ ಪುನರಾವರ್ತನೆಯೋ ಆಗಿದ್ದರೆ ಪ್ರತಿಭಾವಂತ ಕಿರಿಯ ಸಂಶೋಧಕರ ಉತ್ಪಾದನೆ ಹೇಗೆ ಸಾಧ್ಯ ಎಂಬ ಕಳವಳವನ್ನು ಲೇಖಕರು ವ್ಯಕ್ತಪಡಿಸುತ್ತಾರೆ.

ಉತ್ತಮ ಸಂಶೋಧನಾ ಪ್ರಬಂಧಗಳು ಹೇಗೆ ರೂಪುಗೊಳ್ಳಬೇಕು ಎಂಬುದರ ಬಗ್ಗೆ ರಾಷ್ಟ್ರದ ನಾಲೆಡ್ಜ್ ಕಮೀಷನ್ (ಜ್ಞಾನ ಆಯೋಗ) ಈ ಕೆಳಕಂಡ ಸಲಹೆ ನೀಡಿದೆ.

೧. ಥೀಸಿಸ್‌ಗಳ ಸಾರಾಂಶಗಳನ್ನು ವಿದ್ವಾಂಸ ಮಂಡಳಿಗಳು ವಿಶದವಾಗಿ ಪೂರ್ವ ಪರಿಶೀಲನೆ ನಡೆಸುವುದು. ಬಾಹ್ಯ ಪರೀಕ್ಷಕರಿಂದ ನಿಷ್ಪಕ್ಷಪಾತೀಯ ಮೌಲ್ಯಮಾಪನ.

೨. ಸಂಸ್ಥೆಗಳಿಗೆ ಸಂಪೂರ್ಣ ದ್ರವ್ಯಾನುಕೂಲ ಒದಗಿಸುವುದು, ಶೈಕ್ಷಣಿಕ ಶಿಬಿರಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವಂತೆ ಮಾಡುವುದು

೩. ಶೈಕ್ಷಣಿಕ ಸಹಾಯಕರಾಗಿ ಪಿಎಚ್.ಡಿ. ವಿದ್ಯಾರ್ಥಿಗಳು ಬೋಧನೆ ಮಾಡುವಂತೆ ಮಾಡುವುದು ಮತ್ತು ಅದಕ್ಕೆ ಸಂಭಾವನೆ ಕೊಡುವುದು.

೪. ವಿಶ್ವವಿದ್ಯಾನಿಲಯಗಳಿಗೆ ಇಂದಿನ ಸಾಂಸ್ಥಿಕ ಪ್ರಪಂಚದ ಅಗತ್ಯಗಳ ಬಗ್ಗೆ ಅರಿವಿರಬೇಕು. ಅದಕ್ಕನುಗುಣವಾಗಿ ಅವು ಹೊಸ ಪಠ್ಯಕಾರ್ಯಕ್ರಮಗಳು ಹಾಗೂ ಹೊಸ ಸಂಶೋಧನಾ ವಿಷಯಗಳನ್ನು ಯೋಜಿಸಿಕೊಳ್ಳಬೇಕು.

೫. ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕ್ರಮಗಳು ಕೈಗಾರಿಕೆಗಳಲ್ಲಿ ಅನ್ವಯವಾಗುವಂತೆ ಪ್ರಯತ್ನ ಪಡಬೇಕು. ಅವಕ್ಕೂ ಸಾರ್ವಜನಿಕರಿಗೂ (ಖಾಸಗಿ ಸಂಸ್ಥೆಗಳಿಗೂ) ನಡುವೆ ಅರ್ಥಪೂರ್ಣ ಸಂಬಂಧ ಬೆಳೆಯಬೇಕು.

೬. ಸಂಶೋಧನೆಯಲ್ಲಿ ಅಂತರರಾಷ್ಟ್ರೀಯ ಖ್ಯಾತಿಗಳಿಸಲು ಅನಿವಾಸಿ ಭಾರತೀಯ ವಿಜ್ಞಾನಿಗಳ (NRI Scientists) ಸಹಾಯ ತೆಗೆದುಕೊಂಡು ತಮ್ಮ ವಿಶ್ವವಿದ್ಯಾನಿಲಯ-ಗಳಲ್ಲಿ ಅಥವಾ ವಿದೇಶಿ ವಿಶ್ವವಿದ್ಯಾನಿಲಯಗಳ ಸಹಭಾಗಿತ್ವದೊಂದಿಗೆ ಪಿಎಚ್.ಡಿ ಪ್ರೌಢಪ್ರಬಂಧಗಳ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು.

೭. ಪಿಎಚ್.ಡಿ ಕಾರ್ಯಕ್ರಮಕ್ಕೆ ಸೇರುವ ಮೊದಲು ಯೋಜಿಸಿ ೪ ವರ್ಷದ ಕಾರ್ಯಕ್ರಮವನ್ನು ರೂಪಿಸುವುದು.

ಸಂಶೋಧನೆಯಲ್ಲಿ ಚೀನಾದೇಶ ಭಾರತಕ್ಕಿಂತ ಮುಂದಿದೆ. ಪ್ರಸ್ತುತ ನಮ್ಮಲ್ಲಿರುವ ಸಂಶೋಧನೆಗಳು ತ್ರಿಗುಣಗೊಳ್ಳಬೇಕು ಎಂದು ಜ್ಞಾನ ಆಯೋಗ ಶಿಫಾರಸ್ಸು ಮಾಡಿದೆ. ಲೇಖಕರ ಆಶಯದಂತೆ ಈ ಮೇಲಿನ ಕ್ರಮದಿಂದಾಗಿ ಸಂಶೋಧನೆಗಳ ಗುಣಮಟ್ಟ ಹಾಗೂ ಪಿಎಚ್.ಡಿ.ಗಳ ಸಂಖ್ಯೆ ಹೆಚ್ಚಿದರೆ ಭಾರತದ ಹೆಸರು ವಿಶ್ವಭೂಪಟದಲ್ಲಿ ದಾಖಲೆಯಾಗುವ ಸಾಧ್ಯತೆ ಹೆಚ್ಚು.

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ(UGC)ವು ನ್ಯಾಕ್ ಸರ್ವೇಕ್ಷಣೆಯ ಮೂಲಕ ನಮ್ಮ ದೇಶದ ವಿಶ್ವವಿದ್ಯಾನಿಲಯಗಳು ಹಾಗೂ ಅವುಗಳ ಸಂಯೋಜನೆಗೆ ಒಳಪಡುವ ಕಾಲೇಜುಗಳು ಉತ್ತಮ ಗುಣಮಟ್ಟದ ಶೈಕ್ಷಣಿಕ ಕೇಂದ್ರವಾಗಿಲ್ಲವೆಂದು 'A^{+}' ಶ್ರೇಣಿಗೆ ಸರಿದೂಗಲಾರವೆಂದು ತಿಳಿಸಿದೆ.

"ವಿಶ್ವವಿದ್ಯಾನಿಲಯದಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ವಾತಾವರಣ ವನ್ನು 'ಸಿಂಡಿಕೇಟ್' ಕಾಯ್ದುಕೊಳ್ಳಬೇಕು. ಕರ್ನಾಟಕ ರಾಜ್ಯದ ಅಂತರ ವಿಶ್ವವಿದ್ಯಾನಿಲಯ ಮಂಡಳಿ ಸಭೆಯಲ್ಲಿ ಇನ್ನು ಮುಂದೆ ಖಾಸಗಿ ಕಾಲೇಜುಗಳಿಗೆ ಮಾನ್ಯತೆ ನೀಡುವ ಸ್ಥಳೀಯ ಪರಿಶೀಲನಾ ಸಮಿತಿ ಅಂದರೆ (ಎಲ್ಐಸಿ)ಯಿಂದ ಸಿಂಡಿಕೇಟ್ ಸದಸ್ಯರುಗಳನ್ನು ಹೊರಗಿಡಲು ತೀರ್ಮಾನಿಸಲಾಗಿದೆ. ಕಾರಣ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪೌರಪ್ರಜ್ಞೆ ಇಲ್ಲದ ಸಿಂಡಿಕೇಟ್ ಸದಸ್ಯರೊಬ್ಬರು ಎರಡು ಲಕ್ಷ ರೂ. ಲಂಚ ಸ್ವೀಕರಿಸಿದ ಆರೋಪ ಎದುರಿಸುತ್ತಿರುವುದರಿಂದ ಈ ತೀರ್ಮಾನಕ್ಕೆ ಬರಲಾಗಿದೆ.[೫೦]

ಇದಕ್ಕೆ ಅಪವಾದವೆಂಬಂತೆ ಶಿಕ್ಷಣ ತಜ್ಞರು ವಿದ್ವಾಂಸರ ಉದಾಹರಣೆಯನ್ನು ಲೇಖಕರು ನೀಡುತ್ತಾರೆ. ಮಹಾರಾಣಿ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ. ಪಾರ್ವತಮ್ಮನವರು ಸಿಂಡಿಕೇಟ್ ಸದಸ್ಯರಾಗಿದ್ದಾಗ ಅವರ ಜೊತೆ ಕಾಲೇಜುಗಳಿಗೆ ಮಾನ್ಯತೆ ಕೊಡುವ ಸಮಿತಿಯಲ್ಲಿ ಲೇಖಕರು ಇದ್ದರು. ಅವರ ಮಾರ್ಗದರ್ಶನ ಮತ್ತು ಶಿಕ್ಷಣ ಹಾಗೂ ಪೌರಪ್ರಜ್ಞೆಗಳು ಆದರ್ಶಮಯವಾಗಿದ್ದವು.

ಇಂದಿನ ಕೆಲವು ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ಆಗುತ್ತಿರುವ ಅಥವಾ ಕೆಲವು ಪೌರಪ್ರಜ್ಞೆ ಇಲ್ಲದ ಭ್ರಷ್ಟ ಅಧಿಕಾರಿಗಳಿಂದ ಅವಕ್ಕೆ ಬರುತ್ತಿರುವ

---

೫೦. ವಿಜಯಕರ್ನಾಟಕ ದಿನಪತ್ರಿಕೆ, ದಿನಾಂಕ ೨-೦೭-೨೦೦೯

ಕೆಟ್ಟ ಹೆಸರು ಅಸಹನೀಯವಾದದ್ದು, ಮೈಸೂರಿನಲ್ಲಿ ಪ್ರಾಂಶುಪಾಲರು ಹಾಗೂ ಇನ್‌ವಿಜಿಲೇಟರ್‌ಗಳನ್ನು ಆರೋಪಗಳ ಮೇಲೆ ಬಂಧಿಸಿರುವುದು.

ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಸಂಶೋಧನೆ ಸತ್ತು ಮಲಗಿದೆ. ಆದ್ದರಿಂದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಶೈಕ್ಷಣಿಕ ತಪಾಸಣೆ ನಡೆಯಬೇಕಾಗಿದೆ ಎಂದು ಎಂ.ಎನ್.ಪಂಚಾಕ್ಷರಿ ಅವರು ತಮ್ಮ ಲೇಖನದಲ್ಲಿ ಬರೆಯುತ್ತಾರೆ.

"ಪೌರಪ್ರಜ್ಞೆ ಇಲ್ಲದ ಇಂತಹ ಕ್ರಿಯೆಗಳಿಂದಾಗಿ ಶೈಕ್ಷಣಿಕ ವಾತಾವರಣ ಕಲುಷಿತವಾಗುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿನ ಅಶಿಸ್ತಿಗೆ ಆಯಾ ಕುಲಪತಿಗಳನ್ನು ನೇರವಾಗಿ ಹೊಣೆ ಮಾಡುವುದಾಗಿ ಕುಲಾಧಿಪತಿಗಳು ಹೇಳಿದ್ದಾರೆ.[೫೧]

ಇಂತಹ ಅನೇಕ ಪತ್ರಿಕಾ ವರದಿಗಳನ್ನು ಸಂಗ್ರಹಿಸಿ ತಮ್ಮ ಕೃತಿಗೆ ಆಧಾರವಾಗಿ ಬಳಸಿಕೊಂಡು ಲೇಖಕರು ತನ್ಮೂಲಕ ಕೃತಿಯ ಮೌಲ್ಯ ಹೆಚ್ಚಿಸಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಇಂತಹ ಅನೇಕ ಕಿತ್ತಾಟಗಳು ಹೊಸದೇನಲ್ಲ. ಅನೇಕ ವಿಭಾಗಗಳಲ್ಲಿ ಪ್ರಾಧ್ಯಾಪಕರುಗಳ ನಡುವೆ ಜಾತಿಜಗಳ, ಗುಂಪುಗಾರಿಕೆ ನಿರಂತರವಾಗಿ ನಡೆಯುತ್ತಲೇ ಇದೆ. ಕೆಲವು ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನು ದುರ್ಬಳಕೆ ಮಾಡಿಕೊಂಡು ತಮಗಾಗದ ಸಹೋದ್ಯೋಗಿಗಳ ವಿರುದ್ಧ ಎತ್ತಿಕಟ್ಟಿ ಧಮಕಿ ಹಾಕುವುದು ಸರ್ವೇಸಾಮಾನ್ಯ ಸಂಗತಿ.

ಲೇಖಕರು ಉದಾಹರಿಸಿರುವಂತೆ ಕೆಲವು ವರ್ಷಗಳ ಹಿಂದೆ ಪ್ರಾಧ್ಯಾಪಕರುಗಳ ಕಿತ್ತಾಟವನ್ನು ನಿಯಂತ್ರಿಸಲು ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ಮಾಡುವ ಪ್ರತಿಕ್ರಿಯೆಯೂ ನಡೆಯಿತು. ಆದರೂ ಜಗಳಗಂಟಿತನದ ಪ್ರಾಧ್ಯಾಪಕರು ಇದಕ್ಕೂ ಜಗ್ಗಲಿಲ್ಲ ಮತ್ತು ಬಗ್ಗಲಿಲ್ಲ. ಹೋದ ಕಡೆಗಳಲ್ಲೂ ತಮ್ಮ ಚಾಳಿಯನ್ನು ಮುಂದುವರೆಸಿದ್ದು ದುರಂತವೇ ಸರಿ ಎನ್ನುವ ವಿಷಾದ ಲೇಖಕರನ್ನು ಕಾಡಿದೆ.

ಎಂ.ಬಿ.ಎ. ಓದುತ್ತಿರುವ ವಿದ್ಯಾರ್ಥಿಗಳನ್ನು ವಿಮೆ ಪಾಲಿಸಿ ಮಾಡಿಸಿ ಎಂದು ದಂಬಾಲು ಬಿದ್ದಿರುವ ಪ್ರೊಫೆಸರ್‌ಗಳ ವರ್ತನೆ ಖಂಡನೀಯ. ಈ ಆರೋಪ ನಿಜವಾಗಿದ್ದಲ್ಲಿ ಕೆಲವೇ ಪೌರಪ್ರಜ್ಞೆ ಇಲ್ಲದ ಭ್ರಷ್ಟ ಶಿಕ್ಷಕರಿಂದ ಇಡೀ ಶಿಕ್ಷಕ ಸಮುದಾಯಕ್ಕೆ ಕೆಟ್ಟ ಹೆಸರು ಬಂದಂತಾಗುತ್ತದೆ ಎಂಬ ಅನಿಸಿಕೆ ಲೇಖಕರದ್ದು.

ರಾಜ್ಯದ ಮತ್ತೊಂದು ವಿಶ್ವವಿದ್ಯಾನಿಲಯದಲ್ಲಿ ಕಳೆದ ಐದು ವರ್ಷಗಳಿಂದ ಕೆಲಸಕ್ಕೆ ತೆಗೆದುಕೊಂಡ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರ ಫೈಲ್‌ಗಳೇ "ಮಿಸ್ಸಿಂಗ್"(ಕಳೆದ) ನಂತರ ಇತ್ತೀಚೆಗೆ ಪ್ರತ್ಯಕ್ಷವಾದವು ಎಂದು ವರದಿ ಬಂದಿರುವುದು ತಲೆತಗ್ಗಿಸುವಂತಹದ್ದು.

---

೫೧. ಡೆಕನ್ ಕ್ರಾನಿಕಲ್, ದಿನಾಂಕ ೨೩-೦೬-೨೦೦೯

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯಲ್ಲಿ ೩೩ ವಿದ್ಯಾಸಂಸ್ಥೆಗಳು ವಿದ್ಯಾರ್ಥಿಗಳನ್ನು ವಂಚಿಸುತ್ತಿದೆಯಂತೆ. ಇವುಗಳ ಪೈಕಿ ವಾರಣಾಸಿಯ ಸಂಸ್ಕೃತ ವಿಶ್ವವಿದ್ಯಾನಿಲಯ ಯುನೈಟೆಡ್ ನೇಷನ್ಸ್ ಯೂನಿವರ್‌ಸಿಟಿ, ಡೆಲ್ಲಿ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಡ್ ಎಂಜಿನಿಯರಿಂಗ್ ನ್ಯೂಡೆಲ್ಲಿ. ಇವೂ ಕೂಡ ಸೇರಿದೆ. ಈ ರೀತಿ ವಿದ್ಯಾರ್ಥಿಗಳಿಗೆ ವಂಚನೆ ಮಾಡುತ್ತಿರುವ ಪೌರಪ್ರಜ್ಞೆ ಇಲ್ಲದ ಸಂಸ್ಥೆಗಳು ಭಾರತದಾದ್ಯಂತ ಇವೆ ಎಂದು ಕಂಡುಬಂದಿದೆ. ಕಳೆದ ಎರಡು ತಿಂಗಳ ಹಿಂದೆ ಬೆಂಗಳೂರಿನ ಒಂದು ಖಾಸಗಿ ಸಂಸ್ಥೆ ಪರೀಕ್ಷೆಯಲ್ಲಿ ಬರೆಯದೇ ೩೦,೦೦೦ ರೂಪಾಯಿಗಳಿಗೆಲ್ಲಾ ಪಿಯುಸಿ, ಬಿ.ಎ., ಬಿ.ಕಾಂ., ೭ ಲಕ್ಷ ರೂಪಾಯಿಗಳೂ, ಪಿಎಚ್.ಡಿ. ಪದವಿ ನೀಡುವ ದೃಶ್ಯವನ್ನು ಟಿವಿ ಮಾದ್ಯಮ ಪ್ರಸಾರ ಮಾಡಿತು. ವಿದ್ಯಾ ಸಂಸ್ಥೆಗಳಲ್ಲೂ ಅರಾಜಕತೆ ವಂಚನೆ ವ್ಯಾಪಕವಾಗಿ ತಾಂಡವವಾಡುತ್ತಿರುವುದು ಇದರಿಂದ ತಿಳಿಯಬಹುದು.

ವಿದೇಶಗಳಲ್ಲಿಯೂ ಕೂಡ ಇಂಥ ನಕಲಿ ವಿಶ್ವವಿದ್ಯಾನಿಲಯಗಳು ಇವೆ. ಇಲ್ಲಿಂದ ಸಾವಿರಾರು ನಕಲಿ ಪದವಿಗಳು ಮತ್ತು ಸಂಶೋಧನಾ ಪ್ರಬಂಧಗಳು ಅಕ್ರಮವಾಗಿ ಬರುತ್ತಿವೆ.

ಲೇಖಕರು ಹಣ ಕೊಟ್ಟು ಪಿಎಚ್.ಡಿ. ಪದವಿ ಪಡೆಯುವ ಕುರಿತಂತೆ ತಮ್ಮ ಅನುಭವವನ್ನು ಕೃತಿಯಲ್ಲಿ ಹಂಚಿಕೊಂಡಿದ್ದಾರೆ. "ಭಾರತದಲ್ಲಿ ಇತ್ತೀಚೆಗೆ ತಜ್ಞರ ಸಮಿತಿ ದೇಶದಲ್ಲಿರುವ ೧೨೬ ಸ್ವಾಯತ್ತ ವಿಶ್ವವಿದ್ಯಾನಿಲಯಗಳ ಕಾರ್ಯ ನಿರ್ವಹಣೆಯ ಬಗ್ಗೆ ಮೌಲ್ಯಮಾಪನ ಮಾಡಿತು. ಇವುಗಳ ಪೈಕಿ ಕೇವಲ ೩೮ ಮಾತ್ರ ನಿಯಮಾನುಸಾರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ೪೪ ಸ್ವಾಯತ್ತ ವಿಶ್ವವಿದ್ಯಾನಿಲಯಗಳು ವಾಣಿಜ್ಯ ಉದ್ದೇಶದಿಂದ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು ಎಲ್ಲಾ ಶೈಕ್ಷಣಿಕ ನಿಯಮಗಳನ್ನು ಗಾಳಿಗೆ ತೂರಿವೆ ಎಂಬ ಆರೋಪವಿದೆ."[೫೨]

ವಿಶ್ವದ ಅಗ್ರಮಾನ್ಯ ಪ್ರಮುಖ ೫೦೦ ವಿಶ್ವವಿದ್ಯಾನಿಲಯಗಳಲ್ಲಿ ಭಾರತದ ಎರಡೇ ಎರಡು ಸಂಸ್ಥೆಗಳು ಪಟ್ಟಿಯಲ್ಲಿ ಸೇರಿವೆ. ಅವೆಂದರೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಖರಗ್‌ಪುರ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮಾತ್ರ. ಈ ಎರಡೂ ಸಂಸ್ಥೆಗಳಲ್ಲಿ ನೊಬೆಲ್ ಪ್ರಶಸ್ತಿ ಹಾಗೂ ಫೀಲ್ಡ್ ಮೆಡಲ್‌ಗಳಿಲ್ಲದಿದ್ದರೂ ವಿಜ್ಞಾನಿಗಳು ಇಲ್ಲಿ ಪೌರಪ್ರಜ್ಞೆಯಿಂದ ಸಂಶೋಧನೆ ನಡೆಸಿ ಪ್ರಕಟಣೆ ಮಾಡಿರುವುದನ್ನು ಗಮನಿಸಿ ಇವುಗಳಿಗೆ ಈ ಶ್ರೇಣಿ ದಕ್ಕಿವೆ ಎಂದು ಲೇಖಕರು ಉಲ್ಲೇಖಿಸುತ್ತಾರೆ.

---

೫೨. ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ ೨೦-೦೧-೨೦೧೦

ಪಟ್ಟಿಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯ ಅತಿ ಮೇಲ್ಮಟ್ಟದಲ್ಲಿದೆ. ಇತರೆ ಹತ್ತು ವಿಶ್ವವಿದ್ಯಾನಿಲಯಗಳೆಂದರೆ ಸ್ಟ್ಯಾನ್‌ಫರ್ಡ್ ಯೂನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯಾ, ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ, ಮೆಸಾಚುಸೆಟ್ಸ್ ತಂತ್ರಜ್ಞಾನ ಸಂಸ್ಥೆ (MIT) ಕ್ಯಾಲಿಪೋರ್ನಿಯ ತಂತ್ರಜ್ಞಾನ ಸಂಸ್ಥೆ (CIT) ಕೊಲಂಬಿಯಾ ವಿಶ್ವವಿದ್ಯಾನಿಲಯ, ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯ, ಚಿಕಾಗೋ ವಿಶ್ವವಿದ್ಯಾನಿಲಯ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಸೇರಿದೆ.

ಲೇಖಕರ ಪ್ರಕಾರ ನಮ್ಮ ವಿಶ್ವವಿದ್ಯಾನಿಲಯಗಳು ನೋಬಲ್ ಲಾರೆಟ್‌ಗಳನ್ನು ತಯಾರು ಮಾಡಬೇಕೆಂದರೆ ಅಂತಹ ಸುಪ್ರಸಿದ್ಧ ವಿದ್ವಾಂಸರುಗಳನ್ನು ಕರೆಸಿಕೊಳ್ಳುವ ಶಕ್ತಿ ಅನುಕೂಲಗಳು ಅವಕ್ಕಿರಬೇಕು. ಪ್ರಯೋಗಾಲಯಗಳು ಆಧುನಿಕರಣಗೊಳ್ಳಬೇಕು ಪ್ರತಿಭಾವಂತ ಸಂಶೋಧನಾ ವಿದ್ಯಾರ್ಥಿಗಳನ್ನು ಅಧ್ಯಾಪಕರನ್ನು ಪೂರ್ಣಕಾಲದ ಸಂಶೋಧನೆಗೆ ತೊಡಗಿಸಿಕೊಳ್ಳಬೇಕು. ವಿಜ್ಞಾನಿಗಳಿಗೆ ಬೇಕಾದ ಪ್ರಯೋಗಾಲಯದ ಉಪಕರಣಗಳು, ಅನುಕೂಲಗಳು ತಕ್ಷಣ ಒದಗುವಂತಿರಬೇಕು.

ಆದರೆ ನಮ್ಮ ಪ್ರಯೋಗಾಲಯ, ಪರಿಸರ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಕಾರಣಗಳು ಮತ್ತಿತರ ಅನೇಕ ಕಾರಣಗಳಿಂದ ವಿಶ್ವಮಟ್ಟದ ಶ್ರೇಷ್ಠ ಸಂಶೋಧಕರನ್ನು ಉತ್ಪತ್ತಿ ಮಾಡಿದರೂ ಅವರು ಅಲ್ಲೇ ಕೆಲಸ ಮಾಡಿ ನೊಬೆಲ್ ಪಡೆಯಲಾಗುವುದಿಲ್ಲ.

ಹರಗೋವಿಂದ ಖುರಾನ ಅಂತಹವರು ಇಲ್ಲೆ ಅಧ್ಯಯನ ಮಾಡಿದವ–ರಾದರೂ ಅವರ ಪ್ರತಿಭೆ ಅರಳಿ ನೊಬೆಲ್ ಲಾರೆಟ್ ಆಗಲು ಅಮೇರಿಕಾಕ್ಕೆ ಹೋಗಬೇಕಾಯಿತು. ನಮ್ಮ ವಿಶ್ವವಿದ್ಯಾನಿಲಯಗಳಿಗೆ ಸರ್ಕಾರ ಸೂಕ್ತ ಧನಸಹಾಯ, ಸ್ವಾಯತ್ತತೆ ಹಾಗೂ ಅಧಿಕಾರಗಳನ್ನು ಕೊಟ್ಟು ಪ್ರಪಂಚದ ಯಾವುದೇ ಮೂಲೆಯಿಂದಾದರೂ ಉತ್ತಮ ವಿದ್ವಾಂಸರುಗಳನ್ನು ಅವು ಕರೆಸಿಕೊಳ್ಳುವಂತಾಗ–ಬೇಕು. ಈಗಿನ ಆರೋಪಗಳಾದ ಅಧಿಕಾರಶಾಹಿ, ರಾಜಕೀಯಶಾಹಿ ಹಾಗೂ ರೆಡ್ ಟೇಪಿಸಂಗಳೂ ಹೊಗಿ ಪೌರಪ್ರಜ್ಞೆ ಮೆರೆಯಬೇಕು. ಗುಣಮಟ್ಟದ ವಿದ್ಯಾಭ್ಯಾಸ ಹಾಗೂ ಸಂಶೋಧನೆಯ ಆದರ್ಶಗಳಾಗಬೇಕು. ಇಂದಿನ ಸ್ಥಿತಿಯಲ್ಲಿ ವಿದ್ಯುತ್ ನೀರಿನಂತಹ ಮೂಲಭೂತ ಸೌಕರ್ಯಗಳಿಂದ ಹಿಡಿದು ಪ್ರತಿಭಾನ್ವೇಷಣೆಯವರೆಗೆ ವಿಶ್ವವಿದ್ಯಾನಿಲಯದ ಗುಣಮಟ್ಟವನ್ನು ಮೇಲಕ್ಕೇರಿಸುವ ಅನೇಕ ರೀತಿನೀತಿಗಳಿಗೆ ಬಾಲಗ್ರಹ ಹಿಡಿದಿದೆ ಎಂಬ ಆತಂಕ ಮತ್ತು ಕಳವಳವನ್ನು ಲೇಖಕರು ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಉತ್ತಮ ವಿಶ್ವವಿದ್ಯಾನಿಲಯಗಳು ಅಂದರೆ ಸರ್ಕಾರ ಅರ್ಥಮಾಡಿಕೊಳ್ಳ ಬೇಕಾಗಿರುವುದು ಅಲ್ಲಿನ ಕಟ್ಟಡಗಳಲ್ಲ, ಇತರೆ ಸೌಕರ್ಯಗಳಲ್ಲ, ಅಲ್ಲಿನ ಪ್ರತಿಭಾನ್ವಿತ ಪ್ರಾಧ್ಯಾಪಕರುಗಳು ಹಾಗೂ ಅತ್ಯುತ್ತಮ ವಿಶ್ವಮಟ್ಟದ ಸಂಶೋಧಕರು. ಇವರುಗಳ

ಆಯ್ಕೆಯಲ್ಲಿ ಕುಲಪತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಪ್ರತಿಭೆ ಪೌರಪ್ರಜೆಗಳನ್ನು ಯಾವುದೇ ಜಾತಿ ಗುತ್ತಿಗೆಗೆ ತೆಗೆದುಕೊಂಡಿಲ್ಲ. ಈಗಿರುವ ಸರ್ಕಾರಿ ನಿಯಮಾವಳಿಯಲ್ಲೇ ಎಲ್ಲಾ ಜಾತಿಗಳಿಂದ ಅತ್ಯುತ್ತಮ ಪ್ರತಿಭಾಶಾಲಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿರುತ್ತದೆ. ಆಯ್ಕೆ ರಾಜ್ಯದ ಮಟ್ಟಕ್ಕೆ ಸೀಮಿತವಾಗಿರಬೇಕಿಲ್ಲ. ವಿಶ್ವವಿದ್ಯಾನಿಲಯಗಳ ಬೋಧನೆ, ಸಂಶೋಧನೆಗಳಿಗೆ ಭಾರತದಾದ್ಯಂತ ಅರಸಿ, ಉತ್ತಮ ಪ್ರತಿಭಾವಂತರ ಆಯ್ಕೆಗೆ ಸಾಧ್ಯವಿರುತ್ತದೆ. ಈ ದಿಕ್ಕಿನತ್ತ ಯೋಚಿಸಲು ಕರೆಕೊಡುತ್ತಾರೆ.

ಒಂದುಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜ್, ಭಾರತದ ಒಂದು ಉತ್ತಮ ಸಂಶೋಧನಾ ಕೇಂದ್ರವಾಗಿತ್ತು. ಪ್ರತಿಭಾನ್ವಿತ ಬೋಧಕರ ಆಗರವಾಗಿತ್ತು. ಇಂದೂ ಕೂಡ ಮೈಸೂರು ವಿಶ್ವವಿದ್ಯಾನಿಲಯ ತನ್ನ ಒಳ್ಳೆಯ ಹೆಸರನ್ನು ಉಳಿಸಿಕೊಂಡಿದೆ. ನೂರಾರು ವಿದೇಶಿ ವಿದ್ಯಾರ್ಥಿಗಳು ಇಲ್ಲಿಂದ ಸಂಶೋಧನಾ ವರದಿಗಳೊಂದಿಗೆ ಹೊರಹೋಗುತ್ತಿದ್ದಾರೆ. ಈಗಿನ ಗುಣಮಟ್ಟವನ್ನು ಕಾಯ್ದುಕೊಳ್ಳುವುದರ ಜೊತೆಗೆ ಅದನ್ನು ಉತ್ತಮಪಡಿಸಿ ಅತ್ಯುತ್ತಮ ವಿಜ್ಞಾನಿಗಳನ್ನು, ಸಾಹಿತಿಗಳನ್ನು, ವಿದ್ವಾಂಸರುಗಳನ್ನು ತಯಾರು ಮಾಡಬೇಕಾದರೆ ಕುಲಪತಿಯವರಿಗೆ ಸಾಕಷ್ಟು ಸ್ವಾತಂತ್ರ್ಯವಿರಬೆಕು. ಪ್ರಪಂಚದ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಸಂಶೋಧನಾ ಸಂಸ್ಥೆಯಿಂದ ನೊಬೆಲ್ ಲಾರೆಟ್‌ಗಳನ್ನು ಅಥವಾ ಅಷ್ಟೇ ಪ್ರತಿಭಾವಂತರನ್ನು ಆಹ್ವಾನಿಸಿ ಅವರು ಇಲ್ಲಿ ಕೆಲಸ ಮಾಡಿ ನಮ್ಮ ಸಂಶೋಧಕರಿಗೆ ಪ್ರತಿಭೆ ಹಾಗೂ ಸ್ಫೂರ್ತಿಗಳನ್ನು ಕೊಡುವಂತಿರಬೇಕು.

"ಕರ್ನಾಟಕದ ರಾಜ್ಯಪಾಲರೂ, ಕುಲಾಧಿಪತಿಗಳೂ ಆದ ರಾಜ್ಯಪಾಲರು ಮಾತನಾಡುತ್ತಾ ವಿಶ್ವವಿದ್ಯಾನಿಲಯಗಳಿಗೆ ರಾಜಕೀಯ ರೋಗಗಳು ಬಡಿದಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ."[೫೩]

ಸಿಂಡಿಕೇಟ್ ಸದಸ್ಯರ ರಾಜಕೀಯ ವರ್ತನೆ ರಾಜ್ಯಪಾಲರಿಗೆ ಹಿಡಿಸಿಲ್ಲ. ವಿಶ್ವವಿದ್ಯಾನಿಲಯಗಳಿಗೆ ನೇಮಕಗೊಂಡ ಕೆಲ ಸಿಂಡಿಕೇಟ್ ಸದಸ್ಯರು ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾ ವಿಶ್ವವಿದ್ಯಾನಿಲಯ ವಾತಾವರಣವನ್ನು ರಾಜಕೀಕರಣ ಗೊಳಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಹಾಗೆಯೇ ವಿಶ್ವವಿದ್ಯಾನಿಲಯಗಳು ಕೊಡುವ ಗೌರವ ಡಾಕ್ಟರೇಟ್‌ಗಳ ಬಗ್ಗೆಯೂ ಲೇಖಕರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯುಜಿಸಿಯ ಅಧ್ಯಕ್ಷರಿಗೆ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡುವುದು ಆಮಿಷ ಒಡ್ಡಿದಂತಲ್ಲವೇ

---

೫೩. ವಿಜಯಕರ್ನಾಟಕ ದಿನಪತ್ರಿಕೆ, ದಿನಾಂಕ ೧೯-೦೫-೨೦೧೦

ಎಂದು ಪತ್ರಕರ್ತರು ಸ್ವತಃ ಗೌರವ ಡಾಕ್ಟರೇಟ್ ಸ್ವೀಕರಿಸಿದ ಪ್ರೋ. ಥೋರಟ್ ಅವರಿಗೆ ಪ್ರಶ್ನೆ ಹಾಕಿದ್ದನ್ನು ಲೇಖಕರು ಉಲ್ಲೇಖಿಸಿದ್ದಾರೆ.

"ಯಾವುದೇ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿಯನ್ನು ಯುಜಿಸಿ ಹಾಲಿ ಅಧ್ಯಕ್ಷರಾಗಿರುವವರೆಗೆ ನೀಡುವುದು ಕೆಟ್ಟ ಸಂಪ್ರದಾಯ. ವಿಶ್ವವಿದ್ಯಾನಿಲಯಗಳು ಯುಜಿಸಿಯ ಕೃಪೆಯಲ್ಲಿರುವಾಗ ನೈತಿಕ ದೃಷ್ಟಿಯಿಂದ ಇದು ಸಾಧ್ಯವಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ನೈತಿಕ ನೆಲೆಯನ್ನು ಯಾರೂ ಪರಿಪಾಲಿಸುವುದಿಲ್ಲ. ಕಾನೂನಿನಲ್ಲಿ ನಿಷೇಧವಿದೆಯೇ? ಎನ್ನುವುದಷ್ಟೇ ಸಾಕು. ಯುಜಿಸಿ ಅಧ್ಯಕ್ಷರುಗಳು ಬಹುತೇಕ ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯ ಗಳಿಂದಲೂ ಸನ್ಮಾನ ಪಡೆಯಲಿದ್ದಾರೆಯೇ?"[೫೪] ಎಂಬ ಪ್ರಶ್ನೆಯನ್ನು ಪ್ರೊ. ಪಿ.ಶ್ರೀಪತಿ ತಂತ್ರಿಯವರು ತಮ್ಮ ಲೇಖನದಲ್ಲಿ ಎತ್ತುತ್ತಾರೆ.

೧೯೫೬ರಿಂದ ೧೯೬೧ರ ತನಕ ಯುಜಿಸಿ ಮೊದಲ ಅಧ್ಯಕ್ಷರಾಗಿದ್ದ ಡಾ. ಸಿ.ಡಿ.ದೇಶಮುಖ್ ೧೯೬೨ರಲ್ಲಿ ಪುಣೆ ವಿಶ್ವವಿದ್ಯಾನಿಲಯ ವೇದಿಕೆಯಿಂದ ತನ್ನ ಅಧಿಕಾರಾವಧಿಯಲ್ಲಿ ಇಂತಹ ಕೊಡುಗೆಯನ್ನು ಸಾರಾಸಗಟಾಗಿ ನಿರಾಕರಿಸಿದ್ದೇನೆಂದು ಹೇಳಿದ್ದನ್ನು ಲೇಖಕರು ಈ ಸಂದರ್ಭದಲ್ಲಿ ಸ್ಮರಿಸಿದ್ದಾರೆ.

ಈ ಹಿಂದೆ ಅಂದರೆ ೧೯೭೭ರ ಘಟಿಕೋತ್ಸವದಲ್ಲಿ ಡಿ.ದೇವರಾಜ ಅರಸು ಅವರಿಗೆ ಡಾಕ್ಟರೇಟ್ ನೀಡಬೇಕೆಂದಿದ್ದ ಠರಾವು ಸೆನೆಟ್ ಪರಾಮರ್ಶೆಗೆ ಮುಂದಿಟ್ಟಾಗ ನಿರ್ಣಯವಾದದ್ದು ಏನೆಂದರೆ ಯಾವ ರಾಜಕಾರಣಿಗೂ ಇದನ್ನು ಕೊಡಕೂಡದು ಎಂದು. ಆದರೆ ಇಂತಹ ಸೆನೆಟ್ ಈಗೆಲ್ಲಿದೆ ಎಂಬ ಪ್ರಶ್ನೆ ಎದುರಾಗುತ್ತದೆ.

ವಿಶ್ವವಿದ್ಯಾನಿಲಯಗಳು ನೀಡುವ ಗೌರವ ಡಾಕ್ಟರೇಟ್‌ಗಳು ಅತ್ಯಂತ ಶ್ರೇಷ್ಠ ವಿಜ್ಞಾನಿಗಳನ್ನೋ, ವಿದ್ವಾಂಸರನ್ನೋ, ಮನುಕುಲದ ಸೇವೆಗಾಗಿ ಜೀವನವನ್ನು ಮುಡುಪಾಗಿಟ್ಟುಕೊಂಡವರನ್ನು ಗುರುತಿಸಿ ಗೌರವಿಸುವ ಪವಿತ್ರ ಪದವಿಯನ್ನು ರಾಜಕಾರಣಿಗಳಿಗೆ ಹಣದ ಬಲದಿಂದ ಸೇವೆಯ ಪ್ರತಿಷ್ಠೆ ಖರೀದಿಸಿರುವವರಿಗೆ ನೀಡುವುದರಿಂದ ಪದವಿಯ ದುರ್ಬಳಕೆಯೆಂದೇ ಪರಿಗಣಿಸಬೇಕು ಎನ್ನುವ ಐತಿಹಾಸಿಕ ನಿರ್ಣಯ ಆ ಕಾಲದಲ್ಲಿ ಇತ್ತು ಎನ್ನುವುದನ್ನು ಲೇಖಕರು ಸ್ಮರಿಸಿಕೊಳ್ಳುತ್ತಾರೆ.

ಯಾವುದೇ ಪದವಿಯನ್ನು ಶೈಕ್ಷಣಿಕ ಮಂಡಳಿಯ ಪರಾಮರ್ಶೆಗೆ ಸಾಕಷ್ಟು ಮುಂಚಿತವಾಗಿ ಇಟ್ಟು ಮುಕ್ತವಾಗಿ ಚರ್ಚಿಸಿ, ನಿರ್ಧರಿಸಿದ ಬಳಿಕವಷ್ಟೇ ಕುಲಾಧಿಪತಿಗಳು ಅದನ್ನು ನೀಡಬೇಕಲ್ಲದೆ; ನೇರವಾಗಿ ಕುಲಾಧಿಪತಿಗಳೇ ಕುಲಪತಿಗಳಿಗೆ ಆದೇಶಿಸುವುದು,

---

೫೪. ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೧೬-೦೪-೨೦೧೦

ಘಟಿಕೋತ್ಸವದ ಹಿಂದಿನ ದಿನದವರೆಗೆ ಅದನ್ನೆ ಗುಟ್ಟಾಗಿಟ್ಟು, ತುರ್ತಾಗಿ ಘೋಷಿಸುವುದು, ಪಟ್ಟಿಯಲ್ಲಿರುವ ವ್ಯಕ್ತಿಗಳ ಅರ್ಹತೆಯನ್ನು ಪ್ರಯಾಸದಿಂದ ಸಿದ್ಧಪಡಿಸುವುದು. ಅವರ ಪಾಂಡಿತ್ಯವು ಅಪಾರ, ಸೇವೆಯ ಅಮೋಘವೆಂದು ಶಿಫಾರಸ್ಸು ನೀಡುವುದು ದುರದೃಷ್ಟಕರ ಎನ್ನುತ್ತಾರೆ ಲೇಖಕರು.

"ಎಲ್ಲ ಡಿಪಾರ್ಟ್‌ಮೆಂಟ್‌ಗಳಲ್ಲೂ ರಾಜಕೀಯದ ವಾಸನೆ, ಜಾತಿ ರಾಜಕಾರಣದ ದುರ್ನಾತ, ಕ್ಷುಲ್ಲಕ ಮನಸ್ಸುಗಳ ಚರಂಡಿ. ಯಾವ ವಿಶ್ವವಿದ್ಯಾನಿಲಯ ಈ ಎಲ್ಲಾ ಅನಿಷ್ಟಗಳಿಂದ ಹೊರತಾಗಿದೆ? ಯಾವ ಕ್ಯಾಂಪಸ್ ಸಮಾಜದ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದೆ? ಯಾವ ಡಿಪಾರ್ಟ್‌ಮೆಂಟಿನಲ್ಲಿ ಸಮಾಜಕ್ಕೆ ಉಪಯೋಗವಾಗುವ ಸಂಶೋಧನೆ ನಡೆಯುತ್ತಿದೆ? ಯಾವ ವಿಶ್ವವಿದ್ಯಾನಿಲಯ ಜಾತಿ ವಿಷದಿಂದ ಮುಕ್ತವಾಗಿದೆ. ಹೋಗಲಿ ನಮ್ಮ ಯಾವ ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರವರ ಕ್ಷೇತ್ರಗಳಲ್ಲಿ ಮರ್ಯಾದೆಯಿದೆ ಮನ್ನಣೆಯಿದೆ?"[೫೫] ಎಂದಿದ್ದಾರೆ ವಿಶ್ವೇಶ್ವರಭಟ್ಟರು.

ಈ ಸಾರಿಯ ನೊಬೆಲ್ ಪ್ರಶಸ್ತಿ ವಿಜೇತ ವೆಂಕಟರಾಮನ್ ರಾಮಕೃಷ್ಣನ್ ಅವರ ಪ್ರಕಾರ "ಬ್ರೇನ್‌ಡ್ರೇನ್‌ಗೆ ಮುಖ್ಯ ಕಾರಣ ರಾಜಕೀಯ ಮತ್ತು ರೆಡ್‌ಟೇಪ್, ರಾಜಕಾರಣಿಗಳು, ಬ್ಯೂರೋಕ್ರಾಟ್ಸ್, ರೆಡ್‌ಟೇಪ್‌ಗಳಿಂದ ಮುಕ್ತಿಕೊಟ್ಟು ಸ್ವತಂತ್ರವಾಗಿ ಬಿಡುವುದಾದರೆ ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಭಾರತದ ವಿಜ್ಞಾನಿಗಳು ಹಿಂದಿರುಗುತ್ತಾರೆ." ಎನ್ನುತ್ತಾರೆ. ಇಂತಹ ಪೌರಪ್ರಜ್ಞೆಯನ್ನು ಭಾರತ ಮೆರೆಯ-ಬೇಕಾದರೆ ಇದಕ್ಕೆ ಜಾತೀಯತೆ, ರಾಜಕೀಯ ಇತರೆ ಕಾರಣಗಳು ಅಡ್ಡಬರುತ್ತದೆ. ನಮ್ಮ ವಿಶ್ವವಿದ್ಯಾನಿಲಯಗಳು ಇದರಿಂದ ಹೊರಬರಬೇಕಿದೆ. ಕುಲಪತಿ ತಾನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮುಖ್ಯಸ್ಥ; ತಾನು ಶೈಕ್ಷಣಿಕ ಉನ್ನತಿಗಾಗಿ ಶ್ರಮಿಸುತ್ತಿದ್ದೇನೆ ಎಂಬುದನ್ನು ಮರೆಯದೆ ಪೌರಪ್ರಜ್ಞೆ ಮೆರೆಯಬೇಕಾಗುತ್ತದೆ.

"ಆಯಾ ಜಾತಿಯಲ್ಲಿ ಹುಟ್ಟಿರುವುದೇ ದೊಡ್ಡ ಮೆರಿಟ್ಟಾಗುತ್ತದೆ. ಹೀಗಾಗಿ ಅಪಾತ್ರರು, ಅಯೋಗ್ಯರು, ಪೆದ್ದರಿಗೆಲ್ಲ ಕುಲಪತಿಗಳಾಗುವ ಸುಯೋಗ. ಇಂಥವರು ಕ್ಯಾಂಪಸ್‌ನಲ್ಲಿ ಅದೆಂತಹ ಅಕ್ಯಾಡೆಮಿಕ್ ವಾತಾವರಣ ಹುಟ್ಟುಹಾಕಬಲ್ಲರು ಕುಲಪತಿಯೇ ವಿಶ್ವವಿದ್ಯಾನಿಲಯಕ್ಕೆ ಶಾಪವಾದರೆ ಅದನ್ನು ಉದ್ಧಾರ ಮಾಡುವವರು ಯಾರು?"[೫೬] ಎಂಬ ಪ್ರಶ್ನೆಯನ್ನು ವಿಶ್ವೇಶ್ವರಭಟ್ಟರು ಎತ್ತುತ್ತಾರೆ.

---

೫೫. ವಿಶ್ವೇಶ್ವರ ಭಟ್, ವಿಜಯಕರ್ನಾಟಕ ದಿನಪತ್ರಿಕೆ, ದಿನಾಂಕ ೧೩-೦೮-೨೦೦೯

೫೬. ಪೌರಪ್ರಜ್ಞಾಯನ, ವಿಶ್ವೇಶ್ವರ ಭಟ್, ೨೦೦೯, ಪು. ೨೬೬

ಈ ಕುರಿತು ನನ್ನ ಅಭಿಪ್ರಾಯವೆಂದರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ವೈ.ಪಿ.ರುದ್ರಪ್ಪ, ಡಾ. ಪಿ.ಸೆಲ್ವಿದಾಸ್ ಪ್ರಸ್ತುತ ಪ್ರೊ. ವಿ.ಜಿ.ತಳವಾರ್‌ರವರು, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಹನುಮಯ್ಯ, ಪ್ರಸ್ತುತ ಪ್ರೊ. ಟಿ.ಸಿ. ಶಿವಶಂಕರಮೂರ್ತಿಯವರು, ಗುಲ್ಬರ್ಗ ವಿ.ವಿ.ಯಲ್ಲಿ ಪ್ರೊ. ನಾಗರಾಜು, ಪ್ರಸ್ತುತ ಪ್ರೊ. ಈ.ಟಿ.ಪುಟ್ಟಯ್ಯನವರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಬಿಸಲಯ್ಯನವರು ಹಾಗೂ ಸಂಗೀತ ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಹನುಮಣ್ಣ ನಾಯಕ ದೊರೆಯವರು ಸಮರ್ಥ ಕುಲಪತಿಗಳಾಗಿ ಮೀಸಲಾತಿಯಿಂದ ಕುಲಪತಿ ಸ್ಥಾನವನ್ನು ಅಲಂಕರಿಸಿದ್ದರೂ ಇತರರಿಗಿಂತ ಯಾವುದೇ ರೀತಿಯಲ್ಲೂ ಪೆದ್ದರು, ಅಸಮರ್ಥರಲ್ಲ. ಜಾತಿ ಆಧಾರವಿಲ್ಲದೇ ನೇಮಕಗೊಂಡವರೆಲ್ಲಾ ಅತ್ಯುತ್ಕೃಷ್ಟ ಟೀಕಾತೀತರು ಎಂದು ಅರ್ಥವಲ್ಲ. ಎರಡೂ ಬಗೆಯಲ್ಲೂ ಅಪವಾದ ಪ್ರಸಂಗಗಳಿವೆ.

ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿ ನೇಮಕ ಸೇರಿದಂತೆ ಎಲ್ಲಾ ಹಂತದಲ್ಲಿ ರಾಜಕೀಯ ಹಸ್ತಕ್ಷೇಪವಿದೆ ಇದರಿಂದ ಮುಕ್ತಗೊಳಿಸಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆ ಇದೆ ಎಂಬ ಉಲ್ಲೇಖವನ್ನು ಲೇಖಕರು ದಾಖಲಿಸುತ್ತಾರೆ. ಸಚಿವರುಗಳು ಈಗ ತಮ್ಮ ತಮ್ಮ ಜಾತಿಗಳಿಗೆ ವಿಶ್ವವಿದ್ಯಾನಿಲಯದ ಕುಲಪತಿ ಸ್ಥಾನಕೊಡಿ ಎಂದು ಪತ್ರಿಕಾ ಹೇಳಿಕೆ ಕೊಡುತ್ತಿರುವ ಮಟ್ಟಕ್ಕೆ ಬಂದಿರುವುದು ದುರದೃಷ್ಟಕರ ಪದ್ಧತಿ ಜಾರಿಯಾಗುತ್ತಿದೆ.

ರಾಜಕೀಯ ಹಿನ್ನೆಲೆ ಇರುವವರನ್ನು ಸಿಂಡಿಕೇಟ್ ಸದಸ್ಯರನ್ನಾಗಿ ಮಾಡುವ ಮೂಲಕ ವಿಶ್ವವಿದ್ಯಾನಿಲಯಗಳು ವಿಧಾನಸೌಧದ ವಿಸ್ತರಣೆಗಳಾಗುತ್ತಿರುವುದು ಖಂಡಿತ ಎಂದು ಆಶಾಕೃಷ್ಣಮೂರ್ತಿ ಅವರು ಡೆಕ್ಕನ್ ಹೆರಾಲ್ಡ್ ಆಂಗ್ಲ ಪತ್ರಿಕೆಯಲ್ಲಿ ಬರೆದಿರುವುದನ್ನು ಲೇಖಕರು ತಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ.

ಡಾ. ದೇಜಗೌ ಅವರ ಪ್ರಕಾರ "ಒಬ್ಬ ಒಳ್ಳೆಯ ಕುಲಪತಿಯಿಂದ ವಿಶ್ವವಿದ್ಯಾನಿಲಯ ಪ್ರಸಿದ್ಧವಾಗುವುದಿಲ್ಲ. ಅದು ವಿಶ್ವವಿಖ್ಯಾತವಾಗುವುದು ಅದರ ಪ್ರಾಧ್ಯಾಪಕರು ಮತ್ತು ಬೋಧಕವರ್ಗದಿಂದ "ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಹಾರ್ವರ್ಡ್, MIT ವಿಶ್ವವಿದ್ಯಾನಿಲಯಗಳ ಕುಲಪತಿಗಳಾರು ಎಂಬುದು ವಿಶ್ವಕ್ಕೆ ಗೊತ್ತಿರಲಾರದು. ಆದರೆ ಅಲ್ಲಿರುವ ನೊಬೆಲ್ ಪ್ರಶಸ್ತಿ ವಿಜೇತರುಗಳು ಹಾಗೂ ವಿಜ್ಞಾನಿಗಳು ಎಲ್ಲರಿಗೂ ಗೊತ್ತಿರುತ್ತಾರೆ.

ಆ) ವೈದ್ಯಕೀಯ ಕ್ಷೇತ್ರ

ಸಮಾಜದ ಎಲ್ಲಾ ಕ್ಷೇತ್ರಗಳಿಗಿಂತಲೂ ವೈದ್ಯಕೀಯ ಕ್ಷೇತ್ರ ಹೆಚ್ಚು ಮಹತ್ವಪೂರ್ಣವಾದುದು. ರೋಗಿಗಳ ಪಾಲಿಗೆ ವೈದ್ಯರೇ ಸಾಕ್ಷಾತ್ ದೇವರಿದ್ದಂತೆ. ಜೀವ

ಉಳಿಸುವ ಮಹತ್ಕಾರ್ಯದಲ್ಲಿ ತೊಡಗುವ ವೈದ್ಯರಿಗೆ ಸಮಯದ ನಿರ್ಬಂಧವಿಲ್ಲ. ಹಗಲಿರುಳು ರೋಗಿಯ ಸೇವೆಗಾಗಿ ಮುಂದಾಗುವ ಕ್ಷೇತ್ರ ಈ ವೈದ್ಯಕೀಯ ಕ್ಷೇತ್ರ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ವೈದ್ಯರಿಗೆ ವಿಶೇಷ ಗೌರವ ಸ್ಥಾನಮಾನವಿದೆ. ಅದಕ್ಕೆ ಅವರನ್ನು "ವೈದ್ಯೋನಾರಾಯಣೋಹರಿಃ" ಎಂದು ಕರೆದಿದ್ದಾರೆ. ವೈದ್ಯನು ನಾರಾಯಣಗೆ ಸಮ ಎನ್ನುತ್ತಾ ವೈದ್ಯರನ್ನು ದೈವತ್ವಕ್ಕೆ ಏರಿಸಿದ ಸಂಸ್ಕೃತಿ ನಮ್ಮದು.

ವೃತ್ತಿ ಶ್ರೇಷ್ಠತೆ ಮೆರೆದ ವೈದ್ಯರು ನಮ್ಮಲ್ಲಿ ಇದ್ದಾರೆ. ತಮ್ಮ ಇಡೀ ಜೀವನವನ್ನು ರೋಗಿಗಳ ಸೇವೆಗೆ ಮುಡಿಪಾಗಿಟ್ಟ ಶ್ರೇಷ್ಠ ವೈದ್ಯ ಪರಂಪರೆ ಇದೆ. ಆದರೆ "ಪೌರಪ್ರಜ್ಞೆ ಇಲ್ಲದ ಕೆಲವು ವೈದ್ಯರು ವೃತ್ತಿಧರ್ಮವನ್ನೆಲ್ಲಾ ಗಾಳಿಗೆ ತೂರಿ ಯಾವುದೇ ಪೌರಪ್ರಜ್ಞೆ ಇಲ್ಲದೆ ಧನ ಸಂಪಾದನೆಯನ್ನೇ ತಮ್ಮ ಆದ್ಯ ಗುರಿಯನ್ನಾಗಿಟ್ಟುಕೊಂಡಿರುವ ವೈದ್ಯರೂ ಇದ್ದಾರೆ."[೫೭]

ಜಗತ್ತಿನ ಅಗ್ರಮಾನ್ಯ ಶ್ರೀಮಂತ ಮೈಕ್ರೋಸಾಫ್ಟ್‌ನ ಬಿಲ್‌ಗೇಟ್ಸ್ ಭಾರತದ ಆರೋಗ್ಯ ಕ್ಷೇತ್ರಕ್ಕೆ ಸಾಕಷ್ಟು ಧನಸಹಾಯ ಮಾಡುತ್ತಿದ್ದಾರೆ. ಇವರಿಗೆ ಜುಲೈ ೨೭, ೨೦೦೯ರಲ್ಲಿ ಇಂದಿರಾಗಾಂಧಿ ಶಾಂತಿ ಪಾರಿತೋಷಕವನ್ನು ಕೊಡಲಾಯಿತು. ಸಾರ್ವಜನಿಕ ಆರೋಗ್ಯಕ್ಕಾಗಿ ಹೆಚ್ಚು ಹಣವನ್ನು ಪ್ರಾಮಾಣಿಕ ರೀತಿಯಲ್ಲಿ ಖರ್ಚು ಮಾಡುವುದರ ಬಗ್ಗೆ ಗಮನ ಸೆಳೆದಿದ್ದಾರೆ. "ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ಆರೋಗ್ಯ ರಕ್ಷಣಾ ವ್ಯವಸ್ಥೆ ನಮ್ಮಲ್ಲೂ ಜಾರಿಗೆ ಬರಬೇಕು. ಸರ್ಕಾರ ಸಾರ್ವಜನಿಕ ಆರೋಗ್ಯಕ್ಕಾಗಿ ಇನ್ನೂ ಹೆಚ್ಚು ಹಣ ಖರ್ಚು ಮಾಡಬೇಕು. ಈ ಹಣ ಸದ್ವಿನಿಯೋಗ-ವಾಗುವಂತೆ ನೋಡಿಕೊಳ್ಳಬೇಕು."[೫೮] ಎಂಬುದು ಬಿಲ್‌ಗೇಟ್ಸ್ ಅಭಿಪ್ರಾಯ.

ವೈದ್ಯರುಗಳ ಸಂಬಳ ಸವಲತ್ತುಗಳನ್ನು ಹೆಚ್ಚಿಸಿ ಅವರು ಹೊರ ಸಂಪಾದನೆಗೆ ಕಷ್ಟಪಡುವುದನ್ನು ನಿಲ್ಲಿಸಬೇಕು. ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಪಾಶ್ಚಿಮಾತ್ಯ ರಾಷ್ಟ್ರಗಳಂತೆ ಬಡವಬಲ್ಲಿದರೆಲ್ಲರಿಗೂ ಒಂದೇ ರೀತಿಯ ಚಿಕಿತ್ಸೆ ಸಿಗುವಂತಾಗಬೇಕು. ಭೇದಭಾವ ತೊಲಗಬೇಕು." ಗುಜರಾತಿನ ಗಾಂಧಿನಗರದಲ್ಲಿ ಹೆಚ್‌ಐವಿ ಮಹಿಳಾ ರೋಗಿಯೊಬ್ಬರ ಹಣೆಯ ಮೇಲೆ ಹೆಚ್‌ಐವಿ ಪಾಸಿಟಿವ್ ರೋಗಿ ಎಂದು ಬರೆದ ಪಟ್ಟಿಯನ್ನು ಅಂಟಿಸಿ ಅವಳನ್ನು ಗುರುಗೋವಿಂದ್ ಸಿವಿಲ್ ಆಸ್ಪತ್ರೆಯಲ್ಲಿ ಕೂರಿಸಲಾಗಿತ್ತಂತೆ ಎಂಬ ವರದಿ ಮಾಧ್ಯಮಗಳಲ್ಲಿ ಬಂದಿದೆ.

---

೫೭. ಪೌರಪ್ರಜ್ಞೆಯನ-ವೈದ್ಯಕೀಯ ಕ್ಷೇತ್ರ, ಪು. ೩೮೪

೫೮. ಬಿಲ್‌ಗೇಟ್ಸ್-ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ೨೬-೦೭-೨೦೦೯

"ಹಾಸನದ ದೊಡ್ಡಕರದೇವು ಹಳ್ಳಿಯಲ್ಲಿ ಏಡ್ಸ್ ದಂಪತಿಗಳನ್ನು ಮನೆಯಿಂದ ಹೊರಹಾಕಲಾಗಿದೆ"[೫೯] ಎಂದು ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

೯ ವರ್ಷದ ಬಾಲಕಿ ಅನುಷಳ ಜ್ವರ ಗುಣಪಡಿಸಲು ಖಾಸಗಿ ಆಸ್ಪತ್ರೆಯೊಂದು ಬೆಂಗಳೂರಿನಲ್ಲಿ ೭೦,೦೦೦/- ರೂಗಳ ಖರ್ಚಿಗೆ ಕಾರಣವಾಗಿದೆ ಎಂದು ಹಿಂದೂ ದಿನಪತ್ರಿಕೆ ೧೧-೦೭-೨೦೦೯ರಲ್ಲಿ ವರದಿ ಮಾಡಿದ್ದನ್ನು ಲೇಖಕರು ಉಲ್ಲೇಖಿಸಿದ್ದಾರೆ.

ಹಣ ಮಾಡುವ ದಂಧೆಯಾಗಿ ಇಂದಿನ ವೈದ್ಯಕೀಯ ಕ್ಷೇತ್ರ ಬದಲಾಗು-ತ್ತಿರುವುದು ಗಾಬರಿ ಹುಟ್ಟಿಸುತ್ತದೆ. "ಕೆಲವು ವೈದ್ಯರಂತೂ ಯಾವುದೇ ಪೌರಪ್ರಜ್ಞೆ ಇಲ್ಲದೆ, ಉಡುಗೊರೆ, ವಿದೇಶ ಪ್ರವಾಸ ಹಾಗೂ ಕಮಿಷನ್ ಇಂತಹ ಆಮಿಷಗಳಿಗೆ ಬಹುರಾಷ್ಟ್ರೀಯ ಕಂಪನಿಗಳಿಂದ ಒಳಗಾಗಿ, ದುಬಾರಿಯಾದ ಆ ಕಂಪನಿಯ ಔಷಧಗಳನ್ನೇ ಖರೀದಿಸುವಂತೆ ರೋಗಿಗಳಿಗೆ ಶಿಫಾರಸು ಮಾಡುತ್ತಾರೆ. ದೇಶೀ ಔಷಧಿಗಳು ಕಡಿಮೆ ಬೆಲೆಯಲ್ಲೇ ಮಾರುಕಟ್ಟೆಯಲ್ಲಿ ಸಿಗುತ್ತಿದ್ದರೂ ಅದನ್ನು ಶಿಫಾರಸು ಮಾಡುವುದಿಲ್ಲ. ಇದರಿಂದಾಗಿ ಬಡರೋಗಿಗಳಿಗೆ ಚಿಕಿತ್ಸೆ ದುಬಾರಿಯಾಗುತ್ತದೆ."[೬೦] ಎಂದು ಪತ್ರಕರ್ತ ಪ್ರೇಮ್‌ಕುಮಾರ್ ಹರಿಯಬ್ಬೆ 'ಸ್ವಾರ್ಥ ವೈದ್ಯರ ಕರಾಳತೆ' ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ.

ಸುಪ್ರಸಿದ್ಧ ನ್ಯಾಯಾಧೀಶರಾದ ಶ್ರೀ ರಾಮಾಜೋಯಿಸ್ ಅವರು "ನಾವು ತೀರ್ಥ ತೆಗೆದುಕೊಳ್ಳುವಾಗ ಹೇಳುವ ಮಂತ್ರದ ಅರ್ಥವೇನೆಂದರೆ (ವೈದ್ಯೋ-ನಾರಾಯಣೋ ಹರಿಃ) ವೈದ್ಯರಾಗಿ ನಮ್ಮ ಕಾಯಿಲೆಗಳನ್ನು ಗುಣಪಡಿಸುವ ವೈದ್ಯರನ್ನು ಸಾಕ್ಷಾತ್ ನಾರಾಯಣನಿಗೆ ಹೋಲಿಸಿದಂತೆಯೇ" ನಿಮ್ಮ ವೃತ್ತಿ ಸೇವೆ ಪ್ರಧಾನವಾದದ್ದು, ಸಹ ಮಾನವರ ಸೇವೆ ನಿಮ್ಮ ಜೀವನದ ಧ್ಯೇಯವಾಗಿರಲಿ." ಎಂದಿದ್ದಾರೆ.

ವೈದ್ಯರು ಪೌರಪ್ರಜ್ಞೆ ಇಲ್ಲದೆ ಮುಷ್ಕರ ಮಾಡುವುದರಿಂದ ಅಥವಾ ಸಾಮೂಹಿಕ ರಜೆ ಹಾಕುವುದರಿಂದ ಅಥವಾ ರಾಜೀನಾಮೆ ನೀಡುವುದರಿಂದ ಕರ್ತವ್ಯ ಲೋಪವಾಗುತ್ತದೆ ಎನ್ನುತ್ತಾರೆ ನ್ಯಾ.ರಾಮಜೋಯಿಸ್. ನಮ್ಮ ದೇಶದಲ್ಲಿ ದಿನವೊಂದಕ್ಕೆ ನಾಲ್ಕು ಲಕ್ಷ ಪುಟ್ಟ ಮಕ್ಕಳು ಸಾಯುತ್ತಾರೆ. ಗರ್ಭವತಿಯರಾದ ಕಾಲದಲ್ಲಿ ನಂತರದ ಪ್ರಸವ ಇಲ್ಲವೇ ಪ್ರಸವದ ನಂತರ ೪೨ ದಿನಗಳಲ್ಲಿ ಪ್ರತಿವರ್ಷ ೭೮,೦೦೦/- ಜನ ಸ್ತ್ರೀಯರು ಸಾಯುತ್ತಿದ್ದಾರೆ ಎಂದು ಜಿಷಾಕೃಷ್ಣನ್ ಮತ್ತು ದಿವೀಕ್ ತಮ್ಮ ವರದಿಯಲ್ಲಿ ಹೇಳಿದ್ದಾರೆ. ವೈದ್ಯರುಗಳ ಮುಷ್ಕರದಿಂದಾಗಿ ಬಿಹಾರ್‌ನಲ್ಲಿ ನೂರುಜನ ಪ್ರಾಣ ಬಿಡಬೇಕಾಯಿತು ಎಂದು ಡೆಕನ್ ಕ್ರಾನಿಕಲ್ ೨೧-೧೧-೨೦೦೯ರಲ್ಲಿ ವರದಿಯನ್ನು

೫೯. ಹಿಂದೂ ಆಂಗ್ಲ ದೈನಿಕ
೬೦. ಪ್ರೇಂಕುಮಾರ್ ಹರಿಯಬ್ಬೆ, ಸುಧಾ ವಾರಪತ್ರಿಕೆ, ದಿನಾಂಕ ೧೮-೦೨-೨೦೧೦.

ಲೇಖಕರು ಉಲ್ಲೇಖಿಸಿದ್ದಾರೆ. ಹಾಗೆಯೇ ಇತ್ತೀಚೆಗೆ ಜೋಧ್‌ಪುರದ ವೈದ್ಯರುಗಳ ಮುಷ್ಕರದಿಂದಾಗಿ ೧೪ ಸಾವು ಸಂಭವಿಸಿದೆ. ಹಾಗೆಯೇ ಕರ್ನಾಟಕದಲ್ಲಿಯೂ ವೈದ್ಯರ ರಾಜೀನಾಮೆ ಚಳುವಳಿಯ ಬೆದರಿಕೆಯೂ ಇದ್ದು ಅನೇಕರಿಗೆ ತೊಂದರೆಯಾದ ಸನ್ನಿವೇಶಗಳನ್ನು ನೋಡಬಹುದು.

ಇಂತಹ ಘಟನೆಗಳು ಪೌರಪ್ರಜ್ಞೆಯನ್ನಾಗಲಿ ವೈದ್ಯರಿಗಿರಬೇಕಾದ ನಿಸ್ವಾರ್ಥ ಸೇವಾಮನೋಭಾವವನ್ನಾಗಲೀ, ವೃತ್ತಿ ನೀತಿಯನ್ನಾಗಲೀ ಪ್ರತಿಬಿಂಬಿಸುವುದಿಲ್ಲ. ಕೆಲವು ವೈದ್ಯರುಗಳಂತೂ ನಕಲಿ ಸರ್ಟಿಫಿಕೆಟ್‌ಗಳ ಬಲದಿಂದ ಕೆಲಸ ಮಾಡುತ್ತಿದ್ದಾರೆ. ಇಂತಹ ೫೭ ಮೆಡಿಕಲ್ ಡಾಕ್ಟರ್‌ಗಳನ್ನು ಸೌದಿ ಅರೇಬಿಯ ಬಹಿಷ್ಕರಿಸಿದೆ. ಪ್ರಾಮಾಣಿಕತೆ, ಪೌರಪ್ರಜ್ಞೆ ಹಾಗೂ ಸೇವಾ ಮನೋಭಾವವಿರುವ ಅನೇಕ ವೈದ್ಯರುಗಳು ಇಂದೂ ಇದ್ದಾರೆ ಎನ್ನುವುದು ಆತಂಕದ ನಡುವೆಯೂ ಸಮಾಧಾನ ಪಡುವುದಾಗಿದೆ.

ಲೇಖಕರು ಆದರ್ಶ ವೈದ್ಯರ ಉದಾಹರಣೆಯನ್ನು ನೀಡುತ್ತಾ ಮೈಸೂರಿನ ಬಿ.ಎಂ. ಆಸ್ಪತ್ರೆಯ ಸಂಸ್ಥಾಪಕರಾದ ಡಾ.ಸಿ.ಬಿ.ಮೂರ್ತಿಯವರು ಇಂತಹ ಗುಂಪಿಗೆ ಸೇರಿದವರು. ಇವರು ತಮ್ಮ ವೃತ್ತಿಯಲ್ಲಿ ಮಾತ್ರ ಪ್ರವೀಣರಲ್ಲ ಬಹಳ ದೊಡ್ಡ ಆದರ್ಶಗಳನ್ನಿಟ್ಟುಕೊಂಡಿರುವವರು. ರೋಗಿಗಳ ಅವಶ್ಯಕತೆಗಳಿಗನುಸಾರವಾಗಿ ಅರ್ಧ ರಾತ್ರಿಯಲ್ಲೆಲ್ಲಾ ಇವರು ಕೆಲಸ ಮಾಡುತ್ತಿರುತ್ತಾರೆ. ಎಂದಿನಂತೆಯೇ ಅವರ ನಗು–ಮುಖ ಎಲ್ಲರನ್ನೂ ಸ್ವಾಗತಿಸುತ್ತಿರುತ್ತದೆ. ನನ್ನ ಗುರುಗಳಾದ ಡಾ. ಗೋವಿಂದಪ್ಪ–ನವರು ಕಾಯಿಲೆಗೊಳಗಾದಾಗ, ಅವರು ಅಂತರರಾಷ್ಟ್ರೀಯಮಟ್ಟದ ವಿಜ್ಞಾನಿ ಎಂಬುದು ಇವರಿಗೆ ಗೊತ್ತಿಲ್ಲದಿದ್ದರೂ ಅತಿ ಪ್ರೀತ್ಯಾದಾರಗಳಿಂದ ನೋಡಿಕೊಂಡಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ.

ಸರ್ಕಾರಿ ಆಸ್ಪತ್ರೆಯ ಡಾ. ಗೀತಾ ಅವಧಾನಿಯವರು ಕೊಡುವ ಚಿಕಿತ್ಸೆಗಳೆಲ್ಲಾ ಉಚಿತ. ಈ ಆಸ್ಪತ್ರೆಯಲ್ಲಿ ಡಾ.ಹನುಮಂತಪ್ಪನವರಂತಹ ಪ್ರತಿಭಾವಂತ ವೈದ್ಯರುಗಳು ಇದ್ದಾರೆ. ಸಭ್ಯತೆ ಸುಸಂಸ್ಕೃತ ಗುಣಗಳಿಗೆ ಹೆಸರಾದ ಈ ಸ್ಫುರದ್ರೂಪಿ ವೈದ್ಯರ ನಗುಮೊಗ ಹಾಗೂ ಮಾನವೀಯ ಮಾತುಗಳಿಂದಲೇ ರೋಗಿಗಳು ಅರ್ಧ ಗುಣಮುಖ–ರಾಗಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ಅನಾವಶ್ಯಕವಾದ ದುಬಾರಿ ಚಿಕಿತ್ಸೆಗಳಿಗೆ ಪೌರಪ್ರಜ್ಞೆ ಇಲ್ಲದ ಕೆಲವು ವೈದ್ಯರುಗಳು, ಬಡರೋಗಿಗಳನ್ನು ತಳ್ಳುತ್ತಿದ್ದಾರೆ. ಸಿಸೇರಿಯನ್ ಹೆರಿಗೆ ಕೆಲವು ಅಪರೂಪದ ಸಂದರ್ಭಗಳಲ್ಲಿ ಅವಶ್ಯಕವಿರುವುದು ಎಲ್ಲರಿಗೂ ಗೊತ್ತು. ಆದರೂ ಗರ್ಭಿಣಿಯ ಸುತ್ತಮುತ್ತಲಿರುವ ಸಂಬಂಧಿಕರಿಗೆ ಗಾಬರಿ ಹುಟ್ಟಿಸಿ ವಿನಾಕಾರಣ ಅಂದರೆ ಸಹಜವಾಗಿ ಹೆರಿಗೆ ಆಗುವಂತಹ ಪರಿಸ್ಥಿತಿ ಇದ್ದರೂ ಉದ್ದೇಶಪೂರ್ವಕವಾಗಿ

ಸಿಸೇರಿಯನ್ ಮಾಡಿ ಹೆಚ್ಚು ಬಿಲ್ ಮಾಡುವುದು ಸರಿಯೇ ಎಂಬ ವಾದ ಲೇಖಕರದ್ದು.

"ಸಾಮಾನ್ಯವಾಗಿ ಸರ್ಜರಿಯಲ್ಲಿರುವ ವೈದ್ಯರುಗಳು ಉತ್ತಮ ಶಿಕ್ಷಣ ಪಡೆದಿರುತ್ತಾರೆ. ಹಾಗೂ ಅವರ ಶಸ್ತ್ರಕ್ರಿಯಾ ಕೌಶಲ್ಯಗಳಿಗೆ ಹೆಸರಾಗಿರುತ್ತಾರೆ. ಆದರೂ ಕೆಲವರು ಹೊಟ್ಟೆಯಲ್ಲಿ ಕತ್ತರಿ ಬಿಡುವುದುಂಟು"[೬೧] ಎಂದು ಪತ್ರಿಕಾ ವರದಿಯನ್ನು ಉಲ್ಲೇಖಿಸುತ್ತಾರೆ.

ವೈದ್ಯರ ನಿರ್ಲಕ್ಷ್ಯದಿಂದ ಗ್ರಾಮೀಣ ಪ್ರದೇಶದಲ್ಲಿ ಅನೇಕ ರೋಗಿಗಳು ಸಾವನ್ನಪ್ಪುವುದರ ಕುರಿತ ವರದಿಗಳು ಆಗಿಂದಾಗ್ಗೆ ದಿನಪತ್ರಿಕೆಗಳಲ್ಲಿ ಬರುವುದನ್ನು ಲೇಖಕರು ಗುರುತಿಸಿ, ಸಂಗ್ರಹಿಸಿ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಸಿ.ಟಿ. ಸ್ಕ್ಯಾನ್ ತೀರಾ ತುರ್ತು ಸಂದರ್ಭದಲ್ಲಿ ಮಾಡಿಸಬೇಕು. ಆದರೆ ಕೆಲವು ವೈದ್ಯರು ಸಣ್ಣಪುಟ್ಟದಕ್ಕೂ ಸಿ.ಟಿ. ಸ್ಕ್ಯಾನ್ ಮಾಡಿಸಿ ಎನ್ನುತ್ತಾ ರೋಗಿಗಳನ್ನು ದೋಚುತ್ತಿದ್ದಾರೆ. ಸ್ಕ್ಯಾನ್ ಮತ್ತು ಪೆಥಾಲಜಿ ಸಂಸ್ಥೆಗಳೊಂದಿಗೆ ಅನೈತಿಕ ಒಪ್ಪಂದ ಮಾಡಿಕೊಂಡು ಲಾಭಾಂಶ ಪಡೆಯುವ ಹುನ್ನಾರ ವೈದ್ಯರದ್ದು. ಇದು ಪೌರಪ್ರಜ್ಞೆಯೇ? ಎಂದು ಲೇಖಕರು ಪ್ರಶ್ನಿಸುತ್ತಾರೆ.

ಭಾರತೀಯ ವೈದ್ಯಕೀಯ ಪರಿಷತ್ತಿನ (MCI) ಅಧ್ಯಕ್ಷ ಮಹಾವೈದ್ಯರಾದ ಡಾ. ಕೇತನದೇಸಾಯಿ ಭ್ರಷ್ಟಾಚಾರದ ಆರೋಪದ ಮೇಲಿದ್ದಾರೆ. ಪೌರಪ್ರಜ್ಞೆ ಇದ್ದಿದ್ದರೆ ಅವರು ಇಂತಹ ಆರೋಪಕ್ಕೆ ಗುರಿಯಾಗುತ್ತಿರಲಿಲ್ಲ.

ಭಾರತದಲ್ಲಿ ಇಲ್ಲಿಯವರೆಗೆ ನೋಂದಾವಣೆ ಮಾಡಿಕೊಂಡಿರುವ ವೈದ್ಯರ ಸಂಖ್ಯೆ ೬೩೩, ೧೦೮. ಪ್ರತಿ ೧೦೦೦ ಜನಕ್ಕೆ ೨-೩ ವೈದ್ಯರಿರಬೇಕು. ಆದರೆ ಅಸ್ಸಾಂ, ಬಿಹಾರ್, ಜಾರ್ಖಂಡ್, ಹರ್‍ಯಾಣ, ಮಹಾರಾಷ್ಟ್ರ, ಪಶ್ಚಿಮಬಂಗಾಳ, ರಾಜಾಸ್ತಾನ್‌ಗಳಲ್ಲಿ ವೈದ್ಯರ ಸಂಖ್ಯೆ ಮೇಲಿನದಕ್ಕಿಂತ ಕಡಿಮೆ ಎಂಬ ಆತಂಕದ ವಿವರವನ್ನು ಲೇಖಕರು ದಾಖಲಿಸುತ್ತಾರೆ.

"ಮರಣೋತ್ತರ ಪರೀಕ್ಷೆ ಹಾಗೂ ಶವರಕ್ಷಣೆಗಳು ಶಿಲಾಯುಗದ ಮಾದರಿ-ಯಲ್ಲಿವೆ"[೬೨] ಎನ್ನುತ್ತಾರೆ ರಾಘವೇಂದ್ರ ಭಟ್. ವೈದ್ಯರ ಕರ್ತವ್ಯ ಕುರಿತು ಶ್ಲೋಕ ಹೀಗೆ ಹೇಳುತ್ತದೆ. "ನನಗೆ ರಾಜ್ಯವಾಗಲೀ, ಪುನರ್ಜನ್ಮವಾಗಲೀ ಬೇಕಿಲ್ಲ, ದುಃಖಿಗಳಾದ

---

೬೧. ಡೆಕನ್‌ಕ್ರಾನಿಕಲ್ ಆಂಗ್ಲದೈನಿಕ, ದಿನಾಂಕ ೨೭-೦೮-೨೦೦೯

೬೨. ರಾಘವೇಂದ್ರ ಭಟ್, ವಿಜಯಕರ್ನಾಟಕ, ದಿನಾಂಕ ೨೦-೧೧-೨೦೧೦

ಜೀವಿಗಳ ದುಃಖವನ್ನು ನಿವಾರಣೆಯಾಗುವುದನ್ನು ಮಾತ್ರ ನಾನು ಬಯಸುತ್ತೇನೆ" ಎಂದು.

ಇ) ದಯಾಮರಣ

ದಯಾಮರಣ ಆಂಗ್ಲ ಭಾಷೆಯ ಶಬ್ದ 'Mercy death' ಎಂಬ ಪದದಿಂದ ಬಂದಿದೆ. ಯೂಥಾನೇಷ್ಯ ಎಂಬ ಗ್ರೀಕ್ ಮೂಲದ ಪದ. ಇದರ ಅರ್ಥ ಒಳ್ಳೆಯ ಮರಣ ಎಂದು. ಗಂಭೀರ ವಾಸಿಯಾಗದ ಕಾಯಿಲೆಗಳಿಂದ ವರ್ಷಾನುಗಟ್ಟಲೆ ನೋವಿನಿಂದ ನರಳುತ್ತಿರುವವರನ್ನು ಹೆಚ್ಚಿನ ನೋವಿಲ್ಲದೆ ಸಾಯಿಸುವುದನ್ನು ಕೆಲವರು 'ದಯಾಮರಣ' ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿ ವ್ಯಕ್ತಿ ತಾನಾಗಿಯೇ ದಯಾಮರಣದ ನಿರ್ಧಾರ ತೆಗೆದುಕೊಳ್ಳಬಹುದು. ಇಲ್ಲವೇ ಅವನ ಪರವಾಗಿ ಇತರರು ನಿರ್ಧರಿಸಬಹುದು. ದಯಾಮರಣದ ಬಗ್ಗೆ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯಗಳಿವೆ.

೧೯೯೭ರಲ್ಲಿ ಅಮೇರಿಕಾ ಸರ್ವೋಚ್ಚ ನ್ಯಾಯಾಲಯ ವಾಸಿಯಾಗದ ರೋಗದಿಂದ ನರಳುತ್ತಿರುವ ಯಾವುದೇ ವ್ಯಕ್ತಿಗೆ ದಯಾಮರಣದ ಮೂಲಕ ತನ್ನನ್ನು ಸಾಯಿಸುವಂತೆ ವೈದ್ಯರನ್ನು ಒತ್ತಾಯಪಡಿಸಲು ಮೂಲಭೂತ ಹಕ್ಕಿಲ್ಲ ಎಂದು ತೀರ್ಪು ನೀಡಿತು. ಆತ್ಮಹತ್ಯೆಗೆ ವೈದ್ಯರು ನೆರವಾಗುವುದು ಕೂಡ ಕಾನೂನು ಬಾಹಿರಕ್ರಮ. ಪೌರಪ್ರಜ್ಞೆ ಹಾಗೂ ವೈದ್ಯರ ವೃತ್ತಿ ಧರ್ಮಕ್ಕೆ ಇದು ವಿರೋಧವಾದದ್ದು. ಇಂತಹ ದಯಾಮರಣ ಅಥವಾ ವೈದ್ಯರ ಸಹಾಯದಿಂದ ಮಾಡಿಸುವ ಹತ್ಯೆಗೆ ಅನೇಕ ಸ್ವಾರ್ಥ ವ್ಯಕ್ತಿಗಳೂ ಹಾಗೂ ದುರಳರ ಸಂಚು ಇರಲು ಸಾಧ್ಯ. ವೈದ್ಯರ ಹಣದಾಹದ ಕುರಿತಂತೆ ಈ ಶ್ಲೋಕ ಹೇಳುತ್ತದೆ.

"ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರ?।
ಯಮೋ ಹರತಿ ಪ್ರಾಣಾನ್ತ್ವಂ ಪ್ರಾಣಾಂಶ್ಚಂ ಧನಾನಿಚ॥

ಅಂದರೆ ಯಮರಾಜನ ಸಹೋದರನಾದ ನಿನಗೆ ನಮಸ್ಕಾರ. ಯಮರಾಜ ಬರೇ ಪ್ರಾಣವನ್ನು ಮಾತ್ರ ಒಯ್ಯುವವನು. ನೀನಾದರೋ ಪ್ರಾಣ, ಧನ ಎರಡನ್ನೂ ಅಪಹರಿಸುತ್ತೀಯ ಎಂದು ಶ್ಲೋಕದ ಅರ್ಥ.

ಜ್ಞಾನಿಗಳ ದೃಷ್ಟಿಯಲ್ಲಿ ದಯಾಮರಣ ಒಂದು ರೀತಿಯ ಕೊಲೆ. ಹೆಸರಿಗೆ ಇದು ದಯಾಮರಣವೆಂದಿದ್ದರೂ ಇದು ನಿರ್ದಯಿಗಳ, ಪೌರಪ್ರಜ್ಞೆ ಇಲ್ಲದವರ ಕಾರುಬಾರು. ಇದರಿಂದ ನಮ್ಮ ಸಮಾಜದಲ್ಲಿ ಅನೈತಿಕ ಹತ್ಯೆಗಳನ್ನು ಪ್ರೋತ್ಸಾಹಿಸಿ ದಂತಾಗುತ್ತದೆ. ನಮ್ಮ ಹಿರಿಯ ನಾಗರೀಕರಿಗೆ ಅಥವಾ ವಯೋವೃದ್ಧರಿಗೆ ಇದರಿಂದ

ಪ್ರಾಣಾಪಾಯ ಕಟ್ಟಿಟ್ಟಬುತ್ತಿ ಅವರಲ್ಲಿ ಕೋಟ್ಯಾಧಿಪತಿಗಳಿರುತ್ತಾರೆ. ಅನೇಕ ವೃದ್ಧರಿಗೆ ಇದರಿಂದ ಅಪಾಯವಾಗಿರುತ್ತದೆ ಎಂಬ ಆತಂಕ ಲೇಖಕರದ್ದು.

ದಯಾಮರಣ ಭೀಷ್ಮರ ಮರಣದಂತೆ ಇಚ್ಛಾಮರಣವಲ್ಲ, ಇಚ್ಛಾಮರಣಕ್ಕೆ ಸಿಕ್ಕಿರುವ ಬೆಲೆ ದಯಾಮರಣಕ್ಕೆ ಸಿಕ್ಕುವುದಿಲ್ಲ. ಇದು ಆತ್ಮ ಸಮರ್ಪಣೆಯೇ ಅಲ್ಲ. ವೀರಸಾವರ್‌ಕರ್ ಅವರ ಪ್ರಕಾರ "ಜೀವನದ ಗುರಿ, ಉದ್ದೇಶಗಳು ಪೂರ್ಣ-ಗೊಂಡಿದೆ ಎಂಬ ಕೃತಕೃತ್ಯತೆಯ ಭಾವನೆಯಿಂದ ತಮ್ಮ ಐಹಿಕ ಅಸ್ತಿತ್ವವನ್ನು ತುಂಬು ಹರ್ಷದಿಂದ ಕೊನೆಗೊಳಿಸಿಕೊಳ್ಳುವ ಕೃತ್ಯವನ್ನು ಆತ್ಮಸಮರ್ಪಣೆ ಎನ್ನುತ್ತಾರೆ.

ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ತ್ಯಾಗಿಗಳು ಆತ್ಮಾರ್ಪಣೆ ಮಾಡಿಕೊಂಡಿದ್ದಾರೆ. ಸಲ್ಲೇಖನ, ಅಗ್ನಿಪ್ರವೇಶ, ಸತಿಪದ್ಧತಿ, ಸಜೀವ ಸಮಾಧಿ ಇವಕ್ಕೂ ಪೌರಪ್ರಜ್ಞೆ ಇಲ್ಲ ಎಂದೇ ಹೇಳಬೇಕು. ಧರ್ಮದ ಹೆಸರಿನಲ್ಲಿ ಇವುಗಳಾವುವು ಸರಿಯಿಲ್ಲ, ಜೋಹರ್, ಶತ್ರುಗಳಿಂದ ಮಾನ ಕಾಪಾಡಿಕೊಳ್ಳಲೊಸುಗ ತಮಗಿದ್ದ ಸಂಕಲ್ಪ ಸ್ವಾತಂತ್ರ್ಯದಿಂದ ಹಿಂದೆ ಮಾಡಿಕೊಳ್ಳುತ್ತಿದ್ದ ಆತ್ಮನಾಶಗಳು ಎನ್ನಬಹುದು. ದಯಾಮರಣ ಬೇಡ ಅನ್ನುವುದು ಲೇಖಕರ ಮತ. ಒಟ್ಟಾರೆ ದಯಾಮರಣ ರೋಗಿಗೆ ಅನುಕೂಲಕ್ಕಿಂತ ದ್ರೋಹಿಗಳಿಗೆ ಅನುಕೂಲವಾಗುವುದೇ ಹೆಚ್ಚು ಎಂಬುದು ಇಲ್ಲಿನ ಸಾರಾಂಶವಾಗಿದೆ.

ಈ) ಮಕ್ಕಳ ಹಕ್ಕುಗಳು

ಮಕ್ಕಳು ಕುಟುಂಬದ ಕಣ್ಣು. ಭವಿಷ್ಯದ ಭಾವಿ ಪ್ರಜೆಗಳಾದ ಮಕ್ಕಳು ಇಂದು ನಾನಾ ಬಗೆಯ ಕಿರುಕುಳ, ಚಿತ್ರಹಿಂಸೆ, ಅತ್ಯಾಚಾರಕ್ಕೆ ಬಲಿಯಾಗುತ್ತಿವೆ. ಅತಿ ಕಡಿಮೆ ಕೂಲಿ ನೀಡಿ ಕೆಲಸಗಳಿಗೆ ನೇಮಿಸಿಕೊಳ್ಳುವ ಮೂಲಕ ಅವರ ಭವ್ಯ ಭವಿಷ್ಯವನ್ನು ಹಾಳು ಮಾಡುವುದರ ಜೊತೆಗೆ ಅವರನ್ನು ವಿದ್ಯಾಭ್ಯಾಸರಹಿತರನ್ನಾಗಿಸುತ್ತಿದ್ದಾರೆ. ಅನೇಕ ಬಂಡವಾಳಶಾಹಿಗಳು. ಭವಿಷ್ಯದ ಭಾವಿ ಪ್ರಜೆಗಳಾದ ನಮ್ಮ ದೇಶದ ಬಹುಜನರಿಗೆ ಮಕ್ಕಳ ಹಕ್ಕುಗಳ ಬಗ್ಗೆ ಎಳ್ಳಷ್ಟು ತಿಳುವಳಿಕೆಯಿಲ್ಲ. ಇದಕ್ಕೆ ಪೂರಕವಾಗಿ ೨೦೦೭ರಲ್ಲಿ ಕೇಂದ್ರ ಮಹಿಳಾ ಮತ್ತು ಶಿಶು ಕಲ್ಯಾಣ ವಿಭಾಗ ಬಹಿರಂಗಗೊಳಿಸಿರುವ ಅಂಶಗಳನ್ನು ನೋಡಿದರೆ ಗಾಬರಿಯಾಗುತ್ತದೆ ಎಂದು ಲೇಖಕರು ಆತಂಕ ವ್ಯಕ್ತಪಡಿಸಿದ್ದಾರೆ. ಇಂತಹುಗಳು ಪೌರಪ್ರಜ್ಞೆಯೇ? ಆರ್ಯ ಸಂಸ್ಕೃತಿಗಳಿರುವ ದೇಶವೇ ಎಂಬ ಅನುಮಾನ ಮೂಡುತ್ತದೆ ಎನ್ನುತ್ತಾರೆ ಲೇಖಕರು.

ಶೇಕಡ ೫೩ರಷ್ಟು ಮಕ್ಕಳು ಒಂದಿಲ್ಲೊಂದು ರೀತಿಯ ಲೈಂಗಿಕ ಕಿರುಕುಳವನ್ನು ಅನುಭವಿಸಿದ್ದಾರೆ. ಶೇಕಡ ೬೮.೯೯ರಷ್ಟು ಮಕ್ಕಳು ಹೊಡೆತ ಮುಂತಾದ ದೈಹಿಕ ಹಿಂಸೆಯನ್ನು ಅನುಭವಿಸಿದ್ದಾರೆ. ಶೇಕಡ ೫೮ರಷ್ಟು ಮಕ್ಕಳು ತೀವ್ರ ಲೈಂಗಿಕ ಹಿಂಸೆಗೊಳಗಾಗಿದ್ದಾರೆ. ಲೈಂಗಿಕ ಆಕ್ರಮಣ, ಬೆತ್ತಲೆ ಛಾಯಾಚಿತ್ರಕ್ಕೊಳಗಾಗುವುದು

ಇತ್ಯಾದಿ. ಈ ಮಕ್ಕಳಲ್ಲಿ ಗಂಡು ಮಕ್ಕಳೇ ಹೆಚ್ಚು. ಈ ಮಕ್ಕಳಲ್ಲಿ ಶಾಲೆಗೆ ಹೋಗದಿರುವವರ ಸಂಖ್ಯೆಯೇ ಜಾಸ್ತಿ. ಹುಡುಗರ ಪೈಕಿ ಡೆಲ್ಲಿಯ ಶೇಕಡ ೫.೫ ಮಕ್ಕಳು ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದು. ಮಕ್ಕಳ ವಯಸ್ಸು ೬–೧೦, ೧೧–೧೮, ಶೇಕಡ ೫೨.೪೩ ಭಾಗ ೧೩–೧೪ ವರ್ಷದೊಳಗಿರುವುದು ಶೇಕಡ ೪೨.೫ರಷ್ಟು ಮಕ್ಕಳ ವಯೋಮಾನ ೫–೧೨. ಅಸ್ಸಾಂ, ಡೆಲ್ಲಿ, ಆಂಧ್ರಪ್ರದೇಶಗಳಲ್ಲಿ ಈ ತರಹದ ಕಿರುಕುಳ ಹೆಚ್ಚು ಎನ್ನುವ ಆತಂಕಕಾರಿ ಅಂಶವನ್ನು ವರದಿಯು ಹೇಳುತ್ತದೆ.

ಈ ಅಧ್ಯಯನಕ್ಕೆ ಒಟ್ಟು ೧೨,೦೦೦ ಮಕ್ಕಳನ್ನು ಒಳಪಡಿಸಲಾಗಿತ್ತು. ಸೇನ್ ಮತ್ತು ನಾಯರ್ ಅವರು ೨೦೦೫ರ ತಮ್ಮ "Trafficking of women & children in India" ಅಧ್ಯಯನದಲ್ಲಿ ಮಕ್ಕಳನ್ನು ವೇಶ್ಯಾ ವೃತ್ತಿಗಿಳಿಸುವ ಬಗ್ಗೆ ಗಮನ ಸೆಳೆದಿದ್ದಾರೆ. ಇವರ ಒಂದು ಅಂದಾಜಿನ ಪ್ರಕಾರ ೫ ಲಕ್ಷ ಹೆಣ್ಣು ಮಕ್ಕಳು ಭಾರತದಲ್ಲಿ ಈ ವೃತ್ತಿಯಲ್ಲಿದ್ದಾರೆ ಎಂಬ ಆತಂಕಕಾರಿ ಅಂಶವನ್ನು ತಮ್ಮ ವರದಿಯಲ್ಲಿ ಹೊರಗೆಡವಿದ್ದಾರೆ.

ಇಂಗ್ಲೆಂಡಿನಲ್ಲಿ ೧೬ ವರ್ಷಗಳ ಒಳಗೆ ಲೈಂಗಿಕ ಹಿಂಸೆಗೊಳಗಾಗಿರುವ ಹೆಣ್ಣು ಮಕ್ಕಳ ಸಂಖ್ಯೆ ಶೇಕಡ ೧೬ರಷ್ಟು ಯುಎಸ್‌ಎ ಯಲ್ಲಿ ಪ್ರತಿ ನಾಲ್ಕು ಹೆಣ್ಣು ಮಕ್ಕಳಿಗೆ ಒಂದು ಎಂದು ವರದಿ ಉಲ್ಲೇಖಿಸುತ್ತದೆ.

"೨೦೦೭ರಲ್ಲಿ ಶಾಲೆಯಲ್ಲಿ ಹೊಡೆತ ತಿಂದ ಮಕ್ಕಳ ಸಂಖ್ಯೆ ಶೇಕಡ ೬೫.೦೧"[೬೩] ಎಂದು ಪತ್ರಿಕಾ ವರದಿ ಹೇಳುತ್ತದೆ.

ನಮ್ಮ ೧೯೭೪ರ ರಾಷ್ಟ್ರೀಯ ನೀತಿಯ ಪ್ರಕಾರ ನಮ್ಮ ಮಕ್ಕಳೇ ನಮ್ಮ ರಾಷ್ಟ್ರದ ಉತ್ಕೃಷ್ಟ ಆಸ್ತಿ. ನಮ್ಮ ಸಂವಿಧಾನದ ವಿಧಿ ೨೧ 'ಎ'ಯಂತೆ ೬ ರಿಂದ ೧೪ ವರ್ಷದ ಎಲ್ಲ ಮಕ್ಕಳಿಗೂ ಶಿಕ್ಷಣ ಪಡೆಯುವ ಹಕ್ಕಿದೆ. ಪೌರಪ್ರಜ್ಞೆಯಿಂದ, ಪೋಷಕರು ಹಾಗೂ ಸಮಾಜ ಅವರನ್ನು ಮನೆಗೆಲಸ, ಬಾಲಕಾರ್ಮಿಕ ಪದ್ಧತಿ, ಜೀತ, ವೇಶ್ಯಾವೃತ್ತಿ ಇದಕ್ಕೆ ದೂಡಬಾರದು.

ಕರ್ನಾಟಕದ ಗದಗ್ ಸಮೀಪ ಇಬ್ಬರು ಪ್ರಭಾವಿ ಸಚಿವರು, ಸಂಸದರು ಶಾಸಕರ ಸಮ್ಮುಖದಲ್ಲೇ ಸರ್ವ ಧರ್ಮಗಳ ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಬಾಲ್ಯವಿವಾಹಗಳು ಜರುಗಿವೆ ಎಂಬ ಪತ್ರಿಕಾ ವರದಿಯ ಹಿನ್ನೆಲೆಯನ್ನು ಲೇಖಕರು ಉಲ್ಲೇಖಿಸುತ್ತಾರೆ. ಶೇಕಡ ೨೫ರಷ್ಟು ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ. ಶೌಚಾಲಯಗಳಿರುವ

---

೬೩. ದಿ ಹಿಂದೂ ಆಂಗ್ಲ ದೈನಿಕ, ದಿನಾಂಕ ೨೧-೧೧-೨೦೧೦

ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೇಕಡ ೮೪.೭ರಲ್ಲಿ ಅವು ಉಪಯೋಗಿಸುವ ಸ್ಥಿತಿಯಿಲ್ಲ.

ಒಮ್ಮೊಮ್ಮೆ ಶೌಚಾಲಯಗಳಿದ್ದರೂ ನೀರಿರುವುದಿಲ್ಲ. ಅಥವಾ ತಿಂಗಳಾನು-ಗಟ್ಟಲೇ ಅದನ್ನು ಸ್ವಚ್ಛಗೊಳಿಸಿರುವುದಿಲ್ಲ. ಶೌಚಾಲಯ ನಿರ್ವಹಣೆ ಇಲ್ಲದಿರುವುದು ನಿಜಕ್ಕೂ ಒಂದು ದೊಡ್ಡ ದುರಂತ. ಅರ್ಧದಲ್ಲೇ ಶಾಲೆ ಬಿಡುವ ಹಳ್ಳಿಯ ಹೆಣ್ಣುಮಕ್ಕಳನ್ನು ಪ್ರಶ್ನಿಸಿದಾಗ ಶಾಲೆಗಳಲ್ಲಿ ಶೌಚಾಲಯಗಳಿಲ್ಲದಿರುವುದೂ ಒಂದು ಮುಖ್ಯ ಕಾರಣ. ಋತುಚಕ್ರ ಮತ್ತಿತರ ಸ್ವಂತ ಸಮಸ್ಯೆಗಳನ್ನು ಎದುರಿಸುತ್ತಿರುವ ಹೆಣ್ಣು ಮಕ್ಕಳಿಗೆ ನಮ್ಮ ದೇಶದಲ್ಲಿ ಉತ್ತಮ ಶೌಚಾಲಯಗಳಿಲ್ಲದಿರುವುದೊಂದು ದೊಡ್ಡ ಸಮಸ್ಯೆ. ಆ ವಯಸ್ಸಿನಲ್ಲಿ ಅವರಿಗಿರುವ ಮುಜುಗರ ಸೂಕ್ಷ್ಮತೆ, ಬಹಿರಂಗವಾಗಿ ಅನುಕೂಲಗಳನ್ನು ಕೇಳಲು ಹಿಂಜರಿಕೆ ಎಂಬ ಅಂಶವನ್ನು ಲೇಖಕರು ದಾಖಲಿಸುತ್ತಾರೆ.

ಮಕ್ಕಳಿಗೆ ಹೊಡೆಯುವುದು ಸರ್ವತಾ ಸರಿಯಲ್ಲ. ಶಿಕ್ಷಕರು ಮಕ್ಕಳಿಗೆ ಹೊಡೆದು ಅಂಗವಿಕಲರಾದ ಅನೇಕ ವರದಿಗಳು ಪತ್ರಿಕೆಗಳಲ್ಲಿ ಬರುತ್ತವೆ. ೫ ವರ್ಷಕ್ಕಿಂತ ಕೆಳಗಿರುವ ಭಾರತದ ಶೇಕಡ ೪೮ರಷ್ಟು ಮಕ್ಕಳಿಗೆ ಸರಿಯಾದ ಪೌಷ್ಟಿಕ ಆಹಾರವಿಲ್ಲ ಎಂದು ಅಂದಾಜಿಸಲಾಗಿದೆ. 'ತಾರೆಜಮೀನ್'ನಂತಹ ಚಿತ್ರಗಳು ಮಕ್ಕಳ ಮನೋವಿಕಾಸಕ್ಕೆ ಬೇಕಾದ ವಾತಾವರಣ ನಿರ್ಮಿಸಲು ಪ್ರಭಾವ ಬೀರುತ್ತದೆ. ಮಕ್ಕಳ ಹಕ್ಕುಗಳು ಮತ್ತು ವಿದ್ಯಾಭ್ಯಾಸದತ್ತ ಸಮಾಜ, ಸರ್ಕಾರ ಮತ್ತು ಪ್ರಜೆಗಳು ಪ್ರಜ್ಞೆಯಿಂದ ಕೆಲಸ ಮಾಡಬೇಕು.

ಉ) ಭಾರತೀಯ ಮಹಿಳೆ

ವೇದಗಳೆಂದರೆ ಜ್ಞಾನ. ವೇದಗಳ ಕಾಲದಲ್ಲಿ ಮಹಿಳೆಯರನ್ನು ಸಮಾನ ದೃಷ್ಟಿಯಲ್ಲಿ ನೋಡುತ್ತಿದ್ದರು. ಆಗಿನ ಕಾಲದ ಸ್ತ್ರೀಯರ ಸಾಮಾಜಿಕ ಸ್ಥಾನ ಗೌರವ ಪೂರ್ಣವಾಗಿತ್ತು.

ಸ್ವಾಮಿ ಹರ್ಷಾನಂದಜಿ ಅವರು ಅನೇಕ ಗ್ರಂಥಗಳನ್ನು ಉದ್ಧರಿಸುತ್ತಾ ಸಕಲ ಸದ್ಗುಣಗಳು ಸ್ತ್ರೀಯರಲ್ಲಿ ಇವೆ. ಹೀಗಾಗಿ ಮಹಿಳೆ ಯಾವ ಔನತ್ಯ ಸಾಧಿಸ-ಬಲ್ಲಳೆಂಬುದಕ್ಕೆ ಅರುಂಧತಿ, ಸಾವಿತ್ರಿ, ಅನುಸೂಯ, ಸೀತೆ ಮುಂತಾದವರ ಉದಾಹರಣೆ ಕೊಡುತ್ತಾರೆ.

ಸ್ತ್ರೀವರ್ಗದ ಮಹಾತ್ಮರು ಹಾಗೂ ನಂತರ ಪಟ್ಟಿಯಲ್ಲಿ ವಿಶ್ವಾವಾರಾ, ಇಂದ್ರಾಣಿ, ಲೋಪಾಮುದ್ರಾ, ಶ್ರದ್ಧಾ, ಮೇಧಾ, ಸಾವಿತ್ರಿ, ಗಾರ್ಗಿ, ಮೈತ್ರೇಯಿ, ಮೀರಾಬಾಯಿ, ಅಕ್ಕಮಹಾದೇವಿ, ವೇಣೂಬಾಯಿ, ಗಂಗಾಮಣಿ ಮತ್ತು ಶ್ರೀಮಾತೆ ಶಾರದಾದೇವಿ ಇದ್ದಾರೆ ಎಂದು ಶಂಕರನಾರಾಯಣಭಟ್‌ರ ಉದಾಹರಣೆಯನ್ನು ನೀಡುತ್ತಾರೆ.

ಸ್ವಾಮಿ ಹರ್ಷಾನಂದರ ಪ್ರಕಾರ ಮೂಲಭೂತ ಹಿಂದೂ ದೃಷ್ಟಿಕೋನ ಸ್ತ್ರೀಪುರುಷರಿಬ್ಬರೂ ಸಮಾನವಾಗಿ ಒಂದೇ ದಿವ್ಯತೆಯ ಎರಡು ಮುಖಗಳು ಎಂಬುದು ಉಪನಿಷತ್ತುಗಳು ಹೇಳುತ್ತವೆ ಎನ್ನುತ್ತಾರೆ.

ಋಗ್ವೇದದ ಕಾಲದಲ್ಲಿ ಸ್ತ್ರೀಋಷಿಗಳಾದ ವಿಶ್ವಾವಾರ, ಅಪಾಲಾ, ಘೋಷಾ, ಕಾಕ್ಷೀವತಿ ಇತ್ಯಾದಿ ಅನೇಕ ಮಂತ್ರಕರ್ತರನ್ನು ಹೆಸರಿಸಲಾಗಿದೆ. ಸ್ತ್ರೀಯರಿಗೆ ಉಪನಯನ, ವೇದಾಭ್ಯಾಸಗಳಿದ್ದವು. ವಿವಾಹಕ್ಕೆ ಮೊದಲು ಸ್ತ್ರೀಯರಿಗೂ ಉಪನಯನ ಸಂಸ್ಕಾರವಿತ್ತು. ವೇದಗಳ ಬೋಧಕ ಸ್ತ್ರೀಯರಿದ್ದರು. ಇಂತಹ ಉಚ್ಚ ಸಮಾನತಾ ಸಂಸ್ಕೃತಿ ಮನುಸ್ಮೃತಿಯ ಕಾಲಕ್ಕೆ ಕ್ರಿ.ಪೂ.೨೦೦ರಲ್ಲಿ ಕಣ್ಮರೆಯಾಯಿತು. ವೇದ ಕಾಲದಲ್ಲಿ ಹಾಗೂ ಪುರಾಣ ಯುಗದಲ್ಲಿ ಉತ್ತಮ ಶಿಕ್ಷಣ ಪಡೆದ ಅವರು ಸ್ವಯಂವರದ ಮೂಲಕ ಅಥವಾ ತಮ್ಮಿಚ್ಛೆಯ ಪತಿಯನ್ನು ಪಡೆಯುವ ಅವಕಾಶವಿತ್ತು. ಸಮಾಜ ಪೌರಪ್ರಜ್ಞೆಯಿಂದ ಅವರನ್ನು ಯಜ್ಞ ಯಾಗಾದಿಗಳಲ್ಲಿ ಭಾಗವಹಿಸಲು ಸಮಾನ ಹಕ್ಕನ್ನು ಕೊಟ್ಟಿತ್ತು. ಕರ್ಮವಿಧಿಗಳಲ್ಲೂ ಅವರಿಗೆ ಗೌರವ ಸ್ಥಾನವಿತ್ತು.

ಮನುಸ್ಮೃತಿಯ ಕಾಲದಿಂದ ಅವರ ಸ್ವಾತಂತ್ರ್ಯವನ್ನು ಹರಣ ಮಾಡಿದಂತೆ ಕಾಣುತ್ತದೆ. ಜಾತಿಪದ್ಧತಿಯ ಜೊತೆಗೆ ಹೆಂಗಸರನ್ನು ಸಮಾನತೆಯ ಪೌರಪ್ರಜ್ಞೆಯಿಂದ ನೋಡದಂತಹ ಸಂಸ್ಕೃತಿ ಪ್ರಾರಂಭವಾಯಿತು. ಆ ಕಾಲದಲ್ಲಿ ಇಂತಹ ಬದಲಾವಣೆಗೆ ಏನು ಕಾರಣಗಳಿರಬಹುದು ಎಂಬುದನ್ನು ಸಂಶೋಧನೆಗಳು ಮಾತ್ರ ತಿಳಿಸಬಲ್ಲವು ಎಂಬುದನ್ನು ಲೇಖಕರು ಉಲ್ಲೇಖಿಸುತ್ತಾರೆ.

ಚಾಣಕ್ಯನ ನೀತಿಸೂತ್ರದಲ್ಲಿ ಸ್ತ್ರೀಯರಿರುವುದು ಸಂತತಿಗಾಗಿಯೇ, ಯಾರು ಪುತ್ರವತಿಯೋ ಅವಳೇ ಭಾರ್ಯೆಯೆನಿಸುವಳು. ಸ್ತ್ರೀಯರಲ್ಲಿ ಎಳ್ಳಷ್ಟು ನಂಬಿಕೆ ಇಡಬಾರದು, ಸ್ತ್ರೀಯರಲ್ಲಿ ಮನಸ್ಸಮಾಧಾನ ಮತ್ತು ಪ್ರಪಂಚ ಜ್ಞಾನಗಳು ಇರುವುದಿಲ್ಲ. ಹೆಂಡತಿಯು ಲೋಹದಿಂದ ಮಾಡಿದುದಲ್ಲದ ಬೇಡಿ, ಮಾನವಂತರಿಗೆ ಕೆಟ್ಟ ಹೆಂಡತಿಯ ಲಭಿಸುವುದು ಅವರ ಶರೀರ ಶೋಷಣಕ್ಕೆ ಕಾರಣ, ಭಾರ್ಯೆಯು ಗಂಡನ ಅಧೀನವಾಗಿರಬೇಕು, ಸ್ತ್ರೀಯರ ಮನಸ್ಸು ಚಂಚಲ, ಅಶುಭವನ್ನು ದ್ವೇಷಿಸುವವರು, ಸ್ತ್ರೀಯರಲ್ಲಿ ಆಸಕ್ತರಾಗುವುದಿಲ್ಲ. ಎಲ್ಲಾ ಅಶುಭಗಳಿಗೂ ಸ್ತ್ರೀ ಎಂಬುವವಳು ಉತ್ಪತ್ತಿ ಸ್ಥಾನ. ಹೆಂಗಸರಿಗೆ ತಮ್ಮ ಗಂಡನಿಗಿಂತ ಬೇರೆ ದೇವರಿಲ್ಲ. ಹೆಂಗಸರು ಗಂಡನನ್ನು ಅನುಸರಿಸುವುದು ಇಹಪರ ಸೌಖ್ಯಕ್ಕೆ ಕಾರಣ ಎಂಬಂತಹ ಪೌರಪ್ರಜ್ಞೆಯಿಲ್ಲದ ಹೇಳಿಕೆ ಕೊಟ್ಟಿದ್ದಾನೆ ಎಂದು ಲೇಖಕರು ಇದನ್ನು ಖಂಡಿಸಿದ್ದಾರೆ.

ಮಹಿಳಾ ಚಿಂತಕಿ ಸಾರಾ ಅಬೂಬಕರ್ ಅವರು ತಮ್ಮ ಒಂದು ಲೇಖನದಲ್ಲಿ ಐನ್‌ಸ್ಟೈನ್‌ನ ಒಂದು ಮಾತನ್ನು ಬರೆದಿದ್ದಾರೆ. "ಈ ಜಗತ್ತು ಬದುಕಲು ಯೋಗ್ಯ ಸ್ಥಳವಾಗಿ ಉಳಿದಿಲ್ಲ. ದುಷ್ಟರು ಅಧಿಕವಾಗಿರುವುದರಿಂದಲ್ಲ. ಆ ದುಷ್ಟತನವನ್ನು

ಪ್ರಶ್ನಿಸುವವರು ಕಮ್ಮಿಯಾಗಿರುವುದರಿಂದ" ಎಂದು. ವರದಕ್ಷಿಣೆಯ ಭೂತ, ಕುಟುಂಬ ದೌರ್ಜನ್ಯ ಪ್ರಸಂಗಗಳು, ಸೀಮೆಎಣ್ಣೆ ಸುರಿದು ಕೊಂದುಬಿಡುವುದು, ಮರ್ಯಾದಾ ಹತ್ಯೆ, ಕುಡಿದು ಬಂದು ಹೆಂಡತಿಗೆ ಹಿಂಸೆ ಕೊಡುವುದು ಇವೆಲ್ಲಾ ಜನರ ಪೌರಪ್ರಜ್ಞೆಯೇ ಎಂದು ಲೇಖಕರು ಪ್ರಶ್ನಿಸುತ್ತಾರೆ.

ಸ್ತ್ರೀ ಶಿಕ್ಷಣ ಕಡ್ಡಾಯವಾಗಬೇಕು ಮತ್ತು ಉಚಿತವಾಗಬೇಕು. ಸ್ತ್ರೀ ಮೀಸಲಾತಿ ನಮ್ಮಲ್ಲಿ ಇನ್ನೂ ಕನಸಾಗಿಯೇ ಉಳಿದಿದೆ. ಹಲವಾರು ವರ್ಷಗಳಿಂದಲೂ ಇದು ಏನೂ ಪ್ರಗತಿ ಸಾಧಿಸಿಲ್ಲ. ಪೌರಪ್ರಜ್ಞೆಯಿಂದ ಸರ್ಕಾರ ಇದಕ್ಕೆ ಆದ್ಯ ಗಮನ ಕೊಡಬೇಕು. ಪುರುಷನಿಗಿರುವ ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ ಅವಳಿಗೂ ಮುಕ್ತ ಅವಕಾಶವಿರಬೇಕು ಇದರಿಂದ ಶಿಕ್ಷಣ, ವೃತ್ತಿಪರತೆ ಹಾಗೂ ಆರ್ಥಿಕ ಸ್ವಾವಲಂಬನೆ ಸ್ತ್ರೀಯ ಕೈಗೆಟುಕುವುದಕ್ಕೆ ಸಾಧ್ಯವಾಗುತ್ತದೆ ಎಂದು ಲೇಖಕರ ಆಶಯವಾಗಿದೆ.

ಸ್ವಾತಂತ್ರ್ಯೋತ್ತರ ಮಹಿಳೆ ದೇಶದ ಪ್ರಧಾನಿಯಾಗಿದ್ದಾಳೆ, ಮಂತ್ರಿಯಾಗಿದ್ದಾಳೆ. ಮುಖ್ಯಮಂತ್ರಿಯಾಗಿದ್ದಾಳೆ, ಕುಲಪತಿಯಾಗಿದ್ದಾಳೆ, ಪ್ರಸ್ತುತ ಎಲ್ಲಾ ಸ್ತರಗಳಲ್ಲೂ ತನ್ನ ದಕ್ಷತೆಯ ಛಾಪನ್ನು ಒತ್ತಿದ್ದಾಳೆ. ಐ.ಎ.ಎಸ್, ಐ.ಎಫ್.ಎಸ್, ಐ.ಪಿ.ಎಸ್, ಕೆ.ಎ.ಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಮುಂದಿದ್ದಾಳೆ. ಉನ್ನತ ಶಿಕ್ಷಣಕ್ಕೆ ಹೋಗುವವರ ಸಂಖ್ಯೆ ಕಡಿಮೆ ಇರುವುದು ಸರಿಯಲ್ಲ. ಪೌರಪ್ರಜ್ಞೆಯಿಂದ ಸರ್ಕಾರ ಕೊನೆಯಪಕ್ಷ ಇದು ಪುರುಷರ ಸಮಕ್ಕೆ ಬರುವವರಿಗಾದರೂ ಮೀಸಲು ಹಾಗೂ ಉಚಿತ ಶಿಕ್ಷಣ ದೊರೆಯುವಂತೆ ಮಾಡಬೇಕು. ಹಾಗಾದರೆ ಮಹಿಳೆ ಸಮಾಜದ ಎಲ್ಲಾ ಸ್ತರಗಳಲ್ಲೂ ಸಮಾನತೆಗಳಿಸಲು ಸಾಧ್ಯವಾಗಬಹುದು. ಗೌರವ ಸಂಪಾದಿಸಲು ಅನುಕೂಲವಾಗಬಹುದು. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ" ಆದ್ದರಿಂದ ಸ್ತ್ರೀಯರಿಗೆ ಸಮಾಜದಲ್ಲಿ ನೈತಿಕವಾಗಿ ಆರ್ಥಿಕವಾಗಿ, ರಾಜಕೀಯದಲ್ಲಿ ಆಧ್ಯಾತ್ಮಿಕದಲ್ಲಿ ಪೂಜ್ಯ ಸ್ಥಾನವಿರಬೇಕು.

ಪ್ರಪಂಚದ ೧೦೦೦ ಬಿಲೆನಿಯರ್‌ಗಳ ಪೈಕಿ ೧೪ ಜನ ಮಹಿಳೆಯರ ಹೆಸರುಗಳೂ ಇವೆ. ಇವರ ಪೈಕಿ ೫ ಜನ ಅವರ ಗಂಡನ ಸಹಾಯ ತೆಗೆದು ಕೊಂಡಿದ್ದಾರೆ. ಭಾರತದಲ್ಲಿ ಇನ್ಫೋಸಿಸ್‌ನ ಶ್ರೀಮತಿ ಸುಧಾಮೂರ್ತಿಯವರು ಭಾರತೀಯ ಸ್ತ್ರೀ ಆದರ್ಶಗಳಿಗೆ ಕಿರೀಟಪ್ರಾಯರಾದವರು. ಅನೇಕ ಗ್ರಂಥಗಳನ್ನು ರಚಿಸಿ ತಮ್ಮ ಉತ್ತಮ ಬರವಣಿಗೆ ಮೌಲ್ಯಗಳನ್ನು ಎತ್ತಿ ಹಿಡಿಯುವಿಕೆ ಸಜ್ಜನಿಕೆ ಮತ್ತು ಪೌರಪ್ರಜ್ಞೆಗಳಿಗೆ ಪ್ರಸಿದ್ಧರಾಗಿದ್ದಾರೆ ಎಂದು ಲೇಖಕರು ಉಲ್ಲೇಖಿಸಿದ್ದಾರೆ.

ಊ) ಪರಮತ ಸಹಿಷ್ಣುತೆ

ಪರಮತ ಸಹಿಷ್ಣುತೆಗೆ ಸಂಬಂಧ ಪಟ್ಟಂತೆ ಅಕ್ಬರ್, ಪಂಡಿತ್ ಜವಾಹರ್‌ಲಾಲ್ ನೆಹರೂ ಅವರ ಹೊಗಳಿಕೆಗೆ ಪಾತ್ರನಾಗಿದ್ದಾನೆ. ಹಿಂದೂ ಮುಸ್ಲಿಂ ಮತದ ಜನರಿಗೆ

ಆತನ ಆಸ್ಥಾನದಲ್ಲಿ ಸಮಾನ ಅವಕಾಶಗಳಿದ್ದವು. ತನ್ನ 'ಇಬಾದತ್ ಖಾನ' ಅಂದರೆ ಪ್ರಾರ್ಥನಾ ಸ್ಥಳಕ್ಕೆ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್, ಪಾರ್ಸಿ, ಸಿಕ್ ಮತ್ತು ಜೈನ ವಿದ್ವಾಂಸರುಗಳನ್ನು ಕರೆಸಿ ಅವರನ್ನು ಮರ್ಯಾದಿಸಿ ಅವರ ಪ್ರವಚನಗಳನ್ನು ಕೇಳಿ ಚರ್ಚಿಸುತ್ತಿದ್ದನು. ಮುಕ್ತ ಚರ್ಚೆಗಳಿಗೆ ಅವಕಾಶ ಮಾಡಿಕೊಡುತ್ತಿದ್ದರು. ಮೊಗಲ್ ಚಕ್ರವರ್ತಿಯೊಬ್ಬ ತನ್ನ ಎಲ್ಲ ಪ್ರಜೆಗಳ ಮತದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ, ಅವರ ನಂಬುಗೆ ಅಭಿಪ್ರಾಯಗಳನ್ನು ಗೌರವಿಸಿದ್ದು ಇದೇ ಮೊದಲೆಂದು ಕಾಣುತ್ತದೆ.

ತನ್ನ ಜಾತಿಯವರಲ್ಲದ ಇತರೆ ಮತದವರನ್ನು ದ್ವಿತೀಯ ದರ್ಜೆಯ ಪ್ರಜೆಗಳನ್ನಾಗಿ ನೋಡುತ್ತಿದ್ದ ಮೊಗಲ್ ದೊರೆಗಳ ಕಾಲದಲ್ಲಿ ಅಕ್ಬರ್ ಪೌರಪ್ರಜ್ಞೆಯಿಂದ ಹಿಂದೂಗಳ ಮೇಲಿದ್ದ ಜೆಸಿಯ ತೆರಿಗೆಯನ್ನು ೧೫೬೪ರಲ್ಲಿ ತೆಗೆದು ಹಾಕಿದನು, ಅಂತೆಯೇ ತೀರ್ಥಯಾತ್ರೆಗಳ ಮೇಲೆ ಹೇರಲಾಗಿದ್ದ ತೀರ್ಥಯಾತ್ರಾ ತೆರಿಗೆಗಳನ್ನು ೧೫೬೩ರಲ್ಲಿ ತೆಗೆದು ಹಾಕಿದನು. ಎಲ್ಲಾ ಪ್ರಜೆಗಳನ್ನು ಒಂದೇ ರೀತಿಯಲ್ಲಿ ಕಾಣುವ ಈ ಮೊಗಲ್ ಸಾರ್ವಭೌಮನ ಸಮತಾದೃಷ್ಟಿ ಬಹು ಅಪರೂಪವಾದದ್ದು ಎಂದು ಲೇಖಕರು ಬಣ್ಣಿಸುತ್ತಾರೆ.

ನೆಹರೂರವರು ತಮ್ಮ "ಡಿಸ್ಕವರಿ ಆಫ್ ಇಂಡಿಯಾ"ದಲ್ಲೂ ಈ ವಿಷಯವಾಗಿ ಬರೆದಿದ್ದಾರೆ. ಅಕ್ಬರನ ಯಶಸ್ಸು ಆಶ್ಚರ್ಯದಾಯಕವಾದದ್ದು. ಭಾರತದ ವಿವಿಧ ಜನಾಂಗಗಳಲ್ಲಿ ಆತ ತಾವೆಲ್ಲಾ ಒಂದೇ ಎಂಬ ಭಾವನೆಯನ್ನು ಸೃಷ್ಟಿಸಿದ.

"ನಮ್ಮ ಸುತ್ತಮುತ್ತಲಿರುವವರನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿ ಕೊಳ್ಳುವುದು ಮತ್ತು ಪರಮತ ಸಹಿಷ್ಣುತೆಗಳು ಅಕ್ಬರ್ ಚಕ್ರವರ್ತಿ ಭಾರತಕ್ಕೆ ಹಾಕಿಕೊಟ್ಟಿರುವ ಪೌರಪ್ರಜ್ಞೆಯ ಭವ್ಯ ಬುನಾದಿ. ಇದನ್ನು ವ್ಯತ್ಯಸ್ತಗೊಳಿಸಲು ಹೊರಟಿದ್ದರಿಂದಲೇ ಔರಂಗಜೇಬ್ ಮೊಗಲ್ ಸಾಮ್ರಾಜ್ಯದ ನಾಶಕ್ಕೆ ಕಾರಣವಾದುದು. ಇಂದಿಗೂ ಕೂಡ ಇತಿಹಾಸದ ಈ ಪಾಠ ಭಾರತಕ್ಕೆ ಪ್ರಸ್ತುತವಾದದ್ದು. ನೆಹರೂರವರ ಮಾತಿನಲ್ಲಿ ಹೇಳುವುದಾದರೆ ಔರಂಗ್‌ಜೇಬ್ ಭಾರತದ ಚಕ್ರವರ್ತಿಯಂತೆ ನಡೆದುಕೊಳ್ಳುವುದನ್ನು ಬಿಟ್ಟಿದ್ದರಿಂದ ಸಾಮ್ರಾಜ್ಯವನ್ನು ಒಡೆಯಲು ಕಾರಣನಾದ. ಜೆಸಿಯ ತಲೆಗಂದಾಯವನ್ನು ಮತ್ತೆ ಹಾಕಿದ. ಅವರ ದೇವಸ್ಥಾನಗಳನ್ನು ನಾಶ ಮಾಡಿದ ರಜಪೂತ, ಮರಾಠ ಹಾಗೂ ಸಿಕ್ಕರ ರೋಷಕ್ಕೆ ಕಾರಣನಾದ"[೬೪] ಎಂದು ನೆಹರು ಹೇಳಿದ್ದಾರೆ.

ಈ ಮತಾಂಧತೆ ಇಂದೂ ಇರುವಂತೆ ಕಾಣುತ್ತದೆ. ಇತ್ತೀಚೆಗೆ ಪಾಕಿಸ್ತಾನದ ತಾಲಿಬಾನಿಗಳು ಜೆಸಿಯವನ್ನು ಸಿಕ್, ಹಿಂದೂ ಮತ್ತಿತರ ಅಲ್ಪಸಂಖ್ಯಾತರ ಮೇಲೆ

೬೪. ನೆಹರು, ಡಿಸ್ಕವರಿ ಆಫ್ ಇಂಡಿಯಾ, ಪು. ೨೭೧

ಹೇರಿದ್ದಾರೆಂದು ಸುದ್ದಿ. ಲಷ್ಕರ್-ಎ-ಇಸ್ಲಾಂ ಸಂಘಟನೆ ಮುಸ್ಲಿಮರಲ್ಲದವರು ವರ್ಷಕ್ಕೆ ೧೦೦೦ ರೂ ಜೆಸಿಯ ಕಂದಾಯ ಕೊಡಬೇಕು. ಇಲ್ಲವೇ ಅಲ್ಲಿಂದ ತೊಲಗಬೇಕು ಎಂದು ತಾಕೀತು ಮಾಡಿದೆ ಎಂದು ಲೇಖಕರು ಮಾಧ್ಯಮದ ವರದಿಯನ್ನು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಇಷ್ಟರ ನಡುವೆಯೂ ಭಾರತದ ಅನೇಕ ಕಡೆ ಹಿಂದೂ ಮತ್ತು ಮುಸ್ಲಿಂ ಸಮುದಾಯ ಒಟ್ಟಿಗೆ ಆಚರಿಸುವ ಹಲವು ಸಂಪ್ರದಾಯಗಳನ್ನು ಲೇಖಕರು ಪತ್ರಿಕಾ ಬರಹದ ಹಿನ್ನೆಲೆಯನ್ನು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಕೃತಿಯ ಮೌಲ್ಯ ಹೆಚ್ಚಿದೆ.

ಹೊರಗಡೆಯಿಂದ ಬಂದ ಜನ ಏನೇ ಗಲಭೆಗಳನ್ನು ಸೃಷ್ಟಿಸಲಿ, ಮೈಸೂರಿನ ಜನತೆಯಲ್ಲಿ ಹಿಂದಿನಿಂದಲೂ ಪೌರಪ್ರಜ್ಞೆಯುಳ್ಳ ವೈಶಿಷ್ಟ್ಯಪೂರ್ಣ ಸಾಮರಸ್ಯವಿದೆ. ಅದಕ್ಕೆ ಉದಾಹರಣೆಯಾಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಬರುವ ಸರಾಸರಿ ೫೦೦ ಭಕ್ತರ ಪೈಕಿ ಕೊನೆಪಕ್ಷ ೮೦ ರಿಂದ ೧೦೦ ಜನ ಮುಸ್ಲಿಮರಿರುತ್ತಾರೆ. ಇಲ್ಲಿನ ಹನುಮಾನ್ ಯಂತ್ರವನ್ನು ಎಲ್ಲಾ ಮತಧರ್ಮದವರೂ ಕಟ್ಟಿಸಿಕೊಳ್ಳು-ವುದೊಂದು ವೈಶಿಷ್ಟ್ಯ. ನಂಬಿಕೆ ಪೌರಪ್ರಜ್ಞೆಗಳು ಮತಧರ್ಮಗಳಿಗಿಂತ ದೊಡ್ಡದು, ದರ್ಗಾಗಳನ್ನು ಇತರೆ ಮತಧರ್ಮದವರೂ ಪೂಜ್ಯಸ್ಥಳಗಳೆಂದು ಭಾವಿಸುತ್ತಾರೆ.

ಆಧುನಿಕ ಭಾರತದಲ್ಲಿ ಅನೇಕ ಮುಸ್ಲಿಂ ಯುವಕರು ಹಿಂದೂ-ಮುಸ್ಲಿಂಮರ ನಡುವೆ ಸೇತುವೆಗಳಾಗಿದ್ದಾರೆ. ಪಿರಿಯಾಪಟ್ಟಣದ ಅರೇನಹಳ್ಳಿಯ ಅಫ್ಸರ್‌ಪಾಷಾ ಈ ಗುಂಪಿಗೆ ಸೇರಿದವರು.

ಇಂದು ಕಟ್ಟಬೇಕಾಗಿರುವುದು, ಕೆಡವಬೇಕಾಗಿರುವುದು ಮಸೀದಿಯನ್ನಾಗಲೀ, ಮಂದಿರವನ್ನಾಗಲೀ ಅಲ್ಲ. ಹಿಂದೂ ಮುಸ್ಲಿಂರ ಮಧ್ಯೆ ಇರುವ ದ್ವೇಷ-ವೈಷಮ್ಯಗಳ ಗೋಡೆಯನ್ನು ಕೆಡವಬೇಕಾಗಿದೆ. ಪರಸ್ಪರರ ಹೃದಯವೇ ಸಾಮರಸ್ಯ ಸೌಹಾರ್ದ ಭಾವನೆಗಳ ಸೇತುವೆಯನ್ನು ಕಟ್ಟಬೇಕಾಗಿದೆ ಎನ್ನುತ್ತಾರೆ ಡಾ. ಶಿವಮೂರ್ತಿ ಶಿವಾಚಾರ್ಯರು.

೫)ಮೂಢನಂಬಿಕೆಗಳು

ಲೇಖಕರ ಪ್ರಕಾರ ಮೂಢನಂಬಿಕೆಗಳಿಲ್ಲದಿರುವ ದೇಶವೇ ಇಲ್ಲ. ಅದಿಲ್ಲದಿರುವ ಮತಧರ್ಮಗಳಿಲ್ಲ. ಅಂತೆಯೇ ಅವು ನಮ್ಮ ಗಮನಕ್ಕೆ ಬರದಿರುವ ದಿನಗಳೇ ಇಲ್ಲ. ನಮ್ಮೆಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿರುವ ಈ ಮೂಢ ನಂಬಿಕೆಗಳೆಂದರೇನು? ಪೌರಪ್ರಜ್ಞೆ, ವೈಜ್ಞಾನಿಕ ಮನೋಭಾವ ಇರುವವರು ಈ ಮೂಢನಂಬಿಕೆಗಳ ಬಗ್ಗೆ ಏನನ್ನುತ್ತಾರೆ? ಎನ್ನುವ ಪ್ರಶ್ನೆಯನ್ನು ಲೇಖಕರು ಮುಂದಿಡುತ್ತಾರೆ.

ಸೂರ್ಯಗ್ರಹಣದ ಕಾಲದಲ್ಲಿ ತಮಟೆ ಹೊಡೆಯದೇ ಹೋದರೆ ರಾಹು ಕೇತುಗಳು ಸೂರ್ಯನನ್ನು ಬಿಡುವುದಿಲ್ಲ ಎಂಬುದು, ದರ್ಬೆ ಹುಲ್ಲನ್ನು ನೀರಿರುವ ಪಾತ್ರೆ, ಹಾಲಿರುವ ಪಾತ್ರೆ, ಆಹಾರ ಪದಾರ್ಥಗಳಿರುವ ಡಬ್ಬಗಳು, ಇವೆಲ್ಲವುಗಳ ಮೇಲೆ ಹಾಕಿರಬೇಕು. ಇಲ್ಲದಿದ್ದರೆ ಗ್ರಹಣದೋಷವಿರುತ್ತದೆ ಎಂಬುದು ನಂಬಿಕೆ. ಗರ್ಭಿಣಿ ಸ್ತ್ರೀಯರು ಗ್ರಹಣದ ಕಾಲದಲ್ಲಿ ಕತ್ತಲೆ ರೂಮಿನೊಳಗೆ ಇರಬೇಕೆನ್ನುವ ಹಲವು ಮೂಢನಂಬಿಕೆಗಳನ್ನು ಲೇಖಕರು ಪಟ್ಟಿಮಾಡುತ್ತಾರೆ.

ಮಾಟಮಂತ್ರ ಮತ್ತು ಯಕ್ಷಿಣಿಗಳಲ್ಲಿ ನಮಗಿರುವ ನಂಬಿಕೆಯಿಂದಲೂ ಮೂಢನಂಬಿಕೆಗಳಾಗಬಹುದು. ಉದಾಹರಣೆಗೆ ದೃಷ್ಟಿಯಾಗಬಹುದೆಂದು ಮಕ್ಕಳ ಕೆನ್ನೆಗೆ ಕಪ್ಪುಚುಕ್ಕೆಯೊಂದನ್ನಿಡುವುದು. ಅವು ಅಳುತ್ತಿದ್ದಾಗ, ಹಂಚಿಕಡ್ಡಿಯಿಂದ ಇಳಿ ಅಥವಾ ದೃಷ್ಟಿ ತೆಗೆಯುವುದು, ಮೂರು ದಾರಿಗಳು ಕೂಡುವ ಕಡೆ ನಿಂಬೆಹಣ್ಣು, ಮೊಟ್ಟೆ ಇವುಗಳಿಗೆ ಮಂತ್ರ ಹಾಕಿ ಎಸೆಯುವುದು. ಆಂಜನೇಯನ ದೇವಸ್ಥಾನದಲ್ಲಿ ತೀರ್ಥ ಎರಚಿಸಿಕೊಳ್ಳುವುದು. ಮನೆಗೆ ಮನೆಯ ಜನರಿಗೆ ಕೆಡುಕಾಗದಂತೆ ಮಾಂತ್ರಿಕನಿಂದ ಪೂಜೆ ಮಾಡಿಸುವುದು. ಯಂತ್ರಗಳನ್ನು ಕಟ್ಟಿಸಿಕೊಳ್ಳುವುದು, ಮಂತ್ರಿಸಿದ ತೆಂಗಿನ ಕಾಯಿಯನ್ನು ತಂದು ಮನೆಗೆ ಕಟ್ಟುವುದು. ಮನೆಗೆ ಕಾವ್‌ಕಟ್ ಮಾಡಿಸುವುದು. ತಾವು ಪ್ರೀತಿಸಿದ ಹುಡುಗಿಯನ್ನು ಒಲಿಸಿಕೊಳ್ಳುವುದಕ್ಕಾಗಿ ವಶೀಕರಣದ ಪೂಜೆ ಮಾಡಿಸಿ ಯಂತ್ರ ಕಟ್ಟಿಸಿಕೊಳ್ಳುವುದು ಇತ್ಯಾದಿ ವಿವರಗಳನ್ನು ತಮ್ಮ ಕೃತಿಯಲ್ಲಿ ದಾಖಲಿಸುತ್ತಾರೆ.

ಇಂತಹವುಗಳನ್ನು ವೈಜ್ಞಾನಿಕಪ್ರಜ್ಞೆ ಇರುವವರಾರೂ ಮಾಡಿಸಿಕೊಳ್ಳು-ವಂಥವಲ್ಲ. ನಮ್ಮ ವಿರೋಧಿಗಳಿಗೆ ಕೆಡಕಾಗುವಂತೆ ಮಾಡಿಸುವ ಮಂತ್ರ ತಂತ್ರ ಪೂಜೆಗಳಂತೂ ಪೌರಪ್ರಜ್ಞೆಯಿಂದ ಕೂಡಿರುವವರಲ್ಲ. ಇವುಗಳಲ್ಲಿ ವಿಜ್ಞಾನ ಪ್ರಜ್ಞೆಯೂ ಇಲ್ಲ, ನಾಗರೀಕ ಪ್ರಜ್ಞೆಯೂ ಇಲ್ಲ. ಶತಮಾನಗಳಿಂದ ಬಂದಿರುವ ಅನಾಗರೀಕ ಹಾಗೂ ವೈಷಮ್ಯಪೂರಿತ ಮೂಢನಂಬಿಕೆಗಳಿಗೆ ಇವು ಇಂದಿಗೂ ಜೀವಂತ ಸಾಕ್ಷಿಗಳಾಗಿವೆ. ಕೆಲವು ವಾಮಾಚಾರ ಸಂಪ್ರದಾಯಗಳು ಸಾರ್ವಜನಿಕರಲ್ಲೂ ಭೀತಿ ಹುಟ್ಟಿಸುವಂತಿರುತ್ತವೆ.

ವಾಮಾಚಾರ, ವೇದಮಂತ್ರಗಳಲ್ಲಿ ಸಿದ್ಧಿ ಪಡೆಯಬೇಕಾದರೆ ಈ ತಾಂತ್ರಿಕರ ಪ್ರಕಾರ ಭಯಂಕರ ತಂತ್ರಗಳನ್ನು ಆಚಾರಗಳನ್ನು ನಡೆಸಬೇಕಾಗುತ್ತದೆ. ಈ ಶತಮಾನದಲ್ಲಿ ಇಂತಹ ಮೂಢ ನಂಬಿಕೆಗಳಿಂದ ಬದುಕುತ್ತಿರುವವರ ಬಗ್ಗೆ ಏನು ಹೇಳಬೇಕೋ ತಿಳಿಯುವುದಿಲ್ಲ.

ಸಿನಿಮಾಗಳು, ದೂರದರ್ಶನವಾಹಿನಿಗಳು ಮೂಢನಂಬಿಕೆಗಳನ್ನು ಬೆಳೆಸುತ್ತಿವೆ. ಜನ್ಮಾಂತರದಂತಹ ಕಾರ್ಯಕ್ರಮಗಳು, ಮೌಢ್ಯತೆಯನ್ನು ಬೆಳೆಸುತ್ತಿವೆ. ಮಾನಸಿಕ

ಅಸ್ವಸ್ಥರನ್ನು ಸೂಕ್ತ ಚಿಕಿತ್ಸೆಗೆ ಒಳಪಡಿಸದೇ ದೆವ್ವ-ಭೂತ ಎಂದು ಅವರನ್ನು ಹಿಂಸಿಸುವುದು ಪೌರಪ್ರಜ್ಞೆ ಅಲ್ಲ ಎನ್ನುತ್ತಾರೆ ಲೇಖಕರು.

೪. ಪ್ರಚಲಿತ ಪೌರಪ್ರಜ್ಞೆ

ಪ್ರಸ್ತುತ ಚಾಲ್ತಿಯಲ್ಲಿರುವ, ಹೆಸರಿಸಬಹುದಾದ ಪೌರಪ್ರಜ್ಞೆಗಳೆಂದರೆ ೧) ಕಾರಾಗೃಹಗಳು ೨) ಮರ್ಯಾದಾಹತ್ಯೆ ೩) ಭ್ರಷ್ಟಾಚಾರ ೪) ಮೂಲಭೂತ ಹಕ್ಕು ೫) ವಿಶ್ವಸಂಸ್ಥೆ ೬) ಪರಿಸರ ನೀತಿಶಾಸ್ತ್ರ

ಅ) ಕಾರಾಗೃಹಗಳು: ಸಾರ್ವಜನಿಕವಾಗಿ ನಡೆಸಿದ ಕೊಲೆ, ಕಳ್ಳತನ, ಮೋಸ ವಂಚನೆ, ಕೃತ್ಯವೆಸಗಿದ ಆರೋಪಿಗಳನ್ನು ಬಂಧನಕ್ಕೆ ಒಳಪಡಿಸಿ ಇಟ್ಟಿರುವ ಸ್ಥಳವೇ ಕಾರಾಗೃಹ. ಸಮಾಜದಿಂದ ದೂರವಾಗಿದ್ದು ಮಾಡಿದ ಕುಕೃತ್ಯಕ್ಕೆ ಪಶ್ಚಾತ್ತಾಪ ಹೊಂದಿ ಕಾರಾ-ಗೃಹದಿಂದ ಹೊರಬರಬೇಕು. ಕಾರಾಗೃಹಗಳು ಅಪರಾಧಿಯ ಮನಃಪರಿವರ್ತನೆಯ ಕೇಂದ್ರಗಳಾಗಬೇಕು. ಶಿಕ್ಷೆಯನ್ನು ಪೂರ್ಣಗೊಳಿಸಿದ ತರುವಾಯ ಹೊಸ ಮನುಷ್ಯನಾಗಿ ಸಮಾಜದಲ್ಲಿ ಸಭ್ಯ ನಾಗರೀಕನಾಗಿ ಪೌರಪ್ರಜ್ಞೆಯಿಂದ ಜೀವಿಸಬೇಕು ಎಂಬುದು ಗೃಹ ಇಲಾಖೆಯವರ ಮತ್ತು ಪೊಲೀಸ್ ಇಲಾಖೆಯವರ ಆಶಯ.

ಆದರೆ ಇಂದು ಇದಕ್ಕೆ ಅಪವಾದ ಎಂಬುವಂತೆ ಹತ್ತು ಹಲವು ರೀತಿಯ ಅನೈತಿಕ ಮತ್ತು ಅಕ್ರಮ ಚಟುವಟಿಕೆಗಳು ನಡೆಯುತ್ತವೆ ಎಂಬುದು ಲೇಖಕರ ಅಭಿಮತ. ಹಾಗೆಯೇ ಮಾನವ ಹಕ್ಕುಗಳು ಇಲ್ಲಿ ನಿರಂತರವಾಗಿ ಉಲ್ಲಂಘನೆ ಯಾಗುತ್ತಿದೆ ಎನ್ನುತ್ತಾರೆ.

ಪಾಶ್ಚಾತ್ಯ ದೇಶಗಳಲ್ಲಿ ಜೈಲುಗಳಲ್ಲಿರುವ ಖೈದಿಗಳಿಗೆ ಪೌರಸೌಕರ್ಯಗಳು ಹೆಚ್ಚು ಕಡಿಮೆ ಇತರ ನಾಗರೀಕರಿಗೆ ಸಿಕ್ಕುವ ಅನುಕೂಲಗಳನ್ನು ಹೋಲುತ್ತವೆ. ಇತ್ತೀಚೆಗೆ ಇಂಗ್ಲೆಂಡಿನ ಬರ್ನ್‌ಮೌತ್ ವಿಶ್ವವಿದ್ಯಾನಿಲಯದ ತಂಡವೊಂದು ಸಂಶೋಧನೆ-ಯೊಂದನ್ನು ನಡೆಸಿತು. ಸಂಶೋಧನೆಯಲ್ಲಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡುವ ಆಹಾರ ಹಾಗೂ ಜೈಲುಗಳಲ್ಲಿ ಖೈದಿಗಳಿಗೆ ಕೊಡುವ ಆಹಾರ ಇವೆರಡನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಅಚ್ಚರಿಯ ಅಂಶವೆಂದರೆ ಕೈದಿಗಳಿಗೇ ಅತ್ಯುತ್ತಮ ಪೌಷ್ಠಿಕ ಆಹಾರ ಸಿಕ್ಕುತ್ತದೆ ಎಂಬುದು. ಪೌರಪ್ರಜ್ಞೆಯಿಂದ ಜೈಲುಗಳಲ್ಲಿ ಸ್ವಚ್ಛತೆ, ಕೈದಿಗಳಿಗೆ ಒಳ್ಳೆಯ ಆಹಾರ, ಒಳ್ಳೆಯ ವೈದ್ಯಕೀಯ ಸೌಲಭ್ಯಗಳು ಮತ್ತಿತರ ಸಾಕಷ್ಟು ಅತ್ಯಾವಶ್ಯಕ ಮೂಲಭೂತ ಸೌಲಭ್ಯಗಳನ್ನು ಕೈದಿಗಳಿಗೆ ಒದಗಿಸಿಕೊಟ್ಟಿದ್ದಾರೆ.

ಇದು ಪಾಶ್ಚಾತ್ಯ ಜೈಲುಗಳ ಕಥೆಯಾದರೆ ಭಾರತ ಜೈಲುಗಳು ಅವ್ಯವಸ್ಥೆಯ ಗೂಡುಗಳಾಗಿವೆ. ಕನಿಷ್ಠ ಪಕ್ಷ ಶೌಚಾಲಯಗಳ ನಿರ್ವಹಣೆ ಸರಿಯಿಲ್ಲ. ನಮ್ಮಲ್ಲಿರುವ ಅನೇಕ ಜೈಲುಗಳು ಬ್ರಿಟಿಷರ ಕಾಲದವು. ಸುರಕ್ಷತೆ ಮತ್ತು ಭದ್ರತೆಗೆ ಅವು

ಹೆಸರಾಗಿವೆಯೇ ಹೊರತು ಸ್ವಚ್ಛತೆಗೆ ಮತ್ತು ಪೌರಪ್ರಜ್ಞೆಗಳಿಗಲ್ಲ ಎಂದು ಲೇಖಕರು ವಾದಿಸುತ್ತಾರೆ.

ಉದಾಹರಣೆಗೆ ಮುಂಬೈನ ಅರ್ಥರ್ ರಸ್ತೆಯ ಜೈಲು. ಒಂದು ಹಳೆಯ ಮತ್ತು ಬೃಹತ್ತಾದ ಜೈಲು. ಇದನ್ನು ೧೯೯೪ರಲ್ಲಿ ಬಾಂಬೆ ಸೆಂಟ್ರಲ್ ಜೈಲಾಗಿ ನವೀಕರಿಸ-ಲಾಯಿತು. ಇದನ್ನು ಕಟ್ಟಿರುವುದು ೧೧೦೭೪ ಕೈದಿಗಳಿಗಾದರೂ ಇಂದು ೩೦೦೦ ಕ್ಕಿಂತಲೂ ಹೆಚ್ಚಿನ ಖೈದಿಗಳಿಂದ ತುಂಬಿ ತುಳುಕುತ್ತಿದೆ. ಪೌರಪ್ರಜ್ಞೆ ಇಲ್ಲದ ಜೈಲು ಅಧಿಕಾರಿಗಳೂ ಹಾಗೂ ಸರ್ಕಾರ ಇಂತಹ ಕೆಲಸ ಮಾಡುತ್ತಿರುವುದರಿಂದ ೫೦ ಜನರ ಸೆಲ್‌ಗಳಲ್ಲಿ ೧೮೦ ಜನರ ಸೆರೆವಾಸವಿರುತ್ತದೆ.

ಪುರುಷ ಮೈಥುನ, ಕ್ಷಯರೋಗ, ಏಡ್ಸ್‌ಗಳೆಲ್ಲಾ ಇಲ್ಲಿ ಸಾಮಾನ್ಯ. ಕೆಲವೇ ವರ್ಷಗಳ ಹಿಂದೆ ಕೈದಿಗಳು ಹೇನುಗಳಿರುವ ಬ್ಲಾಂಕೆಟ್‌ಗಳ ಮೇಲೆ ಮಲಗ-ಬೇಕಾಗುತ್ತಿತ್ತು. ನೀರಿಗೆ ರೇಷನ್ ಇತ್ತು. ಮೇಲ್ವಿಚಾರಕರ ಮೇಲೆ ತಿರುಗಿಬಿದ್ದರೆ ಕಠಿಣ ಶಿಕ್ಷೆ ಕಾದಿರುತ್ತಿತ್ತು. ನಿರ್ಮಾಪಕ ವಿ.ಶಾಂತಾರಾಂ ಅವರ 'ದೊ ಆಂಖೆ ಬಾರಹಾತ್' ನಲ್ಲಿ ಕೈದಿಗಳ ಸುಧಾರಣೆ ತೋರಿಸಿದ್ದುದು ಬಹುಶಃ ಇಂತಹ ಮೇಲ್ವಿಚಾರಕರು ಹಾಗೂ ವಾರ್ಡನ್‌ಗಳು ಪೌರಪ್ರಜ್ಞೆಯಿಂದ ಸುಧಾರಕರಾಗಲಿ ಎಂದಿರಬಹುದು.

ಲೇಖಕರು ಮತ್ತೊಂದು ಜ್ವಲಂತ ಸಮಸ್ಯೆಯನ್ನು ಓದುಗರ ಮುಂದಿಡುತ್ತಾರೆ. ನಮ್ಮ ಜೈಲುಗಳ ಪೌರಪ್ರಜ್ಞೆ ಇಲ್ಲದ ಮತ್ತೊಂದು ಕೆಲಸ ಎಂದರೆ ಅನೇಕ ವರ್ಷಗಳು ಕಳೆದರೂ ವಿಚಾರಣೆ ನಡೆಸದ ಆರೋಪಿಗಳನ್ನು ಸೆರೆಯಲ್ಲಿಟ್ಟಿರುವುದು. ಮಚಾಂಗ್ ಲಾಲುಂಗ್ ಎಂಬ ೭೭ ವರ್ಷದ ವೃದ್ಧನನ್ನು ೧೯೫೧ರಲ್ಲಿ ಸೆರೆಹಿಡಿದು ಜೈಲಿಗೆ ಹಾಕಲಾಯಿತು. ಆಧಾರಗಳೇನೂ ದೊರಕದಿದ್ದರೂ ತೇಜ್‌ಪುರದ ಮಾನಸಿಕ ಆಸ್ಪತ್ರೆಗೆ ಸೇರಿಸಲಾಯಿತು. ೧೬ ವರ್ಷಗಳ ನಂತರ ಅವನು ಸ್ವಾಸ್ಥ್ಯ ಪಡೆದಿದ್ದಾನೆ. ನಂತರ ಅವನನ್ನು ಗೌಹಾತಿಯ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಿ ಅವನ ವಿಷಯವನ್ನು ಪೊಲೀಸರು ಮರೆತರು.

ಈ ಘಟನೆ ಕುರಿತು ಅಸ್ಸಾಂನ ಮಾನವಹಕ್ಕು ಚಳವಳಿಗಾರ ಸಂಜಯ್‌ಬೋರ್ ಬೋರಾ ಈ ವಿಚಾರವನ್ನು ಬಿಬಿಸಿ ಗಮನಕ್ಕೆ ತಂದರು. ನಂತರ ರಾಷ್ಟ್ರೀಯ ಮಾನವಹಕ್ಕು ಆಯೋಗದ ಗಮನಕ್ಕೆ ತರಲಾಯಿತು. ಆಯೋಗದ ಒತ್ತಡ ಹಾಗೂ ಇತರರ ವಿರೋಧಗಳಿಂದಾಗಿ ಲಾಲುಂಗ್‌ನ ಕೇಸ್‌ನ ವಿಚಾರಣೆಯಾಗಿ ಅವನನ್ನು ಕೇವಲ ಒಂದು ರೂಪಾಯಿಯ ಸಾಂಕೇತಿಕ ಬಾಂಡ್‌ನೊಂದಿಗೆ ಬಿಡುಗಡೆ ಮಾಡಲಾಯಿತು. ಇಂತಹ ಅಪರಾಧಗಳಿಗೆ ೧೦ ವರ್ಷಕ್ಕಿಂತ ಜಾಸ್ತಿ ಶಿಕ್ಷೆಯಾಗು-ತ್ತಿರಲಿಲ್ಲ ಆದರೆ ಆದದ್ದು ೫೪ ವರ್ಷಗಳ ಜೈಲುವಾಸ. ಇದು ಯಾವ ರೀತಿಯ

ಪೌರಪ್ರಜ್ಞೆ ಎಂದು ಲೇಖಕರು ಪ್ರಶ್ನಿಸುತ್ತಾರೆ. ಇಂತಹ ಪ್ರಕರಣದಲ್ಲಿ ಮಾನವೀಯ ಮೌಲ್ಯಗಳಿಗೆ ಬೆಲೆಕೊಟ್ಟಂತಾಯಿತೆ ಎಂದು ಪ್ರಶ್ನಿಸುತ್ತಾರೆ.

ಇದು ಕೇವಲ ಒಂದು ಅಮಾನವೀಯ ಘಟನೆ. ಆದರೆ ಇಂತಹ ಹತ್ತಾರು ಪ್ರಕರಣದ ಕುರಿತು ಬೆಳಕು ಚೆಲ್ಲಬೇಕಿದೆ. ಮಾನವಹಕ್ಕುಗಳ ಆಯೋಗ ಈ ಕೆಳಗಿನ ಪ್ರಕರಣ ಕುರಿತು ವಿಚಾರಣೆ ನಡೆಸುತ್ತಿದೆ.

ಖಲ್ಲೂಕ್ ರೆಹಮಾನ್ - ೩೫ ವರ್ಷದಿಂದ ಕಸ್ಟಡಿಯಲ್ಲಿರುವಾತ, ಅನಿಲ್ ಕುಮಾರ್ ಬರ್ಮನ್ - ೩೩ ವರ್ಷಗಳು, ಸೋನಾಮಣಿದೇಬ್ - ೩೨ ವರ್ಷಗಳು, ಪಾರ್ವತಿ ಮಾಲಿಕ್ - ಮಾನಸಿಕ ಘಟನೆವೊಂದರಲ್ಲಿ ೩೨ ವರ್ಷಗಳು.

"ನ್ಯಾಯಾಂಗ ವ್ಯವಸ್ಥೆ ಹಾಗೂ ವಿಚಾರಣೆಗಳು ಮಾನವೀಯ ಮೌಲ್ಯ ಹಾಗೂ ಹಕ್ಕುಗಳನ್ನು ಉಲ್ಲಂಘಿಸುವಂತಿರಬಾರದು. ವಿಚಾರಣೆ ಇಲ್ಲದೆ ವರ್ಷಾನುಗಟ್ಟಲೆ ಕೇಸುಗಳನ್ನು ತಳ್ಳುತ್ತಿದ್ದರೆ ಕೈದಿಗಳು ಮಾನಸಿಕ ಘಟಕಗಳಿಗೆ ಸೇರಬೇಕಾಗುತ್ತದೆ. ಇತ್ತೀಚೆಗೆ ಮೈಸೂರಿನಲ್ಲಿ ಭಯೋತ್ಪಾದಕರೆಂದು ಆರೋಪಿಗಳಾಗಿರುವ 'ಅಲ್‌ಬದರ್' ಎಂಬ ಗುಂಪಿನವರು ಎಂದು ಅನುಮಾನಿಸಲ್ಪಟ್ಟಿರುವ, ನಾಲ್ಕು ವರ್ಷಗಳಿಂದ ವಿಚಾರಣೆ ನಡೆಸದಿರುವುದರ ಬಗ್ಗೆ ಭಾರತದ ನ್ಯಾಯ ಪದ್ಧತಿಯ ಬಗ್ಗೆ ಕೆಲವರು ಸೊಲ್ಲೆತ್ತಿದ್ದಾರೆ. ಮಾನವೀಯ ಹಕ್ಕುಗಳಿಗೆ ಇಲ್ಲಿ ಬೆಲೆ ಇದೆಯೇ ಎಂದು ಪ್ರಶ್ನಿಸಿದ್ದಾರೆ."[೬೫]

ಲೇಖಕರು ಹೇಳುವ ಪ್ರಕಾರ ನಮ್ಮ ರಾಷ್ಟ್ರೀಯ ಕ್ರೈಂ ರಿಸರ್ಚ್-ಬ್ಯೂರೋನ (ಎನ್‌ಸಿಆರ್‌ಬಿ) ಒಂದು ಅಧ್ಯಯನದ ಪ್ರಕಾರ ೨೦೦೨ರಲ್ಲಿ ೨,೨೦,೦೦೦ ಅಪರಾಧದ ಕೇಸುಗಳ ಪೈಕಿ ಅವು ಕೋರ್ಟ್ ಸೇರಲು ೩ ವರ್ಷಗಳು ಬೇಕಾದವು.

ಇಂತಹ ನಿಧಾನಗತಿಯ ಬೆಳವಣಿಗೆಯಿಂದಾಗಿ ಬಹುಸಂಖ್ಯೆಯ ಅಪರಾಧಿಗಳು ತಮಗೆ ಶಿಕ್ಷೆಯಾಗಿ ಆಗುವ ವರ್ಷಗಳ ಜೈಲು ಶಿಕ್ಷೆಗಿಂತ, ಹೆಚ್ಚಿನ ವರ್ಷಗಳನ್ನು ಜೈಲುಗಳಲ್ಲಿ ಈಗಾಗಲೇ ಕಳೆದಿದ್ದಾರೆ. ಇಂಥವರಲ್ಲಿ ಕೆಲವರು ಬರೇ ಆರೋಪಿ-ಗಳಾಗಿರುತ್ತಾರೆ. ನಿಜಕ್ಕೂ ಇದು ಪೌರಪ್ರಜ್ಞೆಯಲ್ಲ ಮತ್ತು ನ್ಯಾಯವೂ ಅಲ್ಲ. ಮಾನವೀಯ ಹಕ್ಕುಗಳ ಉಲ್ಲಂಘನೆ. ನಮ್ಮ ಜೈಲುಗಳಿಗೆ ಸುಧಾರಣೆಗಳ ಕಾಲ ಕಳೆದು ೧೦೦ ವರ್ಷಗಳಾಗುತ್ತಾ ಬಂದಿದೆ. ಭಾರತದ ಜೈಲುಗಳ ಪರಿಸ್ಥಿತಿಯನ್ನು ಪಾಶ್ಚಾತ್ಯ ಜೈಲುಗಳಿಗೆ ಹೋಲಿಸಲಾಗುವುದಿಲ್ಲ. ಪುಸ್ತಕಗಳು, ಸುದ್ಧಿ ಪತ್ರಿಕೆಗಳು, ಉತ್ತಮ ಆಹಾರ

---

೬೫. ಡೆಕನ್ ಹೆರಾಲ್ಡ್, ಆಂಗ್ಲ ದೈನಿಕ ದಿನಾಂಕ ೨೩-೦೨-೨೦೧೦.

ಇವೆಲ್ಲಾ ಎಲ್ಲಾ ಕೈದಿಗಳಿಗೂ ಸಿಕ್ಕುವುದಿಲ್ಲ. ಮೇಲ್ವಿಚಾರಕರು ಪೌರಪ್ರಜ್ಞೆಯಿಂದ ಕೈದಿಗಳನ್ನು ಮಾನವೀಯ ನೆಲೆಯಲ್ಲಿ ನಡೆಸಿಕೊಳ್ಳಬೇಕೆಂದು ಲೇಖಕರ ಆಶಯ.

ಜೈಲುಗಳ ಮತ್ತೊಂದು ಮುಖ ಎಂದರೆ (ಬೇಲ್ Bail) ಜಾಮೀನು. ಸಾಮಾನ್ಯವಾಗಿ ಬಡಜನರಿಗೆ ಜಾಮೀನು ಪಡೆಯಲು ಸಾಧ್ಯವಾಗುವುದಿಲ್ಲ. ಆದರೆ ದೊಡ್ಡ ಅಪರಾಧಿಗಳು, ಭ್ರಷ್ಟ ರಾಜಕಾರಣಿಗಳು, ಕರಗಳ್ಳರು ಇವರನ್ನೆಲ್ಲಾ ಪೋಲೀಸರು ಹಿಡಿದು ಜೈಲಿಗೆ ಹಾಕುವುದು ಅಪರೂಪ. ಜೈಲಿಗೆ ಹಾಕಿದರೂ ಜಾಮೀನು ಪಡೆದು ಹೊರಗೆ ರಾಜಾರೋಷವಾಗಿ ತಿರುಗಾಡುತ್ತಾ ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಪ್ರಶ್ನೆ ಮಾಡುವಂತೆ ವರ್ತಿಸುತ್ತಿರುತ್ತಾರೆ. ಇದು ಎಷ್ಟರ ಮಟ್ಟಿಗೆ ಸರಿ? ಎನ್ನುವುದು ಲೇಖಕರು ಎತ್ತುವ ಪ್ರಶ್ನೆ.

ರಾಜಕೀಯ ಪಕ್ಷಗಳು ತಾವು ಅಧಿಕಾರದಲ್ಲಿದ್ದಾಗ ಇತರೆ ಪಕ್ಷದ ಮುಖಂಡರನ್ನು ತುರ್ತು ಪರಿಸ್ಥಿತಿ ಮತ್ತು ಇನ್ನಿತರೆ ವೈಯಕ್ತಿಕ ದ್ವೇಷಕ್ಕಾಗಿ ಕಾನೂನನ್ನು ದುರುಪಯೋಗಪಡಿಸಿಕೊಂಡು ಸುಖಾಸುಮ್ಮನೆ ಜೈಲಿಗೆ ಕಳುಹಿಸುವ ಕೆಟ್ಟ ಪರಂಪರೆ ನಮ್ಮಲ್ಲಿದೆ. ಇದಕ್ಕೆ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ವಿರೋಧಿಗಳನ್ನೆಲ್ಲಾ ತುರ್ತು ಪರಿಸ್ಥಿತಿಯ ನೆಪವೊಡ್ಡಿ ಜೈಲಿಗೆ ತಳ್ಳಲಾದ ಘಟನೆಯನ್ನು ಲೇಖಕರು ತಮ್ಮ ಕೃತಿಯಲ್ಲಿ ಸ್ಮರಿಸುತ್ತಾರೆ.

೧೯೮೦ರ ಮುಲ್ಲ ಸಮಿತಿಯು ನೀಡಿರುವ ವರದಿಯ ಪ್ರಕಾರ ಜೈಲಿನ ಬಹುಪಾಲು ಕೈದಿಗಳು ಬಡವರು ಮತ್ತು ಕೃಷಿ ಹಿನ್ನೆಲೆಯವರು. ಕೆಲವರು ದಂಡವನ್ನು ತೆರಲಾರದೆ ಉಳಿದುಕೊಂಡಿರುವವರು. ನಿಗದಿತ ಸೆರೆವಾಸ ಅನುಭವಿಸಿದ ಹಾಗೂ ಸನ್ನಡತೆಯುಳ್ಳವರಿಗೆ ಬಿಡುಗಡೆಯ ಭಾಗ್ಯ ಬರಲಿದೆ ಎಂದಿವೆ.

ಒಂದು ಅಂದಾಜಿನ ಪ್ರಕಾರ ೧,೭೫,೦೦೦ಕ್ಕೂ ಹೆಚ್ಚು ವಿಚಾರಣಾಧೀನ ಕೈದಿಗಳು ನಮ್ಮಲ್ಲಿದ್ದಾರೆ. ರಾಜ್ಯದ ಜೈಲುಗಳಲ್ಲಿರುವ ಒಟ್ಟು ಕೈದಿಗಳು ೧೩,೫೦೦ ಇವರ ಪೈಕಿ ವಿಚಾರಣಾಧೀನ ಕೈದಿಗಳು ೯,೦೦೦ಕ್ಕೂ ಹೆಚ್ಚು ಜೀವಾವಧಿ ಶಿಕ್ಷೆಗೊಳಗಾದವರು. ೧೯೦೦ ಜನ ಇತರೇ, ಮಹಿಳಾ ಕೈದಿಗಳು ೫೮೦ ಇದ್ದಾರೆ.

೨೦೦೭ರ ರಾಷ್ಟ್ರೀಯ ಅಪರಾಧ ದಾಖಲೆ ವಿಭಾಗದ ಪ್ರಕಾರ ದೇಶದಾದ್ಯಂತ ವಿವಿಧ ಜೈಲುಗಳಲ್ಲಿ ೩,೭೬,೩೦೦ ಕೈದಿಗಳಿದ್ದಾರೆ. ಆದರೆ ಆ ಜೈಲುಗಳ ಒಟ್ಟು ಸಾಮರ್ಥ್ಯ ೨,೭೭,೩೦೦. ಇದರಿಂದಾಗಿ ನೋಂದಣಿ ಹೆಚ್ಚಾಗಿ ಪೌರಪ್ರಜ್ಞೆ ಹಾಗೂ ಮಾನವೀಯ ಹಕ್ಕುಗಳ ಸಮಸ್ಯೆಗಳು ಎದುರಾಗಿವೆ ಎಂದು ಲೇಖಕರು ಆತಂಕ ವ್ಯಕ್ತಪಡಿಸುತ್ತಾರೆ.

ದಂಡಕಟ್ಟದೆ ಜೈಲಿನಲ್ಲಿ ಕೊಳೆಯುತ್ತಿರುವ ಖೈದಿಗಳ ನೆರವಿಗೆ ಅನೇಕ ಸಂಘಸಂಸ್ಥೆಗಳು ಮುಂದೆ ಬಂದು ದಂಡಕಟ್ಟಿ ಅವರನ್ನು ಜೈಲಿನ ಪಂಜರದಿಂದ ಹಾರಿಬಿಟ್ಟಿದ್ದಾರೆ. ಇಂತಹ ಮಾನವೀಯ ಸಂಘಗಳು ಮೈಸೂರಿನ 'ಅಂತಃಕರಣ' ಸಂಸ್ಥೆ ಮತ್ತು 'ಕೊಡ್ಲಿಪೇಟೆ ಚೇಂಬರ್ ಆಫ್ ಕಾಮರ್ಸ್' ಎಂದು ಲೇಖಕರು ದಾಖಲಿಸುತ್ತಾರೆ.

ಕೈದಿಗಳ ಮಕ್ಕಳಿಗೆ ವಿದ್ಯಾಭ್ಯಾಸ ಹಕ್ಕಿದೆ. ರಕ್ಷಣಾ ದೃಷ್ಟಿಯಿಂದ ತಾಯಂದಿರು ತಮ್ಮ ಚಿಕ್ಕ ಮಕ್ಕಳನ್ನು ಜೈಲಿನಲ್ಲಿ ತಮ್ಮೊಡನೆ ಇಟ್ಟುಕೊಳ್ಳುವ ಸೌಲಭ್ಯವಿದೆ. ಆದರೆ ಇತ್ತೀಚೆಗೆ ಘೋರ್ಡ್ (ಮಾನವ ಘನತೆಯ ಪುನರ್ ಪ್ರತಿಷ್ಠಾಪನಾ ಪ್ರತಿಷ್ಠಾನ) ಸಂಸ್ಥೆಯ ಆಶ್ರಯದಲ್ಲಿ ಮಕ್ಕಳು ಓದುತ್ತಿವೆ. ಘೋರ್ಡ್ ಸಂಸ್ಥೆಯ ಇಂತಹ ಮಾನವೀಯ ಸೇವೆಯನ್ನು ಲೇಖಕರು ಪ್ರಶಂಸಿದ್ದಾರೆ.

ಇವುಗಳ ನಡುವೆ ಕೆಲವು ಒಳ್ಳೆಯ ಕೆಲಸಗಳು ನಮ್ಮ ಜೈಲಿನಲ್ಲಿ ನಡೆಯುತ್ತಿರುವುದನ್ನು ಲೇಖಕರು ಉಲ್ಲೇಖಿಸುತ್ತಾರೆ. ಧಾರವಾಡ ಜೈಲಿನಲ್ಲಿರುವ ಮಹಾರಾಷ್ಟ್ರದ ಯುವಕನೊಬ್ಬ ಈಗ ಕನ್ನಡವನ್ನು ಕಲಿತ್ತಿದ್ದಾನೆ. ಜೈಲಿನಲ್ಲಿರುವ ಲಷ್ಕರ್ ಉಗ್ರ ಕೆ.ಎ.ಎಸ್. ಪರೀಕ್ಷೆ ಪಾಸ್ ಮಾಡಿದ್ದಾನೆ. ತಿಹಾರ್ ಜೈಲಿನಲ್ಲಿ ಕೈದಿಗಳಿಗೆ ಕಲಾಶಿಕ್ಷಣ ಮತ್ತು ಕಲಾ ಚಿಕಿತ್ಸೆ ಕೊಡುತ್ತಿದ್ದಾರೆ. ಕೈದಿಗಳಿಗೆ ದೊಡ್ಡ ಕಲಾಕಾರರನ್ನು ಪರಿಚಯಿಸಿ ಅವರಿಂದ ಶಿಕ್ಷಣ ಕೊಡಿಸಲಾಗುತ್ತದೆ. ನಂತರ ಕೈದಿಗಳು ಸಿದ್ಧಪಡಿಸಿದ ಕಲಾಚಿತ್ರಗಳ ಪ್ರದರ್ಶನವನ್ನು ದಿಲ್ಲಿಯಲ್ಲಿ ಏರ್ಪಡಿಸಲಾಗಿತ್ತು. ಇವೆಲ್ಲಕ್ಕಿಂತ ಮುಖ್ಯ ವಿಷಯ ಅಂದರೆ ಮಹಿಳಾ ಕೈದಿಗಳು ಜೈಲಿನಿಂದ ಹೊರಬಂದ ನಂತರ ಅವರಿಗೆ ಜೀವನ ನಡೆಸಲು ತರಬೇತಿ ಹಾಗೂ ಸಾಮಾಜಿಕ ಬಹಿಷ್ಕಾರವಾಗದಂತೆ ನೋಡಿ-ಕೊಳ್ಳುವಿಕೆ ಇವೆರಡೂ ಪೌರಪ್ರಜ್ಞೆಯ ದೃಷ್ಟಿಯಿಂದ ಆಗಲೇಬೇಕು ಎಂದು ಲೇಖಕರು ತಿಳಿಸುತ್ತಾರೆ.

ಲೇಖಕರು ಕಾರಾಗೃಹಕ್ಕೆ ಕನ್ನಡಿ ಹಿಡಿದಂತೆ ಕೆಲವು ಪತ್ರಿಕೆಗಳಲ್ಲಿ ಬಂದ ವರದಿಯನ್ನು ತಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ.

೧) ಪರಪ್ಪನ ಅಗ್ರಹಾರದ, ಕೇಂದ್ರ ಕಾರಾಗೃಹದ ಮಹಿಳಾ ವಾರ್ಡರ್‌ನನ್ನು ೮೫೦ಗ್ರಾಂ ಗಾಂಜಾದೊಂದಿಗೆ ಬಂಧಿಸಲಾಯಿತು. (ಡೆ.ಕ್ರಾ. ೦೬-೦೧-೨೦೧೦)

೨) ಜೈಲಿನ ಶೇಕಡ ೫೦ ಭಾಗದಷ್ಟು ಕೈದಿಗಳು ಗುಲ್ಬರ್ಗ ಸೆಂಟ್ರಲ್ ಜೈಲಿನಲ್ಲಿ ಕಜ್ಜಿಯಿಂದ ನರಳುತ್ತಿದ್ದಾರೆ (ನ್ಯೂ. ಇಂ.ಎಕ್ಸ್. ೦೪-೧೧-೨೦೦೯)

೩) ನಿಮ್‌ಹ್ಯಾನ್ಸ್‌ನ (Nimhans) ನ ಅಧ್ಯಯನದ ಪ್ರಕಾರ ಪರಪ್ಪನ ಅಗ್ರಹಾರದ ಕೈದಿಗಳ ಮಾನಸಿಕ ಸಮಸ್ಯೆಗಳಿಗೆ ಕಾರಣವೆಂದರೆ ಗಾಂಜಾ ಮತ್ತಿತರ ಮಾದಕ ಡ್ರಗ್ಸ್‌ಗಳು (ನ್ಯೂ. ಇಂ.ಎಕ್ಸ್. ೨೪-೧೨-೨೦೦೯)

೪) ಬಂದೀಖಾನೆಗಳ ಅಕ್ರಮಗಳನ್ನು ತಡೆಯಲು ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಸಿಸಿಕ್ಯಾಮರಾ ಮತ್ತು ಮೊಬೈಲ್ ಜಾಮರ್ ಅಳವಡಿಕೆ, ಖಾಸಗಿ ರಕ್ಷಣಾ ಸಿಬ್ಬಂದಿ ನೇಮಕ ಮಾಡಲಾಗುವುದು, ಬಂದೀಖಾನೆ ಸಚಿವರು.

೫) ಕಾರಾಗೃಹದ ಭ್ರಷ್ಟಾಚಾರಕ್ಕೆ ಕೊನೆ ಎಂದು. ಶೀರ್ಷಿಕೆಯಡಿಯಲ್ಲಿ ಬೆಂಗಳೂರಿನ ಕಾರಾಗೃಹದ ಕತ್ತಲ ಲೋಕದ ಬಗ್ಗೆ 'ವಿಜಯ ಕರ್ನಾಟಕ'ಕ್ಕೆ ಪ್ರತಿಕ್ರಿಯಿಸಿ ಪತ್ರ ಬರೆದಿರುವ ನೊಂದ ಕೈದಿಗಳು, ಕಾರಾಗೃಹದ ಕರಾಳ ಮುಖವನ್ನು ದೃಢೀಕರಿಸಿದ್ದಾರೆ. ಸಿಬ್ಬಂದಿ ಸಹಕಾರವಿಲ್ಲದೆ, ಮಾದಕ ವಸ್ತುಗಳಾಗಲಿ, ಐಷಾರಾಮಿ ಉಪಕರಣಗಳಾಗಲೀ ಕೈದಿಗಳ ಕೈ ತಲುಪುವುದಿಲ್ಲ ಎಂದಿರುವ ಕೈದಿಗಳು ಇಲ್ಲಿ ತಮ್ಮ ಬೇಗುದಿಯನ್ನು ತೋಡಿಕೊಂಡಿದ್ದಾರೆ.

ಕಾರಾಗೃಹದ ಇನ್ನೊಂದು ಕುತೂಹಲಕಾರಿ ಮತ್ತು ಆತಂಕಕಾರಿ ವಿಷಯವನ್ನು ಲೇಖಕರು ದಾಖಲಿಸಿದ್ದಾರೆ. ಅದೇನೆಂದರೆ ದುಡ್ಡಿಗಾಗಿ ಜೈಲಿನಲ್ಲಿ ಖೈದಿಗಳ ಅದಲು ಬದಲು ನಡೆಯುತ್ತಿರುವ ಪ್ರಸಂಗ. ಒರಿಸ್ಸಾದ ಭದ್ರಕ್ ಜಿಲ್ಲೆಯ ತಿಹಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಪ್ರಕರಣ ನಡೆದಿದೆ. ಅಭಯ್ ಬಾರಿಕ್ ಎಂಬ ಅಪರಾಧಿಯ ಜಾಗದಲ್ಲಿ ಅರ್ಜುನ್ ಬಾರಿಕ್ ಸ್ಥಳೀಯ ಜೈಲಿನಲ್ಲಿದ್ದು, ದಿನವೊಂದಕ್ಕೆ ೨೦೦ ರೂ. ಪಡೆಯುತ್ತಿದ್ದ. ಈತನ ಪತ್ನಿ ಈ ವಿಷಯವನ್ನು ಪತ್ರಕರ್ತರಿಗೆ ತಿಳಿಸಿದ್ದಾಳೆ.

ಆಗಿಂದ್ದಾಗ್ಗೆ ಪೊಲೀಸರು ಕಾರಾಗೃಹದ ಮೇಲೆ ದಾಳಿ ನಡೆಸಿದಾಗ ಮೊಬೈಲ್‌ಗಳು, ಗಾಂಜಾ, ಸಿಗರೇಟ್, ಬ್ಲೂ ಫಿಲಂ, ಮಧ್ಯದ ಬಾಟಲಿ, ಮಾರಕಾಸ್ತ್ರ ಸೇರಿದಂತೆ ಅನೇಕ ವಸ್ತುಗಳು ದೊರೆತಿವೆ. ಈ ಘರ್ಷಣೆಯಲ್ಲಿ ಇಬ್ಬರು ಪೊಲೀಸರಿಗೆ ತೀವ್ರ ಗಾಯಗಳಾಗಿವೆ. ಇದರಿಂದ ಗೊತ್ತಾಗುವ ವಿಷಯವೆಂದರೆ ಕೈದಿಗಳ ಸುಧಾರಣೆ ನೋಡಿಕೊಳ್ಳಬೇಕಾದ ಜೈಲುಗಳಲ್ಲಿ ಏನಾಗುತ್ತಿದೆ ಎಂಬುದು. ಜೈಲಿನ ಅಧಿಕಾರಿಗಳ ಗಮನಕ್ಕೆ ಬರದೆ ಇಂತಹ ವಸ್ತುಗಳೆಲ್ಲಾ ಜೈಲಿಗೆ ಹೇಗೆ ಬರುತ್ತವೆ? ಸರ್ಕಾರ ಪೌರಪ್ರಜ್ಞೆಯಿಂದ ಸುಧಾರಣಾ ರೀತಿ ನೀತಿಗಳನ್ನು ರೂಪಿಸಬೇಕು ಎಂಬ ಸಲಹೆಯನ್ನು ಲೇಖಕರು ಕೃತಿಯಲ್ಲಿ ಕೊಡುತ್ತಾರೆ.

ಕೆಲವರ ಮಟ್ಟಿಗೆ ಜೈಲುಗಳು ಫೈವ್‌ಸ್ಟಾರ್ ಹೋಟೇಲ್‌ಗಳಂತಿವೆ. ರಾಜಕೀಯ ಅಪರಾಧ ಹಿನ್ನೆಲೆಯಲ್ಲಿ ಬಂಧಿತರಾಗಿರುವವರಿಗೆ ಬಂದೀಖಾನೆ ನಿಯಮದಲ್ಲಿ ಇಲ್ಲದ ವಿಶೇಷ ಸವಲತ್ತು ಕೊಡುತ್ತಿವೆ.

ಮಂಪರು ಪರೀಕ್ಷೆಯ ಆಧಾರದ ಮೇಲೆ ವ್ಯಕ್ತಿಯ ವಿರುದ್ಧ ತೀರ್ಪು ನೀಡುವುದು ಸಾಧ್ಯವಿಲ್ಲ ಎಂಬ ನ್ಯಾಯಾಲಯದ ಆದೇಶ ಪೌರಪ್ರಜ್ಞೆಯಿಂದ ಕೂಡಿದೆ ಎನ್ನುತ್ತಾರೆ ಲೇಖಕರು. ಕೊಡುವ ಆಹಾರ, ವಾಸಸ್ಥಳ, ವೈದ್ಯಕೀಯ ಸೌಲಭ್ಯ, ಮಾನವೀಯ ಹಕ್ಕುಗಳು ಇವೆಲ್ಲಾ ಜೈಲುಗಳಲ್ಲಿ ಸುಧಾರಿಸಬೇಕಿದೆ. ಒಂಟಿತನ ಮತ್ತು ಹತಾಶೆ ಭಾವನೆಗಳು ಕೈದಿಗಳಿಗೆ ಬರಬಾರದು. ಬೇಧಭಾವ ಅಧಿಕಾರಿಗಳಲ್ಲಿ ಇರಬಾರದು. ಇವೆಲ್ಲಕ್ಕೂ ಸುಧಾರಣೆಗಳಾಗಬೇಕು. ನ್ಯಾಯಾಲಯಗಳು ಕೇಸುಗಳ ತೀರ್ಪಿನ ವಿಚಾರಣೆಗೆ ಹೆಚ್ಚು ಸಮಯ ತೆಗೆದುಕೊಳ್ಳಬಾರದು. ಜೈಲುಗಳ ಅಮಾನವೀಯ ಹಾಗೂ ಅಪ್ರಾಕೃತಿಕ ಪರಿಸರಗಳು ಬದಲಾವಣೆಯಾಗಬೇಕು ಎಂದಿದ್ದಾರೆ ಲೇಖಕರು.

ಇತ್ತೀಚಿನ ದಿನಗಳಲ್ಲಿ ಲಾಕಪ್‌ಡೆತ್ ಸಂಖ್ಯೆ ಅವ್ಯಾಹತವಾಗಿ ಸಾಗಿದೆ. "ಭಾರತದ ಕಾರಾಗೃಹಗಳಲ್ಲಿ ಮತ್ತು ಪೊಲೀಸ್ ಸ್ಟೇಷನ್‌ಗಳಲ್ಲಿ ದಿನವೂ ನಾಲ್ಕು ಜನ ಅಸುನೀಗುತ್ತಿದ್ದಾರೆ. ಪೌರಪ್ರಜ್ಞೆಯ ದೃಷ್ಟಿಯಿಂದ ಇದು ಸರಿಯೇ?" ಎನ್ನುತ್ತಾರೆ.

ಕಸ್ಟಡಿಯಲ್ಲಾದ ಸಾವುಗಳ ಪ್ರಸಂಗದಿಂದ ೨೦೦೪ರಲ್ಲಿ ಕೇವಲ ನಾಲ್ಕು ಮತ್ತು ೨೦೦೫ರಲ್ಲಿ ಮೂರು ಪೊಲೀಸರಿಗೆ ಶಿಕ್ಷೆಯಾಗಿದೆ. ಕಸ್ಟಡಿ ಸಾವುಗಳನ್ನು ಕಾಯಿಲೆ, ಸಹಜ ಸಾವು, ತಪ್ಪಿಸಿಕೊಳ್ಳುತ್ತಿದ್ದಾಗಿನ ಸಾವು, ಆತ್ಮಹತ್ಯೆ, ಬೇರೆ ಕೈದಿಗಳ ಆಕ್ರಮಣ, ದಂಗೆ, ಆಕಸ್ಮಿಕಗಳು, ಆಸ್ಪತ್ರೆ ಚಿಕಿತ್ಸೆ ಅಥವಾ ಆಸ್ಪತ್ರೆಯಲ್ಲಿದ್ದಾಗ ಆದಂತಹವು ಎಂದು ವಿವರಣೆ ನೀಡಲಾಗಿದೆ ಎಂದು ಲೇಖಕರು ದಾಖಲಿಸುತ್ತಾರೆ.

ನೇಣುಗಂಬವನ್ನು ನಿರೀಕ್ಷಿಸುತ್ತಿದ್ದ ಎಂಟು ಜನ ಕೈದಿಗಳಿಗೆ ಮರಣದಂಡನೆ ತಪ್ಪಿಸಿ ಅವರಿಗೆ ಜೀವಾವಧಿ ಶಿಕ್ಷೆಯನ್ನು ರಾಷ್ಟ್ರಾಧ್ಯಕ್ಷರು ಮಂಜೂರು ಮಾಡಿದ್ದಾರೆ. ಇದೊಂದು ದೊಡ್ಡ ಮಾನವೀಯ ಹಾಗೂ ಪೌರಪ್ರಜ್ಞಾತ್ಮಕವಾದ ಕೆಲಸ, ಏಕೆಂದರೆ ಮರಣ ದಂಡನೆಯನ್ನು ಅನೇಕ ದೇಶಗಳು ಕಾನೂನಿನಿಂದ ತೆಗೆದು ಹಾಕಿದೆ.[೬೬] ಭಾರತದಲ್ಲೂ ಇದರ ನಿಷೇಧವಾಗಬೇಕು ಎಂಬುದು ಲೇಖಕರ ಆಶಯ.

ಕಾರಾಗೃಹದ ಒಳಹೊರಗುಗಳನ್ನು ಹಾಸುಹೊಕ್ಕಾಗಿ ವಿವರಿಸಿದ ಲೇಖಕರು ನೀಡಿದ ಮಾಹಿತಿಗಳು ಅಕ್ಷರಶಃ ನಿಜವೆನ್ನಬಹುದು. ಇತ್ತೀಚೆಗೆ ಕಾರಾಗೃಹಗಳು

---

೬೬. ಹ್ಯೂಮನ್ ರೈಟ್ಸ್ ಡಾಟ್‌ಡಾಗ್, ೨೦೦೮

ಸುಧಾರಣೆ ಆಗುತ್ತಿರುವ ಮುನ್ಸೂಚನೆ ಸಿಗುತ್ತಿದೆ. ಜೈಲಿಗೆ ಹೋಗುವಾಗ ನಿಕ್ಷರ-ನಾಗಿದ್ದವನೂ ಹೊರಬರುವಷ್ಟರಲ್ಲಿ ದೂರ ಶಿಕ್ಷಣದ ಮೂಲಕ ಪದವಿಗಳಿಸ-ಬಹುದಾಗಿದೆ. ಗ್ರಂಥಾಲಯ ಸೌಲಭ್ಯ, ವ್ಯಾಯಾಮ, ಧ್ಯಾನ, ಪ್ರಾರ್ಥನೆಗಳಿಗೆ ಇಂದು ಕಾರಾಗೃಹಗಳು ಅನುವು ಮಾಡಿಕೊಡುತ್ತಿವೆ. ಅನೇಕ ಕಾರಾಗೃಹಗಳಲ್ಲಿ ನಾಟಕ ತಾಲೀಮು, ವಿವಿಧ ವೃತ್ತಿಕೌಶಲ್ಯ ತರಬೇತಿಗಳನ್ನು ನೀಡಲಾಗುತ್ತಿದೆ. ಕಿರಣ್‌ಬೇಡಿ-ಯಂತಹ ನಿಷ್ಠಾವಂತ ಪೊಲೀಸ್ ಅಧಿಕಾರಿ ತಿಹಾರ್ ಜೈಲಿನ ಸುಧಾರಣೆ ಮಾಡಿರುವುದು ನಾವು ಈ ದಿಸೆಯಲ್ಲಿ ನೆನಪಿಸಿಕೊಳ್ಳಬೇಕಾದ ಅಂಶವಾಗಿದೆ.

ಒಟ್ಟಿನಲ್ಲಿ ಲೇಖಕರು ಸಮಾನ ದೃಷ್ಟಿಹರಿಸಬೇಕಿದ್ದ ಕಾರಾಗೃಹಗಳೇ ಅಕ್ರಮಗಳ ತಾಣವಾಗುತ್ತಿರುವ ವಾಸ್ತವ ಸತ್ಯವನ್ನು ಹೇಳುವಲ್ಲಿ ಲೇಖಕರ ಆತಂಕ ಕಾಳಜಿಯನ್ನು ಕಾಣಬಹುದಾಗಿದೆ.

ಆ) ಮರ್ಯಾದಾಹತ್ಯೆ: ಇಂದು ಮಾಧ್ಯಮಗಳಲ್ಲಿ ಅತಿ ಹೆಚ್ಚು ಚರ್ಚೆಯಾಗುತ್ತಿರುವ ಪ್ರಚಲಿತ ಸಮಸ್ಯೆ ಎಂದರೆ 'ಮರ್ಯಾದಾ ಹತ್ಯಾ ಸಮಸ್ಯೆ' ಕುಟುಂಬದ ಮಾನ-ಮರ್ಯಾದೆಯನ್ನು ಕಾಪಾಡುವ ಸಲುವಾಗಿ ಮಾಡುವ ಹತ್ಯೆಯನ್ನು 'ಮರ್ಯಾದಾ ಹತ್ಯೆ' ಎಂದು ಕರೆಯುತ್ತಾರೆ.

ಲೇಖಕರ ಪ್ರಕಾರ ಮರ್ಯಾದಾ ಹತ್ಯೆ (Honour killing) ಎಂಬುದು ಅರ್ಥವಿಲ್ಲದ ಒಂದು ಸಮಾಜದ ಪಿಡುಗು. ಜೈನಧರ್ಮ 'ಅಹಿಂಸಾ ಪರಮೋ ಧರ್ಮ' ಎಂದು ಹೇಳುತ್ತದೆ. ಮಹಾನ್ ಮಾನವತಾವಾದಿ ಬಸವಣ್ಣ 'ದಯೆಯಿಲ್ಲದ ಧರ್ಮವದಾವುದಯ್ಯ' ಎಂದಿದ್ದಾರೆ. ತಪ್ಪು ಮನುಷ್ಯ ಸಹಜಗುಣ. ಎಲ್ಲಾ ಜೀವಿಗಳಿಗೂ ತಾವು ಬದುಕಿ ಬಾಳುವ ಜನ್ಮಸಿದ್ಧ ಹಕ್ಕಿದೆ ಎಂಬುದನ್ನು ಮನುಷ್ಯರು ಅರಿತು ಪೌರಪ್ರಜ್ಞೆಯಿಂದ ನಡೆಯಬೇಕು. ಪ್ರಾಣಿದಯೆ, ಹಕ್ಕುಗಳಿಗೆ ಬೆಲೆ ಕೊಡುವ ಈ ಕಾಲದಲ್ಲಿ ಪೌರಪ್ರಜ್ಞೆಯಿಂದ ಮಾನವ ಹಕ್ಕುಗಳಿಗೆ ಬೆಲೆ ಕೊಡಬೇಡವೇ?" ಎಂಬುದು ಲೇಖಕರ ಪ್ರಶ್ನೆ.

ಮನೆತನದ ಅಥವಾ ಜಾತಿಯ ಅಥವಾ ಕುಟುಂಬದ ಮರ್ಯಾದೆಯನ್ನು ಮುಂದಿಟ್ಟುಕೊಂಡು ಪ್ರಜ್ಞೆ ಇಲ್ಲದೆ ಮಾಡಿದ ಕೊಲೆಗಳನ್ನು ಮರ್ಯಾದಾ ಹತ್ಯೆಗಳ ಗುಂಪಿಗೆ ಸೇರಿಸಬಹುದು, ಜಾತಿ, ಧರ್ಮ ಮತ್ತು ಅಂಧ ಕಟ್ಟಳೆಗಳು, ಮೂಢನಂಬಿಕೆಗಳಿಗೆ ಒಳಗಾಗಿ ಮರ್ಯಾದಾ ಹತ್ಯೆಗಳನ್ನು ಒಮ್ಮೊಮ್ಮೆ ಅಮಾನುಷವಾಗಿ ನಡೆಸಲಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ಕೊಲೆಯಾಗುವ ಬಡ ಜೀವಿಗಳೆಂದರೆ ಅಂತರ್ಜಾತಿಯ, ಅಂತಧರ್ಮಿಯ ವಿವಾಹಕ್ಕೆ ಒಳಗಾದವರು. ದೊಡ್ಡವರ ಇಂತಹ ಸಂದರ್ಭಗಳಲ್ಲಿ ಯಾವುದೇ ಪೌರಪ್ರಜ್ಞೆ ವಿವೇಚನೆ ಇಲ್ಲದ ಅನಾಗರಿಕ ಪಂಚಾಯಿತಿ ನಡೆಸಿ ಅಥವಾ ಪುಂಡ ಗುಂಪುಗಳು ಇಂತಹ ಶಿಕ್ಷೆ ವಿಧಿಸಿ ಯುವಕ, ಯುವತಿಯರ

ಬರ್ಬರ ಕೊಲೆಗೆ ಕಾರಣವಾಗುತ್ತದೆ. ದೇಶದ ಹಿಂದುಳಿದ ಹಳ್ಳಿಗಳಲ್ಲೇ ಇಂತಹ ಪ್ರಸಂಗಗಳು ಹೆಚ್ಚು ಎನ್ನುತ್ತಾರೆ ಲೇಖಕರು.

೨೦೦೨ರಲ್ಲಿ ಉತ್ತರ ಪ್ರದೇಶದ ಮುಝಫರ್ ನಗರದಲ್ಲಿ ೧೦ ಮರ್ಯಾದಾ ಹತ್ಯೆಗಳಾಗಿದ್ದವು. ಕವಿತಾ ಕುಲಕರ್ಣಿಯವರ ಪ್ರಕಾರ ಉತ್ತರ ಭಾರತದಲ್ಲಿ ನಡೆಯುವ ಕೊಲೆಗಳಲ್ಲಿ ಶೇಕಡ ೧೦ರಷ್ಟು ಮರ್ಯಾದಾ ಹತ್ಯೆಗಳಾಗಿರುತ್ತವೆ ಎನ್ನುತ್ತಾರೆ.

ಹರ್ಯಾಣದ ಕರ್ನಾಲ್ ಜಿಲ್ಲೆಯ ಕರೋರ ಗ್ರಾಮದ ಯುವಕ, ಯುವತಿಯರಾದ ಮನೋಜ್ ಮತ್ತು ಬಬ್ಲಿ ೨೦೦೭ರ ಮೇ ೧೮ರಂದು ಮರ್ಯಾದಾ ಹತ್ಯೆಗೊಳಗಾದರು. ಇದಕ್ಕೆ ಕಾರಣ ಪಂಚಾಯಿತಿಯವರು ನೀಡುವ ಪೌರಪ್ರಜ್ಞೆ ಇಲ್ಲದ ಆದೇಶ. ಹುಡುಗನ ಕಡೆಯಿಂದ ಈ ಹತ್ಯೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಇದರಿಂದಾಗಿ ಸಂಬಂಧಪಟ್ಟ ೫ ಜನಕ್ಕೆ ಗಲ್ಲು ಶಿಕ್ಷೆ ಜಾರಿಯಾಯಿತು.

ಮರ್ಯಾದಾ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಖಾಪ್ ಪಂಚಾಯಿತಿಗಳು. ಇವು ಜಾತಿ ಆಧಾರಿತವಾಗಿ ರಚನೆಗೊಂಡಿರುತ್ತವೆ. ಇಲ್ಲಿನ ಹಿರಿಯರು ಸ್ವಘೋಷಿತ ಜಾತಿರಕ್ಷಕರಾಗಿ ವರ್ತಿಸುತ್ತಾರೆ. ಇಲ್ಲಿ ಸ್ವಗೋತ್ರ ಮದುವೆಗಳು ಅಗಮ್ಯ ಗಮನ. ಅಂಥವು ಶಿಕ್ಷಾರ್ಹ ಅಪರಾಧಗಳು ಎನ್ನುತ್ತವೆ ಈ ಖಾಪ್ ಪಂಚಾಯಿತಿಗಳು. ಮುಖ್ಯಸ್ಥ 'ಖಾಪ್' ಶಿಕ್ಷೆಕೊಡುವ ಅಧಿಕಾರವನ್ನು ಹೊಂದಿರುತ್ತಾರೆ. ಇವರು ಕಟ್ಟಾಸಂಪ್ರದಾಯ. ಇವರಿಗೆ ವೈಚಾರಿಕ ಪ್ರಜ್ಞೆಯಾಗಲಿ ಇಲ್ಲವೆ ವೈಜ್ಞಾನಿಕ ಮನೋಧರ್ಮವಾಗಲೀ ಇರುವುದಿಲ್ಲ ಇದೇ ದುರಂತ.

ಪ್ರೇಮಿಗಳು ಖಾಪ್ ಪಂಚಾಯಿತಿಗೆ ತಲೆಬಾಗಬೇಕು ಇಲ್ಲವೇ ಮುಂದುವರೆದರೆ ಅವರನ್ನು ಕೊಲ್ಲಲು ಆದೇಶಿಸಲಾಗುತ್ತದೆ. ಪೌರಪ್ರಜ್ಞೆಯುಳ್ಳ ಮತ್ತು ಇಂತಹ ಹೀನ ಕೃತ್ಯಗಳಿಂದ ನೊಂದಿರುವ ಸುಷ್ಮಪ್ರಭು ಅವರು ಇದರ ವಿರುದ್ಧವಾಗಿ ನ್ಯಾಯಾಲಯಗಳಲ್ಲಿ ಹೋರಾಡುತ್ತಿದ್ದಾರೆ.

"ಕೇಂದ್ರ ಕಾನೂನು ಮಂತ್ರಿಯಾಗಿರುವ ಶ್ರೀ ವೀರಪ್ಪಮೊಯ್ಲಿ ಅವರು ಮರ್ಯಾದಾ ಹತ್ಯೆಗಳ ಬಗ್ಗೆ ಬಿಗಿಯಾದ ಕಾನೂನುಗಳನ್ನು ತರುವುದಾಗಿ ಹೇಳಿದ್ದಾರೆ.[೬೭] ಪೌರಪ್ರಜ್ಞೆಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಪ್ರಾಮಾಣಿಕ ಪ್ರಯತ್ನದಿಂದ ಇಂತಹ ಅನಾಗರಿಕ ಪದ್ಧತಿಗೆ ಇತಿಶ್ರೀ ಹಾಡಬೇಕೆಂಬುದು ಲೇಖಕರ ಆಶಯವಾಗಿದೆ.

---

೬೭. The Week ಆಂಗ್ಲ ವಾರಪತ್ರಿಕೆ, ದಿನಾಂಕ ೨೫-೦೫-೨೦೧೦

ಜೋರ್ಡಾನ್‌ನ ಪತ್ರಕರ್ತ ರಾಣಾಹುಸೇನಿಯವರು "Murder in the name of Honour" ಎಂಬ ಒಂದು ಉತ್ತಮವಾದ ಪುಸ್ತಕ ಬರೆದಿದ್ದಾರೆ. ಇಂತಹ ಒಂದು ಅನಾಗರಿಕ ಪದ್ಧತಿಯನ್ನು ನಿಲ್ಲಿಸಲು ನಡೆಸಿರುವ ಹೋರಾಟದ ಬಗ್ಗೆ ವಿಷದವಾಗಿ ಲೇಖಕಿ ಪುಸ್ತಕದಲ್ಲಿ ಚರ್ಚಿಸಿದ್ದಾರೆ. ಇದರ ಪ್ರಕಾಶಕರು. `One world publications oxford' ಜೋರ್ಡಾನ್‌ನಲ್ಲಿ ಮರ್ಯಾದಾ ಹತ್ಯೆಗಳ ಬಗ್ಗೆ ಚಳವಳಿಗಳ ಮೂಲಕ ಲೇಖಕಿ ಹೋರಾಟ ನಡೆಸುತ್ತಿರುವುದನ್ನು ಲೇಖಕರು ಮುಕ್ತ ಕಂಠದಿಂದ ಸ್ವಾಗತಿಸಿದ್ದಾರೆ.

ಮರ್ಯಾದಾ ಹತ್ಯೆಗಳು ಪ್ರಪಂಚದ ಅನೇಕ ದೇಶಗಳಲ್ಲಿವೆ. ವಿಶ್ವಸಂಸ್ಥೆಯ ಪಾಪ್ಯುಲೇಷನ್ ಫಂಡ್ (UNFPA) ಪ್ರಕಾರ ಹತ್ತು ವರ್ಷಗಳ ಹಿಂದೆ ಪ್ರಪಂಚದಾದ್ಯಂತ ೫೦೦೦ ಮರ್ಯಾದಾ ಹತ್ಯೆಗಳಾಗಿದ್ದವು. ಇಲ್ಲಿಯವರೆಗೆ ಪ್ರಕರಣವನ್ನು ತೆಗೆದುಕೊಂಡರೆ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗಿರಬಹುದು. ಕಾರಣ ಇವುಗಳನ್ನು ಅನೇಕ ಪ್ರಕರಣಗಳನ್ನು ಆತ್ಮಹತ್ಯೆಗಳು, ಅಪಘಾತಗಳು ಎಂದು ಮುಚ್ಚಿಹಾಕಲಾಗುತ್ತದೆ. ೨೦೦೦ದಿಂದ ೨೦೦೪ರವರೆಗೆ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಮರ್ಯಾದೆಯ ಹೆಸರಿನಲ್ಲಿ ಹೆಂಗಸರ ವಿರುದ್ಧ ನಡೆಸುವ ಇಂತಹ ಹೀನ ಕೃತ್ಯಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

"ಮರ್ಯಾದಾ ಹತ್ಯೆಗಳು ಕೇವಲ ಭಾರತಕ್ಕೆ ಸೀಮಿತವಾಗಿಲ್ಲ. ಮರ್ಯಾದಾ ಹತ್ಯೆಗಳು ಜೋರ್ಡಾನ್‌ನಿಂದ ಪಾಕಿಸ್ತಾನದವರೆಗೆ, ಯು.ಕೆ.ಯಿಂದ ಹಿಡಿದು ಯುಎಸ್‌ಎ ವರೆಗೆ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇದೆ."[೬೮] ನಮ್ಮ ದೇಶದಲ್ಲಿ ಮುಖ್ಯವಾಗಿ ಇವು ಹರ್ಯಾಣ, ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಪಿಡುಗಿನಂತಿವೆ. ಅಖಿಲ ಭಾರತೀಯ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘದ ಪ್ರಕಾರ (AIDWA) ೨೦೦೭ರ ೪ ತಿಂಗಳುಗಳಲ್ಲೇ ಮರ್ಯಾದಾ ಹತ್ಯೆಯ ೧೦೩ ಪ್ರಸಂಗಗಳಿದ್ದವು. ಇಂತಹ ಪೌರಪ್ರಜ್ಞೆ ಇಲ್ಲದ ಅನಾಗರಿಕ ಹತ್ಯೆಗಳು ನಿಲ್ಲಬೇಕು. ಖಾಪ್ ಪಂಚಾಯಿತಿಗಳಿಗೆ ಸ್ಥಳೀಯ ಶಾಸಕರು, ಲೋಕಸಭಾ ಸದಸ್ಯರು ಹಾಗೂ ತಾಲ್ಲೂಕು ಹಾಗೂ ಜಿಲ್ಲಾ ಆಡಳಿತ ಸೂಕ್ತ ತಿಳಿವಳಿಕೆ ಕೊಡಬೇಕು. ಈ ಶತಮಾನದಲ್ಲಿ ಯುವಕ ಯುವತಿಯರಿಗೆ ತಮ್ಮ ಜೀವನ ಸಂಗಾತಿಗಳನ್ನು ಆರಿಸಿಕೊಳ್ಳುವ ಹಕ್ಕಿಲ್ಲವೆಂದರೆ ಅದಕ್ಕಿಂತ ದುರದೃಷ್ಟಕರ ಪ್ರಸಂಗ ಬೇರೆ ಇಲ್ಲ. ಜಾತಿಯ ದೃಷ್ಟಿಯಿಂದ ಈ ರೀತಿ ಮರ್ಯಾದಾ ಹತ್ಯೆಯ ಹೆಸರಿನಲ್ಲಿ ಕೊಲೆ ಮಾಡುವುದು ಪೌರಪ್ರಜ್ಞೆಯಲ್ಲ. ಇದು ನಮ್ಮ ನಾಗರಿಕ ಸಮಾಜಕ್ಕೆ ಒಂದು ಘೋರ ಶಾಪವಾಗಿದೆ.

---

೬೮. ಅಮ್ಮು ಜೋಸೆಫ್, ಹಿಂದೂ ಆಂಗ್ಲದೈನಿಕ, ದಿನಾಂಕ ೨೩-೦೫-೨೦೧೦

"ಖಾಪ್ ಪಂಚಾಯತ್‌ಗಳ ಕಾರ್ಯ, ಕಾನೂನಿಗೆ ಅತೀತವೇ? ಮತ ಬ್ಯಾಂಕ್‌ಗಾಗಿ ಖಾಪ್ ಪಂಚಾಯತ್‌ನ ಕ್ರೌರ್ಯದ ಬಗ್ಗೆ ಸಮರ್ಥನೆಯ ಧಾಟಿಯಲ್ಲಿ ಮಾತನಾಡುವ ರಾಜಕಾರಣಿಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು. ಪೌರಪ್ರಜ್ಞೆಯ ಮುಖ್ಯ ಸಮಸ್ಯೆಯೆಂದರೆ ಪ್ರಜಾಪ್ರಭುತ್ವವಿರುವ ನಮ್ಮ ದೇಶದಲ್ಲಿ ಜಾತಿ ಆಧಾರಿತ ಪಂಚಾಯಿತಿ ಇಷ್ಟರ ಮಟ್ಟಿಗೆ ಕಾನೂನನ್ನು ಕೈಗೆತ್ತಿಕೊಳ್ಳುವುದು ಹೇಗೆ ಸಾಧ್ಯ ಎನ್ನುವುದು ಸಂಬಂಧಪಟ್ಟ ಇಲಾಖೆಗಳು ಹಾಗೂ ಸರ್ಕಾರದ ಈ ದಿಟ್ಟ ನಿರ್ಲಕ್ಷ್ಯ ಹೇಗೆ ಸಾಧ್ಯ ಎಂದು"[೧೯] ಎಂದು ಲೇಖಕರು ಪ್ರಶ್ನೆ ಎತ್ತುತ್ತಾರೆ.

ದಕ್ಷಿಣ ಭಾರತದಲ್ಲೂ ಅಲ್ಲಲ್ಲೇ ಮರ್ಯಾದಾ ಹತ್ಯೆಗಳು ಆಗುತ್ತಿವೆ ಎಂಬ ಊಹೆಗಳಿವೆ. ಅನ್ಯಜಾತಿಯ ಯುವಕನನ್ನು ಮದುವೆಯಾದ ಮೇಲ್ಜಾತಿ ಯುವತಿಯ ಸಂಬಂಧಿಕರು ನವ ವಿವಾಹಿತರನ್ನು ಕಲ್ಲಿನಿಂದ ಹೊಡೆದು ಕೊಂದ ದಾರುಣ ಘಟನೆ ಆಂಧ್ರ ಪ್ರದೇಶದ ನಿಜಾಮಬಾದ್ ಜಿಲ್ಲೆಯಲ್ಲಿ ನಡೆದಿದ್ದು; ಇದೊಂದು 'ಮರ್ಯಾದಾ ಹತ್ಯೆ' ಪ್ರಕರಣವಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಉತ್ತರ ಭಾರತದಿಂದ ಬಂದಿದ್ದ ಅಂತಧರ್ಮೀಯರು ವಿವಾಹವಾಗಿ ಒಂದು ಸಣ್ಣ ಮಗುವಿದ್ದ ದಂಪತಿಗಳಿಗೆ ಹುಡುಗಿಯ ತಂದೆ, ಚಿಕ್ಕಪ್ಪಂದಿರು, ಅಣ್ಣಂದಿರು ಇಡೀ ಕುಟುಂಬವನ್ನು ಹುಡುಕಿಕೊಂಡು ಬಂದು ಕೊಲೆಮಾಡಿ, ಧರ್ಮದ ಪ್ರತಿಷ್ಠೆ ಮೆರೆದದ್ದು ಕ್ರೌರ್ಯತನದ ಪರಮಾವಧಿ ಎಂದೇ ಹೇಳಬೇಕು. ಮಗಳಿಗಿಂತ ಮರ್ಯಾದೆ ಮಾನ ದೊಡ್ಡದೆನ್ನುವ ಮೃಗಗಳಿಗೆ ಮನಃಪರಿವರ್ತನೆ ಎಂದು? ಎಂಬ ಜಿಜ್ಞಾಸೆ ಎಲ್ಲರನ್ನೂ ಕಾಡುತ್ತದೆ. ಮೇಲಿನ ಘಟನೆಗಳನ್ನು ನೋಡಿದರೆ ಮರ್ಯಾದಾ ಹತ್ಯೆಯ ಬಗ್ಗೆ ದೇಶಾದ್ಯಂತ ತಕ್ಷಣ ಚಳವಳಿಯ ಅಗತ್ಯವಿದೆ ಎನ್ನುತ್ತಾರೆ ಲೇಖಕರು.

ಇ) **ಭ್ರಷ್ಟಾಚಾರ ಮತ್ತು ಕಪ್ಪುಹಣ:** ನೈತಿಕತೆ, ಸಾತ್ವಿಕತೆ, ನೀತಿ, ನಿಯಮ, ಕಾನೂನು ಎಲ್ಲವನ್ನು ಮೀರಿ ನಡೆಯುವ ಆಚಾರ ಭ್ರಷ್ಟಾಚಾರ. ಪ್ರಸ್ತುತ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಮಾನವಾಗಿ ಒಳಗಾಗಿರುವ ಸಮಸ್ಯೆಯೆಂದರೆ ಭ್ರಷ್ಟಾಚಾರ. ಇಡೀ ಜಗತ್ತನ್ನೇ ನುಂಗಿ ನೀರು ಕುಡಿಯುವ ದಾಹ ಇದಕ್ಕೆ.

ಗ್ರಾಮ ಪಂಚಾಯಿತಿಯಿಂದ ಹಿಡಿದು ವಿಶ್ವಸಂಸ್ಥೆಯವರೆಗೆ ಭ್ರಷ್ಟಾಚಾರ ತನ್ನ ಕೆನ್ನಾಲಿಗೆಯನ್ನು ಚಾಚಿಕೊಂಡಿದೆ. "ಭ್ರಷ್ಟಾಚಾರವೆಂದರೆ ಪ್ರಾಮಾಣಿಕತೆಯ ಕೊರತೆ. ಇದು ಆರ್ಥಿಕ, ನೈತಿಕ ಅಥವಾ ಬೌದ್ಧಿಕ ಪ್ರಾಮಾಣಿಕತೆಯ ಕೊರತೆ"[೨೦] ಎನ್ನುತ್ತಾರೆ.

---

೧೯. ಡಾ. ಎಸ್.ಎನ್.ರಾಮಸ್ವಾಮಿ, ಪೌರಪ್ರಜ್ಞಾಯನ, ಪು. ೫೧೯.
೨೦. ಎನ್. ವಿಠಲ್, ವಿವೇಕಪ್ರಭ, ದಿನಾಂಕ ಜೂನ್ ೨೦೧೧

ಎನ್.ವಿಠಲ್. ವಿಶ್ವಬ್ಯಾಂಕ್ ಭ್ರಷ್ಟಾಚಾರದ ವಿಷಯದಲ್ಲಿ ವಿಶೇಷವಾಗಿ ಆರ್ಥಿಕ ಪ್ರಾಮಾಣಿಕತೆಯ ದೃಷ್ಟಿಯಿಂದ ನೋಡುತ್ತದೆ. ಭ್ರಷ್ಟಾಚಾರ ಬಡಜನತೆಗೆ ವಿರೋಧಿ; ದೇಶದ ಸರ್ವತೋಮುಖ ಅಭಿವೃದ್ಧಿಗೆ ಮಾರಕ. ಇದು ಒಂದು ಜಾಗತಿಕ ಸಮಸ್ಯೆಯಾಗಿದೆ.

ಭಾರತದಲ್ಲಿ ಬಹುಶಃ ಕುಮಾರವ್ಯಾಸನ ಕಾಲದಲ್ಲೇ ಮತ್ತು ಅದಕ್ಕೂ ಹಿಂದೆ ಅಂದರೆ ರಾಮಾಯಣ, ಮಹಾಭಾರತಗಳ ಕಾಲದಲ್ಲೇ ಭ್ರಷ್ಟಾಚಾರವಿತ್ತು. ಕೆ.ಅನಂತರಾಮು ಅವರು ಉದ್ಧರಿಸಿರುವ ಕುಮಾರವ್ಯಾಸ ಭಾರತದ ಅರಣ್ಯ ಪರ್ವತ (೧೫:೧೪) ಭಾಗವನ್ನು ಲೇಖಕರು ಉಲ್ಲೇಖಿಸುತ್ತಾರೆ.

"ವಿತಥ ಭಾಷಿತ ವನ್ಯವಿತ್ತಾ
ಹೃತಿ ಪರವ್ಯಾ ಪಾದವಾತ್ಮ
ಸ್ತುತಿ ಪರಸ್ತ್ರೀ ವ್ಯಸನ ವತ್ಯಾಚಾರ ಬಕವೃತ್ತಿ
ಕೃತವಿನಾಶನ ಡಂಭ ಹಿಂಸಾ
ರತಿ ನಿಜಾನ್ವಯ ಧರ್ಮ ಕರ್ಮ
ಚ್ಯುತಿಗಳಿವು ದೋಷಾಂಕುರಂಗಳು ವಿಪ್ರ ಕೇಳೆಂದ"

ಸುಳ್ಳು ಹೇಳುವುದು, ಪರದ್ರವ್ಯ ಅಪಹರಿಸುವುದು, ಅನ್ಯರನ್ನು ಹಾಳು ಮಾಡುವ ಹಂಚಿಕೆ ಹೂಡುವುದು, ತನ್ನನ್ನು ತಾನೇ ಹೊಗಳಿಕೊಳ್ಳುವುದು, ಪರಸ್ತ್ರೀಗಾಗಿ ಕಾತರಿಸುವುದು, ಧರ್ಮವಿರೋಧಿ ಕೆಲಸಗಳಲ್ಲಿ ತೊಡಗುವುದು. ಅನ್ಯರು ಮಾಡಿದ ಉಪಕಾರವನ್ನು ಅಸಡ್ಡೆ ಮಾಡುವುದು, ನೋಡುವವರನ್ನು ಮೆಚ್ಚಿಸಲು ಬೂಟಾಟಿಕೆ ಕಾರ್ಯಗಳನ್ನು ಮಾಡುವುದು, ಪರಹಿಂಸೆಯಿಂದ ಆನಂದಪಡುವುದು, ಪರಂಪರೆಯಿಂದ ಬಂದಿರುವ ಧರ್ಮಕರ್ಮಗಳನ್ನು ತೊರೆಯುವುದು, ಇವೆಲ್ಲಾ ಪಾಪವು ತಲೆ ಎತ್ತಲು ಕಾರಣಗಳಾಗಿವೆ. ಪಾಪ ಸಂಚಯವೆಂದರೆ ಅದು ಭ್ರಷ್ಟಾಚಾರದ ಪರಿಣಾಮವೇ ಆಗಿದೆ.

"ಭ್ರಷ್ಟಾಚಾರ ಧರ್ಮ ವಿರುದ್ಧವೂ, ನೀತಿ ಬಾಹಿರವೂ, ದಾರಿ ತಪ್ಪಿದುದೂ, ನೀಚತನದಿಂದ ಕೂಡಿದುದೂ ಆದ ದುಷ್ಟ ನಡವಳಿಕೆಗಳಿಗೆ 'ಭ್ರಷ್ಟಾಚಾರ' ಎಂದು ಹೆಸರು. ನೀತಿಗೆಟ್ಟ ನಡವಳಿಕೆಯೇ ಭ್ರಷ್ಟಾಚಾರ. ರಾಷ್ಟ್ರದ ಸಾಮಾಜಿಕ ಜೀವನಕ್ಕೆ ಇದು ಕಂಟಕಪ್ರಾಯ. ಇದು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ರಾಷ್ಟ್ರದ ಸ್ವಾತಂತ್ರ್ಯ ಸರ್ವೋದಯಗಳನ್ನು ನಾಶಪಡಿಸುತ್ತದೆ. ರಾಷ್ಟ್ರದ ಕೀರ್ತಿಗೆ ಮಸಿ ಬಳಿಯುತ್ತದೆ. ಅಸಂತೋಷ, ಅಶಿಸ್ತು, ಅಶಾಂತಿ, ಅರಾಜಕತೆ, ಅಪನಂಬಿಕೆಗಳನ್ನು ಹಬ್ಬಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಭ್ರಷ್ಟಾಚಾರ ಮನುಷ್ಯರನ್ನು

ಗುಲಾಮರನ್ನಾಗಿ ಮಾಡಿಕೂರಿಸುತ್ತದೆ." ಎಂದು ಶ್ರೀ ಅನಂತರಾಮು ಮಾತುಗಳನ್ನು ಲೇಖಕರು ಉಲ್ಲೇಖಿಸುತ್ತಾರೆ.

ಭ್ರಷ್ಟಾಚಾರ ಧನಮೂಲವಾದದ್ದು. ಅದಕ್ಕೆ ಸಾವಿರ ಮುಖಗಳು. ಕೊಲೆ, ಸುಲಿಗೆ, ಹಿಂಸೆ , ಲೂಟಿಗಳು, ಹಿಂಸಾಚಾರ, ಅತ್ಯಾಚಾರ, ಅನಾಚಾರ, ದುರಾಚಾರ, ಸ್ವೇಚ್ಚಾಚಾರ ಇತ್ಯಾದಿ. ಭಾರತದಲ್ಲಿ ಭ್ರಷ್ಟಾಚಾರ ರಕ್ತ ಬೀಜಾಸುರನಂತಾಗಿದೆ. ಅದರ ಅನಂತ ಕುರೂಪಗಳಲ್ಲಿ ಕೆಲವು ನಕಲಿ ಔಷಧಿಗಳು, ನಕಲಿ ನೋಟುಗಳು, ನಕಲಿ ಮದ್ಯಗಳು, ನಕಲಿ ಹಾಲು, ನಕಲಿ ಸುಗಂಧ ದ್ರವ್ಯಗಳು, ನಕಲಿ ಪದವಿ ಸರ್ಟಿಫಿಕೇಟ್‌ಗಳು, ನಕಲಿ ಅಂಕಪಟ್ಟಿಗಳು, ನಕಲಿ ಪಾಸ್‌ಪೋರ್ಟ್‌ಗಳು, ನಕಲಿ ದಾಖಲೆಗಳು, ನಕಲಿ ವೈದ್ಯರು ಇತ್ಯಾದಿ ನಾನಾ ಕ್ಷೇತ್ರಗಳನ್ನು ಲೇಖಕರು ಗುರುತಿಸುತ್ತಾರೆ.

ರಾಜಕಾರಣ ಭ್ರಷ್ಟಾಚಾರದ ಉಗಮಸ್ಥಾನ. ಚುನಾವಣೆಗಳಿಂದ ಅದು ಪ್ರಾರಂಭವಾಗುತ್ತದೆ. ಜಾತಿ, ಹಣ, ತೋಳ್ಬಲ, ಹೆಂಡ ಬಳಸಿ ಚುನಾಯಿತರಾಗಿ ಬರುತ್ತಾರೆ. ನಂತರ ಲಂಚ ಭ್ರಷ್ಟಾಚಾರಗಳಿಂದ ತಾವು ಖರ್ಚು ಮಾಡಿದ ಖರ್ಚಿಗೆ ಸಾವಿರ ಪಾಲು ಹೆಚ್ಚು ದೋಚಲು ಪ್ರಾರಂಭಿಸುತ್ತಾರೆ. ಈ ಕಾಲದಲ್ಲಿ ಇವರೇ ರಾಜಮಹಾರಾಜರುಗಳಿದ್ದಂತೆ, ಕೆಲವರು ಎಲ್ಲ ರೀತಿಯ ಐಷಾರಾಮಿ ಜೀವನ ನಡೆಸುತ್ತಿರುತ್ತಾರೆ. ದುಡ್ಡು ಕೊಟ್ಟು ಕೆಲಸ ಪಡೆದುಕೊಂಡು ಅಧಿಕಾರ ಪಡೆದ ಅಧಿಕಾರಿಗಳಂತೂ ಪ್ರಜಾಕಂಟಕರಾಗಿ ಬಡವರ ರಕ್ತವನ್ನು ಹೀರಲು ಪ್ರಯತ್ನಿಸುತ್ತಾರೆ. ಹಳೆಯ ಕಾಲದಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿ ಮಾಡಿದ್ದು ಅನೇಕರಿಗೆ ನೆನಪಿದೆ. ಆದರೆ ಇಂದಿನ ದಿನಗಳಲ್ಲಿ ಭ್ರಷ್ಟಾಚಾರ ವಿರೋಧಿ ಚಳವಳಿಗಳು, ಆಂದೋಲನಗಳು ಸಕ್ರಿಯವಾಗಿ ನಡೆಯದೆ ಎಲ್ಲರೂ ಸ್ಥಿತಪ್ರಜ್ಞರಾಗಿದ್ದಾರೆ. ಇಂದು ಪ್ರತಿಭಟನೆಗಳ ಅಗತ್ಯ ಇದೆ. ಲೋಕಾಯುಕ್ತರು ಎಷ್ಟೇ ದೊಡ್ಡ ವ್ಯಕ್ತಿಯಾಗಿರಲಿ ಸುಪ್ರಿಂಕೋರ್ಟ್‌ನಲ್ಲಿ ಕೆಲಸ ಮಾಡಿದ ಅನುಭವ ಅವರಿಗಿರಲಿ ಅವರು ಭ್ರಷ್ಟರನ್ನು ಏನೂ ಮಾಡಲು ಸಾಧ್ಯವಿಲ್ಲ. ಕರ್ನಾಟಕದ ಲೋಕಾಯುಕ್ತರು ಹತಾಶ ಭಾವನೆಯಿಂದ ತಾವೇನೂ ಮಾಡಲು ಸಾಧ್ಯವಾಗದೆ ಇರುವ ಕಾನೂನು ತೊಡಕುಗಳಿಂದ ಬೇಸತ್ತು ರಾಜೀನಾಮೆ ಕೊಟ್ಟು ಹೊರಹೋಗಿ ಭರವಸೆಗಳೊಡನೆ ಮತ್ತೆ ಹಿಂದಿರುಗಿದ್ದಾರೆ.

ಭ್ರಷ್ಟಾಚಾರಿಗಳು ತಮ್ಮ ಹರಗಣಗಳನ್ನು ಮುಚ್ಚಿಕೊಳ್ಳಲು ನಾನಾ ಕುತಂತ್ರಗಳು, ಒಬ್ಬರ ಮೇಲೊಬ್ಬರು ಕೆಸರು ಎರಚುವುದು, ಒಬ್ಬರ ಮೇಲೊಬ್ಬರು ಗೂಬೆ ಕೂರಿಸುವುದು, ಪ್ರಜೆಗಳ ಗಮನವನ್ನು ರಾಷ್ಟ್ರಾಭಿವೃದ್ಧಿಯ ಕಡೆಯಿಂದ ಬೇರೆ ದಿಕ್ಕುಗಳಿಗೆ ಸೆಳೆಯುವುದು ಮುಂತಾದವು ಭ್ರಷ್ಟಾಚಾರ ಉಲ್ಬಣಿಸಲು ಕಾರಣವಾಗುತ್ತಿವೆ.

ರಾಜಕೀಯ ಮುಖಂಡರಿಗೆ ತಾವೇನು ಕಡಿಮೆ ಇಲ್ಲವೆನ್ನುವಂತೆ ಅಧಿಕಾರಿಗಳೂ ತಮ್ಮ ತಮ್ಮ ಶಕ್ತ್ಯಾನುಸಾರ ಭ್ರಷ್ಟಾಚಾರ ನಡೆಸುತ್ತಾ ಯಥೇಚ್ಛವಾಗಿ ಲಂಚಗುಳಿತನದಿಂದ ಧನ ಸಂಪಾದಿಸುತ್ತಾ, ಸಾರ್ವಜನಿಕ ಹಣ, ಆಸ್ತಿ ಪಾಸ್ತಿಗಳ ದುರುಪಯೋಗ ಮಾಡಿಕೊಳ್ಳುತ್ತಾ ನೈತಿಕ ಮೌಲ್ಯಗಳಿಗೆ ತಿಲಾಂಜಲಿ ಇತ್ತಿದ್ದಾರೆ.

ನ್ಯಾಯಮೂರ್ತಿ ಸಂತೋಷ ಹೆಗಡೆಯವರ ಪ್ರಕಾರ ಭ್ರಷ್ಟಾಚಾರ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಒಂದೇ ಶಾಲೆಯ ವಿದ್ಯಾರ್ಥಿಗಳು ಎಂದಿದ್ದಾರೆ. ಲಂಚ ಸ್ವೀಕರಿಸಿ ಸಿಕ್ಕಿಬಿದ್ದಿದ್ದ ಅಧಿಕಾರಿಯನ್ನು ಅಮಾನತುಗೊಳಿಸಿದ ಕೆಲವೇ ದಿನಗಳಲ್ಲಿ ಮತ್ತೆ ಅದೇ ಹುದ್ದೆಗೆ ಸರ್ಕಾರ ನೇಮಿಸಿತು. ನಿಷ್ಠಾವಂತ ಅಧಿಕಾರಿಯ ಅಮಾನತಿಗೆ ಶಿಫಾರಸು ಮಾಡಿದ ಸಚಿವರೇ ತಮ್ಮ ರಾಜೀನಾಮೆಗೆ ಕಾರಣ. ಸರ್ಕಾರ ತನ್ನ ಕಾರ್ಯಕ್ಕೆ ಅಡಿಗಡಿಗೆ ಅಡ್ಡಿ ಮಾಡಿತು. ಹೀಗಾಗಿ ಈ ಹುದ್ದೆಯಲ್ಲಿ ಕುಳಿತು ಕೆಲಸ ಮಾಡುವುದು ಅಸಾಧ್ಯ ಎಂದೆನಿಸಿತು ಎಂದು ತಮ್ಮ ಮನದಾಳದ ನೋವನ್ನು ತೋಡಿಕೊಂಡಿದ್ದಾರೆ. ಭ್ರಷ್ಟಾಚಾರವು ನಮ್ಮ ದೇಶದ ಅತ್ಯಂತ ಘೋರ ಶತ್ರು. ಅದು ರಾಷ್ಟ್ರ ವಿರೋಧಿ, ಬಡವರ ವಿರೋಧಿ ಹಾಗೂ ಅಭಿವೃದ್ಧಿಯ ವಿರೋಧಿಯೂ ಆಗಿದೆ.

ಪಾರ್ಥೇನಿಯಂ ಕಳೆಯಂತೆ ಎಲ್ಲೆಡೆ ಹಾಸುಹೊಕ್ಕಾಗಿ ಬೆಳೆದಿರುವ ಈ ಭ್ರಷ್ಟಾಚಾರದ ಬಗ್ಗೆ ಲೇಖಕರು ವಿಸ್ತೃತವಾಗಿ ವಿವರಿಸಿದ್ದರೂ ನಾನು ಗುರುತಿಸಿರುವಂತೆ ಭ್ರಷ್ಟಾಚಾರಕ್ಕೆ ಅನೇಕ ಕಾರಣಗಳಿವೆ.

ಅತಿಯಾಸೆ, ದಿಢೀರ್ ಶ್ರೀಮಂತಿಕೆಗಾಗಿ, ಅಧಿಕಾರವಿದ್ದಾಗಲೇ ಮಿತಿಮೀರಿದ ಆದಾಯ ಕ್ರೂಢೀಕರಿಸಿ ತಮ್ಮ ಮುಂದಿನ ಪೀಳಿಗೆಗೂ ಸಂಗ್ರಹಿಸಿಡುವ ಸ್ವಾರ್ಥ, ಐಷಾರಾಮಿ ಬದುಕು, ಶಿಥಿಲಗೊಳ್ಳುತ್ತಿರುವ ಮಾನವೀಯ ಮೌಲ್ಯಗಳು, ಅತಿವೈಭೋಗ ಲಾಲಸೆ, ಪಾಪಪ್ರಜ್ಞೆ ಇಲ್ಲದಿರುವುದು, ಆಸ್ತಿ ಸಂಪಾದನೆಗೆ ಕಡಿವಾಣ ಇಲ್ಲದಿರುವುದು, ಭ್ರಷ್ಟಾಚಾರ ಕಾನೂನಿನ ಕೈಗೆ ಸಿಗದೇ ಪಾರಾಗುತ್ತಿರುವುದು. ಅನ್ಯರ ಹಣಕ್ಕಾಗಿ ನಾಚಿಕೆಯಿಲ್ಲದೆ ಕೈಚಾಚುವುದು, ನಿರ್ಲಜ್ಜ ವ್ಯಕ್ತಿತ್ವ, ಸ್ವಾಭಿಮಾನರಹಿತ ಬದುಕು, ಆದರ್ಶ, ಸಿದ್ಧಾಂತಗಳನ್ನು ಗಾಳಿಗೆ ತೂರಿ ತಾನುಂಟೋ ಮೂರು ಲೋಕವುಂಟೋ ಎಂಬ ಭಾವನೆ.

ಹೀಗೆ ಇನ್ನೂ ಅನೇಕ ಕಾರಣಗಳು ಭ್ರಷ್ಟಾಚಾರ ಹೆಚ್ಚಾಗಲು ಕಾರಣವಾಗಿದೆ. ಜನ ಭ್ರಷ್ಟಾಚಾರ ಪ್ರಶ್ನಿಸಿದಾಗ, ಸರ್ಕಾರ ಭ್ರಷ್ಟಾಚಾರಿಗಳಿಗೆ ಸೂಕ್ತ ಶಿಕ್ಷೆ ವಿಧಿಸಿ ಕಟ್ಟುನಿಟ್ಟಿನ ಕ್ರಮಕೈಗೊಂಡಾಗ ಜನಸಾಮಾನ್ಯ ನೆಮ್ಮದಿಯಿಂದ ಬದುಕಲು ಸಾಧ್ಯ. ದೇಶದ ಭೂ, ಜಲ,ಗಳು ಸುರಕ್ಷಿತವಾಗಿರಲು ಕಾರಣವಾಗುತ್ತದೆ.

ಕಪ್ಪುಹಣ: ಕಪ್ಪು ಹಣವೆಂದರೆ ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಲೆಕ್ಕಕ್ಕೆ ಸಿಗದೆ ಯಥೇಚ್ಚವಾಗಿ ಸಂಗ್ರಹಿಸಿದ ಹಣ. ಅಪ್ರಮಾಣಿಕ ಕೈಗಾರಿಕೋದ್ಯಮಿಗಳು, ಭ್ರಷ್ಟಾಚಾರಿ ರಾಜಕಾರಣಿಗಳು ಹಾಗೂ ಲಂಚಕೋರ ಬಾಬುಗಳು ಮತ್ತಿತರ ಪೌರಪ್ರಜ್ಞೆ ಇಲ್ಲದ ಅಧಿಕಾರಿಗಳು ಅನೈತಿಕವಾಗಿ ಗಳಿಸಿಟ್ಟಿರುವ ಹಣವೇ ಕಪ್ಪುಹಣ ಎಂದು ಲೇಖಕರು ಉಲ್ಲೇಖಿಸುತ್ತಾರೆ. ಈ ಹಣದ ಪೈಕಿ ಪೌರಪ್ರಜ್ಞೆ ಇಲ್ಲದೆ ವಿದೇಶಿ ಬ್ಯಾಂಕುಗಳಲ್ಲೂ ಸ್ವಲ್ಪ ಭಾಗವನ್ನು ಇಡಲಾಗಿದೆ. ಅಂತರ್ಜಾಲದಲ್ಲಿ ಕೊಟ್ಟಿರುವ ಒಂದು ಅಂದಾಜಿನ ಪ್ರಕಾರ ೧೫೦೦ ಬಿಲಿಯನ್ ಡಾಲರ್‌ಗಳಷ್ಟು ಕಪ್ಪುಹಣವಿದೆ. ಲೇಖಕರ ಪ್ರಕಾರ ಇದು ಘಜ್ನಿಮಹಮದ್ ತನ್ನ ೧೭ ದಂಡಯಾತ್ರೆಗಳಲ್ಲಿ ನಮ್ಮ ದೇಶದಿಂದ ದೋಚಿದ ಲೂಟಿಗೆ ಹೋಲಿಸಿದರೆ ಸಾವಿರಾರು ಪಟ್ಟು ಹೆಚ್ಚು. ಈ ಹಣವನ್ನು ಹಂಚಿದರೆ ದೇಶದ ಅಬಾಲವೃದ್ಧರಿಗೆಲ್ಲರಿಗೂ ತಲಾ ೫೦,೦೦೦ಗಳನ್ನು ಒದಗಿಸಲು ಸಾಧ್ಯ ಎಂಬ ಒಂದು ಅಂದಾಜಿದೆ. ಇದಕ್ಕೂ ಹೆಚ್ಚಿರುವ ಸಾಧ್ಯತೆಯಿದೆ.

ಸುಮಾರು ೨೫,೦೦೦ ಮಂದಿ ಹೀಗೆ ಹಣ ಬಚ್ಚಿಟ್ಟಿದ್ದಾರೆ ಎಂದು ಒಂದು ಅಂದಾಜು. ಇದರಲ್ಲಿ ಸಿನಿಮಾದವರಿರಬಹುದು, ಕ್ರಿಕೆಟ್ ಪಟುಗಳಿರಬಹುದು, ಭ್ರಷ್ಟ ಲಂಚಕೋರರಿರಬಹುದು ಅಥವಾ ಇತರೆ ಅನೈತಿಕ ದಾರಿಗಳಿಂದ ಯಾವುದೇ ಪೌರಪ್ರಜ್ಞೆ ಇಲ್ಲದೆ ಅನ್ಯಾಯವಾಗಿ ಹಣಗಳಿಸಿದವರಿರಬಹುದು. ಸ್ವಿಸ್ ಬ್ಯಾಂಕ್‌ಗಳಲ್ಲಿ ಅತಿಹೆಚ್ಚು ಕಪ್ಪುಹಣ ಇಟ್ಟಿರುವ ಪ್ರಥಮ ಐದು ದೇಶಗಳಲ್ಲಿ ಭಾರತವೇ ಅಗ್ರಗಣ್ಯ. ವಿದೇಶಿ ಬ್ಯಾಂಕುಗಳಲ್ಲಿರುವ ಹಣ ಸುಮಾರು ೧೫೦೦ ಬಿಲಿಯನ್ ಡಾಲರ್‌ಗಳು.

ಇತ್ತೀಚೆಗೆ ಅಂತರರಾಷ್ಟ್ರೀಯ ಒತ್ತಡಗಳಿಂದಾಗಿ ಸ್ವಿಸ್ ಸರ್ಕಾರ ಇಂತಹ ದೇಶಗಳು ಒಪ್ಪಂದ ಮಾಡಿಕೊಂಡು ನಂತರ ಹಣವಿಟ್ಟಿರುವವರ ಹೆಸರುಗಳನ್ನು ಕೇಳಿದರೆ ಪಟ್ಟಿಯನ್ನು ಒದಗಿಸಿಕೊಡುವುದಾಗಿ ಹೇಳಿದೆ. ಕರಗಳನ್ನೇ ಕೊಡದೆ ಅನೈತಿಕವಾಗಿ ಸಂಪಾದಿಸಿರುವ ಇಂತಹ ಹಣದ ಪ್ರಸ್ತಾಪ ಬಂದಾಗಲೂ ಸರ್ಕಾರಗಳು ಪ್ರಯತ್ನ ಪಡುವುದಾಗಿ ಹೇಳುತ್ತವೆ. ಮುಂದಿನ ಪ್ರಯತ್ನಗಳೇನೂ ನಡೆದುದರ ಕುರಿತು ಇಲ್ಲಿವರೆಗೆ ಕಂಡು ಬಂದಿಲ್ಲ. ಕಾರಣ ಭ್ರಷ್ಟಾಚಾರಿಗಳು ಎಲ್ಲಾ ಪಕ್ಷಗಳಲ್ಲೂ ಇರುತ್ತಾರೆ. ಕಪ್ಪುಹಣ ಎಲ್ಲ ಪಾರ್ಟಿ ಫಂಡ್‌ಗಳಲ್ಲೂ ಅಗಾಧವಾಗಿರುತ್ತದೆಂಬ ಆರೋಪಗಳೂ ಇವೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂಬುದು ರಾಷ್ಟ್ರಪತಿಯವರ ಆಶಯ ಇದ್ದರೂ ಅದು ಸಫಲವಾಗಿಲ್ಲ.

ಆದರೆ ಇದು ಅಷ್ಟು ಸುಲಭವಲ್ಲ. ಭ್ರಷ್ಟಾಚಾರ ನನ್ನ ಕಛೇರಿಯನ್ನೂ ಬಿಟ್ಟಿಲ್ಲ ಎಂದು ಲೋಕಾಯುಕ್ತರೇ ಹೇಳಿದ್ದಾರೆ. ಪ್ರಧಾನಿಯವರೂ ಕಪ್ಪುಹಣದ ಬಯಲಿಗೆ ಕರೆ ಕೊಟ್ಟಿದ್ದಾರೆ. ಅಸ್ಸಾಂ ರಾಜ್ಯಪಾಲರು ರಜಿಯವರ ಮೇಲೆ ಭ್ರಷ್ಟಾಚಾರದ ಆರೋಪಗಳು ಇವೆ.

ಭ್ರಷ್ಟರು ಹಣದ ಆಸೆಯುಳ್ಳವರು ನೀಚತ್ವದ ದೋಷವನ್ನು ಲೆಕ್ಕಿಸುವುದಿಲ್ಲ. "ಅರ್ಥಾತುರೋನ ಗಣಯತ್ಯಪಕರ್ಷದೋಷಂ" ಎನ್ನುತ್ತದೆ ಒಂದು ಸೂಕ್ತಿ. ಶ್ರೀ ಶಂಕರಾಚಾರ್ಯರ ಪ್ರಕಾರ ನ್ಯಾಯ ರೀತಿಯ ದುಡಿಮೆಯಿಂದ ಸಂಪಾದಿಸಿದ ಹಣದಿಂದ ತೃಪ್ತರಾಗಿರಬೇಕು.

ಯಲ್ಲಭಸೇ ನಿಜಕರ್ಮೋಪಾತ್ತಂ
ವಿತ್ತಂ ತೇನ ವಿನೋದಯ ಚಿತ್ತಂ

ಕಪ್ಪುಹಣದ ಮತ್ತೊಂದು ಮೂಲ ಖೋಟಾನೋಟುಗಳ ತಯಾರಿಕೆ. ನಮ್ಮ ದೇಶದಲ್ಲಿ ಈ ನೋಟುಗಳ ವ್ಯವಸ್ಥಿತ ಜಾಲವೇ ಇರುವಂತಿದೆ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಚಲಾವಣೆಯಲ್ಲಿರುವ ನೋಟುಗಳ ಸುಮಾರು ಶೇಕಡ ೨೫ ಭಾಗದಷ್ಟು ಖೋಟ. ಸ್ವಲ್ಪ ಮಟ್ಟಿಗೆ ಇದು ಉತ್ಪ್ರೇಕ್ಷೆಯಾಗಿದ್ದರೂ ಖೋಟಾ ನೋಟುಗಳು ಇಂದು ಸರ್ವವ್ಯಾಪಿಯಾಗಿರುವುದಂತೂ ನಿಜ. ರಹಸ್ಯ ಡಿಸೈನ್ ಅಥವಾ ಟೆಂಪ್ಲೇಟ್ ಕಾಂಪ್ರೋಮೈಸ್ ಆಗಿರಬಹುದು ಎಂಬುದು ಸಿಬಿಐ ವರದಿ ಹೇಳುತ್ತದೆ.

ಈಗಿನ ಮುಂದುವರಿದ ತಂತ್ರಜ್ಞಾನದ ಕಾಲದಲ್ಲಿ ಯಾವ ತರಹ ಕಾಗದವನ್ನು ಈ ನೋಟುಗಳ ಮುದ್ರಣದಲ್ಲಿ ಉಪಯೋಗಿಸುತ್ತಾರೆ, ಯಾವ ತರಹ ಶಾಯಿಯನ್ನು ಮುದ್ರಿಸಲು ಉಪಯೋಗಿಸುತ್ತಾರೆ, ಅದೆಲ್ಲಾ ಅಂತರರಾಷ್ಟ್ರೀಯ ಖೋಟಾನೋಟಿನ ಜಾಲಕ್ಕೆ ಗೊತ್ತು. ನಕಲಿ ನೋಟಿನ ವ್ಯವಹಾರಕ್ಕೆ ಕೊಂಡಿಯಂತಿದ್ದ ಅಸರ್ ಆಲಿ ಅಬ್ದುಲ್ ಹುಸೇನ್ ಅಬುಲಿಯನ್ನು ಗುಜರಾತ್ ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದಾಗ ಇದರಲ್ಲಿ ಪಾಕಿಸ್ತಾನದ ಐಎಸ್ಐ ಕೈವಾಡ ಇರುವುದು ದೃಢಪಟ್ಟಿದೆ.

ನೋಟು ಮುದ್ರಣದ ಲೋಹದ ತಟ್ಟೆಯ ರಹಸ್ಯ ಮಾದರಿಯನ್ನು ನಕಲು ಮಾಡಲು ಸಾಧ್ಯವಾಗಿರುವುದರಿಂದಲೇ ಕಳ್ಳ ನೋಟುಗಳೂ ಅಸಲೀ ನೋಟುಗಳನ್ನು ಹೋಲುತ್ತವೆ ಎಂಬುದು ಸಿ.ಬಿ.ಐ.ನ ಅಭಿಪ್ರಾಯವಾಗಿದೆ.

ನಾಣ್ಯಗಳನ್ನು ಕೆಜಿ ಗಟ್ಟಳೆ ಸಂಗ್ರಹಿಸಿ ೧ ಕೆ.ಜಿಗೆ ೫ ರೂ ಸಂಪಾದಿಸುವವರೂ ಇದ್ದಾರೆ. ಇದು ಅಪರಾಧ. ಬ್ಲೇಡ್ ತಯಾರಿಕೆಯಲ್ಲಿ ಇವನ್ನು ಬಳಸಿದರೆ ೧೦೦ರೂ ನಾಣ್ಯಗಳಿಗೆ ೨೫೦ರೂ ಬರುತ್ತದೆ ಎಂದು ಪತ್ರಿಕಾ ವರದಿಯನ್ನು ಲೇಖಕರು ಉಲ್ಲೇಖಿಸಿದ್ದಾರೆ

ಈ) ಮೂಲಭೂತ ಹಕ್ಕು: ಭಾರತದ ಸಂವಿಧಾನ ಜಗತ್ತಿನಲ್ಲೆಡೆಯಿಂದ ಪ್ರಶಂಸೆಗೊಳಪಟ್ಟ 'ಮಾದರಿ ಸಂವಿಧಾನ' ಭಾರತದ ಸಂವಿಧಾನ ರಚನಾ ಸಭೆಯಲ್ಲಿ ನೂರಾರು ಪ್ರಾಜ್ಞ ಮಹನೀಯರುಗಳು ಭಾಗವಹಿಸಿದ್ದರು. ಆದರೆ ಅದಕ್ಕೊಂದು ಅಂತಿಮ ಆಕಾರ ಮತ್ತು ರೂಪು ಬಂದದ್ದು ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದ

೨೯ರ ಆಗಸ್ಟ್ ೧೯೪೭ರ ಸಮಿತಿಯಲ್ಲಿ. ಇಂತಹ ಮಹತ್ವಪೂರ್ಣ ಸಮಿತಿಯಲ್ಲಿ ಎನ್.ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಕೆ.ಎಂ.ಮುನ್ಷಿ, ಅಹಮದ್ ಸಾದುಲ್ಲಾ, ಸರ್, ಬಿ.ಆರ್.ಮಿತ್ತಲ್, ಡಿ.ಪಿ.ಖೈತಾನ್ ಇಂತಹ ಮಹನೀಯರ ಸೇವೆಯನ್ನು ಲೇಖಕರು ಈ ಕೃತಿಯಲ್ಲಿ ಸ್ಮರಿಸಿದ್ದಾರೆ.

ಸಂವಿಧಾನದ ಮೂರನೇ ಭಾಗದಲ್ಲಿ ಆರು ಮೂಲಭೂತ ಹಕ್ಕುಗಳಿವೆ.

೧) ಸಮಾನತೆಯ ಹಕ್ಕು

೨) ಸ್ವಾತಂತ್ರ್ಯದ ಹಕ್ಕು

೩) ಶೋಷಣೆಯ ವಿರುದ್ಧ ಹಕ್ಕು

೪) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

೫) ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು

೬) ಸಂವಿಧಾನದ ಪರಿಹಾರ ಹಕ್ಕು

ನಮ್ಮ ಸಮಾಜದಲ್ಲಿ ಹಕ್ಕುಗಳನ್ನು ಕೊಡುವುದರ ಜೊತೆಗೆ ಕೆಲವು ಮೌಲ್ಯಗಳ ಮತ್ತು ಜವಾಬ್ದಾರಿಗಳ ಅನುಷ್ಠಾನವನ್ನು ಪ್ರಾಚೀನ ಕಾಲದಿಂದಲೂ ವಿಧಿಸಲಾಗಿದೆ. ಅವುಗಳನ್ನು ನಾವು ಸ್ಮೃತಿಗಳಲ್ಲಿ ಕಾಣಬಹುದು. ಸ್ಮೃತಿಗಳು ನೈತಿಕತೆ, ಧರ್ಮ ಮತ್ತು ಕಾನೂನುಗಳ ಬಗ್ಗೆ ತಿಳಿಸುವ ಅಧಿಕೃತ ಗ್ರಂಥಗಳು. ಈ ಕೆಳಗೆ ಮನು, ಯಾಜ್ಞವಲ್ಕ್ಯ, ಪತಂಜಲಿ ಇವರುಗಳು ವಿಧಿಸಿರುವ ಮೌಲ್ಯಗಳು ಮತ್ತು ಆಧುನಿಕ ಸಂವಿಧಾನ ವಿಧಿಸಿರುವ ಕೆಲವು ಮೌಲ್ಯಗಳನ್ನು ಪಟ್ಟಿಮಾಡಲಾಗಿದೆ ಎಂಬ ಅಂಶವನ್ನು ೨೦೦೮ರ ಆಗಸ್ಟ್ ಮಾಹೆಯ ವಿವೇಕಪ್ರಭದ ಉಲ್ಲೇಖವನ್ನು ಲೇಖಕರು ನೀಡುತ್ತಾರೆ.

ಮನು: ಸತ್ಯ, ಆಸ್ತೇಯ, ಶುಚಿತ್ವ, ಸಂಯಮ, ಕ್ಷಮೆ, ಧೈರ್ಯ, ಜ್ಞಾನ, ಅರಿವು, ಕೋಪದ ನಿಯಂತ್ರಣ.

ಯಾಜ್ಞವಲ್ಕ್ಯ: ಸತ್ಯ, ಅಸ್ತೇಯ, ಸಂಯಮ, ದಾನ, ಸಹನೆ, ದಯೆ

ಪತಂಜಲಿ: ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರ ಪ್ರಾಣಧಾನ.

ಭಾರತದಲ್ಲಿ ಸಂವಿಧಾನ: ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಸಹೋದರ ಭಾವನೆ.

ಲೇಖಕರ ಪ್ರಕಾರ ನಮ್ಮಲ್ಲಿರುವ ಆರು ಮೂಲಭೂತ ಹಕ್ಕುಗಳು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ಅದರ ಸದುಪಯೋಗವಾಗಬೇಕೆ ಹೊರತು ದುರುಪಯೋಗ

ಆಗಬಾರದು ಎನ್ನುತ್ತಾರೆ. ವಾಕ್ ಸ್ವಾತಂತ್ರ್ಯ ಇದೇ ಎಂದಾಕ್ಷಣ ಅದರ ದುರುಪಯೋಗ ಸಲ್ಲದು ಎನ್ನುತ್ತಾರೆ.

ಬಾಲಕಾರ್ಮಿಕರ ಸಮಸ್ಯೆ, ಮಹಿಳೆಯರ ಸಮಸ್ಯೆ ನಮ್ಮಲ್ಲಿ ಇನ್ನೂ ಜೀವಂತವಾಗಿದೆ ಎಂಬ ವಿಷಾದವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

(ಉ) ವಿಶ್ವಸಂಸ್ಥೆ

ಎರಡನೇ ಮಹಾಯುದ್ಧದ ನಂತರ ವಿಶ್ವಶಾಂತಿಗಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಸೇರಿ ಪೌರಪ್ರಜ್ಞೆಯಿಂದ ಸ್ಥಾಪಿಸಿರುವ ಸಂಸ್ಥೆಯೇ 'ವಿಶ್ವಸಂಸ್ಥೆ'. ಇದರ ಧ್ಯೇಯಗಳು ಉದಾತ್ತವಾದವು. ಯುದ್ಧ ವಿರೋಧಿ ನೆಲೆಯದ್ದು, ಅದರ ಹಕ್ಕು-ಬಾಧ್ಯತೆಗಳ ಪ್ರಸ್ತಾವನೆಯಲ್ಲಿರುವ ಈ ಕೆಳಗಿನ ಕೆಲವು ಅಂಶಗಳ ವಿಶ್ವಪ್ರಜ್ಞೆಯನ್ನು ನೋಡಬಹುದು;

"ವಿಶ್ವಸಂಸ್ಥೆಯ ವಿಶ್ವಜನತೆಯಾದ ನಾವು ಈ ಕೆಳಗಿನಂತೆ ತೀರ್ಮಾನಿಸಿದ್ದೇವೆ. ನಮ್ಮ ಜೀವಿತ ಕಾಲದಲ್ಲಿ ಎರಡು ಭಾರಿ ಯುದ್ಧಗಳಿಂದಾಗಿ, ವಿವರಿಸಲಾಗದ ದುರಂತವನ್ನು ಮಾನವ ಜನಾಂಗ ಎದುರಿಸಬೇಕಾಯಿತು. ಆದ್ದರಿಂದ ಮುಂದಿನ ಪೀಳಿಗೆಗಳಿಗೆ ಇಂತಹ ಯುದ್ಧ ದುರಂತ ಬಾರದಂತೆ ರಕ್ಷಿಸುತ್ತೇವೆ.

ಮಾನವ ಮೂಲಭೂತ ಹಕ್ಕುಗಳ ಬಗ್ಗೆ ನಂಬಿಕೆ ಇಡುವುದರ ಜೊತೆಗೆ ಮಾನವನ ಘನತೆ ಗೌರವಗಳು (ಗಂಡಸರು, ಹೆಂಗಸರ, ಜನಾಂಗಗಳ ಮಧ್ಯೆ ಮತ್ತು ದೊಡ್ಡ ಮತ್ತು ಚಿಕ್ಕ ರಾಷ್ಟ್ರಗಳ ನಡುವೆ ಸಮಾನ ಹಕ್ಕುಗಳು) ಇರುವಂತೆ ನೋಡಿಕೊಳ್ಳುವುದು. ಬೃಹತ್ತಾದ ಸ್ವಾತಂತ್ರ್ಯದಲ್ಲಿ ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ಸಹಾಯ ಮಾಡುವುದು". ೧೯೪೫ರ ಜೂನ್ ೨೬ರಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಂಸ್ಥೆಗಳ ಸಮ್ಮೇಳನದಲ್ಲಿ ಈ ಘೋಷಣೆ ಮಾಡಲಾಯಿತು.

ಮೇಲಿನವು ಪೌರಪ್ರಜ್ಞಾಪೂರ್ವಕ ವಿಶ್ವ ಆದರ್ಶಗಳಾದರೂ ದೊಡ್ಡ ಐದು ರಾಷ್ಟ್ರಗಳು, ಸಮಯ ಸನ್ನಿವೇಶ ನೋಡಿಕೊಂಡು ತಮಗೆ ಅನುಕೂಲ, ಸಮಾಧಾನ-ಕರವಲ್ಲದ ವಿಷಯಗಳಿಗೆಲ್ಲಾ ವಿಟೋ ಚಲಾಯಿಸುತ್ತಿರುತ್ತವೆ. ಒಂದೆರಡು ರಾಷ್ಟ್ರಗಳು ಜಗತ್ತಿಗೆ ನಾವೇ ಪೋಲೀಸ್‌ಮನ್ ಎನ್ನುವ ರೀತಿ ಯುದ್ಧ ಸಾರಲು ತುದಿಗಾಲಿನಲ್ಲೇ ನಿಂತಿರುತ್ತವೆ. ಎರಡು ಪ್ರಪಂಚ ಯುದ್ಧಗಳಾದ ನಂತರವೂ ಅನೇಕ ಯುದ್ಧಗಳಾಗಿವೆ. ಚೀನಾ ಭಾರತದ ಮೇಲೆ ಆಕ್ರಮಣ ನಡೆಸಿ ಭಾರತದ ಸಾವಿರಾರು ಚದುರ ಕಿಲೋಮೀಟರ್ ಜಾಗವನ್ನೆಲ್ಲಾ ಹಿಮಾಲಯದ ಗಡಿಯಲ್ಲಿ ಆಕ್ರಮಿಸಿಕೊಂಡಿದೆ. ದೊಡ್ಡ ಐದು ರಾಷ್ಟ್ರಗಳಲ್ಲಿ ಇದೂ ಒಂದು ಎಂದು ಲೇಖಕರು ಉಲ್ಲೇಖಿಸುತ್ತಾರೆ.

ಕರ್ನಾಟಕದ ಮಂತ್ರಿಯಾದ ಶೋಭಾ ಕರಂದ್ಲಾಜೆ ಅವರು ತಮ್ಮ ಕೈಲಾಸ ಮಾನಸ ಸರೋವರ ಯಾತ್ರೆ ಮುಗಿಸಿ ಹಿಂದಿರುಗಿ ಬಂದ ನಂತರ ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. "೧೯೬೨ರ ಭಾರತ-ಚೀನಾ ಯುದ್ಧದಲ್ಲಿ ನಮ್ಮ ಶ್ರದ್ಧಾ ಕೇಂದ್ರ, ಕೈಲಾಸವನ್ನೇ ಅಂದಿನ ನಾಯಕರು ಎಷ್ಟು ಸುಲಭವಾಗಿ ಚೀನಾಕ್ಕೆ ಬಿಟ್ಟುಕೊಟ್ಟುಬಿಟ್ಟರು. ಅಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ ಎಂದು ಪಾರ್ಲಿಮೆಂಟಿನಲ್ಲಿ ಹೇಳಿ ಸುಮ್ಮನಾಯಿತು. ಸರ್ಕಾರ, ಭಾರತೀಯರಿಗೆ ಪವಿತ್ರ ಸ್ಥಳಗಳನ್ನು ಪೌರಪ್ರಜ್ಞೆಯಿಂದ ಚೀನಾ ಬಿಟ್ಟುಕೊಡಬೇಕು' ಎಂದು ಆಗ್ರಹಿಸಿದ್ದಾರೆ.

ಡಾ. ಸುಬ್ರಮಣ್ಯನ್ ಸ್ವಾಮಿ ಅವರ ಪ್ರಕಾರ "ಭಾರತ ಹೊಸ ಬೆದರಿಕೆಗಳೊಡನೆ ವ್ಯವಹರಿಸಲು ತಿಳುವಳಿಕೆ ಪಡೆಯಬೇಕು" ಎಂಬ ಲೇಖನದಲ್ಲಿ ತಮ್ಮ ಕಾಳಜಿ ವ್ಯಕ್ತಪಡಿಸಿದ್ದಾರೆ. ಅವರು ರಕ್ಷಣೆ ಮತ್ತು ವಿದೇಶಾಂಗ ನೀತಿಗಳಿಗೆ ವ್ಯತ್ಯಾಸಗಳನ್ನು ತಿಳಿದಿರಬೇಕೆನ್ನುತ್ತಾರೆ. ನಮ್ಮ ರಕ್ಷಣಾ ವೆಚ್ಚ ವಾರ್ಷಿಕ ೨.೩ರಷ್ಟು ಮಾತ್ರ ಇದೆ. ಆದರೆ ಕಳೆದ ಐದು ದಶಕಗಳಿಂದ ಚೀನಾ ಶೇ. ೬ರಷ್ಟನ್ನು ರಕ್ಷಣೆಗಾಗಿ ವ್ಯಯಿಸುತ್ತದೆ.

ಡಾ. ಸ್ವಾಮಿಯವರು ಹೇಳುವುದು "We must sweat in peace. so that we do not bleed in war" ಅರುಣಾಚಲ ಪ್ರದೇಶದಿಂದ ಹಾಕಿದ್ದು ಹಿಡಿದು ಗಿಲ್ಗಿಟ್‌ರವರೆಗೆ ಚೈನಾ ಏನು ಮಾಡುತ್ತಿದೆ ಎಂಬುದು ವಿಶ್ವಕ್ಕೆ ಗೊತ್ತಿದೆ. ನಾವು ೧೯೬೨ರ ದುರಂತವನ್ನು ಮರೆಯುವಂತಿಲ್ಲ. ಚೈನಾ ಒಂದೆ ಸಮನೇ ಪಾಕಿಸ್ತಾನದ ಅಣ್ವಸ್ತ್ರಗಳ ಅಭಿವೃದ್ಧಿಯಲ್ಲಿ ಸಹಾಯ ಮಾಡುತ್ತಿದೆ. ಚೈನಾ, ಮ್ಯಾಕ್ ಮೋಹನ್ ಗಡಿರೇಖೆಯನ್ನು ಬರ್ಮಾದಲ್ಲಿ ಒಪ್ಪಿಕೊಂಡಿದೆ. ಹಾಗೆ ಅದನ್ನು ಒಪ್ಪಿಕೊಂಡ ಮೇಲೆ ಭಾರತದಲ್ಲೇಕೆ ತಕರಾರರು? ಎಂಬುದನ್ನು ವಿಶ್ವಸಂಸ್ಥೆ ಗಮನಿಸಬೇಕು. ಬಲೂಚಿಸ್ಥಾನದ ಗ್ವಾದರ್ ಶ್ರೀಲಂಕಾದ ಹಾಮನ್‌ಟೋಟ, ಬರ್ಮಾದ ಕೊಕೋ ದ್ವೀಪಗಳಲ್ಲೆಲ್ಲಾ ಅದರ ನೌಕಾ ನೆಲೆಗಳನ್ನು ಸ್ಥಾಪಿಸಿಕೊಳ್ಳುವ ಮೂಲಕ ನಮ್ಮನ್ನು ಸುತ್ತುವರೆದಿದೆ. ಇದರಿಂದಾಗಿ, ಹಿಂದೂ ಮಹಾಸಾಗರ, ಅರಬ್ಬಿ ಸಮುದ್ರ ಮತ್ತು ಬಂಗಾಳಕೊಲ್ಲಿ ಕಡೆಗಳಿಂದ ಭಾರತದ ಮೇಲೆ ಆಕ್ರಮಣ ಮಾಡುವುದು ಸಾಧ್ಯವಾಗುತ್ತದೆ. ಕಾಶ್ಮೀರಿ ಪಂಡಿತರನ್ನು ಹಿಂದಿರುಗಿಸುವುದರ ಜೊತೆಗೆ ಡಾ. ಸ್ವಾಮಿಯವರು ಹೇಳಿರುವಂತೆ ೧೦ ಲಕ್ಷ ಮಾಜಿ ಸೈನಿಕರನ್ನು ಅವರ ಕುಟುಂಬ ಸಹಿತ ಕಾಶ್ಮೀರದಲ್ಲಿ ನೆಲೆಗೊಳಿಸುವುದರಿಂದ ಕಾಶ್ಮೀರದ ಸಮಸ್ಯೆ ಸುಧಾರಿಸಬಹುದು. ಡಾ. ಸ್ವಾಮಿಯವರಂತಹ ದೇಶಭಕ್ತರ ಸಲಹೆಗಳನ್ನು ಸರ್ಕಾರ ಪೌರಪ್ರಜ್ಞೆಯಿಂದ ಆಲಿಸಬೇಕೆಂಬ ಕಳಕಳಿ ಲೇಖಕರದ್ದು.

ಕೆಲವು ಮೂಲಭೂತ ವಿಷಯಗಳ ಬಗ್ಗೆ ವಿಶ್ವಸಂಸ್ಥೆ ಶಕ್ತವಾಗಿ ಕೆಲಸ ಮಾಡಲಾಗುತ್ತಿಲ್ಲ ಎಂಬ ವಿಷಯವನ್ನು ಲೇಖಕರು ಕೃತಿಯಲ್ಲಿ ಪಟ್ಟಿಮಾಡುತ್ತಾರೆ.

೧. ಇಡೀ ಪ್ರಪಂಚವನ್ನೇ ಅಣ್ವಸ್ತ್ರರಹಿತವಾಗುವಂತೆ ಮಾಡುವುದು.

೨. ಇಡೀ ಪ್ರಪಂಚದಲ್ಲೇ ರಸಾಯನಿಕ ಅಸ್ತ್ರಗಳು ಹಾಗೂ ಜೈವಿಕ ಅಸ್ತ್ರಗಳ ಉತ್ಪಾದನೆಯಾಗದಂತೆ ತಡೆಯುವುದು.

೩. 'ರೋಗ್‌ನೇಷನ್ಸ್' ಎಂದು ಕರೆಸಿಕೊಳ್ಳುವ ದೇಶಗಳಲ್ಲಿ ಭಯೋತ್ಪಾದಕರು ಸೃಷ್ಟಿಯಾಗದಂತೆ ತಡೆಯುವುದು, ಎಲ್ಲಿಯವರೆಗೆ ಭಯೋತ್ಪಾದನೆ ಇರುತ್ತದೋ ಅಲ್ಲಿಯವರೆಗೆ ಪ್ರಪಂಚದಲ್ಲಿ ಶಾಂತಿ ಇರುವುದಿಲ್ಲ.

೪. ದೇಶದೇಶಗಳ ನಡುವೆ ಅಸೂಯೆ, ದ್ವೇಷಗಳಿದ್ದರೆ ಅವಕ್ಕೆ ಶಾಶ್ವತ ಪರಿಹಾರಗಳನ್ನು ದೊರಕಿಸಿಕೊಡುವುದು.

೫. ದೊಡ್ಡಣ್ಣಂದಿರುಗಳು ವಿಶ್ವಸಂಸ್ಥೆಯಲ್ಲಿ ಇತರ ಸದಸ್ಯ ರಾಷ್ಟ್ರಗಳಲ್ಲಿ ಪೈಲ್ವಾನ್ ಕೆಲಸ ಮಾಡದಂತೆ ತಡೆಯುವುದು.

೬. ಭಾರತದಂತಹ ೧.೨ ಬಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಇರುವ ದೇಶಕ್ಕೆ ಭದ್ರತಾ ಮಂಡಳಿಯಲ್ಲಿ ಸದಸ್ಯತ್ವ ಕೊಡದಿರುವುದು.

೭. ಟಿಬೆಟ್‌ನಂತಹ ಶಾಂತಿಪ್ರಿಯ ಪ್ರದೇಶಗಳ ಜನ ಬೇರೆ ದೇಶಗಳಲ್ಲಿ ನೆಲೆಸುವಂತಾಗಿದೆ. ಅಲ್ಲಿ ಚೈನಾ ನಿಯಂತ್ರನವನ್ನು ತಪ್ಪಿಸಿ ಟಿಬೆಟ್ ಅನ್ನು ಪೂರ್ವಸ್ಥಿತಿಗೆ ತರಿಸುವುದು.

೮. ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನ್ಯಾಯಮಂಡಲಿ (International Court of Justice) ಕೊಡುವ ತೀರ್ಮಾನಗಳು ಕೊನೆಯ ತೀರ್ಮಾನ-ಗಳಾಗಿರಬೇಕು. ಪೌರಪ್ರಜ್ಞೆಯಿಂದ ಈ ತೀರ್ಮಾನಗಳಲ್ಲಿ ಯಾವುದೇ ಪಕ್ಷಪಾತವಿರಬಾರದು.

೯. ಹಸಿವು, ಬಡತನ ಮತ್ತು ಅನಕ್ಷರತೆಗಳನ್ನು ನೀಗಿಸಲು ಹೆಚ್ಚು ಕ್ರಿಯಾತ್ಮಕವಾಗಿ ಪೌರಪ್ರಜ್ಞೆಯಿಂದ ವಿಶ್ವಾದ್ಯಂತ ಕೆಲಸ ಮಾಡುವುದು.

೧೦. ವಿಶ್ವಸಂಸ್ಥೆ, ಭಾರತ, ಪಾಕಿಸ್ತಾನ, ಇರಾನ್, ಇರಾಕ್, ಇಸ್ರೆಲ್ ಮತ್ತು ಅರಬ್ ದೇಶಗಳು, ಉತ್ತರ ಮತ್ತು ದಕ್ಷಿಣ ಕೊರಿಯ ಮತ್ತು ಇತರೆ ದೇಶಗಳ ನಡುವೆ ಪೌರಪ್ರಜ್ಞೆಯಿಂದ ಪರಮಾಣು ಅಸ್ತ್ರಗಳ ಯುದ್ಧವಾಗದಂತೆ ವಿಶ್ವಸಂಸ್ಥೆ ತಡೆಯುತ್ತಿದೆ. ಆದರೆ ಪಾಕ್‌ನ ಪೌರಪ್ರಜ್ಞೆ ಇಲ್ಲದ ಖಾದರ್‌ಖಾನ್‌ನಂತಹವರು ಅಣ್ವಸ್ತ್ರ ತಂತ್ರಜ್ಞಾನ ಹರಡದಂತೆ ಮಾಡಲಾಗಿಲ್ಲ. ಇರಾನ್‌ನ ಪರಮಾಣು ಯೋಜನೆಯನ್ನು ತಡೆಯಲು ಸಾಧ್ಯವಾಗಿಲ್ಲ. ಉತ್ತರ ಕೊರಿಯಾ ಬಹುಶಃ ಈಗಾಗಲೇ ಅಣ್ವಸ್ತ್ರ ತಂತ್ರಜ್ಞಾನದಲ್ಲಿ ಯಶಸ್ವಿಯಾಗಿದೆ.

ಇಂದಿನ ಸಂದರ್ಭದಲ್ಲಿ ಜಾಗತಿಕ ಉಷ್ಣೀಕರಣ ಹಾಗೂ ಹವಾಮಾನ ಬದಲಾವಣೆಯ ಪರ್ವಕಾಲದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ಪರ್ಯಾಯ ಶಕ್ತಿಯನ್ನು ಬಳಸಿಕೊಂಡು ಸೌರಶಕ್ತಿಯಿಂದ, ವಿದ್ಯುತ್ ಗಾಳಿಯಿಂದ ವಿದ್ಯುತ್, ಅಲೆಗಳಿಂದ ವಿದ್ಯುತ್, ಭೂತಾಪಿಯ ವಿದ್ಯುತ್ (Geothermal energy) ಇಂತಹ ತಮ್ಮಲ್ಲಿರುವ ಒಳ್ಳೆಯ ತಂತ್ರಜ್ಞಾನಗಳನ್ನೆಲ್ಲಾ ಉಚಿತವಾಗಿ ಕೊಡಬೇಕು. ಇದರಿಂದ ಸಸ್ಯಾಗಾರ ಪರಿಣಾಮ (Global Warming) ಕಡಿಮೆಯಾಗುತ್ತದೆ ಎಂದು ಲೇಖಕರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

(ಊ) ಪರಿಸರ ನೀತಿಶಾಸ್ತ್ರ

ಮನುಷ್ಯ ಬುದ್ಧಿವಂತ ಪ್ರಾಣಿ. ಆಧುನಿಕ ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರಿದರೂ ಮಾನವ ನಿಸರ್ಗಪ್ರೇಮಿ ನೀತಿವಂತರಾಗಿದ್ದರು. ಪ್ರಕೃತಿಯ ಎಲ್ಲಾ ಅಂಶಗಳಲ್ಲೂ ದೇವರನ್ನು ಕಾಣುತ್ತಿದ್ದರು. ಕಾಡುಗಳು, ಮರಗಳು, ಪ್ರಾಣಿಗಳು, ಭೂಮಿ, ನೀರು, ಬೆಂಕಿ, ವಾಯು, ಆಕಾಶ - ಇವೆಲ್ಲವನ್ನೂ ಪವಿತ್ರ ದೃಷ್ಟಿಯಿಂದ ನೋಡುತ್ತಿದ್ದರು. ವೇದದ ಮಂತ್ರ, ಬ್ರಾಹ್ಮಣಗಳಲ್ಲಿ ದಾರ್ಶನಿಕ ವಿಚಾರಗಳು, ತತ್ವವಿಚಾರಗಳು, ದೇವತಾಸ್ತುತಿಯ ಜೊತೆಗೆ ಪ್ರಕೃತಿ ಪೂಜೆಯೂ ಇತ್ತು. ಪ್ರಕೃತಿ ಪುರುಷರ ಅಂತರ ಸಂಬಂಧಗಳನ್ನು ಚಾರ್ವಾಕ, ಜೈನ, ಬೌದ್ಧ, ಸಾಂಖ್ಯ, ಯೋಗ, ಶೈವ, ನ್ಯಾಯ-ವೈಶೇಷಿಕ ದರ್ಶನಗಳು, ವಿವಿಧ ಸಿದ್ಧಾಂತಗಳು, ವಿವಿಧ ರೀತಿಗಳಲ್ಲಿ ಈ ಬಗ್ಗೆ ವಿವರಿಸಿವೆ ಎಂದು ಲೇಖಕರು ತಿಳಿಸಿದ್ದಾರೆ.

ಈಶ್ವರ ಕೃಷ್ಣ ಸಾಂಖ್ಯಕಾರಿಕಾದ ಈ ಕೆಳಗಿನ ಶ್ಲೋಕವನ್ನು ಉದಾಹರಿಸಿದ್ದಾರೆ.

ವತ್ಸವಿವೃದ್ಧಿನಿಮಿತ್ತಂ ಕ್ಷೀರಸ್ಯ ಯಥಾ ಪ್ರವೃತ್ತಿ ರಜ್ಞಸ್ಯ।
ಪುರುಷಮೋಕ್ಷನಿಮಿತ್ತಂ ಕಥಾ ಪ್ರವೃತ್ತಿಃ ಪ್ರಧಾನಸ್ಯ॥

ಅಂದರೆ ಜ್ಞಾನವಿಲ್ಲದಿದ್ದರೂ ಕರುವಿನ ಬೆಳವಣಿಗೆಗಾಗಿ ಆಕಳಿನ ಕೆಚ್ಚಲಿನಿಂದ ಹಾಲು ಸುರಿಯುತ್ತದೆ. ಹಾಗೆಯೇ ಪ್ರಕೃತಿಯು ಪ್ರಜ್ಞಾಶೂನ್ಯವಾಗಿದ್ದರೂ, ಪುರುಷನ ಮೋಕ್ಷಕ್ಕಾಗಿ ಪ್ರವರ್ತಿಸುತ್ತದೆ.

ಪರಿಸರ ನೀತಿಶಾಸ್ತ್ರದ ಪ್ರಕಾರ ಈ ಕೆಳಕಂಡ ಘಟನೆಗಳು ಆಗಬಾರದೆಂಬ ಆಶಯ ಲೇಖಕರದ್ದು.

೧. ಅಣ್ವಸ್ತ್ರ ಯುದ್ಧ

೨. ಜೈವಿಕ ಮತ್ತು ರಸಾಯನಿಕ ಅಸ್ತ್ರಗಳ ಬಳಕೆಯಾಗದಿರುವುದು.

೩. ವಿಕಿರಣಶೀಲ ಕ್ಷೋಪ್ಯಗಳು ಪರಮಾಣು ಸ್ಥಾವರಗಳಿಂದ ಹೊರಬರುವುದು.

೪. ಜಾಗತಿಕ ಉಷ್ಣೀಕರಣ ಮತ್ತು ಹವಾಮಾನ ಬದಲಾವಣೆ.

೫. ಜೈವಿಕ ವೈವಿಧ್ಯ ಕಡಿಮೆಯಾಗಿ, ಮತ್ತಷ್ಟು ಪ್ರಾಣಿ, ಸಸ್ಯಗಳು, ಅಳಿಯುವಿಕೆ.

೬. ಜನಸಂಖ್ಯೆ ಮತ್ತೂ ಹೆಚ್ಚುವುದು.

೭. ಅರಣ್ಯನಾಶ, ಫಲವತ್ತಾದ ಕೃಷಿಭೂಮಿ ಇತರೆ ಭೂಉಪಯೋಗಗಳಿ-ಗೊಳಗಾಗುವುದು.

೮. ತಳಿಸಂಶೋಧನೆಗಳು ಮತ್ತು ಜೆನೆಟಿಕ್ ಇಂಜಿನಿಯರಿಂಗ್ ಮತ್ತು ಜೈವಿಕ ತಂತ್ರಜ್ಞಾನದ ಸೃಷ್ಟಿಗಳಿಂದ ತೊಂದರೆಯಾಗುವುದು.

೯. ದೂರದೃಷ್ಟಿಯಿಂದ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳದಿರುವುದು.

೧೦. ಇನ್ನೊಂದು ಹಸಿರುಕ್ರಾಂತಿಯ ಹೆಸರಿನಲ್ಲಿ "ಹೆಚ್ಚು ಬೆಳೆ ಬೆಳೆಯಿರಿ" ಚಳವಳಿಯಲ್ಲಿ ರಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಶಿಲೀಂಧ್ರ ನಾಶಕಗಳು, ಮೂಷಕ ನಾಶಕಗಳು, ಕಳೆನಾಶಕಗಳ, ತಳಿಮಾರ್ಪಾಟಾದ ಬೆಳೆಗಳು ಇವನ್ನು ಹೆಚ್ಚಾಗಿ ಉಪಯೋಗಿಸುವುದು.

೧೧. ಸಾವಯವ ಕೃಷಿ ವಿಧಾನಗಳನ್ನು ಅನುಸರಿಸದೇ, ತರಕಾರಿ, ಹಣ್ಣುಗಳಿಗೆಲ್ಲಾ ರಸಾಯನಿಕ ಕೀಟ ನಿಯಂತ್ರಕಗಳನ್ನು ಉಪಯೋಗಿಸುವಿಕೆ.

೧೨. ಪೌರಪ್ರಜ್ಞೆ, ಪರಿಸರ ನೀತಿ ಇಲ್ಲದೆ ಪ್ರಕೃತಿಯನ್ನು ಬೇರೆಯಾಗಿಯೇ ನೋಡುವ ದೃಷ್ಟಿ ಸಂಪನ್ಮೂಲಗಳನ್ನೇ ಮಾಡಿಕೊಳ್ಳುವ ದೃಷ್ಟಿಯಿಂದ ನೋಡದಿರುವುದು.

ಹೀಗೆ ಮೇಲ್ಕಂಡ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಸ್ವಾಸ್ಥ ಸಮಾಜಕ್ಕೆ ಲೇಖಕರು ನೀಡಿರುವ ಕಾಳಜಿ ಅಪಾರವಾಗಿರುವುದನ್ನು ಗುರುತಿಸಬಹುದು.

ಇಂದಿನ ಕಲುಷಿತ ಭಯಮಿಶ್ರ, ಆತಂಕದ ವಾತಾವರಣದಲ್ಲಿ, ಮೂಲಭೂತ ಸೌಕರ್ಯಗಳ ಕೊರತೆಯಲ್ಲಿ ಪ್ರಪಂಚದ ಅನೇಕ ರಾಷ್ಟ್ರಗಳು ರೋಗಗ್ರಸ್ಥವಾಗಿರುವ ಸಂದರ್ಭದಲ್ಲಿ ಲೇಖಕರು ಸೂಚಿಸಿದ ಪರಿಹಾರೋಪಾಯಗಳು ಚಿಂತನಾರ್ಹ ಮತ್ತು ಅನುಕರಣೀಯ, ಜಾಗತಿಕ ತಾಪಮಾನದ ಈ ಸಂದರ್ಭದಲ್ಲಿ ಸರ್ಕಾರಗಳು ಈಗಲಾದರೂ ಎಚ್ಚೆತ್ತುಕೊಂಡು ಹಸುರೀಕರಣ, ನೈಸರ್ಗಿಕ ಸಂಪತ್ತಿನ ಸದ್ಬಳಕೆ, ಪ್ರಾಣಿಸಂಕುಲಗಳ ಸಂತಾನಗಳನ್ನು ಬೆಳೆಸಲು ನಿರ್ಭೀತಿ ವಾತಾವರಣ ಸೃಷ್ಟಿ, ಉತ್ಪನ್ನಗಳ ಸಂದರ್ಭದಲ್ಲಿ ರಸಾಯನಿಕ ಗೊಬ್ಬರಗಳನ್ನು ಸಂಪೂರ್ಣ ನಿಷೇಧಿಸಿ ಭೂಮಿಯ ಫಲವತ್ತತೆಯನ್ನು ಕಾಯ್ದುಕೊಳ್ಳುವ ಮುಖೇನ ಸಾರ್ವಜನಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಹೆಜ್ಜೆ ಇಡಬೇಕಾಗಿದೆ.

ಅಧ್ಯಾಯ ೫

ಡಾ. ಎಸ್.ಎನ್. ರಾಮಸ್ವಾಮಿಯವರ ಪೌರಪ್ರಜ್ಞಾಣಯನದ ಒಟ್ಟು ವಿಶ್ಲೇಷಣೆ

ಪ್ರಜೆಗಳಲ್ಲಿ ಅಶಿಸ್ತಿನ ನಡವಳಿಕೆ ಪ್ರಸ್ತುತ ನಮ್ಮ ಸಮಾಜದಲ್ಲಿ ಹೆಚ್ಚಾಗುತ್ತಿದೆ. ನೈತಿಕತೆ ಮತ್ತು ಮೌಲ್ಯಗಳು ಮಸುಕಾಗುತ್ತಿರುವ ಈ ಸನ್ನಿವೇಶದಲ್ಲಿ ಕೃತಿಕಾರರ 'ಪೌರಪ್ರಜ್ಞಾಣಯನ' ಕೃತಿ ಆದರ್ಶ ಪ್ರಜೆ ಹೇಗಿರಬೇಕೆಂಬ ಮೌಲ್ಯಯುತ ಪಾಠವನ್ನು ಹೇಳಿಕೊಡುತ್ತದೆ.

ಶಿಸ್ತಿನ ಜೀವನದ ಬಗ್ಗೆ ನಾವು ಇಂದು ವಿದೇಶಿಯರಿಂದ ಕಲಿಯುವ ಅಗತ್ಯವಿಲ್ಲ. ಬದಲಾಗಿ ಭಾರತವು ವೇದಗಳ ಕಾಲದಿಂದಲೇ ಉನ್ನತ ಜೀವನ ಮೌಲ್ಯಕ್ಕೆ ಹೆಸರಾಗಿದ್ದು; ನಮ್ಮಿಂದಲೇ ವಿದೇಶಿಯರು ಕಲಿತದ್ದು ಎಂಬ ವಾದವನ್ನು ಉದಾಹರಣೆ ಸಮೇತ ತಮ್ಮ ಕೃತಿಯಲ್ಲಿ ಲೇಖಕರು ತೋರಿಸಿದ್ದಾರೆ.

ವೇದಗಳ ಕಾಲದಲ್ಲಿ ಪ್ರಕೃತಿಯ ಚರಾಚರವೆಲ್ಲವೂ ದೇವರ ವರಪ್ರಸಾದವೆಂದು ಭಾವಿಸಿ, ಪೂಜಿಸಿ ತಮ್ಮ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಂಡು ಪರಿಸರ ರಕ್ಷಣೆ ಮಾಡುತ್ತಿದ್ದರು. ಆದರೆ ಇಂದು ಅದಕ್ಕೆ ವಿರುದ್ಧವಾಗಿ ಪ್ರಕೃತಿಯ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಾ ತನ್ನ ಅವಸಾನಕ್ಕೆ ತಾನೇ ಕಾರಣವಾಗುತ್ತಿರುವ ಪ್ರಜೆಗಳಲ್ಲಿ ಪೌರಪ್ರಜ್ಞೆಯನ್ನು ಮೂಡಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ವೇದಗಳಲ್ಲಿದ್ದ ನೈತಿಕತೆ ಮತ್ತು ಆದರ್ಶವನ್ನು ಹೇಳುತ್ತಾ ಧರ್ಮ, ಸಂಸ್ಕೃತಿ, ನೈತಿಕತೆ, ರಾಷ್ಟ್ರಪ್ರೇಮ ಮತ್ತು ಮಾತೃಭಾಷೆ ಕನ್ನಡ ಕುರಿತಂತೆ ಪೌರಪ್ರಜ್ಞೆಯ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಪ್ರಾಚೀನ ಗ್ರಂಥಗಳ ಮೌಲ್ವಿಕ ಸಾಲುಗಳು ಕೃತಿಯಲ್ಲಿ ಗಮನ ಸೆಳೆಯುತ್ತವೆ. ಜೊತೆಗೆ ಕೃತಿಗೊಂದು ಭದ್ರವಾದ ಅಡಿಪಾಯವನ್ನು ಕಟ್ಟಿಕೊಡುತ್ತದೆ.

ಜಾಗತಿಕವಾಗಿ ಅತಿಹೆಚ್ಚು ಚರ್ಚೆಗೆ ಒಳಗಾಗುತ್ತಿರುವುದು 'ಪರಿಸರ ಮಾಲಿನ್ಯ'. ಈ ಕುರಿತು ಲೇಖಕರು ಬೆಳಕು ಚೆಲ್ಲಿದ್ದಾರೆ. ನಮ್ಮಲ್ಲಿ ಜೈವಿಕ ವೈವಿಧ್ಯದಿಂದ ಕೂಡಿದ ಪರಿಸರ ಸಂಪತ್ತು ಇಂದು ಮನುಷ್ಯನ ಆಸೆಬುರಕತನಕ್ಕೆ ಹಾಳಾಗುತ್ತಿದೆ. ಜೊತೆಗೆ ಮಿತಿಮೀರಿದ ಪ್ಲಾಸ್ಟಿಕ್ ಬಳಕೆ, ಈ-ಕ್ಷೇಪ್ಯಗಳು ಪರಿಸರವನ್ನು ಹಾಳುಮಾಡುತ್ತಿವೆ.

ಜಾಗತಿಕ ತಾಪಮಾನದ ಕುರಿತು ಇಡೀ ಜಗತ್ತು ತಲೆ ಬಿಸಿಮಾಡಿಕೊಂಡು ಬಿಸಿಬಿಸಿ ಚರ್ಚೆ ನಡೆಸುತ್ತಿರುವ ಈ ಸಂದರ್ಭದಲ್ಲಿ ಲೇಖಕರು ಈ ಕುರಿತು ಎಳೆಎಳೆಯಾಗಿ ವಿವರಿಸಿ ಪ್ರಜೆಗಳ ಕಣ್ಣು ತೆರೆಸುವಲ್ಲಿ ಸಫಲರಾಗಿದ್ದಾರೆ. ಪರಮಾಣು

ಸ್ಥಾವರಗಳ ಅಪಾಯ ಮತ್ತು ಮೊಬೈಲ್ ಬಳಕೆ ಕುರಿತು ಗಂಭೀರವಾಗಿ ಗಮನಸೆಳೆದಿದ್ದಾರೆ. ಇನ್ನು ಸಾಮಾಜಿಕ ಕ್ಷೇತ್ರದಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಮೌಲ್ಯದ ಕುಸಿತವನ್ನು ಗುರುತಿಸಿದ್ದಾರೆ. ಭ್ರಷ್ಟವಾಗುತ್ತಿರುವ ವೈದ್ಯಕೀಯ ಕ್ಷೇತ್ರದ ಬಗ್ಗೆ ಮತ್ತು ದಯಾಮರಣದ ಹಿನ್ನೆಲೆಯ ಹತ್ಯೆಯ ಬಗ್ಗೆ ಮಾನವೀಯ ನೆಲೆಯಲ್ಲಿ ಚರ್ಚಿಸಿದ್ದಾರೆ.

ಮಕ್ಕಳು ಮತ್ತು ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಅಂಕಿಅಂಶ ಸಮೇತ ಓದುಗರನ್ನು ಈ ಕುರಿತು ಆಲೋಚಿಸಲು ಪ್ರೇರಣೆ ನೀಡುತ್ತಾರೆ.

ಕೋಮು ಸಾಮರಸ್ಯ, ಮೂಢನಂಬಿಕೆ, ಬಂದೀಖಾನೆಗಳ ಭ್ರಷ್ಟತೆ, ಮರ್ಯಾದಾ ಹತ್ಯೆ, ಭ್ರಷ್ಟಾಚಾರ, ಕಪ್ಪುಹಣ, ಮೂಲಭೂತಹಕ್ಕುಗಳು, ವಿಶ್ವಸಂಸ್ಥೆ ಮತ್ತು ಪರಿಸರ ನೀತಿಶಾಸ್ತ್ರಗಳನ್ನು ಕುರಿತು ಪತ್ರಿಕಾ ವರದಿಗಳನ್ನಾಧರಿಸಿ ಚರ್ಚಿಸಿದ್ದಾರೆ.

ಒಟ್ಟಾರೆ 'ಪೌರಪ್ರಜ್ಞಾಯನ' ಕೃತಿ ಇಂದಿನ ದಿನಮಾನದಲ್ಲಿ ಹೆಚ್ಚು ಪ್ರಸ್ತುತ-ವಾಗುತ್ತದೆ. ಮನುಷ್ಯ ಪರಿಸರದೊಂದಿಗೆ ಕೂಡಿಬಾಳುವ ಮತ್ತು ತನ್ನ ಇತರ ಸಹಮಾನವರೊಂದಿಗೆ ಸಾಮರಸ್ಯದಿಂದ ಬದುಕುವ ನಿತ್ಯಪಾಠವನ್ನು ಈ ಕೃತಿ ಹೇಳುತ್ತದೆ.

ಉಪಸಂಹಾರ

ಡಾ. ಎಸ್.ಎನ್.ರಾಮಸ್ವಾಮಿ ಅವರ "ಪೌರಪ್ರಜ್ಞಾಯನ" ಕೃತಿಯಲ್ಲಿ ಮನುಷ್ಯ ನಾಗರಿಕ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಕುರಿತು ಚರ್ಚಿಸಿದ್ದಾರೆ. ತಾನು ಬದುಕಿ ಇತರರನ್ನು ಬದುಕುವಂತೆ ಮಾಡುವಂತಹ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳ-ಬೇಕೆಂಬ ಆಶಯ ಈ ಕೃತಿಯದ್ದು.

'ವಸುದೈವ ಕುಟುಂಬಕಂ', 'ಸರ್ವೇ ಜನ ಸುಖಿನೋ ಭವಂತು' ಮತ್ತು "ಸಮಸ್ತ ಸನ್ಮಾಂಗಳಾನಿ ಭವಂತು" ಎಂಬ ಶ್ಲೋಕದಂತೆ ಇಡೀ ವಿಶ್ವವೇ ಒಂದು ಕುಟುಂಬವಾಗಿ, ತಮ್ಮಂತೆ ಇತರರು ಎಂದು ಭಾವಿಸಿ ಎಲ್ಲರೂ ಶಾಂತಿ, ಸುಖ ಮತ್ತು ನೆಮ್ಮದಿಯಿಂದ ಬದುಕುವಂತೆ ಮಾರ್ಗದರ್ಶನ ನೀಡುತ್ತದೆ.

ವಿಶ್ವಮಾನವ ಪ್ರಜ್ಞೆಯನ್ನು ಎತ್ತಿಹಿಡಿಯುತ್ತದೆ. ಸರ್ವರ ಉದ್ಧಾರವೆ ಈ ಕೃತಿಯ ಧ್ಯೇಯ ಎಂಬುದು ಅಧ್ಯಯನದಲ್ಲಿ ಕಂಡುಕೊಂಡ ಬಹುಮುಖ್ಯ ಅಂಶ.

ಇಲ್ಲಿ ಚರ್ಚಿತವಾಗಿರುವ ಪ್ರತಿಯೊಂದು ಅಧ್ಯಾಯವೂ ಮಹತ್ವಪೂರ್ಣವಾದುದು. ಮನುಷ್ಯನ ಇಡೀ ಬದುಕಿಗೆ ಬೇಕಾಗಿರುವ ಪೌರಪ್ರಜ್ಞೆಯ ಪಾಠವನ್ನು ಈ ಕೃತಿ ಹೇಳುತ್ತದೆ. ಅಬಾಲವೃದ್ಧರಾದಿಯಾಗಿ ಸರ್ವರನ್ನೂ ಒಳಗೊಂಡಂತೆ ನೀತಿ ಪಾಠವನ್ನು ಮತ್ತು ನೈತಿಕ ಮೌಲ್ಯವನ್ನು ಕಲಿಸುತ್ತದೆ.

ಇಂದು ನಮ್ಮಲ್ಲಿ ನೈತಿಕ ಪ್ರಜ್ಞೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಹಲವಾರು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಸ್ವೇಚ್ಛಾಚಾರವನ್ನು ಸ್ವಾತಂತ್ರ್ಯವೆಂದು ಅನುಭೋಗಿಸುತ್ತಾ ಸೋಮಾರಿತನದಿಂದ ವರ್ತಿಸಿ ಮುಂದಿನ ಪೀಳಿಗೆಗೂ ಕಲ್ಮಶ, ಮಾಲಿನ್ಯ ಪ್ರಪಂಚವನ್ನು ಮಾನವ ಬಿಟ್ಟು ಹೋಗುತ್ತಿದ್ದಾನೆ. ನಾನು ಅರಿತುಕೊಂಡಂತೆ ಕೃತಿಯ ವ್ಯಾಪ್ತಿ ಅತ್ಯಂತ ವಿಶಾಲವಾದದ್ದು. ಹೆಸರೇ ಸೂಚಿಸುವಂತೆ 'ಪೌರಪ್ರಜ್ಞಾಯನ' ಪೌರಪ್ರಜ್ಞೆಯ ನಡಿಗೆ ವೇದಗಳ ಕಾಲದಿಂದ ಇಂದಿನ ಆಧುನಿಕ ಯುಗದವರೆಗೂ ಅಧ್ಯಯನ ವ್ಯಾಪ್ತಿಯನ್ನು ಹೊಂದಿದೆ. ಪ್ರಸ್ತುತ ಸಮಾಜದಲ್ಲಿ ಓರೆಕೋರೆಗಳನ್ನು ಸಹ ಕೃತಿಯಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.

ವೇದಗಳಲ್ಲಿ ಪೌರಪ್ರಜ್ಞೆ ಎಂಬ ಅಧ್ಯಾಯದಿಂದ ಆರಂಭವಾದ ಕೃತಿ ಧರ್ಮ, ಸಂಸ್ಕೃತಿ, ನೈತಿಕ ಮೌಲ್ಯ, ರಾಷ್ಟ್ರಪ್ರೇಮ, ಕನ್ನಡ ಇವೇ ಮುಂತಾದ ವಿಷಯಗಳಲ್ಲಿ ಚರ್ಚೆ ಮಾಡಿದ್ದಾರೆ. ಈ ಕೃತಿಯ ಬಹುಮುಖ್ಯ ಭಾಗವಾಗಿದೆ. ಹಾಗೆಯೇ ಅನೇಕ ಪ್ರಾಚೀನ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ಅಗತ್ಯವಿದ್ದ ಕಡೆ ಹಲವು ಅತ್ಯಮೂಲ್ಯ ಶ್ಲೋಕದ ಸಾಲುಗಳನ್ನು ಕೃತಿಯಲ್ಲಿ ದಾಖಲಿಸಿದ್ದಾರೆ.

ಮುಂದುವರೆದು ದೇಶ, ರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ಪರಿಸರ ಚಳವಳಿ ಕುರಿತು ಚರ್ಚಿಸಿದ್ದಾರೆ. ಭಾರತದ ಪ್ರಮುಖ ಚಳವಳಿಗಳ ಹಾದಿಯ ಹೆಜ್ಜೆ ಗುರುತನ್ನು ದಾಖಲಿಸಿದ್ದಾರೆ. ಇದರಿಂದ ಸ್ಫೂರ್ತಿಗೊಂಡು ಕರ್ನಾಟಕದಲ್ಲಿ ನಡೆದ ಪರಿಸರ ಚಳವಳಿಯನ್ನು ಗುರುತಿಸಿದ್ದಾರೆ.

ನಮ್ಮ ಮನೆ, ಪರಿಸರ, ಸ್ವಚ್ಛವಾದರೆ ಇಡೀ ಸಮಾಜ, ದೇಶ, ವಿಶ್ವವೇ ಶುದ್ಧೀಕರಣದಗೊಳಿಸಬಹುದೆಂದು ತಿಳಿಸಿದ್ದಾರೆ. ಇದಕ್ಕೆ ಬೇಕಾದ ಪೂರಕ ಮಾಹಿತಿಯನ್ನು ಕೃತಿಯಲ್ಲಿ ಒದಗಿಸಿದ್ದಾರೆ. ಪರಿಸರದ ಬಗ್ಗೆ ಕೃತಿಯಲ್ಲಿ ಸಾಕಷ್ಟು ಚರ್ಚೆ ನಡೆಸಿದ್ದಾರೆ.

ಜಾಗತಿಕವಾಗಿ ಭೂಮಿ ಬಿಸಿಯಾಗುತ್ತಿದೆ, ಹಿಮಶಿಖರಗಳು ಕರಗಿ ನೀರಿನ ಮಟ್ಟ ಏರಿ ಭೂಪ್ರದೇಶ ಮುಳುಗಡೆಯಾಗಲಿದೆ ಎಂಬ ಅನೇಕ ಸಂಶೋಧನೆಗಳ ಕುರಿತು ಪ್ರತಿದಿನ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ.

ಇಂತಹ ಸಂದರ್ಭದಲ್ಲಿ "ಪೌರಪ್ರಜ್ಞೆಯನ" ಕೃತಿ ನಮ್ಮಗಳ ನೆರವಿಗೆ ಬರುತ್ತದೆ. ಜಾಗತಿಕ ತಾಪ ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರಜೆಗಳು ವಹಿಸಬೇಕಾದ ಮುಂಜಾಗ್ರತೆ ಕುರಿತು ಕೃತಿಕಾರರು ಚೆನ್ನಾಗಿ ವಿವರಿಸಿದ್ದಾರೆ. ಇದು ಪ್ರತಿಯೊಬ್ಬ ಪೌರನು ತನ್ನ ಕರ್ತವ್ಯದ ಬಗ್ಗೆ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ನಮ್ಮಲ್ಲಿರುವ ವಿವಿಧ ರೀತಿಯ ಜೈವಿಕ ಪರಿಸರವನ್ನು ಹಾಗೂ ಅದರ ಅನನ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಲೇಖಕರ ಪ್ರಾಮಾಣಿಕ ಕಾಳಜಿ, ಕಳಕಳಿ ಕೃತಿಯಲ್ಲಿ ಎದ್ದು ಕಾಣುತ್ತದೆ.

ಪ್ಲಾಸ್ಟಿಕ್‌ನಂತಹ ವಸ್ತು ಮನುಷ್ಯನನ್ನು ಅವನಿಗೆ ಗೊತ್ತಿಲ್ಲದಂತೆ ಹೇಗೆ ಆಕ್ರಮಿಸಿಕೊಂಡು ಅವನ ಜೊತೆಗೆ ಪರಿಸರದ ಪ್ರಾಣಿಗಳ ಜೀವಕ್ಕೂ ಹೇಗೆ ಸಂಚಕಾರ ತರುತ್ತಿದೆ ಮತ್ತು ಫಲವತ್ತಾದ ಭೂಮಿ ಹೇಗೆ ಹಾಳಾಗುತ್ತಿದೆ ಎನ್ನುವ ವಿಷಯವನ್ನು ಅಂಕಿಅಂಶ ಸಮೇತ ಕೃತಿಕಾರರು ದಾಖಲಿಸಿದ್ದಾರೆ.

ಎಲೆಕ್ಟ್ರಾನಿಕ್ ವಸ್ತುಗಳು ಉಪಯೋಗದ ನಂತರ ಅದರ ವಿಲೇವಾರಿ ಹೇಗೆ ಸವಾಲೊಡ್ಡುತ್ತವೆ ಎನ್ನುವ ವಿಷಯದ ಆಳ ಮತ್ತು ಅದರ ವಿಸ್ತಾರವನ್ನು ಗುರುತಿಸಿದ್ದಾರೆ.

ಇಡೀ ಮನುಕುಲವೇ ಬೆಚ್ಚು ಬೀಳುವಂಥ ಸಾವಿನ ನೆರಳಲ್ಲಿ ಬಾಳುವ ಹಾಗೇ ಮಾಡಿರುವ ವಿಷಯವೆಂದರೆ 'ಪರಮಾಣು ಎಂಬ ಅಂಶ. ಇತ್ತೀಚೆಗೆ ಜಪಾನಿನಲ್ಲಿ ಭೂಕಂಪ ಮತ್ತು ಸುನಾಮಿ ನಂತರ ಅಲ್ಲಿನ ಅಣು ವಿದ್ಯುತ್ ಸ್ಥಾವರಗಳು ಕುಸಿದು

ಆದ ದುರಂತ ನಮ್ಮ ಕಣ್ಣಮುಂದೆ ಇನ್ನು ಹಚ್ಚ ಹಸಿರಾಗಿರುವಾಗ ಈ ಕುರಿತು ಜಾಗೃತಿಯನ್ನು ಈ ಕೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಅಣುಸ್ಥಾವರಗಳು ಸುರಕ್ಷತೆಯ ದೃಷ್ಟಿಯಿಂದ ಎಷ್ಟು ಸಾಧು? ಎಂಬ ವಿಚಾರ ಜಾಗತಿಕ ಚರ್ಚೆಯ ವಸ್ತು ವಿಷಯವಾಗಿದೆ. ಇಂತಹ ಸಂದರ್ಭದಲ್ಲಿ ಕೃತಿಯ ಪ್ರಸ್ತುತತೆ ಹೆಚ್ಚುತ್ತದೆ.

'ಮೊಬೈಲ್ ಫೋನ್‌ಗಳು' ಪ್ರಸ್ತುತ ಜಗತ್ತಿನ ಆಶ್ಚರ್ಯಗಳಲ್ಲಿ ಒಂದು. ಇದರ ಅನುಕೂಲತೆಗಳು ಮತ್ತು ಅನಾಹುತ ಕುರಿತು ಸ್ವಾರಸ್ಯಕರವಾಗಿ ತಿಳಿಸಿದ್ದಾರೆ.

ಸಮಾಜಕ್ಕೆ ಜ್ಞಾನದ ದಾಹವನ್ನು ನೀಗಿಸುವ ವಿಶ್ವವಿದ್ಯಾನಿಲಯಗಳು ಇಂದು ತಮ್ಮ ಉನ್ನತ ಮೌಲ್ಯ ಮತ್ತು ಆದರ್ಶ ಪರಂಪರೆಯನ್ನು ಮರೆತು ವ್ಯವಹಾರಿಕವಾಗಿ ವರ್ತಿಸುತ್ತಿರುವುದನ್ನು ಲೇಖಕರು ಎಳೆಎಳೆಯಾಗಿ ವಿವರಿಸಿದ್ದಾರೆ.

ಯಾವುದೇ ಕ್ಷೇತ್ರ ಭ್ರಷ್ಟವಾದರೂ ಪರವಾಗಿಲ್ಲ. ಆದರೆ ವೈದ್ಯಕೀಯ ಕ್ಷೇತ್ರದ ಭ್ರಷ್ಟತೆಯನ್ನು ಕ್ಷಮಿಸಲಾಗದು. ವೈದ್ಯರನ್ನು ದೇವರಿಗೆ ಹೋಲಿಸುವ ನಮ್ಮ ಸಂಸ್ಕೃತಿಯಲ್ಲಿ ಇಂದು ವೈದ್ಯಕೀಯ ಕ್ಷೇತ್ರವು ಸೇವಾಮನೋಭಾವನೆಯನ್ನು ಬಿಟ್ಟು ವ್ಯವಹಾರದ ದೃಷ್ಟಿಯಿಂದ ನೋಡುತ್ತಿರುವುದನ್ನು ಲೇಖಕರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ದಯಾಮರಣದ ಕುರಿತು ನಮ್ಮ ದೇಶದ ಮಾಧ್ಯಮಗಳಲ್ಲಿ ಚರ್ಚೆ-ಯಾಗುತ್ತಿರುವ ಈ ಸಂದರ್ಭದಲ್ಲಿ ಲೇಖಕರು ದಯಾಮರಣದ ವಿವಿಧ ಆಯಾಮ-ಗಳನ್ನು ಕುರಿತು ಮಾನವೀಯ ನೆಲೆಯಲ್ಲಿ ಚರ್ಚಿಸಿದ್ದಾರೆ.

ಯುವಕನೊಬ್ಬ ಸಾಮಾನ್ಯ ವಾಯುಕಾರಿ ಸಂಬಂಧಿ ಎದೆನೋವು ಎಂದು ಬಂದರೆ, ಅವನನ್ನು ಇನ್ನಿಲ್ಲದ ಅನೇಕ ಪರೀಕ್ಷೆಗಳಿಗೆ ಒಡ್ಡಿ ಮೂರ್‍ನಾಲ್ಕು ದಿನ ಆಸ್ಪತ್ರೆಗಳಲ್ಲಿ ದಾಖಲಿಸಿಕೊಂಡು ಸಾವಿರಾರು ರೂಪಾಯಿಗಳನ್ನು ಕೀಳುವ ಪ್ರಸಂಗವನ್ನು ಕೃತಿಯಲ್ಲಿ ಲೇಖಕರು ದಾಖಲಿಸಿದ್ದಾರೆ.

ಸಹಜ ಹೆರಿಗೆ ಮಾಡಿಸದೇ ಅವಶ್ಯಕತೆ ಇಲ್ಲದಿದ್ದರೂ ಸಿಸೇರಿಯನ್ ಹೆರಿಗೆ ಮಾಡಿಸುವ ಹಣದಾಹಿ ವೈದ್ಯರ ಮುಖವಾಡ ಕಳಚುವ ಕೆಲಸ ಕೃತಿಯಲ್ಲಿ ಸಮರ್ಥವಾಗಿ ಬಿಂಬಿಸಿದ್ದಾರೆ. ಮಕ್ಕಳು ದೇವರ ಸಮಾನ ಎಂದು ನೋಡುವ ನಮ್ಮ ಭಾರತೀಯರು ಅದೇ ಮಕ್ಕಳನ್ನು ಶೋಷಣೆ ಮಾಡುತ್ತಿರುವ ಮತ್ತೊಂದು ಮುಖದ ಅನಾವರಣವನ್ನು ಈ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ. ಮಕ್ಕಳ ಹಕ್ಕುಗಳು, ರಕ್ಷಣೆಯಂತಹ ವಿಷಯವನ್ನು ಸಮಾಜ ಮತ್ತು ಸರ್ಕಾರ ನಿರ್ಲಕ್ಷಿಸಬಾರದು ಈ ವಿಷಯದಲ್ಲಿ ಪೌರಪ್ರಜ್ಞೆಯಿಂದ ನಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಮಹಿಳೆಯರ ಸ್ಥಾನಮಾನ ಕುರಿತು ತಮ್ಮ ಕೃತಿಯಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾರೆ. ವೇದಗಳ ಕಾಲದಲ್ಲಿ ಪುರುಷನಷ್ಟೇ ಸಮಾನ ಸ್ಥಾನಮಾನ ಮತ್ತು ಅಧಿಕಾರ-ಅವಕಾಶಗಳು ಮಹಿಳೆಯರಿಗೂ ಇದ್ದವು ಎಂಬುದನ್ನು ವೇದಗಳ ಕಾಲದ ಗ್ರಂಥಗಳ ಸಾಲುಗಳನ್ನು ಉದ್ಧರಿಸುವ ಮೂಲಕ ತಮ್ಮ ವಾದಕ್ಕೆ ಪುಷ್ಠಿ ಕೊಡುವ ಪ್ರಯತ್ನವನ್ನು ಮಾಡಿದ್ದಾರೆ.

ಲೇಖಕರ ಪ್ರಕಾರ ಮಧ್ಯದಲ್ಲಿ ಬಂದ ಮನುವಿನ ವಿಕೃತ ಮನಸ್ಥಿತಿಯಿಂದ ಮಹಿಳೆಯರ ಸ್ಥಾನಮಾನಗಳಿಗೆ ಚ್ಯುತಿ ಉಂಟಾಯಿತು ಎಂದು ವಾಸ್ತವ ಸತ್ಯವನ್ನು ಇಲ್ಲಿ ಬಿಚ್ಚಿಡುತ್ತಾರೆ. ವೇದಗಳ ಕಾಲದಲ್ಲಿ ಮಹಿಳೆಯರಿಗೆ ಉಪನಯನಕ್ಕೆ ಅವಕಾಶವಿತ್ತು. ವೇದಮಂತ್ರಗಳ ಪಠಣ ಇತ್ತು, ಚರ್ಚೆಯಲ್ಲಿ ಮಹಿಳೆಯರೂ ಭಾಗವಹಿಸುತ್ತಿದ್ದರು ಎಂದು ಪ್ರಾಚೀನ ಕೃತಿಗಳನ್ನು ಉಲ್ಲೇಖಿಸಿ ತಮ್ಮ ವಾದ ಮಂಡಿಸುತ್ತಾರೆ.

ಇದಕ್ಕೆ ಪೂರಕ ಎಂಬಂತೆ ಇತ್ತೀಚೆಗೆ ಮೈಸೂರಿನ ಬ್ರಾಹ್ಮಣ ದಂಪತಿಗಳು ವೈಚಾರಿಕಪ್ರಜ್ಞೆಯಿಂದ ತಮ್ಮ ಇಬ್ಬರು ಹೆಣ್ಣುಮಕ್ಕಳಿಗೆ ಉಪನಯನವನ್ನು ಮಾಡಿಸಿ ಇತರರಿಗೆ ಆದರ್ಶವಾಗಿದ್ದಾರೆ. ಈ ವೈಚಾರಿಕ ಪ್ರಜ್ಞೆಯ ದಂಪತಿಗಳು ಹೇಳುವಂತೆ ವೇದಗಳ ಕಾಲದಲ್ಲಿ ಸ್ತ್ರೀಯರಿಗೂ ಉಪನಯನವಿತ್ತು. ಹಾಗಾಗಿ ನಾವು ನಮ್ಮ ಇಬ್ಬರು ಹೆಣ್ಣುಮಕ್ಕಳಿಗೆ ಮಾಡಿಸಿದ್ದೇವೆ ಎಂದು.

ಈ ಪ್ರಸ್ತುತ ಘಟನೆಯಿಂದ ಲೇಖಕರ ವಾದಕ್ಕೆ ಮತ್ತಷ್ಟು ಬಲ ಬಂದಿದೆ ಎನ್ನಬಹುದು. ಹಾಗೆಯೇ ಲೇಖಕರಿಗೆ ತಾರತಮ್ಯ ನೀತಿ ಹೇಳುವ ಮನುಸ್ಮೃತಿಯ ಬಗ್ಗೆ ಆಕ್ಷೇಪವಿದೆ.

ಪರಮತ ಸಹಿಷ್ಣುತೆಗೆ ಹೆಸರಾದ ಭರತ ಭೂಮಿಯಲ್ಲಿ ಮೊಗಲ್ ಚಕ್ರವರ್ತಿ ಅಕ್ಬರ್‌ನ ಪೌರಪ್ರಜ್ಞೆಯನ್ನು ಲೇಖಕರು ಮೆಚ್ಚಿದ್ದಾರೆ. ಆತನ ಆಸ್ಥಾನದಲ್ಲಿ ಅನೇಕ ಧರ್ಮಿಯರಿಗೆ ಅವಕಾಶವಿತ್ತು. ಪ್ರತಿಯೊಂದು ಧರ್ಮವನ್ನು ಆತ ಗೌರವಿಸುತ್ತಿದ್ದ. ಹಾಗೆಯೇ ತಾನೇ ಸ್ಥಾಪಿಸಿದ್ದ ಹೊಸಧರ್ಮಕ್ಕೆ ಬಲವಂತವಾಗಿ ಸೇರ್ಪಡೆ ಮಾಡಿಸಲಿಲ್ಲ ಬದಲಾಗಿ ಜೆಸಿಯ ಎಂಬ ಕಂದಾಯವನ್ನು ರದ್ದುಪಡಿಸಿ ಪೌರಪ್ರಜ್ಞೆ ಮೆರೆದಿದ್ದಾನೆ. ಹಾಗೆಯೇ ಕರ್ನಾಟಕದ ಹಲವು ಭಾಗಗಳಲ್ಲಿ ಹಿಂದೂ ಮತ್ತು ಮುಸ್ಲಿಂರು ಸೇರಿ ಆಚರಿಸುವ ಅನೇಕ ಧಾರ್ಮಿಕ ಸ್ಥಳದ ಕುರಿತು ಮಾಹಿತಿ ನೀಡಿದ್ದಾರೆ.

ಕೋಮು ಸಂಘರ್ಷದಿಂದ ನಲುಗುತ್ತಿರುವ ನಮ್ಮ ಸಮಾಜಕ್ಕೆ ಪೌರಪ್ರಜ್ಞಾಯನ ಕೃತಿ ಶಾಂತಿಯ ತತ್ವವನ್ನು ಸಾರುತ್ತಿದೆ. ಮರಣದಂಡನೆ ಬಗ್ಗೆ ತಮ್ಮ ಅಸಹನೆಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ದೇಶದ ಆಂತರಿಕ ಭದ್ರತೆಗೆ ಧಕ್ಕೆ ತರುವ ದುಷ್ಕರ್ಮಿಗಳಿಗೆ, ನೂರಾರು ಜನರನ್ನು ಬಲಿ ತೆಗೆದುಕೊಳ್ಳುವ ಉಗ್ರಗಾಮಿಗಳಿಗೆ

ಮರಣದಂಡನೆ ಸೂಕ್ತವಲ್ಲದಿದ್ದರೆ ಮತ್ತಷ್ಟು ಆಕ್ರಮಣಗಳು ಹೆಚ್ಚುವ ಸನ್ನಿವೇಶಗಳು ಒದಗುವುದಿಲ್ಲವೇ ಎಂಬುದು ನನ್ನ ವೈಯಕ್ತಿಕ ಪ್ರಶ್ನೆ.

ಕುರುಡು ನಂಬಿಕೆ ಮತ್ತು ಮೂಢ ಆಚರಣೆಗೆ ಬಲಿಯಾಗಿ ಅಂಗವಿಕಲ ಮಕ್ಕಳನ್ನು ಗ್ರಹಣದ ದಿನ ಭೂಮಿಯಲ್ಲಿ ದೇಹವನ್ನು ಹೂಳುವ ಮೂಢ ಆಚರಣೆಯನ್ನು ಲೇಖಕರು ತಮ್ಮ ಕೃತಿಯಲ್ಲಿ ಖಂಡಿಸಿದ್ದಾರೆ.

ನಮ್ಮ ಸಮಾಜದ ಬಹುದೊಡ್ಡ ದುರಂತ ಎಂದರೆ ಮೌಢ್ಯತೆ. ಇಷ್ಟೆಲ್ಲಾ ಜ್ಞಾನ–ವಿಜ್ಞಾನ, ವೈಜ್ಞಾನಿಕ ವೈಚಾರಿಕತೆ ಒಂದು ಕಡೆ ಬೆಳೆಯುತ್ತಿದ್ದರೆ ಮತ್ತೊಂದು ಕಡೆ ಮೂಢ ನಂಬಿಕೆಗಳು ಅಷ್ಟೇ ಬೇರೂರಿ ನಮ್ಮ ಪ್ರಗತಿಗೆ ವಿರೋಧಿಗಳಾಗಿರುವ ಅಂಶವನ್ನು ಲೇಖಕರು ಒತ್ತಿ ಹೇಳಿದ್ದಾರೆ.

ಭ್ರಷ್ಟಾಚಾರದಂತಹ ರಾಕ್ಷಸ ನಮ್ಮ ಇಡೀ ಸಮಾಜವನ್ನು ತನ್ನ ಕದಂಬ ಬಾಹುಗಳಲ್ಲಿ ಗಟ್ಟಿಯಾಗಿ ಹಿಡಿದುಕೊಂಡಿದೆ. ಇಂದು ಭ್ರಷ್ಟಾಚಾರ ರಹಿತ ಸಮಾಜ–ವನ್ನು ಕನಸ್ಸಿನಲ್ಲೂ ಕಲ್ಪಿಸಿಕೊಳ್ಳಲು ಸಾಧ್ಯವಾದಂತಹ ಪರಿಸ್ಥಿತಿಯಲ್ಲಿ ನಾವು ಇಂದು ಇದ್ದೇವೆ. ಇಂತಹ ಭ್ರಷ್ಟಾಚಾರ ಕುರಿತು ಲೇಖಕರು ಸವಿಸ್ತಾರವಾಗಿ ತಮ್ಮ ಕೃತಿಯಲ್ಲಿ ಚರ್ಚಿಸಿದ್ದಾರೆ.

ಕಪ್ಪುಹಣದ ಕುರಿತು ಇಂದು ಮಾಧ್ಯಮಗಳು ಪೈಪೋಟಿಗೆ ಬಿದ್ದವರಂತೆ ವರದಿಗಳನ್ನು ಬಿತ್ತರಿಸುತ್ತಿವೆ. ಪ್ರಜೆಗಳಿಗೆ ಕಪ್ಪುಹಣದ ಕುರಿತು ಭಾರಿ ಚರ್ಚೆಗೆ ಗ್ರಾಸವಾಗುತ್ತಿದೆ. ಈ ಕುರಿತು ದೇಶದಲ್ಲಿ ಭಾರಿ ಪ್ರಮಾಣದ ಪ್ರತಿಭಟನೆ ಮತ್ತು ಅಭಿಯಾನ ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಈ ಕೃತಿ ಹೆಚ್ಚು ಅರ್ಥಪೂರ್ಣ–ವಾದ ಅಂಕಿಅಂಶ ನೀಡಿ ಈ ನಿಟ್ಟಿನಲ್ಲಿ ಸರ್ಕಾರ ಇಡಬಹುದಾದ ಹೆಜ್ಜೆಯ ಕುರಿತು ಸ್ಪಷ್ಟನೆ ನೀಡಿದೆ.

ಹಾಗೆಯೇ ನಮ್ಮ ಮೂಲಭೂತ ಹಕ್ಕು, ಪರಿಸರ ನೀತಿಶಾಸ್ತ್ರ ಮತ್ತು ವಿಶ್ವಸಂಸ್ಥೆಯ ಕುರಿತು ಸಕಾಲಿಕ ವರ್ತಮಾನ ಅಂಶವನ್ನು ಲೇಖಕರು ದಾಖಲಿಸಿದ್ದಾರೆ.

ಪೌರಪ್ರಜ್ಞಾಯನ ಕೃತಿ ವಸ್ತು ವಿಷಯದಲ್ಲಿ ವಿಸ್ತಾರವಾಗಿದೆ. ಕೆಲವು ಅಧ್ಯಾಯಗಳಲ್ಲಿ ಪುನಾರವರ್ತನೆಗಳು ಇವೆ. ಭ್ರಷ್ಟಾಚಾರ ಮತ್ತು ಕಪ್ಪುಹಣ ಬೇರೆ ಬೇರೆ ಅಧ್ಯಾಯಗಳಾಗುವ ಬದಲು ಒಂದೇ ಅಧ್ಯಾಯದಲ್ಲಿ ಚರ್ಚಿಸಬಹುದಾಗಿತ್ತು. ಹಾಗೆಯೇ ಪ್ಲಾಸ್ಟಿಕ್, ಈ–ಕ್ಷೇಪ್ಯಗಳು, ಜಾಗತಿಕ ತಾಪಮಾನ, ಪರಮಾಣು ಮತ್ತು ಮೊಬೈಲ್‌ಗಳ ಅಧ್ಯಾಯಗಳು ಒಂದೇ ಸೂರಿನಡಿ ಬಂದಿದ್ದರೆ ವಿಷಯಗಳು ಮತ್ತೆ ಮತ್ತೆ ಪುನಾರವರ್ತನೆಗಳು ಕಡಿಮೆಯಾಗುತ್ತಿದ್ದವು.

ಈ ಕೃತಿಯಲ್ಲಿ ಅಲ್ಲಲ್ಲಿ ಬಳಸಿರುವ ರೇಖಾಚಿತ್ರಗಳು ಮನಸೆಳೆಯುವಂತಿವೆ. ರೇಖಾಚಿತ್ರಗಳು ಮತ್ತುಷ್ಟು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಜಾಗತಿಕ ತಾಪಮಾನದ ಪರಿಣಾಮ ಕುರಿತ ಚಿತ್ರಗಳು ಬಣ್ಣದಲ್ಲಿ ಬಂದಿದ್ದರೆ ಕೃತಿಯ ಅಂದವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತಿತ್ತು. ಕೃತಿಯ ಬಹುಮುಖ್ಯ ಅಂಶವೆಂದರೆ ಪ್ರತಿಯೊಂದು ಸಮಸ್ಯೆಯ ಆಳ ಮತ್ತು ಅಗಲವನ್ನು ದಾಖಲಿಸುವುದರ ಜೊತೆಗೆ ಅದಕ್ಕೆ ಪರಿಹಾರಗಳನ್ನು ಸೂಚಿಸುತ್ತಿರುವುದು. ಇದು ಪ್ರತಿ ಅಧ್ಯಾಯದಲ್ಲೂ ನಾವು ಗುರುತಿಸಬಹುದಾಗಿದೆ.

ಕೃತಿಯ ಒಟ್ಟು ಆಶಯ ಬರವಣಿಗೆಯಲ್ಲಿ ಫಲಿತವಾಗಿದೆ. ಪೌರಪ್ರಜ್ಞೆಯನ್ನು ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಿಸುವ ಪ್ರಯತ್ನ ಸೋದಾಹರಣವಾಗಿ ಮೂಡಿಬಂದಿದೆ.

ಸ್ವಾಸ್ಥ್ಯ ಮತ್ತು ಸುಂದರ ಸಮಾಜ ನಿರ್ಮಾಣದಲ್ಲಿ ಈ ಕೃತಿ ಮಹತ್ವದ ಪಾತ್ರ ವಹಿಸುವಲ್ಲಿ ಯಾವುದೇ ಅನುಮಾನ ಇಲ್ಲ. ಪ್ರತಿ ಅಧ್ಯಾಯದಲ್ಲೂ ಈ ಕುರಿತು ಲೇಖಕರ ಪ್ರಾದೇಶಿಕ ಕಾಳಜಿ ಮತ್ತು ಕಳಕಳಿ ಎದ್ದು ಕಾಣುತ್ತದೆ.

ಲೇಖಕರ ಬಹುದೊಡ್ಡ ಶಕ್ತಿ ಎಂದರೆ ಪತ್ರಿಕಾ ಬರಹಗಳನ್ನು ಪ್ರತಿ ಅಧ್ಯಾಯದಲ್ಲಿ ದಿನಾಂಕದ ಸಮೇತ ಉಲ್ಲೇಖ ಮಾಡಿದ್ದಾರೆ. ಲೇಖಕರ ದಿನಪತ್ರಿಕೆಗಳ ನಿರಂತರ ಓದನ್ನು ನಾವಿಲ್ಲಿ ಗುರುತಿಸಬಹುದು.

ಹಾಗೆಯೇ ಪ್ರಾಚೀನ ವೇದಗಳ ಕಾಲದ ಕೃತಿಯಿಂದ ಹಿಡಿದು ಇಂದಿನ ಆಧುನಿಕ ವರ್ತಮಾನದವರೆಗಿನ ಎಲ್ಲಾ ಉದಾಹರಣೆಗಳನ್ನು ತಮ್ಮ ಕೃತಿಯಲ್ಲಿ ಹೇರಳವಾಗಿ ಕೊಡುತ್ತಾರೆ. ಇದು ಮೆಚ್ಚಬೇಕಾದ ಅಂಶ.

ಈ ಕೃತಿ ಪ್ರತಿ ಮನೆ, ಶಾಲಾ-ಕಾಲೇಜು ಗ್ರಂಥಾಲಯಗಳಲ್ಲಿ ಇರ-ಬೇಕಾದಂತಹದ್ದು. ನಮ್ಮ ಎಳೆಯರಲ್ಲಿ ಪೌರಪ್ರಜ್ಞೆ ಕುರಿತ ಪಾಠಗಳು ಪಠ್ಯದಲ್ಲಿ ಬಂದರೆ ಭವಿಷ್ಯದಲ್ಲಿ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯಗಳು ಕಾರ್ಯಪ್ರವೃತ್ತವಾಗಿ ಎಳೆಯರಿಗೆ ಪೌರಪ್ರಜ್ಞೆಯನ್ನು ತುಂಬುವ ಮೂಲಕ ನಿರ್ಮಲ, ಸ್ವಚ್ಛ ಪರಿಸರ ಮೂಡುವಲ್ಲಿ ಸಹಕರಿಸಿದರೆ ಕೃತಿಕಾರರ ಶ್ರಮ ಸಾರ್ಥಕವಾಗುತ್ತೆ.

ಪರಾಮರ್ಶನ ಗ್ರಂಥ

೧. ಸಾಂಸ್ಕೃತಿಕ ಅಧ್ಯಯನ, ರಹಮತ್ ತರೀಕೆರೆ-೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಸಂಸ್ಕೃತಿ ಕಥನ - ಡಿ.ಆರ್. ನಾಗರಾಜ್, ೨೦೦೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩. 'ಸಂಸ್ಕೃತಿ'- ಡಿ.ವಿ. ಗುಂಡಪ್ಪ-೧೯೬೯, ಕಾವ್ಯಾಲಯ, ಮೈಸೂರು.

೪. ಭಾರತೀಯ ಸಂಸ್ಕೃತಿ ದರ್ಶನ- ಅ.ನ. ಕೃಷ್ಣರಾಯ, ೧೯೬೨, ಸಾಗರ ಪ್ರಕಾಶನ, ಬೆಂಗಳೂರು.

೫. ಸಂಸ್ಕೃತಿ ಕಥನ-ನರಹಳ್ಳಿ ಬಾಲಸುಬ್ರಹ್ಮಣ್ಯ-೨೦೦೮, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೬. ಭಾರತ ಸರ್ಕಾರ ಮತ್ತು ರಾಜಕೀಯ - ಎಚ್.ಎಂ. ರಾಜಶೇಖರ- ೨೦೦೮, ಪ್ರಬೋಧ ಮುದ್ರಣಾಲಯ, ಮೈಸೂರು.

೭. ಸಂಸ್ಕೃತಿ, ಉಪಸಂಸ್ಕೃತಿ - ಬರಗೂರು ರಾಮಚಂದ್ರಪ್ಪ, ೧೯೯೪, ಭೂಮಿ ಪ್ರಕಾಶನ, ಮೈಸೂರು.

೮. ರಾಜ್ಯಶಾಸ್ತ್ರ ಪರಿಚಯ - ಎಸ್. ಈಶ್ವರಾಚಾರ್, ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ

೯. ಸಾರ್ವಜನಿಕ ಆಡಳಿತ - ಡಾ. ಯು. ಗುರುಮೂರ್ತಿ, ಚೇತನ ಬುಕ್ ಹೌಸ್, ೧೯೯೮, ಮೈಸೂರು.

೧೦. ರಾಜಕೀಯ ಚಿಂತಕರು, ವಿದ್ಯಮಾನಗಳು ಮತ್ತು ವಿಧಾನಗಳು - ಎಚ್ಚಾರ್ಕೆ ಮತ್ತು ದಿವಂಗತ ಎಲ್ಲಾರ್ಕೆ, ಸಪ್ನ ಬುಕ್ ಹೌಸ್, ೨೦೦೮, ಬೆಂಗಳೂರು.

೧೧. ಪ್ರಜಾವಾಣಿ, ವಿಜಯಕರ್ನಾಟಕ, ಕನ್ನಡಪ್ರಭ ಕನ್ನಡ ದಿನಪತ್ರಿಕೆಗಳು.

೧೨. ಡೆಕನ್ ಹೆರಾಲ್ಡ್, ಡೆಕನ್ ಕ್ರಾನಿಕಲ್, ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ದೈನಿಕಗಳು.

೧೩. ಸುಧಾ, ಕರ್ಮವೀರ, ತರಂಗ ವಾರಪತ್ರಿಕೆಗಳು.

೧೪. ಕಸ್ತೂರಿ, ಮಯೂರ, ರೀಡರ್ ಡೈಜೆಸ್ಟ್ ಮಾಸಪತ್ರಿಕೆಗಳು.

೧೫. ಅಂತರ್ಜಾಲದ ವಿವಿಧ ತಾಣಗಳಿಂದ